ಮೈಸೂರು ದೇಶದ ವಾಸ್ತುಶಿಲ್ಪ

ಮುನ್ನುಡಿ

ಭಾರತ ರತ್ನ, ಡಾಕ್ಟರ್, ಸರ್. ಎಂ. ವಿಶ್ವೇಶ್ವರಯ್ಯ

★

ಬಿ. ವೆಂಕೋಬರಾವ್, ಬಿ.ಎ.
ಮೈಸೂರು ರಾಜ್ಯದ ಪ್ರಾಚ್ಯ ಸಂಶೋಧನಾ
ಇಲಾಖೆಯ ನಿವೃತ್ತ ಅಧಿಕಾರಿಗಳು

ವಿಚಾರ ಸಾಹಿತ್ಯ ಪ್ರೈವೇಟ್ ಲಿಮಿಟೆಡ್
ಬಳೇಪೇಟೆ – ಬೆಂಗಳೂರು ೨.

KANNADA

by

B. Venkoba Rao, B.A.
Retd. Asst. Architect, P.W.D. &
Archaelogical Depts. Mysore.

First Edition August 1959
Copies 3000.

Published under the auspices of the
Southern Languages Book Trust Madras.
KANNADA 21.

Published by :
V.S. Narayana Rao,
Managing Director
VICHARA SAHITYA (Private) Ltd.,
Bangalore-2.

Printed by O. V. Gupta at Mohan Press, Bangalore-2.

ನಿವೇದನೆ

ಬೆಂಗಳೂರು ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ "ಪ್ರಬುದ್ಧ ಕರ್ನಾಟಕ"ದಲ್ಲಿ ಬರೆದು ಬಂದ ಅಧ್ಯಾಯಗಳನ್ನೆಲ್ಲ ಒಟ್ಟುಗೂಡಿಸಿ "ಮೈಸೂರು ದೇಶದ ವಾಸ್ತುಶಿಲ್ಪ" ಎಂಬ ಹೆಸರಿನಿಂದ ಪುಸ್ತಕ ರೂಪದಲ್ಲಿ ೧೯೩೮ ರಲ್ಲಿ ಪ್ರಕಟಿಸಲಾಯಿತು. ಈಗ ಪುನರ್ಮುದ್ರಣ ಹೊಂದಿ ಹೊರಕ್ಕೆ ಬರುತ್ತಲಿದೆ.

ಪುಸ್ತಕವು ಮೊದಲು ಪ್ರಕಟವಾದ ಕಾಲಕ್ಕೂ ಈಗಿನ ಕಾಲಕ್ಕೂ ರಾಜಕೀಯದಲ್ಲಿ ಹೆಚ್ಚು ಮಾರ್ಪಾಟುಗಳಾಗಿ ಇದುವರೆಗೂ ಬೊಂಬಾಯಿ, ಮದರಾಸು ಮತ್ತು ಹೈದರಾಬಾದು ಪ್ರಾಂತಗಳಲ್ಲಿ ಇದ್ದ ಕನ್ನಡ ಭಾಗಗಳೆಲ್ಲ, ಮತ್ತು ಕೊಡಗು, ಮೈಸೂರಿನೊಳಕ್ಕೆ ಸೇರಿಕೊಂಡು ಇಡೀ ಕರ್ನಾಟಕ ರಾಜ್ಯ ವೆನಿಸಿಕೊಂಡಿದೆ. ಈ ವಿಷಯವನ್ನು ಮನಸ್ಸಿಗೆ ತಂದುಕೊಂಡು, ಪುಸ್ತಕವನ್ನು ಪುನರ್ವಿಮರ್ಶಿಸಿ, ವಿಷಯಗಳನ್ನು ಬೇರೆ ತರದಲ್ಲಿ ವಿಂಗಡಿಸಿ ಹೊಸ ಅಧ್ಯಾಯಗಳನ್ನೂ ಸೇರಿಸಿ ಈಗ ಪ್ರಕಟಿಸಲಾಗಿದೆ.

ರಾಜ್ಯದಲ್ಲೆಲ್ಲಾ ಅಸಂಖ್ಯಾತ ದೇವಾಲಯಗಳೂ ಇತರ ಕಟ್ಟಡಗಳೂ ಇವೆ. ಅವೆಲ್ಲವನ್ನೂ ಈ ಸಣ್ಣ ಪುಸ್ತಕದಲ್ಲಿ ವಿವರಿಸಲು ಸಾಧ್ಯವಿಲ್ಲವಾದುದ ರಿಂದ, ಪ್ರತಿಯೊಂದು ಶೈಲಿಯಲ್ಲಿಯೂ ಮಾದರಿಗಾಗಿ ಮುಖ್ಯವಾದ ಒಂದೆರ ಡನ್ನು ವಿಶದವಾಗಿ ವಿವರಿಸಿ, ಉಳಿದವುಗಳಲ್ಲಿ ವಿಶೇಷಾಂಶಗಳುಳ್ಳ ಕೆಲವನ್ನು ಮಾತ್ರ ಇಲ್ಲಿ ಪ್ರತಿಪಾದಿಸಲಾಗಿದೆ.

ಈ ಪುಸ್ತಕವು ಮೊದಲು ಬರುವುದಕ್ಕೆ ಮಿತ್ರರಾದ ಶ್ರೀಮಾನ್ ಎ. ಆರ್. ಕೃಷ್ಣಶಾಸ್ತ್ರಿಗಳ ಸಲಹೆ ಸಹಕಾರಗಳೇ ಕಾರಣ. ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಲಿಚ್ಛಿಸುತ್ತೇನೆ. ನನ್ನ ಮಿತ್ರರಾದ ಶ್ರೀ. ಡಿ. ನಾಗೇಶಮೂರ್ತಿರಾಯರು ನನಗೆ ಅನೇಕ ವಿಧದಲ್ಲಿ ಸಹಾಯ ಮಾಡಿರುತ್ತಾರೆ. ಅವರಿಗೂ ನನ್ನ ಕೃತಜ್ಞತೆ ಸಲ್ಲಬೇಕಾಗಿದೆ. ಇನ್ನೂ ಅನೇಕ ಮಿತ್ರರು ಸಹಾಯವನ್ನು ಮಾಡಿದ್ದಾರೆ, ಅವರೆಲ್ಲರಿಗೂ ನನ್ನ ವಂದನೆಗಳು.

ಬಿ. ವೆಂಕೋಬರಾವ್

ಅನುಕ್ರಮಣಿಕೆ

ಆಮುಖ

ಸಾಧಾರಣ ಜನತೆಗೆ ರುಚಿಸಲೂ ಬೇಕು, ಸಿಜವಾಗಿ ಬೆಲೆ ಬಾಳುವಂಥದೂ ಆಗ ಬೇಕು, ಇಂಥ ಪುಸ್ತಕಗಳ ವಿಷಯ-ಲ್ಲಿ ತಮಗೆ ಈಗಾಗಲೇ ಆದ ಅನುಭವದಿಂದ ದಕ್ಷಿಣ ಭಾರತ ಪುಸ್ತಕ ಸಂಸ್ಥೆಯವರು ತಮ್ಮ ಎರಡನೆಯ ಪುಸ್ತಕ ಗುಚ್ಛವನ್ನು ದಕ್ಷಿಣದ ಎಲ್ಲಾ ಭಾಷೆಗಳಲ್ಲೂ ಪ್ರಕಟಿಸಲಿದಾರೆ. ಬಗೆ ಬಗೆಯ ಗುಂಪಿನ ಓದುಗರ ಭಿನ್ನ ಭಿನ್ನ ರುಚಿಗೆ ತಕ್ಕಂತೆ ಬಹಳ ಎಚ್ಚರಿಕೆಯಿಂದ ಪುಸ್ತಕಗಳನ್ನು ಆರಿಸಿದಾರೆ. ಸಹಜವಾಗಿಯೆ ಜೀವನದ ನಾನಾ ಮುಖಗಳ ಬಗ್ಗೆ ವಿಚಾರ ತಿಳಿಸುವ ಪುಸ್ತಕಗಳನ್ನು ಆರಿಸಿದಾರೆ. ಭಾರತದ ನಾಯಕಮಣಿಗಳ ಜೀವನವನ್ನು ತಿಳಿಸುವ ಗ್ರಂಥಗಳೂ ಇವೆ. ದೇಶದ ಹಿತಕ್ಕಾಗಿ, ಜನತೆಯ ಮೂಲಭೂತ ಹಕ್ಕುಗಳಿಗಾಗಿ, ದೇಶದ ಪ್ರತಿಷ್ಠೆ ಪ್ರಭಾವಗಳನ್ನು ಹೆಚ್ಚಿಸಲಿಕ್ಕಾಗಿ ಹೊಡೆದಾಡಿದ ಆ ನಾಯಕರಿಗೆ ತಾವು ಎಷ್ಟು ಋಣಿ ಗಳೋ ಮುಂದಿನ ಪೀಳಿಗೆಯವರು ತಿಳಿದುಕೊಳ್ಳುವುದು ಒಳ್ಳೆಯದು.

ಈ ಮಾಲೆಯಲ್ಲಿ ತತ್ವಶಾಸ್ತ್ರ, ಧರ್ಮ, ವಿಜ್ಞಾನ, ಪ್ರಾಚೀನೇತಿಹಾಸ, ಅರ್ಥ ಶಾಸ್ತ್ರಗಳೂ ಇವೆ. ಕಥಾಸಾಹಿತ್ಯಕ್ಕೆ, ಪ್ರಾಚೀನ ಕಲೆಗಳ ಪ್ರಚಾರಕ್ಕೆ ಎಡೆಯಿದೆ. ಅಭಿನಯ ಕಲೆ, ಶಿಲ್ಪಶಾಸ್ತ್ರ, ಪ್ರಾಚೀನ ಅವಶೇಷಗಳ ಸಂಶೋಧನೆ, ಎಲ್ಲ ಕಾಲಕ್ಕೂ ಅದ್ಭುತವೆನಿಸುವ ದಕ್ಷಿಣ ಭಾರತದ ಮಹಾ ದೇವಾಲಯಗಳ ವಿಷಯ, ಎಲ್ಲವೂ ಇವೆ. ಈ ಗೊಂಚಲು ಜನರಿಗೆ ಅಧ್ಯಯನಕ್ಕೆ ನಾನಾ ವಿಷಯಗಳನ್ನು ಒದಗಿಸಿ, ಇಂಥ ಗ್ರಂಥ ರಾಶಿಯನ್ನು ಹೆಚ್ಚು ಹೆಚ್ಚು ಜನ ಓದುವಂತೆ ಮಾಡುವುದರಲ್ಲಿ ಸಂದೇಹವಿಲ್ಲ.

ಈ ಕೆಲಸದಲ್ಲಿ ಒಂದು ಪ್ರಶಂಸನೀಯ ಅಂಶವಿದೆ–ದಕ್ಷಿಣ ಭಾರತದ ಭಾಷೆಗಳ ಪುಸ್ತಕಗಳನ್ನು ಒಂದರಿಂದ ಒಂದಕ್ಕೆ ಭಾಷಾಂತರ ಮಾಡಿಸುವ ಏರ್ಪಾಡು. ಈ ಗ್ರಂಥಮಾಲೆ ಪೂರ್ಣವಾದಾಗ ತಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ನೈಜವಾದ ಅಭಿರುಚಿಯುಳ್ಳ ಅಕ್ಷರಸ್ಥರನೇಕರನ್ನು ಪಾಠಕ ಪ್ರಪಂಚಕ್ಕೆ ಇವು ಸೆಳೆಯುತ್ತವೆಂದು ನನಗೆ ನಂಬಿಕೆಯಿದೆ. ಅವರಿಗೆ ಜ್ಞಾನಬಲವನ್ನು ಹೆಚ್ಚಿಸಿಕೊಳ್ಳಲು ಅಮೂಲ್ಯ ಸಾಮಗ್ರಿಯನ್ನು ಒದಗಿಸುತ್ತದೆ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯ ಕೆಲಸ. ಅದು ಪ್ರಾರಂಭವಾದ ಶ್ರೇಷ್ಠ ಉದ್ದೇಶಗಳನ್ನು ಹೆಚ್ಚು ಹೆಚ್ಚಾಗಿ ನಿರ್ವಹಿಸುತ್ತ ಬರುತ್ತದೆ ಯೆಂದು ಆಶಿಸುತ್ತೇನೆ.

ಎ. ಲಕ್ಷ್ಮಣಸ್ವಾಮಿ ಮೊದಲಿಯಾರ್
ವೈಸ್ ಛಾನ್ಸಲರ್
ಮದ್ರಾಸ್ ವಿಶ್ವವಿದ್ಯಾನಿಲಯ

ಮದರಾಸು

ನಮ್ಮ ವಂದನೆಗಳು

ಈ ಗ್ರಂಥವನ್ನು ರಚಿಸಿದ ಶ್ರೀ ವೆಂಕೋಬರಾಯರು ಪುಸ್ತಕ ಮುದ್ರಣ ವಾಗುವ ಮೊದಲೇ ದಿವಂಗತರಾದುದನ್ನು ತಿಳಿಸಲು ವಿಷಾದಿಸುತ್ತೇವೆ. ಹಠಾತ್ತನೆ ಸಂಭವಿಸಿದ ಈ ಮೃತ್ಯುವಿನಿಂದ ಇದರಲ್ಲಿ ಕೆಲವು ಲೋಪದೋಷಗಳು ತಲೆದೋರಲು ಅನಿವಾರ್ಯವಾಗಿ ಅವಕಾಶವಾಯಿತು. ಈ ದೋಷಗಳಿಗೆ ಹೆಚ್ಚು ಗಮನವೀಯಬಾರದೆಂದು ಪ್ರಾರ್ಥಿಸುತ್ತೇವೆ.

ಭಾರತರತ್ನ ಡಾಕ್ಟರ್ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ತಮ್ಮ ಪುಸ್ತಕಕ್ಕೆ ಮುನ್ನುಡಿ ಬರೆಯಬೇಕೆಂದು ದಿವಂಗತರ ಕಡೆಯ ಆಶಯ ವಾಗಿತ್ತು. ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಈ ತುಂಬು ವಯಸ್ಸಿನಲ್ಲಿಯೂ ಪ್ರೇಮಾದರಗಳಿಂದ ಮುನ್ನುಡಿಯನ್ನು ಅನುಗ್ರಹಿಸಿದ ಶ್ರೀ ವಿಶ್ವೇಶ್ವರಯ್ಯನವರಿಗೆ ಎಲ್ಲರ ಪರವಾಗಿ ನಮ್ಮ ಅನಂತ ವಂದನೆಗಳನ್ನು ಸಮರ್ಪಿಸುತ್ತೇವೆ.

ಪರಿಶಿಷ್ಟದಲ್ಲಿ ಕೊಟ್ಟಿರುವ ದೇವಾಲಯಗಳ ವಿವರಣೆ ಅಪೂರ್ಣ ವಾಗಿದ್ದಿತು. ಅದನ್ನು ಪೂರ್ಣಗೊಳಿಸಲು, ಪತ್ರ ಬರೆದ ಕೂಡಲೆ ಉತ್ತರವಿತ್ತು ಉಪಕರಿಸಿರುವ ಇಂಡಿಯಾ ಸರ್ಕಾರದ ನಿವೃತ್ತ ಎಫಿಗ್ರಾಫಿಸ್ಟ ಶ್ರೀ ಎನ್. ಲಕ್ಷ್ಮೀನಾರಾಯಣ ರಾಯರಿಗೆ ನಾವು ತುಂಬ ಋಣಿಗಳು.

ಮೈಸೂರು ಸರ್ಕಾರದ ಪ್ರಾಕ್ತನ ಸಂಶೋಧನಾ ಇಲಾಖೆಯವರೂ ಚಿತ್ರ ಗಳನ್ನು, ನಕ್ಷೆಗಳನ್ನು ಕೊಟ್ಟು ಈ ಪುಸ್ತಕವನ್ನು ಚಿತ್ರಮಯವಾಗಿ ಮಾಡಲು ಸಹಕರಿಸಿದ್ದಾರೆ. ಇದಕ್ಕಾಗಿ ಮೈಸೂರು ಸರ್ಕಾರಕ್ಕೂ, ವಿಶೇಷವಾಗಿ ಈ ಇಲಾಖೆಯವರಿಗೂ, ಕನ್ನಡ ಸಾಹಿತ್ಯ ಪರಿಷತ್ತಿನವರಿಗೂ ನಾವು ಕೃತಜ್ಞರು.

ಇಂಥ ಪುಸ್ತಕಗಳು ಪ್ರಕಟಿತವಾಗುವುದು ಬಹಳ ಅಪರೂಪ. ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯವರ ನೆರವಿಲ್ಲದೆ ಈ ಕೆಲಸವನ್ನು ನಿರ್ವಹಿಸುವುದು ಅಸಾಧ್ಯವೇ ಆಗುತ್ತಿತ್ತು. ಅವರ ನೆರವಿಗಾಗಿ ನಾಡಿನ ಪರ ಅವರಿಗೆವಂದನೆಗಳನ್ನು ಅರ್ಪಿಸುತ್ತೇವೆ.

ಪ್ರಕಾಶಕರು

ಪೀಠಿಕೆ

ಜಗತ್ತು ಸೌಂದರ್ಯಮಯವಾದದ್ದು. ಜನರು ತಮಗೆ ಬೇಕಾಗುವ ವಸ್ತುಗಳನ್ನು ಒದಗಿಸಿಕೊಳ್ಳುವಾಗ ಈ ಜಗತ್ತಿನಲ್ಲಿ ಸುಂದರವಾದ ಪದಾರ್ಥ ಗಳನ್ನು ಮೇಲ್ಪಂಕ್ತಿಯನ್ನಾಗಿಟ್ಟುಕೊಂಡು ಅವುಗಳನ್ನು ಅನುಕರಣಮಾಡಿ ಕೊಂಡು ಬರುತ್ತಿದ್ದಾರೆ. ಹೀಗೆ ಬ್ರಹ್ಮ ಸೃಷ್ಟವಾದ ಜಗತ್ತಿನ ಅನುಕರಣದಿಂದ ಮಾನವ ಸೃಷ್ಟವಾದ ಕಲೆಯು ಹುಟ್ಟಿತೆಂದು ಹೇಳಬಹುದು. ಆದರೆ ಇದು ಬರಿಯ ಅನುಕರಣವಲ್ಲ. ಕವಿಯಾಗಲಿ ಶಿಲ್ಪಿಯಾಗಲಿ ಸೌಂದರ್ಯವನ್ನು ತನ್ನ ಹೃದಯದಲ್ಲಿ ಅನುಭವಮಾಡಿಕೊಂಡು ಆ ಅನುಭವವನ್ನು ಪ್ರತಿಭೆಯ ಸಹಾಯ ದಿಂದ ಬಾಹ್ಯರೂಪದಲ್ಲಿ ಅಭಿವ್ಯಕ್ತಗೊಳಿಸುವನು. ಮನೋಹರವಾದ ರೂಪ, ಆಕಾರ, ವರ್ಣ, ಸಮನ್ವಯ, ಸಾಮಂಜಸ್ಯ, ರಸ, ರೀತಿ, ಮಾಧುರ್ಯ ಇವು ಎಲ್ಲಾ ಕಲೆಗಳಿಗೂ ಆವಶ್ಯಕವಾದ ಅಂಶಗಳು.

ಸೌಂದರ್ಯ ಬೋಧೆಯೇ ಕಲೆಯ ಉದ್ದೇಶ, ಆನಂದವೇ ಅದರ ಫಲ.

ವಾಸ್ತು (Architecture), ಶಿಲ್ಪ (Sculpture), ಚಿತ್ರ (Painting), ಸಂಗೀತ (Music), ಸಾಹಿತ್ಯ (Poetry & Drama), ಇವಿಷ್ಟೇ ನಿಜವಾದ ಕಲೆಗಳು—ಕುಶಲ ಕಲೆಗಳು. ಇವುಗಳು ತಮ್ಮ ತಮ್ಮ ಸ್ವರೂಪ ಸ್ವಭಾವಗಳನ್ನನುಸರಿಸಿ ಕಣ್ಣು, ಕಿವಿಗಳ ಮೂಲಕ ಹೃದಯದಲ್ಲಿ ರಸೋದ್ಬೋಧವನ್ನುಂಟುಮಾಡಿ ಆನಂದವನ್ನು ತರುತ್ತವೆ. ಆದರೆ ಇವುಗಳ ಸಾಮಗ್ರಿಗಳು ಬೇರೆ ಬೇರೆ. ಗಾತ್ರ ರೂಪ ರೇಖಾವಿನ್ಯಾಸಾದಿಗಳು ವಾಸ್ತು ಶಿಲ್ಪ, ಚಿತ್ರ ಇವುಗಳಲ್ಲಿ ಮುಖ್ಯ; ಶಬ್ದಾರ್ಥಸೌಂದರ್ಯಗಳು ಸಂಗೀತ ಸಾಹಿತ್ಯ ಗಳಲ್ಲಿ ಮುಖ್ಯ. ರಸೋದ್ಬೋಧಕತೆಯು ಸ್ವಲ್ಪ ಹೆಚ್ಚು ಕಡಿಮೆಯಾಗಿ ಆಯಾ ವಸ್ತು ವಿಶೇಷವನ್ನು ಅನುಸರಿಸಿ ಎಲ್ಲಾ ಕುಶಲ ಕಲಾ ಕರ್ಮಗಳಲ್ಲಿಯೂ ಇದ್ದೇ ಇರುತ್ತದೆ.

* * *

ಯಾವುದಾದರೂ ಒಂದು ದೇಶದ ನಾಗರಿಕತೆ ಸುಖ ಸಂಪತ್ತುಗಳಿಗೆ ಅದರ ಕುಶಲ ಕಲಾ ಪರಿಸ್ಥಿತಿಯನ್ನು ಹೆಗ್ಗುರುತಾಗಿ ಇಟ್ಟುಕೊಳ್ಳಬಹುದು. ಏಕೆಂದರೆ, ಇವು ಬೆಳೆಯಬೇಕಾದರೆ ಆ ದೇಶದ ಜನರು ಜೀವಂತರಾಗಿದ್ದು ಅವರಲ್ಲಿ ಸ್ವಾತಂತ್ರ್ಯ, ಬುದ್ಧಿ, ಕುಶಲತೆ, ಅವಕಾಶ, ಐಶ್ವರ್ಯ ಇವು ಯಥೇಚ್ಛವಾಗಿರಬೇಕು. ಇವುಗಳ ಜತೆಗೆ ದೇಶದಲ್ಲಿ ಶಾಂತಿಯೂ ನೆಲಸಿರಬೇಕು. ಈ ತತ್ವವನ್ನು ನಮ್ಮ ದೇಶಕ್ಕೆ ಅನ್ವಯಿಸಿ ನೋಡಿದರೆ ಹಿಂದಿನ ಕಾಲಕ್ಕೂ ಪ್ರಕೃತಸ್ಥಿತಿಗೂ ಇರುವ ಅಜಗಜಾಂತರವಾದ ವ್ಯತ್ಯಾಸವು ಗೊತ್ತಾಗುತ್ತದೆ. ಚಿತ್ರ, ಸಂಗೀತ, ಸಾಹಿತ್ಯಗಳನ್ನು ಬಿಟ್ಟು ವಾಸ್ತು ಮತ್ತು ಶಿಲ್ಪ ಕುಶಲತೆಗಳೆರಡನ್ನೇ ತೆಗೆದುಕೊಂಡರೂ ಈ ವ್ಯತ್ಯಾಸವು ಸ್ಪಷ್ಟವಾಗಿ ಕಂಡು ಬಂದು ನಮಗೆ ಏಕಕಾಲದಲ್ಲಿ ಸಂತೋಷವೂ ಸಂಕಟವೂ ಉಂಟಾಗುತ್ತದೆ. ಏಕೆಂದರೆ ಈ ನಮ್ಮ ಕರ್ನಾಟಕ ರಾಜ್ಯದಲ್ಲಿ ಇಂದಿಗೂ ದೃಢವಾಗಿದ್ದು ಪ್ರಾಚೀನ ಸ್ಥಪತಿಗಳ ವಾಸ್ತುವಿದ್ಯಾ ಕುಶಲತೆಯನ್ನೂ ಶಿಲ್ಪಿಗಳ ನೈಪುಣ್ಯವನ್ನೂ ಉದ್ಘೋಷಿಸುತ್ತಿರುವ ಸುಂದರವಾದ ಗುಡಿಗೋಪುರಗಳಂಥ ಕಟ್ಟಡಗಳು ಅಖಂಡ ಭರತಖಂಡದೊಳಗಾಗಿ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಮತ್ತು ಇಂಥ ಕಟ್ಟಡಗಳನ್ನು ಕಟ್ಟಬಲ್ಲ ನಿಪುಣರೂ ಕಟ್ಟಿಸುವ ರಸಿಕರೂ, ಆಸ್ತಿಕರೂ, ಶ್ರದ್ಧಾಳುಗಳೂ, ಪುಣ್ಯವಂತರೂ ಈಗ ಕಣ್ಣಿಗೆ ಬೀಳುತ್ತಿಲ್ಲ. ಆದರೂ ಹಿಂದಿನ ಕಾಲದಲ್ಲಿ ಎಂತಹ ಸ್ಥಪತಿಗಳೂ ಶಿಲ್ಪಿಗಳೂ ಇದ್ದರು ಅವರು ಮಾಡಿದ ಮಹತ್ಕಾರ್ಯವೆಂತಹದು ಎಂಬುದನ್ನು ಅರಿತುಕೊಳ್ಳುವುದು ಎಲ್ಲ ಕನ್ನಡಿಗರ ಕರ್ತವ್ಯವಾದುದರಿಂದ ನಮ್ಮ ದೇಶದಲ್ಲಿ ಸುಪ್ರಸಿದ್ಧವಾಗಿರುವ ಪ್ರಾಚೀನ ವಾಸ್ತುಶಿಲ್ಪದ ಪರಿಚಯವನ್ನು ಸ್ವಲ್ಪಮಟ್ಟಿಗಾದರೂ ಮಾಡಿಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ.



ಕೌಶಿಕದಲ್ಲಿರುವ ಚೆನ್ನಕೇಶ್ವರ ದೇವಾಲಯದ ಮೂಲ ವಿಗ್ರಹ



ಡಂಬಳದ ದೊಡ್ಡಬಸಪ್ಪನ ಗುಡಿ ದಕ್ಷಿಣ-ಪಶ್ಚಿಮ ದೃಶ್ಯ.



ಚಿತ್ರಪಟ್ಟಿಕೆ



ಹುಲಿಕೆರೆಯ ಕೇಶವ ದೇವಾಲಯದ ಗೋಪುರ.



ಶೃಂಗೇರಿಯ ವಿದ್ಯಾಶಂಕರ ದೇವಾಲಯ, ಈಶಾನ್ಯ ಭಾಗ.



ಶ್ರವಣಬೆಳಗೊಳದ ಚಂದ್ರಗುಪ್ತ ಬಸದಿಯ
ಬಾಗಿಲುವಾಡ



ಐಹೊಳೆಯ ದುರ್ಗಾ ದೇವಾಲಯ ಹಿಂದುಗಡೆಯ ನೋಟ.



ಮಾನಸ್ತಂಭ, ಮೆಲಿಗೆ.

ಚಾರಿತ್ರಿಕ ಹಿನ್ನೆಲೆ

ಪುರಾತನ ಕಾಲದಿಂದಲೂ ಕರ್ನಾಟಕವು ರಾಜಕೀಯ ರಂಗದಲ್ಲಿ ಮಹತ್ವವಾದ ಪಾತ್ರವನ್ನು ವಹಿಸಿತ್ತೆಂದೂ ಮತ್ತು ಕರ್ನಾಟಕದ ಸಂಸ್ಕೃತಿಯು ಸಾವಿರಾರು ವರ್ಷಗಳ ಹಿಂದಿದ್ದ ಮೊಹೆಂಜೊದಾರೊ ಮತ್ತು ಹರಪ್ಪ ನಾಗರೀಕತೆಗೆ ಸಂಬಂಧವನ್ನು ತೋರಿಸಿಕೊಡುತ್ತಿದೆಯೆಂದೂ ಪಂಡಿತರು ಅಭಿಪ್ರಾಯಪಡುತ್ತಾರೆ. ಕ್ರಿ. ಪೂ. ಮೂರನೆಯ ಶತನಮಾನದಲ್ಲಿಯೇ ಕನ್ನಡ ನಾಡನ್ನು ಮೌರ್ಯರು ಆಳುತ್ತಿದ್ದರು. ಅವರ ರಾಜ್ಯವು ಚಿತ್ರದುರ್ಗ ಡಿಸ್ಟ್ರಿಕ್ಟನ್ನು ಒಳಗೊಂಡಿತ್ತೆಂದು ತಿಳಿಯಬರುತ್ತದೆ. ಮೊಳಕಾಲ್ಮುರು ತಾಲ್ಲೂಕಿನ ಸಿದ್ದಾಪುರ ಮತ್ತು ಜಟಂಗಿ ರಾಮೇಶ್ವರದಲ್ಲಿ ಅಶೋಕನ ಶಾಸನಗಳು ಮತ್ತು ಅಲ್ಲಿ ದೊರೆತಿರುವ ಅವಶೇಷಗಳಿಂದ ಆ ಸ್ಥಳಗಳು ಅತ್ಯಂತ ಪ್ರಾಚೀನವಾದವುಗಳೆಂದು ನಿರ್ಧರಿಸಬಹುದಾಗಿದೆ. ಸುವರ್ಣಗಿರಿ ಎಂಬುದು ಮೌರ್ಯರ ಒಂದು ಶಾಖೆಯ ರಾಜಧಾನಿಯಾಗಿತ್ತೆಂದೂ ಆ ಶಾಖೆಯ ಚಾಳುಕ್ಯ ರಾಜನಾದ ಇಮ್ಮಡಿ ಪುಲಕೇಶಿಯು ತಲೆಯೆತ್ತುವವರೆಗೂ ಕರ್ನಾಟಕದ ಉತ್ತರಭಾಗದಲ್ಲಿ ನೆಲೆಸಿತ್ತೆಂದೂ ತಿಳಿಯಬರುತ್ತದೆ. ಮೌರ್ಯರ ಕಾಲದ ಶಾಸನಸ್ತಂಭಗಳು ಉತ್ತರ ಹಿಂದೂಸ್ತಾನದಲ್ಲಿ ಕಾಣಬರುತ್ತವೆ. ಅಂತಹವು ಯಾವುವೂ ಕರ್ನಾಟಕದಲ್ಲಿ ಇರುವುದಿಲ್ಲ.

ಅಶೋಕನ ಶಾಸನಗಳು ಮಾತ್ರ ಬಂಡೆಗಳ ಮೇಲೆ ಕರ್ಣಾಟಕ ರಾಜ್ಯದ ಕೆಲವು ಸ್ಥಳಗಳಲ್ಲಿ ಸಿಕ್ಕಿರುತ್ತವೆ. ಬ್ರಹ್ಮಗಿರಿಯ ಹತ್ತಿರ ಇರುವ "ಇಸಿಲ" ಎಂಬ ಪಟ್ಟಣ ಅಶೋಕ ಚಕ್ರವರ್ತಿಯ ಪ್ರಾಂತಾಧಿಕಾರಿಯ ಸ್ಥಳವಾಗಿತ್ತೆಂದು ತಿಳಿಯಬರುತ್ತದೆ.

ಇವರ ತರುವಾಯ ಕನ್ನಡ ರಾಜ್ಯವನ್ನು ಆಳಿದವರು ಶಾತವಾಹನರು. ಇವರು ಆಂಧ್ರಭೃತ್ಯರೆಂದು ಕೆಲವು ವಿದ್ವಾಂಸರು ಹೇಳುತ್ತಾರೆ. ಇವರಲ್ಲಿ ಎರಡು ಸಂತತಿಗಳಿದ್ದುವೆಂದು ಊಹಿಸಲ್ಪಟ್ಟಿದೆ. ಮೊದಲನೆಯ ಸಂತತಿಯಲ್ಲಿ ಶಾಲಿವಾಹನನು ಪ್ರಖ್ಯಾತನಾದವನು. ಒಂದು ಸಂತತಿಯವರು ಬಳ್ಳಾರಿಯ ಸುತ್ತಲೂ ಇರುವ ಪ್ರದೇಶದಲ್ಲಿದ್ದರೆಂದು ಹೇಳುತ್ತಾರೆ. ಶಾತವಾಹನ ವಂಶದಲ್ಲಿ ಅತಿ ಪ್ರಖ್ಯಾತನಾದವನು ಗೌತಮೀಪುತ್ರ ಶಾತಕರ್ಣಿ. ಅಚ್ಚಕನ್ನಡ ಪ್ರದೇಶವಾದ ಪೈಠಣ ಈತನ ರಾಜಧಾನಿಯಾಗಿತ್ತು. ಈತನ ರಾಜ್ಯವು ಬಹು ವಿಸ್ತಾರವಾಗಿದ್ದು ಉತ್ತರದಲ್ಲಿ ಗುಜರಾತ್, ಮಾಳವ, ಮಧ್ಯಪ್ರಾಂತ್ಯಗಳನ್ನೂ ಪಶ್ಚಿಮದಲ್ಲಿ ಕೊಂಕಣವನ್ನೂ, ನಾಸಿಕಕ್ಕೆ ಉತ್ತರದಲ್ಲಿರುವ ಪ್ರದೇಶಗಳನ್ನೂ ದಕ್ಷಿಣದಲ್ಲಿ ಕರ್ನಾಟಕವನ್ನೂ ಒಳಗೊಂಡಿತ್ತು. ಕೊಂಕಣದಲ್ಲಿರುವ ವೈಜಯಂತಿಯೂ (ಈಗಿನ ಬನವಾಸಿ) ಗುಂಟೂರು ಡಿಸ್ಟ್ರಿಕ್ಟಿನಲ್ಲಿರುವ ಅಮರಾವತಿಯೂ ಇವರ ಕಾಲದಲ್ಲಿಯೇ ಅಭಿವೃದ್ಧಿಯನ್ನು ಹೊಂದಿದವು. ಶಾತವಾಹನರು ತಮ್ಮನ್ನು ಕುಂತಳಾಧೀಶ್ವರರೆಂದು ಕರೆದುಕೊಂಡಿದ್ದಾರೆ. ಪ್ರಾಚೀನ ಕರ್ನಾಟಕದ ಉತ್ತರ ಪ್ರದೇಶಕ್ಕೆ "ಕುಂತಲ" ವೆಂದು ಹೇಳುತ್ತಿದ್ದರು. "ಕುಂತಲ" ವೆಂದರೆ ಕೇಶಪಾಶ, ಶಿರಃ ಪ್ರದೇಶ. ದಕ್ಷಿಣ ಭಾರತ ಮಹಿಳೆಯ ಊರ್ಧ್ವಭಾಗದಲ್ಲಿ ನೆಲಸಿರುವ ಕರ್ನಾಟಕಕ್ಕೆ ಕುಂತಲವೆಂದು ಕರೆದಿರುವುದು ಸಾರ್ಥನಾಮವಾಗಿದೆ ಎಂದು ಒಬ್ಬ ವಿದ್ವಾಂಸರು ಟೀಕೆಮಾಡಿದ್ದಾರೆ. * ಶಾತವಾಹನರ ವಂಶವು ಕ್ರಿ. ಶ. ಮೂರನೆಯ ಶತಮಾನದ ಆದಿಭಾಗದಲ್ಲಿ ನಾಶವಾಯಿತು. ಶಾತವಾಹನರು ಬ್ರಾಹ್ಮಣರಾಗಿದ್ದರೂ ಇವರ ಕಾಲದಲ್ಲಿ ಬೌದ್ಧಮತವು ಬಹಳ ಉತ್ತೇಜನವನ್ನು ಹೊಂದಿತು. ಸಾಂಚಿ ಸ್ತೂಪದ ಸುತ್ತಲೂ ನಿರ್ಮಿಸಿರುವ

---

* "ಅದು ಕುಂತಲ ದೇಶವೆನಿ। ಪ್ಪಾದರಿಂದಂ ಮಧ್ಯದೇಶಕಂ ಕಾಂಚೀದೇ॥ ಶದ ಚೆಲ್ಪಿಂಗಂ ಮೇಲೆನಿ। ಪುದು ಕುಂತಳ ದೇಶದಿಂದೆ ಮೇಲ್‌ಪೆರವೊಳವೆ ॥ (ಕುಕನೂರು ಶಾಸನ)

ಗುಲಬರ್ಗ ಡಿಸ್ಟ್ರಿಕ್ಟಿನಲ್ಲಿರುವ ಈಗಿನ ಅಳಂದ ಮತ್ತು ನಿಂಬರಗಿ ಊರುಗಳು ಕರ್ನಾಟಕಕ್ಕೆ ಸೇರಿದ್ದುವೆಂದೂ, ಕುಂತಳದೇಶವು ಭೂಕಾಂತೆಯ ಶಿರೋಭಾಗವೆಂದೂ ಅವರಲ್ಲಿ ಅಲಂದೆಯು ಭಂಗಾರದ ಹೂವೆಂದೂ ಮತ್ತು ನಿಂಬರಗಿಯು ಆಹೂವಿನೊಳಗಿನ ಮಾಣಿಕ್ಯದ ಹರಳೆಂದೂ ಒಂದು ಶಾಸನದಲ್ಲಿ ವರ್ಣಿಸಲಾಗಿದೆ.

ತೋರಣ, ಕಟಕಟಿಗಳೂ ಅಮರಾವತಿ ಸ್ತೂಪವೂ ಇವರ ಕಾಲದಲ್ಲಿ ನಿರ್ಮಿಸಿದುವು. ಇವುಗಳಲ್ಲದೆ ಅನೇಕ ಗುಹಾಂತರ್ದೇವಾಲಯಗಳೂ ನಿರ್ಮಿತವಾದವು. ಅವುಗಳಲ್ಲಿ ಭಾಜ, ನಾಸಿಕ್, ಕನ್ಹೇರಿ, ಕಾರ್ಲೆ ಈ ಸ್ಥಳಗಳಲ್ಲಿರುವುವು ಮುಖ್ಯವಾದುವು. ಶಿಕಾರಿಪುರದ ತಾಲ್ಲೂಕು ಮಳವಳ್ಳಿಯಲ್ಲಿ ಒಂದು ಶಿಲಾಸ್ತಂಭವೂ, ಬನವಾಸಿಯಲ್ಲಿ ಒಂದು ನಾಗರಕಲ್ಲೂ, ಹಾರೀತಪುತ್ರ ಶಾತಕರ್ಣಿಯು ನಿರ್ಮಿಸಿದ್ದೆಂದು ಗೊತ್ತಾಗುತ್ತದೆ. ಇವುಗಳ ಹೊರತು ಈ ವಂಶದವರಿಗೆ ಸಂಬಂಧಪಟ್ಟ ಗುರುತುಗಳು ಈ ದೇಶದಲ್ಲಿಲ್ಲ.

ಇವರನಂತರ ಕರ್ನಾಟಕವನ್ನು ಆಳಿದ ರಾಜರುಗಳಲ್ಲಿ ಕದಂಬರು, ಗಂಗರು, ಚಾಳುಕ್ಯರು ರಾಷ್ಟ್ರಕೂಟರು, ಕಳಚೂರ್ಯರು, ಯಾದವರು, ಹೊಯಿಸಳರು ಮತ್ತು ವಿಜಯನಗರದ ಅರಸರು ಇವರೇ ಮುಖ್ಯರಾದವರು. ಇವರುಗಳಲ್ಲದೆ ಅನೇಕ ಸಣ್ಣ ಸಣ್ಣ ಅರಸುಮನೆತನದವರು ಕರ್ನಾಟಕದ ಕೆಲವು ಭಾಗಗಳನ್ನು ಆಗಾಗ್ಗೆ ಆಳಿ ತಮ್ಮ ಪ್ರಭಾವವನ್ನು ಬೀರಿದ್ದಾರೆ.

ಕದಂಬರು ಕ್ರಿ. ಶ. ಮೂರನೆಯ ಶತಮಾನದ ಮಧ್ಯಭಾಗದಲ್ಲಿ ಕನ್ನಡನಾಡನ್ನು ಆಳತೊಡಗಿದರು. ಅವರ ರಾಜಧಾನಿ ಬನವಾಸಿಯಾಗಿತ್ತು. ಇವರು ಮೊದಲು ಮೂರು ಶತಮಾನಗಳವರೆಗೆ ರಾಜ್ಯವನ್ನು ವೈಭವದಿಂದ ಆಳಿ ಅನಂತರ ಹತ್ತನೆ ಶತಮಾನದಿಂದ ಹದಿಮೂರನೆಯ ಶತಮಾನದವರೆಗೂ ಹಲವು ಪ್ರಾಂತ್ಯಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಇವರಲ್ಲಿ ಕ್ರಿ. ಶ. ನಾಲ್ಕನೆಯ ಶತಮಾನದಲ್ಲಿ ಆಳುತ್ತಿದ್ದ ಮಯೂರ ಶರ್ಮನೂ ಆತನ ಮರಿಮಗನಾದ ಕಾಕುತ್ಸವರ್ಮನೂ, ಅವನ ಮೊಮ್ಮಗನಾದ ಮೃಗೇಶವರ್ಮನೂ ಖ್ಯಾತಿಹೊಂದಿದವರು. ಮಯೂರ ಶರ್ಮನು ದಕ್ಷಿಣದಲ್ಲಿ ಶಿವಮೊಗ್ಗೆಯಿಂದ ಹಿಡಿದು ಕಾಂಚೀ ಪಟ್ಟಣದವರೆಗೂ, ಉತ್ತರದಲ್ಲಿ ಮಾಳವದಿಂದ ಗಯಾಕ್ಷೇತ್ರದವರೆಗೂ ತನ್ನ ರಾಜ್ಯವನ್ನು ವಿಸ್ತರಿಸಿದ್ದನು. ಕಾಕಾತ್ಸವರ್ಮನು ಮುತ್ತಾತನಷ್ಟೇ ಪ್ರತಾಪಶಾಲಿಯಾಗಿದ್ದನೆಂದೂ ಅನೇಕ ಪ್ರಜೋಪಕಾರಕಗಳಾದ ಕೆಲಸಗಳನ್ನು ಮಾಡಿದನೆಂದೂ ಹೇಳಿದೆ. ಈತನು ತಾಳಗುಂದದಲ್ಲಿ ಇರುವ ಪ್ರಣವೇಶ್ವರ ದೇವಾಲಯದ ಹತ್ತಿರ ಒಂದು ದೊಡ್ಡ ಕಲ್ಯಾಣಿಯನ್ನು ಕಟ್ಟಿದನು. ಮೃಗೇಶವರ್ಮನು ಕದಂಬರ ರಾಜ್ಯವು ಅಚ್ಚಳಿಯದಂತೆ ಕಾಪಾಡಿಕೊಂಡು ಬಂದುದಲ್ಲದೆ ನಿಷ್ಪಕ್ಷಪಾತವಾಗಿ ರಾಜ್ಯ

ವನ್ನಾಳುತ್ತ ಎಲ್ಲ ಮತಗಳಿಗೂ ಸರ್ವಸಮನಾಗಿ ಆಶ್ರಯವನ್ನು ಇತ್ತಿದ್ದನು. ಇವನ ಮೊಮ್ಮಗನಾದ ಹರಿವರ್ಮನ ಕಾಲಕ್ಕೆ ಈ ಕದಂಬರ ಆಳ್ವಿಕೆಯು ಕೊನೆಗಂಡಿತು ಮತ್ತು ರಾಜ್ಯವು ಚಾಳುಕ್ಯರ ವಶವಾಯಿತು. ಅಲ್ಲಿಂದ ಮುಂದಕ್ಕೆ ಪುನಃ ಹತ್ತನೆಯ ಶತಮಾನದಿಂದ ಹದಿಮೂರನೆಯ ಶತಮಾನದವರೆಗೂ ಹಾನಗಲ್ಲಿನಲ್ಲಿ ಒಂದು ಶಾಖೆ, ಗೋವೆಯಲ್ಲಿ ಒಂದು ಶಾಖೆ, ಈ ರೀತಿ ಎರಡು ಮನೆತನದವರು ಸಾಮಂತರಾಜರಾಗಿದ್ದರು. ಇವರಲ್ಲಿ ಗೋವೆಯ ರಾಜನಾಗಿದ್ದ ಒಂದನೆಯ ಜಯಕೇಶಿಯು ಅತ್ಯಂತ ಪರಾಕ್ರಮಶಾಲಿಯಾಗಿದ್ದನು. ಹಾನಗಲ್ಲು ಕದಂಬ ದೊರೆಯಾದ ಕಾಮದೇವನು ಮಲೆನಾಡನ್ನು ತುಳುನಾಡನ್ನು ಪಶ್ಚಿಮಘಟ್ಟಗಳನ್ನು ಜಯಿಸಿ ತನ್ನ ರಾಜ್ಯಕ್ಕೆ ಸೇರಿಸಿಕೊಂಡಿದ್ದನೆಂದು ಗೊತ್ತಾಗುತ್ತದೆ. ಕದಂಬರ ರಾಜ್ಯಕ್ಕೆ ಶ್ರೀರಾಜ್ಯವೆಂದು ಹೆಸರಿತ್ತು. ಕದಂಬರು ಪಾಟಲೀಪುತ್ರದ ಗುಪ್ತರೊಡನೆಯೂ, ಮಧ್ಯ ಭಾರತದ ವಿದರ್ಭದ ವಾಕಾಟಕರೊಡನೆಯೂ, ದಕ್ಷಿಣದಲ್ಲಿನ ತಲಕಾಡು ಗಂಗರೊಡನೆಯೂ ವೈವಾಹಿಕ ಸಂಬಂಧವನ್ನು ಬೆಳೆಸಿಕೊಂಡಿದ್ದರೆಂದು ತಿಳಿಯುಬರುತ್ತದೆ. ಅವರು ಜೈನ ಮತ್ತು ವೈದಿಕ ಧರ್ಮಗಳೆರಡಕ್ಕೂ ಬೆಂಬಲವನ್ನು ನೀಡುತ್ತಿದ್ದರು. ಕದಂಬರು ಅನೇಕ ದೇವಾಲಯಗಳನ್ನೂ ಜೈನ ಬಸದಿಗಳನ್ನೂ ಕಟ್ಟಿಸಿದರು. ಹಲಸಿಯಲ್ಲಿರುವ ಕಲ್ಲೇಶ್ವರ ದೇವಾಲಯ, ಬನವಾಸಿಯ ಮಧುಕೇಶ್ವರ ದೇವಾಲಯ, ದೇಗಾಂವೆಯ ಕಮಲನಾರಾಯಣ ದೇವಾಲಯಗಳು ಮುಖ್ಯವಾದುವು.

ಕರ್ನಾಟಕ ರಾಜ್ಯವನ್ನು ಕಟ್ಟಲು ಕದಂಬರು ಪ್ರಾರಂಭಿಸಿದ ಕೆಲಸವನ್ನು ಗಂಗರು ಹುರುಪಿನಿಂದ ಮುಂದುವರಿಸಿದರು. ಗಂಗರು ಬಹು ಪ್ರಾಚೀನ ವಂಶಕ್ಕೆ ಸೇರಿದವರೆಂದು ತೋರುತ್ತದೆ. ಅವರು ಕನ್ನಡ ತಾಯಿಯ ಮಕ್ಕಳಾಗಿ ಕರ್ನಾಟಕದ ಅರಸೊತ್ತಿಗೆಯನ್ನು ಉನ್ನತ ಪದವಿಗೆ ಏರಿಸಿದರು. ಇವರಲ್ಲಿ ಮೊತ್ತ ಮೊದಲಿನ ಐತಿಹಾಸಿಕ ಪುರುಷರು, ಮಾಧವ ಮತ್ತು ದಡಿಗ. ಮಾಧವನು ಮೊದಲನೆಯ ಕೊಂಗುಣಿವರ್ಮನೆಂಬ ಹೆಸರಿನಿಂದ ಸುಮಾರು ಕ್ರಿ. ಶ. ೩೫೦

---

* ಪ್ರೊಫೆಸರ್ ಆರೋಗ್ಯ ಸ್ವಾಮಿಯವರು ಗಂಗರ ರಾಜಧಾನಿಯು ಈಗ ನಾವು ತಿಳಿದುಕೊಂಡಿರುವ "ಕೋಲಾರ" ವಲ್ಲವೆಂದು ಅಭಿಪ್ರಾಯಪಡುತ್ತಾರೆ. Madras University Journal July 1956.

ರಲ್ಲಿ ಆಳಿದನು. ಇವರ ರಾಜಧಾನಿ ಮೊದಲು ಕುವಲಾಲಪುರ (ಈಗಿನ ಕೋಲಾರ) ವಾಗಿದ್ದು * ಆಮೇಲೆ ನಾಲ್ಕನೆಯ ಶತಮಾನದ ಆದಿಭಾಗದಲ್ಲಿ ಕೊಂಗುಣಿವರ್ಮನ ಮೊಮ್ಮಗನಾದ ಹರಿವರ್ಮನ ಕಾಲದಲ್ಲಿ ತಲಕಾಡಿಗೆ ಹೋಯಿತು. ಮೊದಲಿನ ಗಂಗರು ಜೈನ ಮತದವರಾಗಿದ್ದರು. ಹರಿವರ್ಮನ ಮಗನಾದ ವಿಷ್ಣುಗೋಪನ ಕಾಲದಲ್ಲಿ ವೈಷ್ಣವ ಮತಾವಲಂಬಿಗಳಾದರು. ವಿಷ್ಣುಗೋಪನ ಮೊಮ್ಮಗನಾದ ಅವಿನೀತನು ಬಹಳ ವಿದ್ಯಾವಂತನೂ ನ್ಯಾಯಪಕ್ಷಪಾತಿಯೂ ಉದಾರಿಯೂ ಆಗಿದ್ದನು. ಅವಿನೀತನ ಮಗ ದುರ್ವಿನೀತನು ಪಲ್ಲವರಾಜರನ್ನು ಗೆದ್ದು ರಾಜ್ಯವನ್ನು ವಿಸ್ತಾರಗೊಳಿಸಿದನು. ಶ್ರೀಪುರುಷನ ಕಾಲದಲ್ಲಿ ಗಂಗ ರಾಜ್ಯವು ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಈತನ ಕಾಲದಲ್ಲಿ ನೆಲಮಂಗಲ ತಾಲ್ಲೂಕಿನ ಮಾನ್ಯಪುರ (ಈಗಿನ ಮನ್ನೆ) ರಾಜಧಾನಿಯಾಯಿತು. ಇವನ ತರುವಾಯ ಬಂದ ಶಿವಮಾರನ ಕಾಲದಲ್ಲಿ ರಾಷ್ಟ್ರಕೂಟರು ದಂಡೆತ್ತಿ ಬಂದು ಇವನನ್ನು ಸೆರೆಹಿಡಿದರು. ಆದರೆ ಮುಂದೆ ಬಂದ ನೀತಿಮಾರ್ಗನು ರಾಷ್ಟ್ರಕೂಟರನ್ನು ಸೋಲಿಸಿ ರಾಜ್ಯವನ್ನು ಮತ್ತೆ ಪಡೆದನು. ಅಲ್ಲಿಂದೀಚೆಗೆ ವಿಪತ್ಪರಂಪರೆಗಳು ಒದಗುತ್ತ ಬಂದು ಕ್ರಿ. ಶ. ೧೦೦೪ ರಲ್ಲಿ

---

* (a) ಎಷ್ಟೋ ಶತಮಾನಗಳ ಹಿಂದೆ, ಕನ್ನಡಿಗರ ಒಂದು ತಂಡ ಮಲಬಾರಿನಲ್ಲಿ ಹೋಗಿ ನೆಲಸಿತು. ಕನ್ನಡಿಗರೆಂದು ಹೇಳಿಕೊಳ್ಳುವ ಅನೇಕ ಮನೆತನದವರು ಅಲ್ಲಿ ಈಗಲೂ ಇರುತ್ತಾರೆ.

(b) ಶ್ರೀ. ಶಂ. ಬಾ. ಜೋಶಿಯವರು "ಕಣ್ಮರೆಯಾದ ಕನ್ನಡ" ಎಂಬ ಗ್ರಂಥದಲ್ಲಿ ಕನ್ನಡಿಗರ ಮೂಲಸ್ಥಾನವು ಮಹಾರಾಷ್ಟ್ರದಲ್ಲಿ ಖಾನದೇಶವೆಂದು ಕರೆಯಲ್ಪಡುವ ಜಿಲ್ಲೆಯ ಸುತ್ತಲಿರುವ ಪ್ರದೇಶವೆಂದು ಅಭಿಪ್ರಾಯ ಪಡುತ್ತಾರೆ. ಈ ಪ್ರದೇಶದಲ್ಲಿ ಈಗಲೂ "ಕನ್ನಡ" ವೆಂಬ ಹೆಸರಿನದೊಂದು ತಾಲ್ಲೂಕು ಇರುತ್ತದೆ. ಅಲ್ಲಿ ಕನ್ನಡವೆಂದು ಹೆಸರುಳ್ಳ ಜನಾಂಗದ ಗೌಳಿಗರು ಇನ್ನೂ ವಾಸವಾಗಿರುತ್ತಾರೆ. ಅಲ್ಲದೆ ಅಲ್ಲಿಯ ಕುರುಬರು, ಹೊಲೆಯರು, ಗೊಲ್ಲರು ಮುಂತಾದ ಅನೇಕ ಜಾತಿಗಳು ಈಗಲೂ ಕನ್ನಡವನ್ನೆ ಮಾತನಾಡುತ್ತಾರೆ. ಸುತ್ತಲೂ ಕನ್ನಡ ಹೆಸರಿನ ಊರುಗಳೂ, ವೀರಗಲ್ಲುಗಳೂ ಕಂಡು ಬರುತ್ತವೆ ಎಂದು ಬರೆದಿದ್ದಾರೆ.

(c) ಚಾಳುಕ್ಯರ ರಾಜ್ಯಕ್ಕೆ 'ಮಹಾರಾಷ್ಟ್ರ' ವೆಂದೇ ಹೆಸರಿತ್ತು ಮತ್ತು ಈಗಿನ ಮಹಾರಾಷ್ಟ್ರದಲ್ಲಿ ಮುಂಚೆ ಎಲ್ಲೆಲ್ಲಿಯೂ ಕನ್ನಡ ನುಡಿಯೇ ಪ್ರಚಾರದಲ್ಲಿತ್ತೆಂದು ಈಚೆಗೆ ಬೆಳಕಿಗೆ ಬಂದಿದೆ.

ರಾಜೇಂದ್ರಚೋಳನು ತಲಕಾಡನ್ನು ಹಿಡಿದು ಗಂಗರನ್ನು ನಿರ್ಮೂಲ ಮಾಡಿದನು. ಗಂಗರಾದರೋ ಕ್ರಿ. ಶ. ೧೬ ನೆಯ ಶತಮಾನದವರೆಗೆ ಪಾಳೆಯಗಾರರಾಗಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾ ಕಟ್ಟಕಡೆಗೆ ವಿಜಯನಗರ ಸಾಮ್ರಾಜ್ಯದಲ್ಲಿ ಸೇರಿ ಹೋದರು. ಗಂಗವಂಶದ ಒಂದು ಶಾಖೆ ನೇಪಾಳದಲ್ಲಿಯೂ, ಮತ್ತೊಂದು ಶಾಖೆ ಕಳಿಂಗರಾಜ್ಯದಲ್ಲಿಯೂ ನೆಲೆಸಿ ಭರತಖಂಡದಲ್ಲೆಲ್ಲ ವ್ಯಾಪಿಸಿದ ಪ್ರಬಲ ಜನಾಂಗವೆಂಬ ಕೀರ್ತಿಯನ್ನು ಕರ್ನಾಟಕಕ್ಕೆ ತಂದುಕೊಟ್ಟಿತು. * ಗಂಗರು ಪ್ರತಿಭಾಶಾಲಿಗಳು. ಕುಶಲ ಕಲೆಗಳ ಪ್ರೋತ್ಸಾಹಕರೂ ಆಗಿದ್ದರು. ಅವರ ಕಾಲದ ಕಟ್ಟಡಗಳು ತಲಕಾಡಿನಲ್ಲಿಯೂ, ಶ್ರವಣಬೆಳಗೊಳದಲ್ಲಿಯೂ, ಕಂಬದ ಹಳ್ಳಿಯಲ್ಲಿಯೂ ಇವೆ. ಬಸದಿಗಳನ್ನಲ್ಲದೆ, ದೊಡ್ಡ ದೊಡ್ಡ ಗೊಮ್ಮಟ ವಿಗ್ರಹ ಗಳನ್ನೂ ಅವರು ನಿರ್ಮಿಸಿದರು. ಶ್ರವಣಬೆಳಗೊಳದಲ್ಲಿಯೂ, ಕಾರ್ಕಳದಲ್ಲಿಯೂ ವೇಣೂರಿನಲ್ಲಿಯೂ ಎತ್ತರವಾದ ವಿಗ್ರಹಗಳು ಸ್ಥಾಪಿಸಲ್ಪಟ್ಟಿವೆ.

ಪಶ್ಚಿಮ ಚಾಳುಕ್ಯರ ಮನೆತನದವರು ಕ್ರಿ. ಶ. ೫ ನೆಯ ಶತಮಾನದಿಂದ ೮ ನೆಯ ಶತಮಾನದವರೆಗೂ ಮತ್ತೆ ೧೦ ನೆಯ ಶತಮಾನದ ಕೊನೆಯಿಂದ ೧೨ ನೆಯ ಶತಮಾನದವರೆಗೂ ಕರ್ನಾಟಕವನ್ನು ಆಳಿದರು. ಈ ವಂಶದ ಮೂಲಪುರುಷನಾದ ಜಯಸಿಂಹನು ಉತ್ತರದಿಂದ ದಕ್ಷಿಣಕ್ಕೆ ವಲಸೆ ಹೊರಟು ಬಿಜಾಪುರ ಡಿಸ್ಟ್ರಿಕ್ಟಿನ ಐಹೊಳೆಯಲ್ಲಿ ಬಂದು ನೆಲಸಿದನು. ಇವನ ಅನಂತರ ಇವನ ಮೊಮ್ಮಗನಾದ ಒಂದನೆಯ ಪುಲಕೇಶಿಯೇ ಪ್ರಖ್ಯಾತನಾದವನು. ಈತನು ಕ್ರಿ. ಶ. 535 ರಿಂದ 566 ರ ವರೆಗೆ ಆಳಿದನು. ಚಾಳುಕ್ಯರನ್ನು ನೆಲೆಗೊಳಿಸಿದ ಕೀರ್ತಿ ಅವನದು. ಪುಲಕೇಶಿಯು ವಾತಾಪಿ (ಈಗಿನ ಬಾದಾಮಿ) ಯನ್ನು ರಾಜಧಾನಿಯಾಗಿ ಮಾಡಿಕೊಂಡನು. ಅವನ ಕಾಲದಲ್ಲಿ ರಾಜ್ಯವು ಇಡೀ ಬೊಂಬಾಯಿ ಆಧಿಪತ್ಯವನ್ನು ಒಳಗೊಂಡಿತ್ತು. ಅವನ ಮಗನಾದ ಒಂದ ನೆಯ ಕೀರ್ತಿವರ್ಮನೂ ಮತ್ತು ಅವನ ತಮ್ಮನಾದ ಮಂಗಲೇಶನೂ ರಾಜ್ಯ ವನ್ನು ದಕ್ಷತೆಯಿಂದ ಆಳಿ ಕೀರ್ತಿಯನ್ನು ಸಂಪಾದಿಸಿದರು. ಅವನ ತರುವಾಯ ಬಂದ ಎರಡನೆಯ ಪುಲಕೇಶಿಯೇ ಈ ವಂಶದಲ್ಲಿ ಅತ್ಯಂತ ಶ್ರೇಷ್ಠನು. ಇವನು ಸುತ್ತಮುತ್ತಲಿದ್ದ ಎಲ್ಲ ರಾಜರನ್ನೂ ಸೋಲಿಸಿ ತನ್ನ ಆಧಿಪತ್ಯವನ್ನು ಬಲಗೊಳಿ ಸಿದನು. ತನ್ನ ರಾಜ್ಯವನ್ನು ಮಹಾರಾಷ್ಟ್ರವೆಂದು ಕರೆಯುತ್ತಿದ್ದನು. ವೆಂಗಿ

ದೇಶವನ್ನು ಗೆದ್ದು ಅಲ್ಲಿ ತನ್ನ ತಮ್ಮನಾದ ವಿಷ್ಣುವರ್ಧನನನ್ನು ರಾಜನನ್ನಾಗಿ ಪಟ್ಟಕಟ್ಟಿದನು. ಇವನೇ ಪೂರ್ವಚಾಳುಕ್ಯರೆಂಬ ಇನ್ನೊಂದು ವಂಶಕ್ಕೆ ಮೂಲ ಪುರುಷನಾದನು. ಇವನ ಕಾಲದಲ್ಲಿಯೇ ಚೀಣಾ ಯಾತ್ರಿಕನಾದ ಹುಯನು ತ್ಸಾಂಗ್ ಭರತಖಂಡಕ್ಕೆ ಬಂದದ್ದು. ಇವನು ಕರ್ನಾಟಕದಲ್ಲಿಯೂ ಸಂಚಾರ ಮಾಡಿ ಇಲ್ಲಿಯ ಸ್ಥಿತಿಗತಿಗಳನ್ನು ವಿವರಿಸಿದ್ದಾನೆ. ಈ ಪುಲಕೇಶಿಯ ಕಾಲ ದಲ್ಲಿಯೇ ಕರ್ನಾಟಕವು ಅಂತರರಾಷ್ಟ್ರೀಯ ಪ್ರಾಮುಖ್ಯತೆಗೂ ಬಂದಿತ್ತೆಂದು ಚರಿತ್ರೆಯಿಂದ ಗೊತ್ತಾಗುತ್ತದೆ. ಕ್ರಿ. ಶ. 642 ರಲ್ಲಿ ಪಲ್ಲವರು ಪುಲಕೇಶಿ ಯನ್ನು ಸೋಲಿಸಿ ಬಾದಾಮಿಯನ್ನು ಹನ್ನೆರಡು ವರ್ಷಗಳ ಕಾಲ ಆಕ್ರಮಿಸಿ ಕೊಂಡಿದ್ದರು. ಆದರೆ ಪುಲಕೇಶಿಯ ಮಗನಾದ ಒಂದನೆಯ ವಿಕ್ರಮಾದಿತ್ಯನು ಅತ್ಯಂತ ಪರಾಕ್ರಮಶಾಲಿಯಾಗಿದ್ದನು. ಅವನು ಪಲ್ಲವರನ್ನು ಸೋಲಿಸಿ, ಕಂಚಿಯನ್ನು ವಶಪಡಿಸಿಕೊಂಡದ್ದಲ್ಲದೆ, ಚೋಳ, ಪಾಂಡ್ಯ, ಕೇರಳ ರಾಜರು ಗಳನ್ನು ಅಡಗಿಸಿದನು. ಇವನ ತರುವಾಯ ಹೆಸರುವಾಸಿಯಾದವನು ಎರಡ ನೆಯ ವಿಕ್ರಮಾದಿತ್ಯ. ಇವನು ಕ್ರಿ. ಶ. 735 ರಿಂದ 745 ರವರೆಗೆ ರಾಜ್ಯವನ್ನು ಆಳಿದನು. ಇವನೂ ಪಲ್ಲವ, ಚೋಳ, ಪಾಂಡ್ಯ ರಾಜರುಗಳನ್ನು ಪುನಃ ಸೋಲಿಸಿ ರಾಜ್ಯವನ್ನು ವಿಸ್ತರಿಸಿದನು. ಉತ್ತರದಲ್ಲಿ ಲಾಟ ದೇಶದಲ್ಲಿ ಇವನ ಸಾಮಂತನಾಗಿದ್ದ ಜನಾಶ್ರಯನು ಸುತ್ತಮುತ್ತಲ ರಾಜ್ಯಗಳನ್ನು ಇವನಿಗೆ ಗೆದ್ದು ಕೊಟ್ಟನು. ಇವನ ಮಗನಾದ ಇಮ್ಮಡಿ ಕೀರ್ತಿವರ್ಮನು ಪಲ್ಲವರನ್ನು ಪೂರ್ತಿ ಸೋಲಿಸಿದನು. ಕ್ರಿ. ಶ. 754 ರಲ್ಲಿ ರಾಷ್ಟ್ರಕೂಟದ ದೊರೆಯಾದ ದಂತಿದುರ್ಗ ನಿಂದ ಇವನು ಪರಾಜಿತನಾದನು. ಇಲ್ಲಿಂದ ಮುಂದಕ್ಕೆ ಪಶ್ಚಿಮ ಚಾಳುಕ್ಯ ವಂಶ ನಾಶವಾಯಿತೆಂದೇ ಹೇಳಬೇಕು. ಚಾಳುಕ್ಯರು ಪ್ರತಾಪಶಾಲಿಗಳು. ಅವರು ಕರ್ನಾಟಕ ರಾಜ್ಯದಲ್ಲೆಲ್ಲ ದೇವಸ್ಥಾನಗಳನ್ನೂ ಬಸದಿಗಳನ್ನೂ ಕಟ್ಟಿ ದತ್ತಿಗಳನ್ನು ಬಿಟ್ಟಿದ್ದಾರೆ. ಈ ವಂಶದ ಮೂಲಪುರುಷನಾದ ಜಯಸಿಂಹನು ಐಹೊಳೆಯಲ್ಲಿ ಕೊಂಟಿಗುಡಿ, ದುರ್ಗಾ ದೇವಸ್ಥಾನಗಳನ್ನು ಕಟ್ಟಿಸಿದನು. ಒಂದ ನೆಯ ಕೀರ್ತಿವರ್ಮನ ಬಾದಾಮಿಯ ವೈಷ್ಣವ ಗುಹಾಂತರ್ದೇವಾಲಯಗಳನ್ನು, ಎರಡನೆ ಪುಲಕೇಶಿಯು ಬಾದಾಮಿಯಲ್ಲಿ ಮೇಗುತಿದೇವಾಲಯವನ್ನೂ ಕಟ್ಟಿ ಸಿದರು. ಒಂದನೆಯ ವಿಕ್ರಮಾದಿತ್ಯನ ಮಗನಾದ ವಿಜಯಾದಿತ್ಯನು ಪಟ್ಟದ ಕಲ್ಲಿನಲ್ಲಿ ವಿಜಯೇಶ್ವರ ದೇವಾಲಯವನ್ನೂ, ಇಮ್ಮಡಿ ವಿಕ್ರಮಾದಿತ್ಯರ ರಾಣಿ

ಯರು ಲೋಕೇಶ್ವರ ಮತ್ತು ತ್ರೈಲೋಕೇಶ್ವರ ದೇವಾಲಯಗಳನ್ನೂ ಕಟ್ಟಿಸಿದರು. ಚಾಳುಕ್ಯರು ತಮ್ಮದೇ ಆದ ಹೊಸ ವಾಸ್ತುಶಿಲ್ಪ ರೀತಿಯನ್ನು ಪ್ರಾರಂಭಿಸಿದರು. ಈ ಹೊಸ ರೀತಿಯ ಕಟ್ಟಡಗಳು ಚಾಳುಕ್ಯ ರಾಜರು ಆಳುತ್ತಿದ್ದ ಪ್ರದೇಶಗಳಲ್ಲೆಲ್ಲ ಹೇರಳವಾಗಿ ಕಂಡು ಬರುತ್ತವೆ. ಇದೇ ರೀತಿಯನ್ನೇ ಹೊಯಿಸಳರು ಮುಂದುವರಿಸಿಕೊಂಡು ವೃದ್ಧಿಪಡಿಸಿದರು.

ಪೂರ್ವಚಾಳುಕ್ಯ ವಂಶದ ಮೂಲ ಪುರುಷನಾದ ಒಂದನೆಯ ವಿಷ್ಣುವರ್ಧನನು ಹದಿನೆಂಟು ವರ್ಷಗಳವರೆಗೆ ವೆಂಗಿ ರಾಜ್ಯವನ್ನಾಳಿದನು. ಪಿಷ್ಟಪುರ (ಈಗಿನ ಪೀಠಾಪುರ) ಇವನ ರಾಜಧಾನಿಯಾಗಿತ್ತು. (ಕ್ರಿ. ಶ. 615–633) ಈತನು ಪಾಂಡಿತ್ಯ ಪ್ರೇಮಿಯೂ ಬುಧಜನಾಶ್ರಯನೂ ಆಗಿದ್ದನು. ಇವನ ಮಗ ಒಂದನೆಯ ಜಯಸಿಂಹನು ಮೂವತ್ತು ವರ್ಷಗಳ ಕಾಲ ರಾಜ್ಯವಾಳಿದನು. ಇವರ ವಂಶದ ಮುಮ್ಮಡಿ ವಿಷ್ಣುವರ್ಧನನ ಕಾಲದಲ್ಲಿ ರಾಷ್ಟ್ರಕೂಟರು ಪೂರ್ವಚಾಳುಕ್ಯ ರಾಜ್ಯವನ್ನೂ ವಶಪಡಿಸಿಕೊಂಡರು.

ಪಶ್ಚಿಮ ಚಾಳುಕ್ಯರು ಎರಡು ಶತಮಾನಗಳ ಕಾಲ ಹಿಂದೆ ಬಿದ್ದಿದ್ದು ಪುನಃ ತೈಲಪನ ಕಾಲದಲ್ಲಿ ಕನ್ನಡ ನಾಡಿನಲ್ಲಿ ಪ್ರಬಲ ಶಕ್ತಿಯುಳ್ಳವರಾದರು. ಇವರಲ್ಲಿ ಆರನೆಯ (ಕ್ರಿ. ಶ. ೯೭೦) ವಿಕ್ರಮಾದಿತ್ಯನೆ ಪ್ರಸಿದ್ಧನಾದವನು. ಕಲ್ಯಾಣಿ ಇವನ ರಾಜಧಾನಿಯಾಗಿತ್ತು. ಇವನು ಚೋಳರು, ಪಾಂಡ್ಯರು, ಮತ್ತು ಲಾಟರು ಇವರುಗಳ ಮೇಲೆ ದಂಡೆತ್ತಿ ಹೋಗಿ ಜಯ ಗಳಿಸಿದನು. ಆದರೆ ಸ್ವಲ್ಪ ಕಾಲದಲ್ಲಿಯೇ ಯಾದವರಿಂದಲೂ ಹೊಯಿಸಳರಿಂದಲೂ ಪರಾಜಿತನಾಗಿ ಈ ವಂಶವು ಕ್ರಿ. ಶ. ೧೧೮೯ ರಲ್ಲಿ ನಿರ್ಮೂಲವಾಯಿತು.

ಮೊದಲನೆಯ ಪಶ್ಚಿಮ ಚಾಳುಕ್ಯರ ದೊರೆಯಾದ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ ಚಾಳುಕ್ಯ ವಂಶದ ನಾಶಕ್ಕೆ ಕಾರಣನಾದ ದಂತಿದುರ್ಗನು ರಾಷ್ಟ್ರಕೂಟರ ಮನೆತನದವನು. ಈ ಮನೆತನದವರು ಹೈದರಾಬಾದು ರಾಜ್ಯದಲ್ಲಿರುವ ಲಾತೂರಿನವರು. ಇವರು ಕ್ರಿ. ಶ. ೬೨೫ ರಲ್ಲಿ ಒಂದು ಚಿಕ್ಕ ಪಾಳೆಯಪಟ್ಟನ್ನು ಕಟ್ಟಿಕೊಂಡು ಚಾಳುಕ್ಯ ರಾಜರ ಸಾಮಂತರಾಗಿದ್ದರು. ದಂತಿದುರ್ಗನು ಚಾಳುಕ್ಯ ರಾಜನಾದ ಎರಡನೆಯ ವಿಕ್ರಮಾದಿತ್ಯನೊಡನೆ

ಕಂಚಿಗೆ ದಂಡೆತ್ತಿ ಹೋಗಿ ಪಲ್ಲವರನ್ನು ಸೋಲಿಸಲು ಸಹಾಯಕನಾದನು. ವಿಕ್ರಮಾದಿತ್ಯನು ಸತ್ತಕೂಡಲೆ ತಾನು ಸ್ವತಂತ್ರನೆಂದು ಸಾರಿಕೊಂಡು ಮಧ್ಯ ಭಾರತವನ್ನು ದಕ್ಷಿಣ ಗುಜರಾತನ್ನು ಗೆದ್ದು ರಾಜ್ಯವನ್ನು ವಿಸ್ತರಿಸಿದನು. ಇವನು ಕ್ರಿ. ಶ. ೭೫೩ ರಲ್ಲಿ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ ಇಡೀ "ಮಹಾರಾಷ್ಟ್ರ" ಕ್ಕೇ ಅಧಿಪತಿಯಾಗಿ ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ ಎಂಬ ಬಿರುದುಗಳನ್ನು ಹೊಂದಿದನು. ರಾಷ್ಟ್ರಕೂಟರ ರಾಜಧಾನಿ ಮೊದಲು ನಾಸಿಕ ಜಿಲ್ಲೆಯಲ್ಲಿರುವ ಮಯೂರಖಂಡವಾಗಿತ್ತು. ಅನಂತರ ಹೈದರಾಬಾದಿನಲ್ಲಿರುವ ಮಾನ್ಯಖೇಟ (ಈಗಿನ ಮಳಖೇಡ) ವಾಯಿತು. ದಂತಿದುರ್ಗನ ಚಿಕ್ಕಪ್ಪನಾದ ಒಂದನೆಯ ಕೃಷ್ಣನು ೭೫೮ ರಲ್ಲಿ ಪಟ್ಟಕ್ಕೆ ಬಂದನು. ಈತನು ಗಂಗರನ್ನೂ ವೆಂಗಿಯ ಚಾಳುಕ್ಯರನ್ನೂ ಸೋಲಿಸಿ ಈಗಿನ ಮೈಸೂರಿನ ಉತ್ತರ ಪ್ರಾಂತವನ್ನೆಲ್ಲ ರಾಷ್ಟ್ರಕೂಟ ರಾಜ್ಯಕ್ಕೆ ಸೇರಿಸಿಕೊಂಡನು. ಕೃಷ್ಣನ ಮಗನಾದ ಧೃವನು ರಾಜ್ಯವನ್ನು ಇನ್ನೂ ವಿಸ್ತರಿಸಿ ಅತ್ಯುನ್ನತ ಪದವಿಯನ್ನು ಪಡೆದನು. ಇವನು ಉತ್ತರ ದಿಕ್ಕಿಗೆ ದಂಡೆತ್ತಿಹೋಗಿ ಕನೂಜವನ್ನು ಗೆದ್ದು ಗಂಗಾ ಯಮುನಾ ತೀರಗಳನ್ನು ಮುಟ್ಟಿ ಗುರ್ಜರ ದೊರೆಯಾದ ವತ್ಸರಾಜನನ್ನು, ಪಾಲರ ರಾಜನಾದ ಧರ್ಮಪಾಲನನ್ನು ಸೋಲಿಸಿದನು. (೭೭೨-೭೯೪) ಧೃವನ ಮೂರನೆಯ ಮಗನಾದ ಮುಮ್ಮಡಿ ಗೋವಿಂದನು ೭೯೩ ರಲ್ಲಿ ಪಟ್ಟಕ್ಕೆ ಬಂದನು. ಇವನ ಕಾಲದಲ್ಲಿ ರಾಷ್ಟ್ರಕೂಟ ರಾಜ್ಯವು ಆಸೇತು ಹಿಮಾಚಲದ ವರೆಗೂ ಹರಡಿತ್ತು. ಇವನಿಗೆ ಜಗತ್ತುಂಗ, ಪ್ರಭಾತ ವರ್ಷ, ಶ್ರೀವಲ್ಲಭ, ಜನವಲ್ಲಭ, ಕೀರ್ತಿನಾರಾಯಣ, ಮತ್ತು ತ್ರಿಭುವನಧವಳ ಎಂಬ ಬಿರುದುಗಳಿದ್ದವು. ಇವನ ಮಗ ಅಮೋಘವರ್ಷ ೮೧೪ ರಲ್ಲಿ ದೊರೆಯಾದನು. ಈತನಿಗೆ ನೃಪತುಂಗ, ಮಹಾರಾಜ ಷಂಡ, ವೀರನಾರಾಯಣ ಮತ್ತು ಅತಿಶಯಧವಳ ಎಂಬ ಬಿರುದುಗಳಿದ್ದವು. ಈತನು ಮಾನ್ಯಖೇಟ ಪಟ್ಟಣವನ್ನು ಕಟ್ಟಿ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಈತನು ಸ್ವತಃ ಪಂಡಿತನಾಗಿದ್ದು ತನ್ನ ಆಸ್ಥಾನದಲ್ಲಿ ಅನೇಕ ಪಂಡಿತರಿಗೆ ಆಶ್ರಯವನ್ನು ಕೊಟ್ಟಿದ್ದನು. ಕನ್ನಡ ಕವಿರಾಜಮಾರ್ಗವನ್ನು ರಚಿಸಿ ಅದರಲ್ಲಿ ಕನ್ನಡ ರಾಜ್ಯದ ವಿಸ್ತಾರವನ್ನು ಈ ರೀತಿ ಹೇಳಿದ್ದಾನೆ. "ಕಾವೇರಿಯಿಂದಮಾ ಗೋದಾವರಿ ವರಮಿರ್ಪ ನಾಡದಾ ಕನ್ನಡದೊಳ್ ॥ ಭಾವಿಸಿದ ಜನಪದಂ ವಸು । ಧಾವಲಯ ವಿಲೀನ ವಿಷಯ ವಿಶೇಷಂ ॥

ಅದರೊಳಗಂ ಕಿಸುವೊಳಲಾ। ವಿದಿತ ಮಹಾ ಕೊಪಣನಗರದಾ ಪುಲಿಗೆರೆಯ।
ಸದಭಿಸ್ತುತ ಮಪ್ಪೊಂಕುಂ। ದದ ನಡುವ ನಾಡೆ ನಾಡೆ ಕನ್ನಡದ ತಿರುಳ್॥"
"ಇವನು ಸುಮಾರು 878 ರಲ್ಲಿ ಮಡಿದನು. ಇವನ ಮಗ ಇಮ್ಮಡಿ ಕೃಷ್ಣನು ಅಕಾಲವರ್ಷ ಮತ್ತು ಶುಭತುಂಗ ಎಂಬ ಬಿರುದುಗಳೊಡನೆ ಮೂವತ್ತಾರು ವರ್ಷಗಳು ರಾಜ್ಯವಾಳಿದನು. ಇವನ ಮೊಮ್ಮಗನಾದ ಇಂದ್ರನೂ ಆಮೇಲೆ ಬಂದ ಮುಮ್ಮಡಿ ಕೃಷ್ಣನೂ ಹೆಚ್ಚು ಕೀರ್ತಿಯನ್ನು ಗಳಿಸಿದರು. ಮುಮ್ಮಡಿ ಕೃಷ್ಣನು ರಾಮೇಶ್ವರದವರೆಗೂ ಡಂಡೆತ್ತಿ ಹೋಗಿ ರಾಮೇಶ್ವರದಲ್ಲಿ ಒಂದು ಈಶ್ವರ ದೇವಾಲಯವನ್ನು ಕಟ್ಟಿಸಿದನಂತೆ. ರಾಷ್ಟ್ರ ಕೂಟ ಸಂತತಿಯು ಸುಮಾರು 973 ರಲ್ಲಿ ಕೊನೆಗಂಡಿತು. ರಾಷ್ಟ್ರಕೂಟ ರಾಜರು ಪಂಡಿತರು, ಪಂಡಿತ ಪ್ರಿಯರು ಮತ್ತು ಗುಡಿಗೋಪುರ ನಿರ್ಮಾಪಕರು. ಒಂದನೆಯ ಕೃಷ್ಣನು ಪ್ರಸಿದ್ಧವಾದ ಕೈಲಾಸ ದೇವಾಲಯವನ್ನು ಎಲ್ಲೋರದಲ್ಲಿ ನಿರ್ಮಿಸಿದನು.

ಉತ್ತರ ಹಿಂದೂಸ್ಥಾನದಲ್ಲಿ ಗುಪ್ತರ ವಂಶವು ನಾಶವಾದ ಮೇಲೆ ಅನೇಕ ಸ್ವತಂತ್ರ ರಾಜ್ಯಗಳು ಹುಟ್ಟಿಕೊಂಡವು. ಅವುಗಳಲ್ಲಿ ಕಳಚೂರ್ಯ ಅರಸು ಮನೆತನದವರು ಒಬ್ಬರು. ಇವರನ್ನು ಕಟಚ್ಚುರಿ ಎಂದು ಕರೆಯುವುದುಂಟು. ಇವರು ಹೈಹೇಯರೆಂದೂ, ಕಾರ್ತವೀರ್ಯನ ವಂಶದವರೆಂದೂ ಮಾಹಿಷ್ಮತೀ ನಗರದ ರಾಜರೆಂದೂ ಕರೆದುಕೊಳ್ಳುತ್ತಾರೆ. ಇವರು ಆರನೆ ಶತಮಾನದಲ್ಲಿ ಉತ್ತರದಿಂದ ಬಂದು ನರ್ಮದಾ ನದಿಯ ದಡದಲ್ಲಿ ನೆಲಸಿದರೆಂದು ತೋರುತ್ತದೆ. ಆರನೆಯ ಶತಮಾನದ ಕೊನೆಯ ಹೊತ್ತಿಗೆ, "ಮಹಾರಾಷ್ಟ್ರವನ್ನೂ"* ಗುಜರಾತನ್ನೂ ಮಾಳವದ ಕೆಲವು ಭಾಗಗಳನ್ನೂ ಗೆದ್ದು ಪ್ರಬಲರಾಗಿದ್ದರು. ಅದೇ ಸಮಯಕ್ಕೆ ಬಾದಾಮಿಯ ಚಾಳುಕ್ಯರನ್ನು ಎದುರಿಸಬೇಕಾಯಿತು. ಈ ಮನೆ ತನದವರು ಬಹಳ ಸ್ವಲ್ಪಕಾಲ ಕರ್ನಾಟಕದಲ್ಲಿ ರಾಜ್ಯಭಾರ ಮಾಡಿದರೂ ಅವರ ಆಳ್ವಿಕೆಯು ಬಹಳ ಮಹತ್ವಪೂರ್ಣವಾಗಿ ಪರಿಣಮಿಸಿತು. ಈ ವಂಶದ ಮೂಲಪುರುಷನು ಕೃಷ್ಣನಾದರೂ ಅವನ ತರುವಾಯ ಬಂದ ಬಿಜ್ಜಳನೇ ಪ್ರಖ್ಯಾತನಾದವನು. ಈತನು ಮೊದಲು ಕಲ್ಯಾಣದಲ್ಲಿ ಚಾಳುಕ್ಯ ರಾಜನ

---

* "ಮಹಾರಾಷ್ಟ್ರ" ವೆಂದು ಕರ್ನಾಟಕ್ಕೆ ಹೆಸರಿತ್ತು.

ಕೈಕೆಳಗೆ ಸೇನಾನಾಯಕನಾಗಿ ಸೇರಿಕೊಂಡು ಕ್ರಿ. ಶ. ೧೧೫೬ ರಲ್ಲಿ ಸಿಂಹಾಸನವನ್ನು ಆಕ್ರಮಿಸಿದನು. ಮೊದಲು ಆರು ವರ್ಷಗಳು ಚಾಳುಕ್ಯ ರಾಜನ ಹೆಸರಿನಲ್ಲಿಯೇ ರಾಜ್ಯಭಾರವನ್ನು ನಡಸುತ್ತಿದ್ದು ೧೧೬೨ ರಲ್ಲಿ ರಾಜನೆನಿಸಿಕೊಂಡನು. ಇವನು ೧೧೭೭ ರಲ್ಲಿ ಮಡಿದನು. ಇವನ ತರುವಾಯ ಮೂರು ಜನರು ರಾಜ್ಯವನ್ನಾಳಿ ೧೧೮೩ ರಲ್ಲಿ ಮಾಯವಾದರು. ಬಿಜ್ಜಳನ ಕಾಲದಲ್ಲಿ ವೀರಶೈವ ಮತವು ಸ್ಥಾಪನೆಯಾಗಿ ಬಹು ಬೇಗನೆ ಕರ್ನಾಟಕದಲ್ಲೆಲ್ಲ ಹರಡಿಕೊಂಡಿತು. ಈ ಮತವನ್ನು ಸ್ಥಾಪನೆಮಾಡಿದ ಬಸವೇಶ್ವರನು, ಬ್ರಾಹ್ಮಣರ ಮನೆತನದಲ್ಲಿ ಬಾಗೆವಾಡಿಯಲ್ಲಿ ಜನಿಸಿದನು. ಈತನು ನಂದಿಯ ಅವತಾರವೆಂದು ಹೇಳುತ್ತಾರೆ. ಈತನು ಬ್ರಾಹ್ಮಣ ಕರ್ಮಗಳನ್ನು ತ್ಯಜಿಸಿ ವೀರಶೈವ ಮತವನ್ನು ಪ್ರಚಾರಮಾಡತೊಡಗಿದನು. ಬಸವನು ಕೆಲವು ಕಾಲ ಬಿಜ್ಜಳನ ಮಂತ್ರಿಯಾಗಿದ್ದನು. ಕೆಲವು ಕಾಲಾನಂತರ ಆತನಿಗೂ ಬಿಜ್ಜಳನಿಗೂ ಮನಸ್ತಾಪಉಂಟಾಗಿ ಬಸವನು ಕೂಡಲ ಸಂಗಮಕ್ಕೆ ಹೋಗಿ ಅಲ್ಲಿ ಶಿವೈಕ್ಯನಾದನು. ವೀರಶೈವ ಮತವು ಬರಬರುತ್ತ ಕರ್ನಾಟಕದ ಉತ್ತರ ಭಾಗಗಳಲ್ಲಿ ಪ್ರಬಲವಾಗಿ ಹರಡಿತು. ಅಲ್ಲಿ ಇದ್ದ ಜೈನ ದೇವಾಲಯಗಳನೇಕವನ್ನು ಶಿವದೇವಾಲಯಗಳನ್ನಾಗಿ ಮಾರ್ಪಡಿಸಲಾಯಿತು. ಕಳಚೂರ್ಯ ರಾಜರುಗಳು ನಿಶ್ಯಂಕಮಲ್ಲ, ಶನಿವಾರದಸಿದ್ಧಿ, ಗಿರಿದುರ್ಗಮಲ್ಲ, ಭುಜಬಲಚಕ್ರವರ್ತಿ ಎಂಬ ಬಿರುದುಗಳನ್ನು ಹೊಂದಿದ್ದರು. ಇವರ ಶಾಸನಗಳು ದಾವಣಗೆರೆ, ಹರಿಹರ, ಬಳ್ಳಿಗಾವೆ ಈ ಜಾಗಗಳಲ್ಲಿ ಹೇರಳವಾಗಿವೆ. ಬಿಜ್ಜಳ ಮಹಾಮಂಡಲೇಶ್ವರನಾಗಿದ್ದ ಕೇಶಿರಾಜನು ಬೆಳ್ಳಿಗಾಂವೆಯಲ್ಲಿ ಕೇಶವದೇವಾಲಯವನ್ನು ಕಟ್ಟಿಸಿದನು. ಈಗ ಈ ದೇವಸ್ಥಾನವು ನಾಶವಾಗಿಹೋಗಿದೆ. ವೀರಶೈವ ಮತವು ಕನ್ನಡ ಸಾಹಿತ್ಯದ ಅಭಿವೃದ್ಧಿಗೆ ಚೈತನ್ಯವನ್ನು ತುಂಬಿತು.

ಯಾದವರೆಂಬ ಇನ್ನೊಂದು ಅರಸುಮನೆತನ ಈ ಸಮಯದಲ್ಲಿಯೇ ದಕ್ಷಿಣಭಾರತದ ಯಾದವಗಿರಿಯಲ್ಲಿ ತಲೆಯೆತ್ತಿತು. ಯಾದವರು ಖಾನದೇಶದಿಂದ ಬಂದವರೆಂದು ಕೆಲವರ ಅಭಿಪ್ರಾಯ. ಇವರು ಮೊದಲು ಗಂಗರ, ರಾಷ್ಟ್ರಕೂಟರ ಮತ್ತು ಚಾಳುಕ್ಯರ ಸಾಮಂತರಾಗಿದ್ದು ಕ್ರಿ. ಶ. ೧೧೮೭ ರ ಹೊತ್ತಿಗೆ ಸ್ವತಂತ್ರ ರಾಜರಾದರು. ಭಿಲ್ಲಮನೇ ಮೊದಲನೆಯ ರಾಜನು.

ಇವನು ಯಾದವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕೋಟಿ ಕೊತ್ತಲುಗಳನ್ನು ಕಟ್ಟಿದನು. ಆದರೆ ೧೧೯೦ ರಲ್ಲಿ ಹೊಯಿಸಳರಿಂದ ಪರಾಜಿತನಾದನು. ೧೨೬೦ ರಲ್ಲಿ ಮಹಾದೇವನೆಂಬ ರಾಜನು ಹೊಯಿಸಳರನ್ನು ಸೋಲಿಸಿದನು. ೧೨೭೧ ರಲ್ಲಿ ಪಟ್ಟಕ್ಕೆ ಬಂದ ರಾಮಚಂದ್ರನ ಆಳ್ವಿಕೆಯಲ್ಲಿ ಪುನಃ ಹೊಯಿಸಳರು ಇವನ ಸೈನ್ಯವನ್ನು ಸದೆಬಡಿದರು. ಅಲ್ಲಿಂದೀಚೆಗೆ ಪ್ರಬಲರಾದ ಶತ್ರುಗಳಿಂದ ತೊಂದರೆಗೊಳಗಾಗಿ ೧೩೧೮ ರಲ್ಲಿ ಈ ವಂಶವು ಕೊನೆಗೊಂಡಿತು. ಸುಲ್ತಾನ್ ಮಹಮ್ಮದ್ ತೊಘಲಕನು ದೇವಗಿರಿಯನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡು ಅದಕ್ಕೆ ದೌಲತಾಬಾದ್ ಎಂದು ಹೆಸರಿಟ್ಟನು. ಈ ವಂಶದ ಮಹಾದೇವನ ಕಾಲದಲ್ಲಿ ಶ್ರೀ ಮಾಧವಾಚಾರ್ಯರು ದ್ವೈತ ಸಿದ್ಧಾಂತವನ್ನು ಪ್ರಚಾರಮಾಡಲು ಪ್ರಾರಂಭಿಸಿದರೆಂದು ತಿಳಿದು ಬಂದಿದೆ. ೧೨೨೦ ರಲ್ಲಿ ಯಾದವರು ಬನವಾಸಿಯನ್ನು ವಶಪಡಿಸಿಕೊಂಡರು.

ಹೊಯಿಸಳರು ಕ್ರಿ. ಶ. ೧೦೦೦ ದಿಂದ ಕ್ರಿ. ಶ. ೧೩೪೬ ರವರೆಗೆ ರಾಜ್ಯವಾಳಿದರು. ಇವರು ಮಲೆನಾಡಿನ ಸೊಸೆಪುರದಿಂದ (ಶಶಕಪುರ) ಬಂದವರೆಂದೂ ಯದುವಂಶಕ್ಕೆ ಸೇರಿದವರೆಂದೂ ಹೇಳಿಕೊಳ್ಳುತ್ತಾರೆ. ಈ ವಂಶದ ಮೂಲ ಪುರುಷನಾದ ಸಳನು ಒಂದು ದಿನ ತನ್ನ ಮುಂದೆ ಬಂದ ಹುಲಿಯನ್ನು ಗುರುಗಳ ಆಜ್ಞಾನುಸಾರವಾಗಿ ಇರಿದು ಕೊಂದನೆಂದೂ ಅದರಿಂದಲೇ ಅವನ ವಂಶಕ್ಕೆ ಹೊಯಿಸಳ ಎಂಬ ಹೆಸರು ಬಂತೆಂದೂ ಪ್ರತೀತಿ. ಹಾಸನ ಡಿಸ್ಟ್ರಿಕ್ಟಿನ ದ್ವಾರಸಮುದ್ರ (ಈಗಿನ ಹಳೆಯ ಬೀಡು) ಇವರ ರಾಜಧಾನಿಯಾಗಿತ್ತು. ಇವರ ವಂಶದಲ್ಲಿ ಪ್ರಸಿದ್ಧನಾದವನು ವಿಷ್ಣುವರ್ಧನನು. ಈತನು ಜೈನಮತವನ್ನು ತ್ಯಜಿಸಿ ವೈಷ್ಣವನಾಗಿ ಅದರ ಗುರುತಿಗಾಗಿ ಬೇಲೂರಿನಲ್ಲಿ ಪ್ರಸಿದ್ಧವಾದ ದೇವಾಲಯವನ್ನು ಕಟ್ಟಿಸಿದನು. ಈತನು ಮೂವತ್ತು ವರ್ಷಗಳ ಕಾಲ ರಾಜ್ಯಭಾರ ಮಾಡಿ, ತಲಕಾಡಿನಿಂದ ಚೋಳರನ್ನು ಓಡಿಸಿ ದೇಶವನ್ನು ಭದ್ರಪಡಿಸಿದನು. ಅನಂತರ ಕೊಂಗು, ನಂಗಲಿ, ಗಂಗವಾಡಿ, ಒನವಾಸಿ, ಹಾನಗಲ್, ಪುಲಿಗೆರೆ, ಹಲಸಿಗೆ ಮತ್ತು ಬೆಳವಲ ಇವುಗಳನ್ನು ವಶಪಡಿಸಿಕೊಂಡನು. ಇವನ ಅನಂತರ ಪ್ರಸಿದ್ಧಿಗೆ ಬಂದವನು ವೀರಬಲ್ಲಾಳನು. ೧೧೯೨ ರಿಂದ ೧೨೧೧ ರವರೆಗೆ ಆಳಿದನು. ಲಕ್ಕುಂಡಿಯನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದನು. ೧೩೦೧

ರಲ್ಲಿ ಮೂರನೆ ಬಲ್ಲಾಳನು ಪಟ್ಟಕ್ಕೆ ಬಂದನು. ಈತನ ಕಾಲದಲ್ಲಿ ಮುಸಲ್ಮಾನರು ಎಡೆಬಿಡದೆ ಬಂದು ದೇಶವನ್ನು ಹಾಳುಮಾಡತೊಡಗಿದರು. ಹೊಯಿಸಳರು ಸುಮಾರು ಅರ್ಧ ಶತಮಾನ ಕಾಲ ಮುಹಮ್ಮದೀಯರನ್ನು ತಡೆಗಟ್ಟಿ ಕೊನೆಗೆ ೧೩೪೬ ರಲ್ಲಿ ನಾಶವಾದರು. ಇವರ ಕಾಲವೇ ಕರ್ನಾಟಕ ವಾಸ್ತುಶಿಲ್ಪದ ವೈಭವದ ಕಾಲ. ಚಾಳುಕ್ಯರು ಪ್ರಾರಂಭಮಾಡಿದ್ದ ಹೊಸ ವಾಸ್ತುಶಿಲ್ಪ ರೀತಿಯನ್ನೇ ಇವರೂ ಅನುಸರಿಸಿದ್ದಲ್ಲದೆ ಅದನ್ನು ವೃದ್ಧಿಪಡಿಸಿ ಸರ್ವಾಲಂಕಾರಯುತವನ್ನಾಗಿ ಮಾಡಿ ಕರ್ನಾಟಕಕ್ಕೆ ಶಾಶ್ವತವಾದ ಕೀರ್ತಿಯನ್ನು ತಂದರು. ಅವರ ರಾಜ್ಯದಲ್ಲೆಲ್ಲ ರಾಜರುಗಳು, ಅವರ ರಾಣಿಯರು, ಅವರ ಸಾಮಂತರು, ದಂಡನಾಯಕರು ಮುಂತಾದವರೆಲ್ಲ ನೂರಾರು ಗುಡಿಗಳನ್ನು ಕಟ್ಟಿ ದತ್ತಿಗಳನ್ನು ಬಿಟ್ಟು ಶಿಲಾಶಾಸನಗಳನ್ನು ನೆಟ್ಟರು. ಕರ್ನಾಟಕ ರಾಜ್ಯದಲ್ಲಿ ಪ್ರಾಯಶಃ ಪ್ರತಿಯೊಂದು ಹಳ್ಳಿಯಲ್ಲಿಯೂ ಶಿಲಾ ಶಾಸನಗಳು ಇವೆ ಎಂದು ಹೇಳಿದರೆ ತಪ್ಪಾಗಲಾರದೆಂದು ತೋರುತ್ತದೆ.

ದಕ್ಷಿಣದೇಶಕ್ಕೆ ಮುನ್ನುಗ್ಗಿ ಮುಸಲ್ಮಾನರ ಧಾಳಿಯನ್ನು ತಡೆಗಟ್ಟಿ ನಾಶವಾಗುತ್ತಿದ್ದ ಹಿಂದೂಧರ್ಮವನ್ನು ರಕ್ಷಿಸುವುದಕ್ಕಾಗಿ ವಿಜಯನಗರ ರಾಜ್ಯವು ೧೩೩೬ ರಲ್ಲಿ ಸ್ಥಾಪಿತವಾಯಿತು. ವಿಜಯನಗರದ ಕಾಲ ಕರ್ನಾಟಕ ಸಾಮ್ರಾಜ್ಯದ ಅತ್ಯುತ್ತಮ ಕಾಲ. ಈ ರಾಜ್ಯವು ಮೂರು ಶತಮಾನಗಳ ಕಾಲ ವೈಭವದಿಂದ ಬಾಳಿ ಕೊನೆಗೂ ಮುಸಲ್ಮಾನರಿಂದಲೇ ಕೊನೆಗಂಡಿತು. ವಿಜಯನಗರದ ರಾಜರು ಹಂಪೆಯ ವಿರೂಪಾಕ್ಷ ದೇವರ ಭಕ್ತರು. ಅವರ ಪ್ರಥಮ ರಾಜಧಾನಿ, ವಿಜಯನಗರ. ಅನಂತರ ಪೆನುಗೊಂಡೆ, ಚಂದ್ರಗಿರಿ, ವೆಲ್ಲೂರು ರಾಜಧಾನಿಗಳಾದುವು. ಅವರು ಯಾವಾಗಲೂ ಕರ್ನಾಟಕ ರಾಜರೆಂದೇ ಕರೆದುಕೊಳ್ಳುತ್ತಿದ್ದರು. ಅವರ ಲಾಂಛನವೂ ಕೂಡ ಚಾಳುಕ್ಯರು ಇಟ್ಟುಕೊಂಡಿದ್ದ ವರಾಹವೇ ಆಗಿತ್ತು. ಇವರು ನಾಡಿನಿಂದ ಮುಸಲ್ಮಾನರನ್ನು ಓಡಿಸಿ ಹಿಂದುಗಳ ಪ್ರಭುತ್ವವನ್ನು ಮತ್ತೆ ಸ್ಥಾಪಿಸಿದರು. ಇವರಲ್ಲಿ ಬುಕ್ಕರಾಯ, ಅವನ ಮಗ ಹರಿಹರರಾಯ, ಅವನ ಮಗ ದೇವರಾಯ, ಅವನ ಮೊಮ್ಮಗ ಇಮ್ಮಡಿ ದೇವರಾಯ ಇವರು ಮುಖ್ಯರಾದವರು. ಇಮ್ಮಡಿ ಬುಕ್ಕರಾಯನ ಕಾಲದಲ್ಲಿ ರಾಜ್ಯವು ಲಂಕಾ ದ್ವೀಪದವರೆಗೂ ಹಬ್ಬಿತ್ತೆಂದು ಗೊತ್ತಾಗುತ್ತದೆ. ಸಂಗಮ ವಂಶವೆಂದು

ಕರೆಯಲ್ಪಡುವ ಈ ಮೂಲ ವಂಶವು ೧೪೮೬ರಲ್ಲಿ ಕೊನೆಗಂಡಿತು. ಅನಂತರ ವಿಜಯನಗರದ ಸೇನಾನಾಯಕನಾಗಿದ್ದ ನರಸಿಂಹ ಸಾಳ್ವನು ಸಿಂಹಾಸನವನ್ನು ಆಕ್ರಮಿಸಿದನು. ನರಸಿಂಹ ಸಾಳ್ವನ ಮರಣಾನಂತರ, ಅವನ ಸೇನಾನಾಯಕ ನಾಗಿದ್ದ ತುಳುವ ನರಸ ದೊರೆಯು ಮಗನಾದ ಇಮ್ಮಡಿ ನರಸಿಂಹನನ್ನು ಪಟ್ಟಕ್ಕೆ ಏರಿಸಿ ಅವನ ಹೆಸರಿನಲ್ಲಿ ರಾಜ್ಯಭಾರವನ್ನು ತಾನೇ ಮಾಡಲು ತೊಡಗಿದನು. ನರಸನಾಯಕನು ೧೫೦೩ ರಲ್ಲಿ ಸತ್ತನು. ಅವನ ಮಗನಾದ ವೀರನರಸಿಂಹನು ರಾಜನನ್ನು ಓಡಿಸಿ ತಾನೇ ದೊರೆಯಾದನು. ಈ ವೀರನರಸಿಂಹನ ತಮ್ಮನೇ ವಿಜಯನಗರದ ಇತಿಹಾಸದಲ್ಲಿ ಅತ್ಯಂತ ಪ್ರಸಿದ್ಧನಾದ ಕೃಷ್ಣದೇವರಾಯ. ಕೃಷ್ಣದೇವರಾಯನು ೧೫೦೯ ರಿಂದ ೧೫೨೯ ರವರೆಗೆ ಇಪ್ಪತ್ತು ವರ್ಷಗಳ ಕಾಲ ವಿಜಯನಗರ ರಾಜ್ಯವನ್ನು ಅತ್ಯಂತ ವೈಭವದಿಂದ ಆಳಿ ಕರ್ನಾಟಕ ರಾಜ್ಯಕ್ಕೆ "ರಾಜನ್ವತೀ" * ಎಂಬ ಹೆಸರನ್ನು ತಂದುಕೊಟ್ಟನು. ಕೃಷ್ಣದೇವರಾಯನ ದಕ್ಷತೆ, ಸಾಹಸ, ದೈವಭಕ್ತಿ, ಜನತಾವಾತ್ಸಲ್ಯ, ವಿದ್ಯಾಭಿಮಾನ, ಕಾರ್ಯಪ್ರೇಮ ಮತ್ತು ಕಲಾಭಿಮಾನ ಇವೆಲ್ಲವೂ ಪ್ರಸಿದ್ಧವಾದುವು. ವಿಜಯನಗರ ಸಾಮ್ರಾಜ್ಯ ವನ್ನು ಒರಿಸ್ಸಾದ ತುಟ್ಟತುದಿಯಿಂದ ಸಿಲೋನಿನ ಕೊನೆಯವರೆಗೂ ವಿಸ್ತರಿಸಿ ದನು. ದಕ್ಷಿಣಭಾರತದ ಚರಿತ್ರೆಯಲ್ಲಿ ಎಂದೂ ಕರ್ನಾಟಕ ರಾಜ್ಯವು ಇಷ್ಟು ವಿಸ್ತಾರಗೊಂಡಿದ್ದಿಲ್ಲವೆಂದು ಹೇಳುತ್ತಾರೆ. ಕೃಷ್ಣದೇವರಾಯನ ತರುವಾಯ ಅವನ ತಮ್ಮನಾದ ಅಚ್ಯುತರಾಯನು ಪಟ್ಟಕ್ಕೆ ಏರಿದನು. ಇವನ ತರುವಾಯ ವೆಂಕಟನೂ, ಸದಾಶಿವರಾಯನೂ ಪಟ್ಟಕ್ಕೆ ಬಂದರು. ಸದಾಶಿವರಾಯನ ಹತ್ತಿರ ಅರವೀಡು ವಂಶಕ್ಕೆ ಸೇರಿದ ರಾಮರಾಯನು ಮಂತ್ರಿಯಾಗಿ ರಾಜ್ಯವನ್ನಾಳಿ ದನು. ೧೫೬೫ ರಲ್ಲಿ ಬಿಜಾಪುರ, ಗೋಲಕಂಡ ಮತ್ತು ಅಹಮದ ನಗರಗಳ ಸುಲ್ತಾನರು ಒಂದುಗೂಡಿ ೧೫೬೫ ರಲ್ಲಿ ವಿಜಯನಗರದ ಮೇಲೆ ದಂಡೆತ್ತಿ ಬಂದು ತಾಳಿಕೋಟೆಯಲ್ಲಿ ರಾಮರಾಯನನ್ನು ಕೊಂದು ವಿಜಯನಗರವನ್ನು ಕೊಳ್ಳೆ ಹೊಡೆದರು. ಕರ್ನಾಟಕ ರಾಜ್ಯವು ಎಂದಿಗೂ ತಲೆ ಎತ್ತದಂತೆ ನಾಶವಾಯಿತು. ತಾಳಿಕೋಟೆಯ ನಂತರ ಬಂದ ಅರಸರು ಕೊಂಚಕಾಲ ಪೆನುಗೊಂಡೆಯಲ್ಲಿಯೂ ಇನ್ನು ಕೊಂಚಕಾಲ ಚಂದ್ರಗಿರಿಯಲ್ಲಿಯೂ ರಾಜ್ಯವಾಳಿದರು. ವಿಜಯನಗರದ

---

* "ಕಾಮಂನೃಪಾಸ್ಸಂತು ಸಹಸ್ರಶೋನ್ಯೇ ರಾಜನ್ವತೀ ಮಾಹುರನೇನ ಭೂಮಿಂ ॥ (ರಘುವಂಶ. ೬ನೆ ಸರ್ಗ) ಮಗಧಾಧಿಪತಿಯಾದ ಪರಂತಪನ ವಿಷಯದಲ್ಲಿ ಹೇಳಿದುದು.

ಕಡೆಯ ಅರಸು ಆರನೆಯ ಶ್ರೀರಂಗರಾಯನು. ಗೋಲಕೊಂಡದ ಸುಲ್ತಾನರ ಸೈನ್ಯಗಳು ಚಂದ್ರಗಿರಿಯನ್ನು ೧೬೪೬ ರಲ್ಲಿ ಮುತ್ತಿಗೆ ಹಾಕಿದವು. ಶ್ರೀರಂಗ ರಾಯನು ಇಕ್ಕೇರಿಗೆ ಓಡಿಹೋಗಿ ಶಿವಪ್ಪನಾಯಕನ ಮರೆಹೊಕ್ಕನು. ಇಲ್ಲಿಗೆ ವಿಜಯನಗರ ರಾಜ್ಯವು ಕಣ್ಮರೆಯಾಯಿತು. ಈಗ ವಿಜಯನಗರವೆಂಬ ಹೆಸರೇ ಇಲ್ಲ. ಆ ಸ್ಥಳವು ಅದರ ಹಿಂದಿನ ಪಂಪಾ ಎಂಬ ಹೆಸರಿನಿಂದ ಕರೆಯಲ್ಪಡು ತ್ತಿದೆ. ವಿಜಯನಗರ ರಾಜ್ಯವು ಅಳಿದ ಕೂಡಲೆ ಕೆಳದಿಯ ಮತ್ತು ಮೈಸೂರಿನ ಸಾಮಂತರಾಜರು ಸ್ವತಂತ್ರರಾದರು. ೧೬೩೯ ರಲ್ಲಿ ಫ್ರಾನ್ಸಿಸ್ ಡೇ ಎನ್ನುವ ಬ್ರಿಟಿಷನು ಚಂದ್ರಗಿರಿ ರಾಜನಿಂದ ಮದರಾಸನ್ನು ವ್ಯಾಪಾರಕ್ಕಾಗಿ ಗುತ್ತಿಗೆಗೆ ಪಡೆದನು. ಇಂಗ್ಲೀಷಿನವರ ರಾಜ್ಯ ಅಂದಿನಿಂದಲೇ ಭಾರತದಲ್ಲಿ ಪ್ರಾರಂಭ ವಾಯಿತೆಂದು ಹೇಳಬಹುದು.

ವಿಜಯನಗರದ ರಾಜಧಾನಿಯೂ ಅವರ ಆಳ್ವಿಕೆಯಲ್ಲಿ ಬಹುವಾಗಿ ವೃದ್ಧಿ ಹೊಂದಿತು. ಪಟ್ಟಣವು ಬಹು ಸುಂದರವಾಗಿತ್ತು. ವ್ಯಾಪಾರವು ಚೆನ್ನಾಗಿತ್ತು. ಪರದೇಶದ ಜನರು ಬಂದು ಹೋಗುತ್ತಿದ್ದರು. ಸಂಸ್ಕೃತ ಮತ್ತು ತೆಲುಗು ಸಾಹಿತ್ಯಗಳು ಬೆಳೆದವು. ಈ ಲೋಕದಲ್ಲಿ ಇಂಥ ನಗರವನ್ನು ಬೇರೆ ಇನ್ನೆ ಲ್ಲಿಯೂ ನೋಡಿಲ್ಲ. ಕಿವಿಯಿಂದ ಕೇಳಿಲ್ಲವೆಂದು ಆಗಿನ ಒಬ್ಬ ಮುಸಲ್ಮಾನ ಕವಿಯು ವರ್ಣಿಸಿದ್ದಾನಂತೆ. ರಾಜಧಾನಿಯಲ್ಲಿ ಅಗಲವಾದ ರಸ್ತೆಗಳೂ, ಸಾಲು ಅಂಗಡಿಗಳೂ, ಉಪ್ಪರಿಗೆ ಮನೆಗಳೂ, ದೇವಾಲಯಗಳೂ, ಮಂಟಪ ಗಳೂ, ತೋರಣಗಳೂ ಕಂಡುಬರುತ್ತಿದ್ದುವು. ಈಗ ಉಳದಿರುವ ಹಾಳು ಗುಡಿಗಳನ್ನೂ, ಮನೆಗಳನ್ನೂ, ಶ್ರೀ ವಿರೂಪಾಕ್ಷ ದೇವಾಲಯದ ಮುಂದಿರುವ ರಾಜಬೀದಿ ಅಂಗಡಿ ಸಾಲುಗಳನ್ನೂ, ಪಟ್ಟಣವಿದ್ದ ವಿಸ್ತಾರವನ್ನೂ ನೋಡು ವವರಿಗೆ ಕೃಷ್ಣದೇವರಾಯನ ವೈಭವವು ಕಣ್ಣಿಗೆ ಕಟ್ಟಿದಂತಾಗುತ್ತದೆ.

ವಿಜಯನಗರದ ಪತನದ ಕಾಲದಲ್ಲಿ ಮೈಸೂರಿನ ತಿಮ್ಮರಾಜ ಒಡೆಯ ರವರು ರಾಜ್ಯವನ್ನಾಳುತ್ತಿದ್ದರು. ಮೈಸೂರಿನ ಅರಸುಮನೆತನದವರು ಯದು ವಂಶಕ್ಕೆ ಸೇರಿದವರು. ಹದಿನೈದನೆಯ ಶತಮಾನದ ಆದಿಯಿಂದಲೂ ವಂಶ ಪಾರಂಪರ್ಯವಾಗಿ ವಿಜಯನಗರದ ಸಾಮಂತರಾಗಿ ರಾಜ್ಯವನ್ನು ಆಳುತ್ತಾ ಬಂದರು. ತಾಳಿಕೋಟೆ ಯುದ್ಧದ ನಂತರ ವಿಜಯನಗರದ ರಾಜರು ಅಷ್ಟೇನೂ

ಶಕ್ತರಾಗಿರಲಿಲ್ಲ. ಅದುವರೆಗೆ ಅವರ ಅಧೀನದಲ್ಲಿದ್ದ ಸಾಮಂತರಾಜರುಗಳು ಪ್ರಬಲರಾಗತೊಡಗಿದರು. ಈ ಸಂದರ್ಭವನ್ನು ಕಂಡುಕೊಂಡು ಕೆಲವು ಕಾಲಾ ನಂತರ ಪಟ್ಟಕ್ಕೆ ಬಂದಿದ್ದ ಹಿರೇ ಚಾಮರಾಜ ಒಡೆಯರವರು ವಿಜಯನಗರದ ರಾಜ್ಯಕ್ಕೆ ತಾವು ಪ್ರತಿವರ್ಷವೂ ಸಲ್ಲಿಸುತ್ತಿದ್ದ ಕಪ್ಪಕಾಣಿಕೆಗಳನ್ನು ನಿಲ್ಲಿಸಿ ಬಿಟ್ಟರು. ಇವರ ತರುವಾಯ ಬಂದ ರಾಜ ಒಡೆಯರವರು ೧೫೭೭ ರಿಂದ ೧೬೧೭ ರವರೆಗೆ ರಾಜ್ಯಭಾರ ಮಾಡಿದರು. ಈ ಸಮಯದಲ್ಲಿ ಶ್ರೀರಂಗಪಟ್ಟಣ ದಲ್ಲಿ ವಿಜಯನಗರದರಸರ ದಳಪತಿಯಾಗಿದ್ದ ತಿರುಮಲನಾಯಕನು ತಲಕಾಡಿಗೆ ತೆರಳಿ ಅಲ್ಲಿ ಮಡಿದನು. ರಾಜ ಒಡೆಯರವರು ಇದೇ ಸಮಯವನ್ನು ಕಾಯ್ದು ಕೊಂಡಿದ್ದು ಶ್ರೀರಂಗಪಟ್ಟಣವನ್ನು ೧೬೧೦ ರಲ್ಲಿ ವಶಪಡಿಸಿಕೊಂಡರು. ಈ ಕಾರ್ಯವು ಮೈಸೂರಿನ ಇತಿಹಾಸದಲ್ಲಿ ಒಂದು ಮಹತ್ವದ ಘಟನೆ ಎಂದು ತಿಳಿಯಬೇಕಾಗಿದೆ. ಏಕೆಂದರೆ ಇಲ್ಲಿಂದ ಮುಂದಕ್ಕೆ ಮೈಸೂರು ಅರಸರು ವಿಜಯನಗರದರಸರ ಶೃಂಖಲೆಯನ್ನು ಬಿಡಿಸಿಕೊಂಡು ಸ್ವತಂತ್ರ ರಾಜ್ಯಭಾರ ವನ್ನು ಮಾಡತೊಡಗಿದರು. ಹೆಸರಿಗೆ ಮಾತ್ರಕ್ಕೆ-ಇನ್ನೂ ಕೊಂಚ ಕಾಲದ ವರೆಗೂ ಅವರ ಸಾಮಂತರೆಂದು ಹೇಳಿಕೊಳ್ಳುತ್ತಿದ್ದರೂ ಅವರ ಆಡಳಿತಕ್ಕೆ ಅಧೀನರಾಗಿರಲಿಲ್ಲ. ವಿಜಯನಗರದರಸರು ಇಟ್ಟುಕೊಂಡಿದ್ದ ವರಾಹ ಲಾಂಛನ ವನ್ನೇ ಇಟ್ಟುಕೊಂಡರು. ಧರಣೀವರಾಹ, ಗಜಬೇಂತವರಾಹ, ಗಂಡಭೇರುಂಡ, ಪರರಾಯ ಭಯಂಕರ, ಹಿಂದುರಾಯಸುರತ್ರಾಣ, ಕರ್ನಾಟಕ ಚಕ್ರವರ್ತಿ, ದಕ್ಷಿಣ ದಿಕ್‌ಚಕ್ರವರ್ತಿ ಮೊದಲಾದ ಬಿರುದುಗಳನ್ನು ಧರಿಸಿಕೊಂಡು ರಾಜ್ಯವನ್ನು ವಿಸ್ತರಿಸತೊಡಗಿದರು. ಶ್ರೀರಂಗಪಟ್ಣ ಮತ್ತು ಮೈಸೂರು ಮೊದಲಾದ ನಗರ ಗಳ ವಿಸ್ತರಣದಲ್ಲಿಯೂ ಅರಮನೆ, ಗುರುಮನೆಗಳ ಕಟ್ಟಾಣಿಕೆಯಲ್ಲಿಯೂ, ನವರಾತ್ರಿ ಶಿವರಾತ್ರಿ ಮುಂತಾದ ಉತ್ಸವಗಳ ವಿಜೃಂಭಣೆ ಮತ್ತು ಸಿಂಹಾಸ ನಾರೋಹಣ ಕ್ರಮದಲ್ಲಿಯೂ ವಿಜಯನಗರದ ಪ್ರಭಾವ ಇಂದಿಗೂ ಕಂಡು ಬರುತ್ತಿದೆ. ರಾಜಒಡೆಯರವರು ಬಹಳ ಪರಾಕ್ರಮಶಾಲಿಗಳು. ಅವರ ಕಾಲ ದಲ್ಲಿ ಸುತ್ತಮುತ್ತಲೂ ಇದ್ದ ಪಾಳೆಯಗಾರರನ್ನೆಲ್ಲ ಸದೆಬಡಿದು ರಾಜ್ಯವನ್ನು ವಿಸ್ತರಿಸಿದರು. ಮೇಲುಕೋಟೆಯಲ್ಲಿರುವ ಚಲುವ ನಾರಾಯಣ ದೇವಾಲಯ ವನ್ನೂ ಕಟ್ಟಿಸಿದರು. ಇವರೇ ದಸರಾ ಉತ್ಸವವನ್ನು ವಿಜೃಂಭಣೆಯಿಂದ ನಡೆ ಸಲು ಪ್ರಾರಂಭಮಾಡಿದ್ದು. ಇವರ ತರುವಾಯ ಬಂದವರಲ್ಲಿ ಶ್ರೀಕಂಠೀರವ

ನರಸರಾಜ ಒಡೆಯರವರು ಬಹಳ ಪ್ರಖ್ಯಾತರಾದವರು. ಇವರು ೧೬೩೮ ರಿಂದ ೧೬೫೮ ರ ವರೆಗೆ ಇಪ್ಪತ್ತು ವರ್ಷಗಳ ಕಾಲ ಆಳಿ ಕೀರ್ತಿಯನ್ನು ಗಳಿಸಿದರು. ಇವರು ಶ್ರೀರಂಗಪಟ್ಟಣದ ಕೋಟೆಯನ್ನು ಬಲಪಡಿಸಿದ್ದಲ್ಲದೆ ದೇವಾಲಯಗಳನ್ನೆಲ್ಲ ಜೀರ್ಣೋದ್ಧಾರಮಾಡಿ ದತ್ತಿಗಳನ್ನು ಬಿಟ್ಟರು. ದೇವರಾಯನ ದುರ್ಗದ ಮೇಲೆ ಲಕ್ಷ್ಮೀನರಸಿಂಹ ದೇವಸ್ಥಾನವನ್ನು ಕಟ್ಟಿದರು. ಅದನ್ನು ೧೮೫೮ರಲ್ಲಿ ಶ್ರೀಮುಮ್ಮಡಿ ಕೃಷ್ಣರಾಜ ಒಡೆಯರವರು ಜೀರ್ಣೋದ್ಧಾರ ಮಾಡಿದರು. ಇವರ ಕಾಲದಲ್ಲಿಯೇ ಟಂಕಸಾಲೆಯನ್ನೂ ಸ್ಥಾಪಿಸಿದ್ದು, ಕಂಠೀರಾಯ ಹಣವನ್ನು ಚಲಾವಣೆಗೆ ತಂದದ್ದು. ಇವರ ತರುವಾಯ ದೊಡ್ಡ ದೇವರಾಯರು. ಇವರು ದೇಶದಲ್ಲೆಲ್ಲ ಅಗ್ರಹಾರಗಳನ್ನು ಕಟ್ಟಿಸಿ ಬ್ರಾಹ್ಮಣರಿಗೆ ದಾನ ಮಾಡಿದರು. ಅನೇಕ ಕೆರೆ ಕಟ್ಟೆಗಳನ್ನು ಕಟ್ಟಿಸಿದರು. ಮೈಸೂರಿನಲ್ಲಿದ್ದ ದೊಡ್ಡ ಕೆರೆಯನ್ನು ಕಟ್ಟಿಸಿದವರು ಇವರೇ. ಇವರು ಚಾಮುಂಡಿಬೆಟ್ಟಕ್ಕೆ ಮೆಟ್ಟಲುಗಳನ್ನು ಕಟ್ಟಿಸಿದ್ದಲ್ಲದೆ ಮಧ್ಯ ದಲ್ಲಿರುವ ದೊಡ್ಡ ಬಸವನ ವಿಗ್ರಹವನ್ನೂ ಸ್ಥಾಪಿಸಿದರು. ಅವರ ಅನಂತರ ಚಿಕ್ಕದೇವರಾಜರು. ಇವರು ೧೬೭೨ ರಿಂದ ೧೭೦೪ ರ ವರೆಗೂ ರಾಜ್ಯವಾಳಿ ದರು. ಇವರ ಕಾಲದಲ್ಲಿ ಮೈಸೂರು ರಾಜ್ಯವು ಅತ್ಯಂತ ಉಚ್ಛ್ರಾಯ ಸ್ಥಿತಿ ಯಲ್ಲಿತ್ತು. ಇವರಲ್ಲಿ ವಿಶಾಲಾಕ್ಷ ಪಂಡಿತನೆಂಬ ದಿವಾನರು ಇದ್ದರು. ಇವರು ರಾಜ್ಯವನ್ನು ಬಿಜಾಪುರದ ವರೆಗೂ ವಿಸ್ತರಿಸಿದರು. ರಾಜ್ಯದಲ್ಲಿ ಅಂಚೆ ಪದ್ಧತಿ ಯನ್ನು ಜಾರಿಗೆ ತಂದರು. ಗೂಢಚಾರರನ್ನು ನೇಮಿಸಿ ತೆರಿಗೆಗಳನ್ನು ಗೊತ್ತು ಪಡಿಸಿ ರಾಜ್ಯವು ಸುರಕ್ಷಿತವಾಗಿರುವಂತೆ ಬೇಕಾದ ಕಾರ್ಯಗಳನ್ನೆಲ್ಲ ಮಾಡಿದರು. ವಿಶಾಲಾಕ್ಷ ಪಂಡಿತನು ಅವನ ಶತ್ರುಗಳಿಂದ ಕೊಲ್ಲಲ್ಪಟ್ಟನು. ಅವನ ತರುವಾಯ ತಿರುಮಲಯ್ಯಂಗಾರ್ಯರು ದಿವಾನರಾದರು. ಚಿಕ್ಕದೇವರಾಜರಿಗೆ ಮೊಗಲರಸರ ಸ್ನೇಹವಿತ್ತು. ಮೊಗಲ ಚಕ್ರವರ್ತಿಯು ಚಿಕ್ಕದೇವರಾಜರಿಗೆ ಜಗದೇವರಾಜ್ ಎಂಬ ಬಿರುದನ್ನು ದಯಪಾಲಿಸಿ ದಂತದ ಸಿಂಹಾಸನದ ಮೇಲೆ ಕುಳ್ಳಿರಲು ಅನುಮತಿ ಕೊಟ್ಟನು. ಇದಲ್ಲದೆ ಇವರ ಕಾಲದಲ್ಲಿ ದುಂದುವೆಚ್ಚಕ್ಕೆ ಕೈಹಾಕದೆ ವಿತರಣೆಯಿಂದ ಹೆಚ್ಚು ಹಣವನ್ನು ಖಜಾನೆಯಲ್ಲಿ ಶೇಖರಿಸಿಟ್ಟು ಪ್ರಜೆಗಳಿಂದ "ನವಕೋಟಿ ನಾರಾಯಣ" ನೆಂದು ಹೊಗಳಿಸಿಕೊಂಡರು. ಇವರು ರಾಜ್ಯ ಭಾರದ ರೀತಿಯನ್ನೇ ಬದಲಾಯಿಸಿ ಅಠಾರಾ ಕಚೇರಿಯೊಂದನ್ನು ಸ್ಥಾಪಿಸಿ ಬೇರೆ ಬೇರೆ ಕೆಲಸಕ್ಕೆ ಬೇರೆ ಬೇರೆ ಇಲಾಖೆಗಳನ್ನು ನಿರ್ಮಾಣಮಾಡಿದರು. ಹಿಂದಿನ ಮೈಸೂರು ಅರಸರುಗಳಲ್ಲಿ ಇವರೇ ಬಹಳ ಪ್ರಖ್ಯಾತರಾದವರು.

ತುಮಕೂರು ಹತ್ತಿರ ದೇವರಾಯನ ದುರ್ಗದ ಮೇಲಿರುವ ನರಸಿಂಹ ದೇವಾಲಯವನ್ನು ಕಟ್ಟಿಸಿದರು. ಮೈಸೂರಿನಲ್ಲಿರುವ ವರಾಹ ದೇವಾಲಯವನ್ನು ಕಟ್ಟಿಸಿದರು. ಕಾವೇರೀ ನದಿಗೆ ಅನೇಕ ಅಣೆಕಟ್ಟುಗಳನ್ನು ಕಟ್ಟಿಸಿದರು. ಇವರು ಬೆಂಗಳೂರು ನಗರವನ್ನು ಕಾಶೀಂ ಖಾನನಿಂದ ಕಿತ್ತುಕೊಂಡದ್ದು ೧೬೮೭ ರಲ್ಲಿ. ಚಿಕ್ಕದೇವರಾಜರು ೩೧ ವರುಷಗಳು ರಾಜ್ಯವನ್ನಾಳಿ ೧೭೦೪ ರಲ್ಲಿ ಮಡಿದರು. ಅನಂತರ ಸಿಂಹಾಸನವನ್ನೇರಿದ ಅರಸರು ಅಷ್ಟೇನೂ ಪ್ರಬಲರಾಗಿರಲಿಲ್ಲ. ಆಡಳಿತವೆಲ್ಲವೂ ಸರ್ವಾಧಿಕಾರಿಗಳ ಕೈಯಲ್ಲಿ ಸೇರಿಬಿಟ್ಟಿತ್ತು. ಕ್ರಿ. ಶ. ೧೭೩೪ ರಿಂದ ೧೭೬೬ ರ ವರೆಗೂ ಆಳುತ್ತಿದ್ದ ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸರ್ವಾಧಿಕಾರಿಯಾಗಿದ್ದ ಕರಾಚೂರಿ ನಂಜರಾಜಯ್ಯನು ರಾಜನಿಗೆ ತನ್ನ ಮಗಳನ್ನು ಕೊಟ್ಟು ಮದುವೆಮಾಡಿ ಆತನ ಹೆಸರಿನಲ್ಲಿ ತಾನೇ ಎಲ್ಲ ಆಡಳಿತವನ್ನೇ ನಡೆಸುತ್ತಿದ್ದನು. ಈತನು ೧೭೪೯ ರಲ್ಲಿ ದೇವನಹಳ್ಳಿ ಪಾಳೆಯಗಾರರ ಮೇಲೆ ದಂಡೆತ್ತಿ ಹೋದನು. ಆಗ ಅವನ ಸೇನೆಯಲ್ಲಿ ಸಿಪಾಯಿಯಾಗಿ ಸೇರಿಕೊಂಡಿದ್ದ ಹೈದರಾಲಿಯು ತನ್ನ ಪರಾಕ್ರಮವನ್ನು ಪ್ರದರ್ಶಿಸಿ ನಂಜರಾಜಯ್ಯನ ಮೆಚ್ಚಿಕೆಯನ್ನು ಪಡೆದನು. ಅಂದಿನಿಂದ ತನ್ನ ಜಾಣತನದಿಂದ ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಾ ಬಂದು ೧೭೬೧ ರಲ್ಲಿ ಮೈಸೂರು ರಾಜ್ಯದ ಸುಲ್ತಾನನಾದನು. ಇವನ ತರುವಾಯ ಇವನ ಮಗನಾದ ಟಿಪ್ಪುಸುಲ್ತಾನನು ೧೭೮೨ ರಿಂದ ೧೭೯೯ ರ ವರೆಗೂ ಆಳಿ, ೧೭೯೯ ನೇ ಇಸವಿ ಮೇ ತಿಂಗಳು ೪ ನೆಯ ತಾರೀಖಿನ ದಿನ ಬ್ರಿಟಿಷರ ಸೈನ್ಯವನ್ನು ಎದುರಿಸುತ್ತಾ ಶ್ರೀರಂಗಪಟ್ಟಣದಲ್ಲಿ ತನ್ನ ೪೭ ನೆಯ ವಯಸ್ಸಿನಲ್ಲಿ ಮಡಿದನು. ಇಲ್ಲಿಗೆ ಮುಸಲ್ಮಾನರ ನಲವತ್ತು ವರುಷದ ರಾಜ್ಯಭಾರ ಕೊನೆಗಂಡಿತು. ಜೂನ್ ತಿಂಗಳು ೩೦ ನೆಯ ತಾರೀಖು ಮುಮ್ಮಡಿ ಕೃಷ್ಣರಾಜ ಒಡೆಯರವರು ಹಿಂದೆ ತಮ್ಮ ಪೂರ್ವಜರಾದ ಚಿಕ್ಕದೇವರಾಜ ಒಡೆಯರವರು ಉಪಯೋಗಿಸುತ್ತಿದ್ದ ಸಿಂಹಾಸನವನ್ನೇರಿ ಪಟ್ಟಕ್ಕೆ ಬಂದರು. ಆಗ ಅವರಿಗೆ ಕೇವಲ ಐದು ವರ್ಷ ವಯಸ್ಸಾಗಿತ್ತು. ಟಿಪ್ಪುಸುಲ್ತಾನನ ಹತ್ತಿರ ಕೆಲಸದಲ್ಲಿದ್ದು ಎಲ್ಲ ಅನುಭವವನ್ನೂ ಪಡೆದಿದ್ದ ಪೂರ್ಣಯ್ಯನವರೇ ದಿವಾನರಾದರು. ಅಂದಿನಿಂದ ಮೈಸೂರು ರಾಜ್ಯವು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತು. ಮತ್ತು ದಿನೇ ದಿನೇ ಅಭಿವೃದ್ಧಿಯನ್ನು ಹೊಂದಿತು. ಕೃಷ್ಣರಾಜ ಒಡೆಯರವರು ಪ್ರಾಪ್ತ ವಯಸ್ಕರಾದ ಕೂಡಲೆ ರಾಜ್ಯಭಾರವನ್ನು

ಅವರಿಗೆ ಒಪ್ಪಿಸಲಾಯಿತು. ಪೂರ್ಣಯ್ಯನವರು ತಮ್ಮ ಕೆಲಸದಿಂದ ನಿವೃತ್ತರಾದರು. ಅವರು ಮಾಡಿದ ಸೇವೆಗಾಗಿ ಬ್ರಿಟಿಷ್ ಸರ್ಕಾರದವರು ಅವರಿಗೆ ಯಳಂದೂರು ತಾಲ್ಲೂಕನ್ನು ಜಹಗೀರಿಯಾಗಿ ೧೮೦೭ ರಲ್ಲಿ ಕೊಟ್ಟರು.

ಪೂರ್ಣಯ್ಯನವರು ತಮ್ಮ ಕಾಲದಲ್ಲಿ ಅನೇಕ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಿದರು. ಶ್ರೀರಂಗಪಟ್ಟಣದಲ್ಲಿ ಕಾವೇರೀ ನದಿಗೆ ಅಡ್ಡಲಾಗಿ ಒಂದು ಸೇತುವೆಯನ್ನು ಕಟ್ಟಿಸಿ ಅದಕ್ಕೆ ವೆಲೆಸ್ಲಿ ಸೇತುವೆಯೆಂದು ಹೆಸರಿಟ್ಟರು. ಲಕ್ಷ್ಮಣತೀರ್ಥಕ್ಕೆ ಅಣೆಕಟ್ಟನ್ನು ಕಟ್ಟಿಸಿದರು. ರಾಜಧಾನಿಗೆ ಕಾವೇರಿ ನದಿಯು ತರಲು ಪ್ರಯತ್ನಪಟ್ಟರು. ಅನೇಕ ಅಣೆಕಟ್ಟುಗಳನ್ನು ಕಟ್ಟಿಸಿದರು. ರಾಜಮಾರ್ಗಗಳಲ್ಲೆಲ್ಲ ಅಲ್ಲಲ್ಲೆ ಪ್ರಯಾಣಿಕರಿಗೆ ಅನ್ನಛತ್ರಗಳನ್ನು ಸ್ಥಾಪಿಸಿದರು. ರಸ್ತೆಗಳ ಅಕ್ಕಪಕ್ಕಗಳಲ್ಲಿ ಸಾಲುಮರಗಳನ್ನು ನೆಡಿಸಿದರು. ಭೂಕಂದಾಯನ್ನು ನಿಗದಿ ಮಾಡಿದರು ಮತ್ತು ನ್ಯಾಯಗಳ ತೀರ್ಪಿಗಾಗಿ ಪಂಚಾಯಿತಿಗಳನ್ನೂ, ಅದಾಲತ್ ಕೋರ್ಟನ್ನೂ ಸ್ಥಾಪಿಸಿದರು. ಹೀಗೆ ನಾನಾ ರೀತಿಯಲ್ಲಿ ಸುಧಾರಣೆಗಳನ್ನು ಮಾಡಿ ರಾಜ್ಯವನ್ನು ಅಭಿವೃದ್ಧಿಪಡಿಸಿದರು. ಮುಮ್ಮಡಿ ಕೃಷ್ಣರಾಜರು ಕರುಣಾಳುಗಳೂ ಸಾಹಿತ್ಯಪ್ರೇಮಿಗಳೂ ಕುಶಲ ಕಲಾಭಿಮಾನಿಗಳೂ ಆಗಿದ್ದರು. ಅವರ ಕಾಲದಲ್ಲಿ ಈ ಎಲ್ಲ ರಂಗಗಳಲ್ಲಿಯೂ ತುಂಬಾ ಪ್ರಗತಿಯುಂಟಾಯಿತು. ಕೆಲವು ಕಾಲದ ಮೇಲೆ ರಾಜ್ಯದಲ್ಲಿ ಅನಾಯಕತೆ ತಲೆದೋರಿ ಶಾಂತಿಗೆ ಭಂಗ ಉಂಟಾಗಲು, ಬ್ರಿಟಿಷ್ ಸರ್ಕಾರದವರು ೧೮೩೧ ರಲ್ಲಿ ರಾಜ್ಯಾಡಳಿತವನ್ನು ತಾವೇ ವಹಿಸಿಕೊಂಡು ೧೮೮೧ ರಲ್ಲಿ ಅವರ ದತ್ತು ಪುತ್ರರಾದ ಶ್ರೀ ಚಾಮರಾಜ ಒಡೆಯರವರಿಗೆ ಪುನಃ ವಹಿಸಿಕೊಟ್ಟರು. ಶ್ರೀ ಚಾಮರಾಜರು ೧೮೮೧ ರಿಂದ ೧೮೯೪ ರ ವರೆಗೆ ರಾಜ್ಯಭಾರ ಮಾಡಿದರು. ಅನಂತರ ಕೆಲವು ವರ್ಷಗಳ ಕಾಲ ಮಹಾರಾಣಿ ಕೆಂಪು ನಂಜಮ್ಮಣ್ಣಿಯವರು ರೀಜಂಟರಾಗಿದ್ದರು. ಇವರ ಕಾಲದಲ್ಲಿ ಮಾರೀಕಣಿವೆ ಸಾಗರವನ್ನು ಕಟ್ಟಿಸಲಾಯಿತು. ಶ್ರೀಮನ್ ನಾಲ್ಮಡಿ ಕೃಷ್ಣರಾಜ ಒಡೆಯರವರು ೧೯೦೨ ರಲ್ಲಿ ರಾಜ್ಯಭಾರವನ್ನು ಸ್ವತಃ ವಹಿಸಿಕೊಂಡು ತಮ್ಮ ಸಹಜವಾದ ಪ್ರಜಾವಾತ್ಸಲ್ಯದಿಂದಲೂ ಕಲಾಭಿಮಾನದಿಂದಲೂ ಸುಸಂಸ್ಕೃತರಾದ ದಿವಾನರವರ ಸಹಾಯದಿಂದಲೂ ಮೈಸೂರು ದೇಶವನ್ನು ಆಳಿ ೧೯೪೦ ರಲ್ಲಿ ಮೃತರಾದರು. ಇವರ

ಕಾಲದಲ್ಲಿ ದೇಶವು ಹಿಂದೆ ಎಂದೂ ಕಾಣದಿದ್ದಷ್ಟು ಅಭಿವೃದ್ಧಿಯನ್ನು ಹೊಂದಿತು. ಸರ್. ಕೆ. ಶೇಷಾದ್ರಿ ಅಯ್ಯರ್ ಅವರ ಧಾರ್ಷ್ಟ್ಯದಿಂದಲೂ, ಸರ್. ಎಂ. ವಿಶ್ವೇಶ್ವರಯ್ಯನವರ ದೂರದರ್ಶಿತ್ವದಿಂದಲೂ, ಸರ್.ಎಂ. ಮಿರ್ಜಾ ಇಸ್ಮಾಯಿಲ್ ರವರ ಸೌಂದರ್ಯ ದೃಷ್ಟಿಯಿಂದಲೂ(delicate sense of the beautiful) ದೇಶವು ಹೊಸ ರೂಪವನ್ನೇ ತಾಳಿತು. ಎಲ್ಲೆಲ್ಲಿಯೂ ಸುಂದರವಾದ ಕಟ್ಟಡಗಳ ನಿರ್ಮಾಣವಾದವು. ಪಟ್ಟಣಗಳು ಬೆಳೆದು ಹೊಸ ರೂಪಗಳನ್ನೇ ತಾಳಿದುವು. ವಿದ್ಯಾಭಿವೃದ್ಧಿಯಾಯಿತು. ಕೈಗಾರಿಕೆಗಳುತಲೆ ಎತ್ತಿದವು. ಇನ್ನೂ ಇತರ ಕಾರ್ಯಕ್ಷೇತ್ರಗಳಲ್ಲಿಯೂ ದೇಶವು ಪ್ರಗತಿಯನ್ನು ಹೊಂದಿತು. ಯುವರಾಜರಾಗಿದ್ದ ಶ್ರೀಕಂಠೀರವ ನರಸಿಂಹರಾಜ ಒಡೆಯರವರ ಪುತ್ರರಾದ ಶ್ರೀ ಜಯಚಾಮರಾಜ ಒಡೆಯರವರು ಪಟ್ಟವೇರಿ ಇದುವರೆಗೂ ಹರಿದು ಹಂಚಿಹೋಗಿದ್ದ ಕರ್ನಾಟಕ ಪುನಃ ಒಂದಾದ್ದನ್ನು ಕಣ್ಣಾರೆ ಕಂಡು ಆ ಅಖಂಡ ಕರ್ನಾಟಕಕ್ಕೆ ರಾಜ್ಯಪಾಲರಾಗಿ, ವಿತರಣೆಯಿಂದಲೂ ಸಹನೆಯಿಂದಲೂ ಪ್ರಜಾನುರಾಗವನ್ನು ಸಂಪಾದಿಸಿ ಎಲ್ಲ ಕನ್ನಡಿಗರ ಸೌಖ್ಯವನ್ನು ನೋಡಿಕೊಳ್ಳುತ್ತಿದ್ದಾರೆ.

ವಾಸ್ತುಕಲೆ

ವಾಸ್ತುಶಾಸ್ತ್ರವು ಬ್ರಹ್ಮ, ವಿಷ್ಣು, ಮಹೇಶ್ವರರಿಂದ ಇಂದ್ರ, ಬೃಹಸ್ಪತಿ, ನಾರದರಿಗೆ ಅನುಗ್ರಹಿಸಲ್ಪಟ್ಟಿತೆಂದೂ ಅವರ ಮೂಲಕ ಅನೇಕ ಋಷಿಗಳಿಗೆ ಬಂದಿತೆಂದೂ ಶಾಸ್ತ್ರದಲ್ಲಿ ಹೇಳಿದೆ. ಮತ್ಸ್ಯ ಪುರಾಣದಲ್ಲಿ ವಾಸ್ತು ಶಾಸ್ತ್ರೋಪದೇಶಕರಾದ ಹದಿನೆಂಟು ಋಷಿಗಳ ಹೆಸರುಗಳನ್ನು ಕೊಟ್ಟಿದೆ.* ಬ್ರಹ್ಮನ ಚತುರ್ಮುಖಗಳಿಂದ ವಿಶ್ವಕರ್ಮ, ಮಯ, ತ್ವಷ್ಟಾರ ಮತ್ತು ಮನು ಇವರುಗಳು ಉದ್ಭವಿಸಿದರೆಂದೂ, ಇವರಿಗೆ ಅನುಕ್ರಮವಾಗಿ ಸ್ಥಪತಿ, ಸೂತ್ರಗ್ರಾಹಿ, ವರ್ಧಕಿ ಮತ್ತು ತಕ್ಷಕರೆಂಬ ಮಕ್ಕಳು ಹುಟ್ಟಿದರೆಂದೂ ಹೇಳಿದೆ. ಇವರೇ ಈ ಭೂಲೋಕದ ಎಲ್ಲ ಕುಶಲ ಕಲೆಗಳಿಗೂ ಮೂಲಪುರುಷರು. ಸ್ಥಪತಿಯೇ ಇವರಲ್ಲಿ ಮುಖ್ಯಸ್ಥನು. ಇವನನ್ನೇ ಇತರರು ಮೂವರೂ ಅನುಸರಿಸಬೇಕು. ಇವನು ವೇದಗಳನ್ನು ಅಭ್ಯಾಸಮಾಡಿರಬೇಕು ಮತ್ತು ಸಕಲ ಶಾಸ್ತ್ರ ಪಾರಂಗತನಾಗಿರಬೇಕು. ಸೂತ್ರಗ್ರಾಹಿಯೂ ಶಾಸ್ತ್ರಗಳನ್ನು ಕಲಿತಿರಬೇಕು. ಇವನೇ ಶಿಲ್ಪಕಲಾಕೋವಿದನು. ವರ್ಧಕಿಯು ವರ್ಣಚಿತ್ರ ಪ್ರವೀಣನು ಮತ್ತು ತಕ್ಷಕನು ಬಡಗಿಯು.

ಅನೇಕ ವಾಸ್ತುಶಾಸ್ತ್ರ ಗ್ರಂಥಗಳು ಭಾರತದಲ್ಲಿ ದೊರೆತಿವೆ. ಅವುಗಳಲ್ಲಿ ಮಾನಸಾರ, ಮನುಷ್ಯಾಲಯಚಂದ್ರಿಕಾ, ಅಂಕುಬೋಧಿನೀ, ಅರ್ಥಶಾಸ್ತ್ರ, ಸುಪ್ರಭೇದಾಗಮ, ವಾಸ್ತುವಿದ್ಯಾ, ಬೃಹತ್ಸಂಹಿತಾ, ಶಿಲ್ಪರತ್ನ, ಅಭಿಲಷಿತಾರ್ಥ

---

* ಭೃಗುರತ್ರಿರ್ವಸಿಷ್ಠಶ್ಚ ವಿಶ್ವಕರ್ಮ ಯಮಸ್ತಥಾ। ನಾರದೋ ನಗ್ನಜಿಚ್ಚೈವ ವಿಶಾಲಾಕ್ಷಃ ಪುರಂದರಃ॥ ಬ್ರಹ್ಮಾ ಕುಮಾರೋ ನಂದೀಶಃ ಶೌನಕೋ ಗರ್ಗ ಏವಚ। ವಾಸುದೇವೋಽನಿರುದ್ಧಶ್ಚ ತಥಾಶುಕ್ರ ಬೃಹಸ್ಪತಿಃ॥ ಅಷ್ಟಾದಶೈಕೇ ವಿಖ್ಯಾತಾಃ ವಾಸ್ತು ಶಾಸ್ತ್ರೋಪದೇಶಕಾಃ॥

ಚಿಂತಾಮಣಿ, ಸಮರಾಂಗಣ ಸೂತ್ರಧಾರ, ಮ್ನಯಮತ, ಕಾಶ್ಯಪಶಿಲ್ಪ, ತಂತ್ರ ಸಮುಚ್ಚಯ, ಅಂಶುಮದ್ಭೇದಾಗಮ, ವಾಸ್ತುರತ್ನಾವಳಿ, ಕಾಮಿಕಾಗಮ, ಕಾಶ್ಯಪಶಿಲ್ಪ, ಪ್ರತಿಮಾ ಲಕ್ಷಣ, ಪ್ರತಿಮಾಮಾನ ಲಕ್ಷಣ, ರೂಪಮಂಡನ, ವಾಸ್ತುಮಂಡನ, ಇವೇ ಮುಖ್ಯವಾದುವು. ಇವುಗಳಲ್ಲೆಲ್ಲ ಮಾನಸಾರವೇ ಪ್ರಸಿದ್ಧಿಯಾದದ್ದು. ಇಲ್ಲಿಯ ದೇವಾಲಯಗಳೆಲ್ಲವೂ ಮಾನಸಾರ ಮತಕ್ಕನುಸಾರವಾಗಿಯೇ ಕಟ್ಟಲ್ಪಟ್ಟವೆ ಎಂದು ಹೇಳುತ್ತಾರೆ.

ಪುರಾತನ ಪಟ್ಟಣಗಳೂ ಕಟ್ಟಡಗಳೂ ವಾಸ್ತುಶಾಸ್ತ್ರಕ್ಕನುಸಾರವಾಗಿಯೇ ನಿರ್ಮಿಸಲ್ಪಡುತ್ತಿದ್ದುವು. ವೇದಗಳ ಕಾಲದಲ್ಲಿ ಯಜ್ಞಗಳಿಗಾಗಿ ಶಾಲೆಗಳನ್ನೂ ವೇದಿಕೆಗಳನ್ನೂ ಇಟ್ಟಿಗೆ, ಮರ, ಬೊಂಬುಗಳಿಂದ ನಿರ್ಮಿಸುತ್ತಿದ್ದರು. ಇವುಗಳೆಲ್ಲವೂ ಶಿಲ್ಪ ಸೂತ್ರವನ್ನನುಸರಿಸಿಯೇ ನಿರ್ಮಾಣವಾಗುತ್ತಿದ್ದುವು. ಅವುಗಳೇ ಭರತಖಂಡದ ವಾಸ್ತುವಿದ್ಯೆಗೆ ಮೂಲರೂಪಗಳೆಂದೂ ಕೆಲವರ ಅಭಿಪ್ರಾಯ. ಆರ್ಯರು ಆರ್ಯಾವರ್ತವನ್ನು ಪ್ರವೇಶಿಸುವುದಕ್ಕೆ ಮುಂಚೆ ಈ ದೇಶದಲ್ಲಿ ನೆಲಸಿದ್ದ ದ್ರಾವಿಡರು ಅನೇಕ ಶತಮಾನಗಳಿಂದಲೂ ತಮ್ಮದೇ ಆದ ಒಂದು ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿದ್ದರೆಂದೂ ಆರ್ಯರು ಅವರಿಂದ ವಾಸ್ತುವಿದ್ಯೆಯನ್ನು ಕಲಿತರೆಂದೂ ಮತ್ತೆ ಕೆಲವರ ಅಭಿಪ್ರಾಯ. ಮೊದಲು ಮೊದಲು ಜೊಂಡು ಬಂಬುಗಳಿಂದ ನಿರ್ಮಿತವಾಗಿದ್ದು, ಅನಂತರ ಮರದಿಂದ ಕಟ್ಟಡಗಳು ಕಟ್ಟಲ್ಪಟ್ಟಿರಬೇಕೆಂದೂ, ಅನಂತರ ಮಣ್ಣು ಇಟ್ಟಿಗೆಗಳಿಂದ ಕಟ್ಟಲ್ಪಟ್ಟು, ಕ್ರಿ. ಶ. ನಾಲ್ಕನೆಯ ಶತಮಾನದಿಂದ ಈಚೆಗೆ ಬಿಡಿಕಲ್ಲುಗಳಿಂದ ಗೃಹಗಳೂ ದೇವಾಲಯಗಳೂ ನಿರ್ಮಾಣವಾಗತೊಡಗಿದವು. ಮೊದಲಿನ ಮರದ ಕಟ್ಟಡಗಳೆಲ್ಲವೂ ನಾಶವಾಗಿಹೋಗಿವೆ. ಇಟ್ಟಿಗೆಯ ಮತ್ತು ಕಲ್ಲಿನ ಪುರಾತನ ಕಟ್ಟಡಗಳ ಅವಶೇಷಗಳು ಈಗಲೂ ಉಳಿದಿವೆ. ವಾಸ್ತುಕಲೆಯು ಕ್ರಮೇಣ ಹೇಗೆ ವೃದ್ಧಿಹೊಂದಿತೆಂಬುದನ್ನು ತೋರಿಸಿಕೊಡುತ್ತವೆ.

ಕೆಲವು ವರ್ಷಗಳ ಹಿಂದೆ ಸಿಂಧೂ ನದಿಯ ಕಣಿವೆಯಲ್ಲಿ ನಡೆದ ಭೂಗರ್ಭ ಸಂಶೋಧನೆಯಿಂದ ಬೆಳಕಿಗೆ ಬಂದ ಮೊಹೆಂಜೊದಾರೊ ಮತ್ತು ಹರಪ್ಪ ಪಟ್ಟಣಗಳಲ್ಲಿ ಈಗ್ಗೆ ಸುಮಾರು ಮೂರು ಸಾವಿರ ವರ್ಷಗಳ ಹಿಂದೆಯೇ ಇಟ್ಟಿಗೆಗಳಿಂದ ಕಟ್ಟಡಗಳು ನಿರ್ಮಾಣವಾಗುತ್ತಿದ್ದುವೆಂಬುದು ವ್ಯಕ್ತವಾಗುತ್ತದೆ.

ಆ ಕಾಲದಲ್ಲಿ ಭಾರತದಲ್ಲಿದ್ದ ನಾಗರೀಕತೆಯ ಸ್ವರೂಪವೂ ತಿಳಿದು ಬಂದಿರುತ್ತದೆ. ಈ ಪುರಾತನ ಪಟ್ಟಣಗಳಲ್ಲಿ ಕಂಡು ಬರುವ ಸಂಸ್ಕೃತಿಗೂ ಈಗಲೂ ಇಲ್ಲಿ ವಾಸಮಾಡುತ್ತಿರುವ ದ್ರಾವಿಡ ಬುಡಕಟ್ಟಿನ ಜನರಲ್ಲಿ ಕಾಣಬರುವ ಸಂಸ್ಕೃತಿಗೂ ಅನೇಕ ವಿಧದಲ್ಲಿ ಹೋಲಿಕೆಯನ್ನು ಕಾಣಬಹುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇವುಗಳನ್ನು ಬಿಟ್ಟರೆ, ಭರತಖಂಡದಲ್ಲಿ ಕಾಣಬರುವ ಅತ್ಯಂತ ಪುರಾತನ ಕಟ್ಟಡಗಳು ಕ್ರಿ. ಪೂ. ನಾಲ್ಕು, ಮೂರನೆಯ ಶತಮಾನಗಳಿಗೆ ಸೇರಿದುವು. ಈ ಮಧ್ಯದಲ್ಲಿ ಕಟ್ಟಡಗಳು ಹೇಗಿದ್ದುವು ಎನ್ನುವುದಕ್ಕೆ ಆಧಾರಗಳು ಇನ್ನೂ ಸಿಕ್ಕಿಲ್ಲ. ಈ ವಿಷಯವನ್ನು ಆಗಿನ ಕಾಲದ ಗ್ರಂಥಗಳ ಸಹಾಯದಿಂದ ಮಾತ್ರ ಕೊಂಚಮಟ್ಟಿಗೆ ತಿಳಿದುಕೊಳ್ಳಬಹುದಾಗಿದೆ. ವೇದಗಳ ಕಾಲದ ಮನೆಗಳು ಅಷ್ಟೇನೂ ದೊಡ್ಡವಾಗಿರಲಿಲ್ಲವೆಂದೂ ಸಾಧಾರಣವಾಗಿ ಒಂದು ಹಜಾರವೂ ಅದರ ಸುತ್ತಲೂ ಕೋಣೆಗಳೂ ಇರುತ್ತಿದ್ದವೆಂದೂ ಊಹಿಸಬಹುದಾಗಿದೆ. ಪುರಾಣಗಳಲ್ಲಿಯೂ, ಬೌದ್ಧಸಾಹಿತ್ಯದಲ್ಲಿಯೂ ಮನೆಗಳ, ಪ್ರಾಸಾದಗಳ, ರಾಜಗೃಹಗಳ ಮತ್ತು ಪಟ್ಟಣಗಳ ವರ್ಣನೆಗಳು ದೊರಕುತ್ತವೆ. ಆದರೆ ಹೀಗೆಯೇ ಇದ್ದಿರಬಹುದೆಂದು ಸ್ಪಷ್ಟವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಮೊದ ಮೊದಲು ಕಟ್ಟಡಗಳು ಮರದಿಂದ ಕಟ್ಟಲ್ಪಡುತ್ತಿದ್ದಿರಬೇಕು. ಅವೆಲ್ಲವೂ ನಾಶವಾಗಿ ಹೋಗಿರಬೇಕು ಎಂದು ಕೆಲವರ ಅಭಿಪ್ರಾಯ. ಮೂರು ಸಾವಿರ ವರ್ಷಗಳ ಹಿಂದೆಯೇ ಇಟ್ಟಿಗೆಯ ಕಟ್ಟಡಗಳು ಕಂಡು ಬಂದು, ಕ್ರಿ.ಪೂ. ಎರಡು ಒಂದನೆಯ ಶತಮಾನಕ್ಕೆ ಸೇರಿದ ಬೌದ್ಧಸ್ತೂಪಗಳು ಇಟ್ಟಿಗೆಯಿಂದ ನಿರ್ಮಿತವಾದವುಗಳಾಗಿದ್ದು, ಇವೆರಡಕ್ಕೂ ಮಧ್ಯಸ್ಥವಾದ ಕಾಲದಲ್ಲಿ ಮಾತ್ರ ಮರದಿಂದ ನಿರ್ಮಿತವಾದವು ಎಂದು ಹೇಳುವುದು ಒಪ್ಪಲು ಅರ್ಹವಲ್ಲವೆಂದು ತೋರುತ್ತದೆ. ಸಾವಿರಾರು ವರ್ಷಗಳಿಂದಲೂ ಇಟ್ಟಿಗೆಯು ಉಪಯೋಗದಲ್ಲಿರಬೇಕೆಂದೂ, ಆದರೆ ನಿರ್ಮಾಣವಾದ ಕಟ್ಟಡಗಳೆಲ್ಲವೂ ಯಾವ ಕಾರಣದಿಂದಲೋ ನಾಶವಾಗಿರಬೇಕೆಂದೂ ಅಥವಾ ಭೂಮಿಯಲ್ಲಿ ಹುದುಗಿ ಹೋಗಿರಬೇಕೆಂದೂ ಹೇಳಬೇಕಾಗುತ್ತದೆ. ಈ ವಿಷಯದಲ್ಲಿ ಹೆಚ್ಚಿನ ಸಂಶೋಧನೆ ನಡೆಯಬೇಕು.

ಕ್ರಿ. ಪೂ. ಎರಡು, ಒಂದನೆಯ ಶತಮಾನದ ಹೊತ್ತಿಗೆ ಗುಡ್ಡ ಬೆಟ್ಟಗಳನ್ನು ಕೊರೆದು ಚೈತ್ಯಾಲಯಗಳನ್ನೂ ದೇವಾಲಯಗಳನ್ನೂ ಬಸದಿಗಳನ್ನೂ ನಿರ್ಮಿ

ಸುವ ವಾಡಿಕೆ ಪ್ರಾರಂಭವಾಯಿತು. ಆಮೇಲೆ ಕೆಲವು ಕಾಲಾನಂತರ ಕಲ್ಲು ತುಂಡುಗಳಿಂದ ಸ್ವತಂತ್ರ ದೇವಾಲಯಗಳು ನಿರ್ಮಿತವಾದವು. ರಾಜರುಗಳು ತಮ್ಮ ಪಟ್ಟಣಗಳ ರಕ್ಷಣೆಗೋಸ್ಕರ ಕೋಟೆ ಕೊತ್ತಲಗಳನ್ನು ಕಟ್ಟಲು ಹೊರ ಟಾಗ ಹಾಗೆಯೇ ಅರಮನೆಗಳನ್ನೂ ದೇವಾಲಯಗಳನ್ನೂ ನಿರ್ಮಿಸತೊಡ ಗಿದರು. ಅಲ್ಲದೆ ಅವರು ಶತ್ರುಗಳ ಮೇಲೆ ದಂಡೆತ್ತಿಹೋಗಿ ಅವರುಗಳನ್ನು ಸೋಲಿಸಿ, ತಮ್ಮ ದಿಗ್ವಿಜಯದ ಕುರುಹಾಗಿ ಅಲ್ಲಲ್ಲೆ ದೇವಾಲಯಗಳನ್ನು ನಿರ್ಮಿಸುವುದು, ಅವುಗಳ ಪೂಜಾದಿಕಾರ್ಯಗಳಿಗಾಗಿ ದತ್ತಿಗಳನ್ನು ಬಿಡುವುದು ಪದ್ಧತಿಯಾಯಿತು. ಆದ್ದರಿಂದಲೇ ದೇಶದ ಮೂಲೆ ಮೂಲೆಗಳಲ್ಲಿಯೂ ದೇವಾ ಲಯಗಳನ್ನೂ ದತ್ತಿಶಾಸನಗಳನ್ನೂ ನೋಡುತ್ತೇವೆ. ಈ ನಮ್ಮ ಕರ್ನಾಟಕ ದೇಶದಲ್ಲಂತೂ ಪ್ರತಿ ಹಳ್ಳಿಯಲ್ಲಿಯೂ ಶಾಸನಗಳು ದೊರೆಯುತ್ತವೆ. ಈ ಶಾಸನ ಗಳು ಈ ದೇಶದ ಚರಿತ್ರಕಾರರಿಗೆ ಬಹಳ ಸಹಾಯಕವಾಗಿವೆ. ಈಗಾಗಲೇ ಸಾವಿರಾರು ಶಾಸನಗಳನ್ನು ಸರ್ಕಾರದ ಶಾಸನದ ಇಲಾಖೆಯವರೂ ಇತರ ವಿದ್ವಾಂಸರೂ ವಿಮರ್ಶಿಸಿ ಈ ದೇಶದ ಚರಿತ್ರೆಯನ್ನು ರಚಿಸಿದ್ದಾರೆ. ಆದರೂ ಇನ್ನೂ ಎಷ್ಟೋ ಶಾಸನಗಳು ದೃಷ್ಟಿಗೋಚರವಾಗದೆ ಹಾಗೆಯೇ ಉಳಿದಿರಲಿಕ್ಕೆ ಸಾಕು.

ಮೊಹೆಂಜೊದಾರೋ ಮತ್ತು ಹರಪ್ಪ ಅವಶೇಷಗಳನ್ನು ಬಿಟ್ಟರೆ ಭರತ ಖಂಡದಲ್ಲಿ ಅತ್ಯಂತ ಪುರಾತನವಾದ ಕಟ್ಟಡಗಳೆಂದರೆ ಬೆಟ್ಟಗಳನ್ನು ಕೊರೆದು ಮಾಡಿರುವ ಗುಹಾಂತರ್ದೇವಾಲಯಗಳು ಮತ್ತು ಬೌದ್ಧರು ನಿರ್ಮಿಸಿರುವ ಸ್ತೂಪಗಳು. ಮೊದಮೊದಲಿನ ಗುಹಾಂತರ್ದೇವಾಲಯಗಳೆಲ್ಲ ಬೌದ್ಧಮತಕ್ಕೆ ಸಂಬಂಧಪಟ್ಟವು. ಕೆಲವು ಕಾಲಾನಂತರ ಜೈನ ಮತ್ತು ವೈದಿಕ ಮತಕ್ಕೆ ಸೇರಿದ ಗುಹೆಗಳು ತಯಾರಾದವು. ಬೌದ್ಧ ಮತಕ್ಕೆ ಸೇರಿದವುಗಳಲ್ಲಿ ಕೆಲವು ಚೈತ್ಯಾಲಯಗಳು ಮತ್ತೆ ಕೆಲವು ವಿಹಾರಗಳು. ಚೈತ್ಯಾಲಯಗಳು ಬುದ್ಧನನ್ನು ಪೂಜಿಸುವ ಸ್ಥಳಗಳು, ವಿಹಾರಗಳು ಭಿಕ್ಕುಗಳು ವಾಸಮಾಡುವ ಸ್ಥಳಗಳು. ಮೊದಲಿನ ಗುಹೆಗಳು ಕ್ರಿ. ಶ. ಒಂದನೆಯ ಎರಡನೆಯ ಶತಮಾನಕ್ಕೆ ಸೇರಿ ದುವು. ಚೈತ್ಯಾಲಯವು ಒಂದು ಉದ್ದವಾದ ಹಜಾರದಂತಿದ್ದು ಹಿಂಭಾಗವು ವರ್ತುಲಾಕಾರವಾಗಿರುವುದು. ಚಾವಣಿಯೂ ಕೂಡ ಅರ್ಧವರ್ತುಲಾಕಾರ ವಾಗಿಯೇ ಕೊರೆಯಲ್ಪಡುತ್ತಿತ್ತು. ದ್ವಾರದ ಇಕ್ಕೆಲಗಳಲ್ಲಿಯೂ ಒಳಭಾಗದಲ್ಲಿ

ಸಾಲು ಕಂಬಗಳಿವೆ. ವರ್ತುಲಾಕಾರದ ಮಧ್ಯದಲ್ಲಿ ಒಂದು ಸಣ್ಣ ಸ್ತೂಪವೂ ಅದರ ಮುಂಭಾಗದಲ್ಲಿ ಅದಕ್ಕೆ ಅಂಟಿಕೊಂಡಂತೆ ಒಂದು ಬುದ್ಧವಿಗ್ರಹವೂ ಇರುತ್ತದೆ. ಈ ವಿಗ್ರಹದ ಸುತ್ತಲೂ ಪ್ರದಕ್ಷಿಣೆಮಾಡಲು ಸ್ಥಳಾವಕಾಶವನ್ನು ಕಲ್ಪಿಸಿರುತ್ತದೆ. ಹಜಾರದೊಳಕ್ಕೆ ಬೆಳಕು ಮುಂಭಾಗದ ಬಾಗಿಲಿನಿಂದಾಗಲಿ ಅಥವಾ ಬಾಗಿಲಿನ ಮೇಲ್ಭಾಗದಲ್ಲಿ ಕೊರೆದಿರುವ ಅರ್ಧವರ್ತುಲಾಕಾರದ ಕಿಟಿಕಿಯಿಂದಲಾಗಲಿ ಬರುತ್ತದೆ. ಇಂತಹ ಕಟ್ಟಡವನ್ನು ಮರದಿಂದ ಕಟ್ಟಿದರೆ ಹೇಗೋ ಹಾಗೆಯೇ ಕಲ್ಲಿನಲ್ಲಿ ತೊಲೆಗಳನ್ನೂ ತರಾಯಿಗಳನ್ನೂ ಕೊರೆದಿರುತ್ತಾರೆ. ಇದನ್ನು ನೋಡಿಯೇ ಕೆಲವು ವಿದ್ವಾಂಸರು ಹಿಂದಿನ ಕಟ್ಟಡಗಳು ಮರದಿಂದ ನಿರ್ಮಿತವಾಗಿರಬೇಕೆಂದು ಊಹಿಸಿರುವುದು. ವಿಹಾರವಾದರೋ ಒಂದು ದೊಡ್ಡ ಚತುರಸ್ರಾಕಾರದ ಶಾಲೆಯಂತಿದ್ದು ಅದರ ಸುತ್ತಲೂ ಭಿಕ್ಕುಗಳು ವಾಸಮಾಡುವುದಕ್ಕೆ ಚಿಕ್ಕ ಚಿಕ್ಕ ಕೋಣೆಗಳು ಕೊರೆಯಲ್ಪಟ್ಟಿವೆ. ಇವುಗಳಿಗೆ ಸಂಘಾರಾಮಗಳೆಂದೂ ಹೆಸರು. ಕಾರ್ಲೆಯಲ್ಲಿರುವ ಚೈತ್ಯಾಲಯಕ್ಕೂ, ಅಜಂತಾದಲ್ಲಿರುವ ೧. ೨. ನೆಯ ಗುಹೆಗಳು ವಿಹಾರಕ್ಕೂ ಒಳ್ಳೆಯ ಉದಾಹರಣೆಗಳು. ಸ್ತೂಪವೆಂದರೆ ಮರಣ ಹೊಂದಿದವರ ಜ್ಞಾಪಕಾರ್ಥವಾಗಿ ಕಟ್ಟಿರುವ ಕಟ್ಟಡ. ಇವು ಬೌದ್ಧ ಮತಕ್ಕೆ ಸಂಬಂಧಿಸಿದ್ದು. ಉತ್ತರ ಭರತಖಂಡದಲ್ಲಿ ಭೂಪಾಲಿನ ಹತ್ತಿರ ಇರುವ ಸಾಂಚಿ ಸ್ತೂಪ, ದಕ್ಷಿಣ ಭಾರತದಲ್ಲಿ ಗುಂಟೂರಿನ ಹತ್ತಿರ ಇರುವ ಅಮರಾವತಿ ಸ್ತೂಪವೂ ಮುಖ್ಯವಾದುವು. ಸಾಂಚಿಯಸ್ತೂಪದ ಕೆಲವು ಭಾಗ ಇಟ್ಟಿಗೆಗಳಿಂದ ಕಟ್ಟಲ್ಪಟ್ಟು ಮೌರ್ಯರ ಕಾಲಕ್ಕೆ ಸೇರಿದ್ದು. ಇಟ್ಟಿಗೆಯ ಕಟ್ಟಡದ ಮೇಲ್ಭಾಗದಲ್ಲಿನ ಕಲ್ಲು ಹೊದಿಕೆಯೂ ಸುತ್ತಲೂ ನಿರ್ಮಿಸಿರುವ ಕಟಕಟೆ, ತೋರಣಗಳೂ ಶಾತವಾಹನರ ಕಾಲದ್ದೆಂದು ಊಹಿಸಲ್ಪಟ್ಟಿದೆ. ಅಮರಾವತಿ ಸ್ತೂಪವು ಕ್ರಿ. ಪೂ. ಎರಡನೆಯ ಶತಮಾನದಲ್ಲಿ ನಿರ್ಮಿಸಲ್ಪಟ್ಟು, ಅನಂತರ ಕ್ರಿ. ಶ. ಮೂರನೆಯ ಶತಮಾನಗಳಲ್ಲಿ ಕಲ್ಲಿನ ಮೇಲು ಹೊದಿಕೆಯನ್ನೂ ಕಲ್ಲಿನ ಕಟಾಂಜನವನ್ನೂ ನಿರ್ಮಿಸಲಾಯಿತು. ಸ್ವತಂತ್ರ ದೇವಾಲಯಗಳನ್ನು ಕಟ್ಟಲು ಪ್ರಾರಂಭವಾದಾಗ ಮೊದ ಮೊದಲು ಬೌದ್ಧ ಚೈತ್ಯಾಲಯದ ಮಾದರಿಯನ್ನೇ ಅನುಸರಿಸಿ ಕಟ್ಟಲಾಯಿತು. ಐಹೊಳೆಯಲ್ಲಿರುವ ದುರ್ಗಾ ದೇವಸ್ಥಾನವು ಇದಕ್ಕೆ ಉದಾಹರಣೆ. ಚೈತ್ಯಾಲಯಗಳಲ್ಲಿರುವಂತೆ ಈ ದೇವಾಲಯದ ಹಿಂಭಾಗವು ಅರ್ಧವರ್ತುಲಾಕಾರವಾಗಿಯೇ ಇದೆ. ಸೋಲಾಪುರ ಡಿಸ್ಟ್ರಿಕ್ಟಿನ "ತೇರ್" ಎಂಬ

ಸ್ಥಳದಲ್ಲಿರುವ ದೇವಸ್ಥಾನವೂ, ಕೃಷ್ಣಾ ಡಿಸ್ಟ್ರಿಕ್ಟಿನ "ಚಾಜರ್ಲ" ಎಂಬಲ್ಲಿಯ ಕಪೋತೇಶ್ವರ ದೇವಾಲಯವೂ ಈ ಗುಂಪಿಗೆ ಸೇರಿದವುಗಳು. ಸ್ತೂಪದ ಆಕಾರ ವನ್ನು ಅನುಸರಿಸಿ ದುಂಡಗೆ ಕಟ್ಟಿರುವ ದೇವಸ್ಥಾನವೂ ಒಂದುಂಟು. ಅದು "ರಾಜಗೃಹ" ಪಟ್ಟಣದಲ್ಲಿದೆ. ಇದರ ತರುವಾಯ ಬಂದ ಕಟ್ಟಡ ಅನೇಕ ಅಂಕಣಗಳ ವಿಸ್ತಾರವಿದ್ದು ಮಧ್ಯದ ಅಂಕಣ ಮಾತ್ರ ಎತ್ತರವಾಗಿ ಕಟ್ಟಲ್ಪಟ್ಟು ಚಪ್ಪಟೆಯಾದ ಛಾವಣಿಯನ್ನು ಹೊಂದಿದ್ದು ಸುತ್ತಲಿನ ಅಂಕಣಗಳ ಛಾವಣಿಯು ಇಳಿಜಾರಾದ ಕಲ್ಲು ಚಪ್ಪಡಿಗಳಿಂದ ಮಾಡಿದವುಗಳಾಗಿರುತ್ತಿದ್ದುವು. ಐಹೊಳೆಯಲ್ಲಿರುವ "ಲಾಡಖಾನ" ದೇವಾಲಯವು ಇದಕ್ಕೆ ಉದಾಹರಣೆ. ಒಂದು ಗರ್ಭಗೃಹ, ಅದರ ಸುತ್ತಲೂ ಪ್ರದಕ್ಷಿಣೆಯ ಮಾರ್ಗ, ಇಲ್ಲವೆ ಒಂದು ಗರ್ಭಗೃಹ ಅದರ ಮುಂಭಾಗದಲ್ಲಿ ಒಂದು ಸಣ್ಣ ಮುಖಮಂಟಪ. ಇವೇ ಮೇಲ್ಛಾವಣಿಯು ಚಪ್ಪಟೆಯಾದ ಮೇಲೆ ಮಾಡಿದ ಸ್ವತಂತ್ರ ದೇವಾಲಯಗಳ ಪ್ರಥಮ ಪ್ರಯತ್ನಗಳು. ಇವಕ್ಕೆ ಸಾಂಚಿಯಲ್ಲಿರುವ ದೇವಾಲಯವೂ, ನಾಚ್ನಾ ಕುಠಾರವೆಂಬ ಸ್ಥಳದಲ್ಲಿರುವ ಪಾರ್ವತೀ ದೇವಾಲಯವೂ ಉದಾಹರಣೆಗಳು. ಈ ಎಲ್ಲ ಪ್ರಯತ್ನಗಳೂ ಕ್ರಿ. ಶ. ಐದು ಆರನೆಯ ಶತಮಾನಗಳಲ್ಲಿ ನಡೆದುವು. ಅಲ್ಲಿಂದ ಮುಂದೆ ಕಟ್ಟಲ್ಪಟ್ಟ ಕಟ್ಟಡಗಳೆಲ್ಲ ಈ ಮೂಲನ್ಯಾಸದಿಂದ ವಿಸ್ತೃತ ವಾದವುಗಳು. ಕ್ರಿ. ಶ. ಆರನೆಯ ಶತಮಾನದ ಹೊತ್ತಿಗೆ ಗರ್ಭಗುಡಿಯ ಮೇಲೆ ಗೋಪುರವನ್ನು ಕಟ್ಟಲು ಪ್ರಾರಂಭವಾಯಿತು. ಝಾನ್ಸಿ ಡಿಸ್ಟ್ರಿಕ್ಟಿನ ದೇವಘರ್‌ನಲ್ಲಿರುವ ದಶಾವತಾರ ದೇವಾಲಯವೇ ಶಿಖರವನ್ನುಳ್ಳ ಮೊಟ್ಟ ಮೊದಲನೆಯ ದೇವಾಲಯವೆಂದು ಈಗ ನಮಗೆ ತಿಳಿದುಬಂದಿರುವುದು. ಇದು ಆರನೆಯ ಶತಮಾನಕ್ಕೆ ಸೇರಿದ್ದು. ಮೊದಲು ಕಟ್ಟಿದ ದೇವಾಲಯಗಳು ಅಷ್ಟೇನೂ ಎತ್ತರವಿರುತ್ತಿರಲಿಲ್ಲ. ಅನಂತರ ಬರ ಬರುತ್ತಾ ಅವು ಹೆಚ್ಚು ವಿಸ್ತಾರವೂ ಭವ್ಯವೂ ಆಗತೊಡಗಿದವು.

ಭರತಖಂಡದ ವಾಸ್ತುಶಿಲ್ಪವು ಮೂರು ತರದ್ದೆಂದು ಹೇಳಲ್ಪಟ್ಟಿದೆ. ಮೂಲದಿಂದ ಶಿಖರದವರೆಗೂ ಚತುರಸ್ರಾಕಾರವಾಗಿರುವ ದೇವಾಲಯವು "ನಾಗರ" ವೆಂದೂ, ಆರು ಅಥವಾ ಎಂಟು ಮುಖಗಳುಳ್ಳದ್ದು "ದ್ರಾವಿಡ" ವೆಂದೂ, ವೃತ್ತಾಕಾರವಾದುದು "ವೇಸರ" ವೆಂದೂ ಶಾಸ್ತ್ರಗಳಲ್ಲಿ ಹೇಳಿದೆ.

ನಾಗರ ರೀತಿಯಲ್ಲಿ ವಿಮಾನವು ಚತುರಸ್ರಾಕಾರವಾಗಿರುತ್ತದೆ. ಮಹಾಕೂಟದ ಮುಕುಟೇಶ್ವರ ದೇವಾಲಯವು ಇದಕ್ಕೆ ನಿದರ್ಶನ. ಐಹೊಳೆಯ ಮೇಗುತಿ, ಬಾದಾಮಿಯ ಮಾಳಗಿತ್ತಿ ದೇವಾಲಯಗಳಲ್ಲಿ ವಿಮಾನಗಳ ತುದಿಗಳು ಅಷ್ಟ ಕೋಣಾಕಾರವಾಗಿವೆ. ಅವು "ದ್ರಾವಿಡ" ರೀತಿಯವು. ಕುಕನೂರು ದೇವಾ ಲಯದ ವಿಮಾನವು ವೃತ್ತಾಕಾರವಾಗಿದೆ. ಇದು "ವೇಸರ" ರೀತಿಗೆ ಸೇರಿದ್ದು. ಈ ಕಾರಣಗಳಿಂದ ಉತ್ತರ ಹಿಂದೂಸ್ಥಾನದ ದೇವಾಲಯಗಳು "ನಾಗರ" ರೀತಿಗೆ ಸೇರಿದುವು, ದಕ್ಷಿಣ ಹಿಂದೂಸ್ಥಾನದಲ್ಲಿ ಪಲ್ಲವರ, ಚೋಳರ ದೇವಾಲಯಗಳು "ದ್ರಾವಿಡ" ರೀತಿಯವು. ಇವೆರಡು ಪ್ರದೇಶಗಳಿಗೂ ಮಧ್ಯೆ ಇರುವ, ಎಂದರೆ ಕರ್ನಾಟಕ ದೇಶದಲ್ಲಿ ಕಾಣಬರುವ ಶಿಲ್ಪರೀತಿಗೆ "ವೇಸರ" ರೀತಿಯೆಂದು ಹೇಳ ಬಹುದು.

"ವೇಸರ" ವೆಂದು ಯಾವುದಕ್ಕೆ ಹೇಳಬೇಕೆನ್ನುವ ವಿಷಯದಲ್ಲಿ ಸ್ಪಷ್ಟವಾಗಿ ಎಲ್ಲಿಯೂ ಹೇಳಿರುವುದಿಲ್ಲ. ನಾಗರ ಮತ್ತು ದ್ರಾವಿಡ ರೀತಿಗಳ ವಿಮಾನಗಳು ಚತುರಸ್ರಾಕಾರವಾಗಿದ್ದು ತುದಿಯಲ್ಲಿ ಶಿಖರವನ್ನು ಹೊಂದಿರುತ್ತವೆ. ವೇಸರ ರೀತಿಯ ವಿಮಾನದ ತುದಿಯು ಪೀಪಾಯಿ ಆಕಾರದ್ದಿರುತ್ತದೆ ಎಂದೂ, ಮಹಾ ಬಲಿಪುರದಲ್ಲಿರುವ ಸಹದೇವ ಮತ್ತು ಗಣೇಶ ರಥಗಳು ವೇಸರ ರೀತಿಗೆ ಸೇರಿದವು ಗಳೆಂದೂ ಕೆಲವರ ಅಭಿಪ್ರಾಯ.

ದೇವಾಲಯಗಳ ಗರ್ಭಗೃಹಗಳಲ್ಲಿ ಪ್ರತಿಷ್ಠಿಸಲ್ಪಡುವ ಮೂಲ ವಿಗ್ರಹ ಗಳು ಮಾನಸಾರ ಪ್ರಕಾರ "ಸ್ಥಾನಕ", "ಆಸನ" ಮತ್ತು "ಶಯನ" ಎಂದು ಮೂರು ತರಹವಾಗಿರುವವೆಂದೂ, ಆ ಗೃಹಗಳ ಮೇಲಿರುವ ಗೋಪುರದ ಆಕಾ ರವು ಬೇರೆ ಬೇರೆ ರೀತಿಯವೆಂದೂ ಹ್ಯಾವೆಲ್ ಹೇಳುತ್ತಾರೆ. "ಸ್ಥಾನಕ" ವೆಂದರೆ ನಿಂತಿರುವ ವಿಗ್ರಹ. ಇದರ ಮೇಲಿನ ವಿಮಾನದ ತುದಿಯು ಶಿಖರವನ್ನು ಹೊಂದಿರುವುದೆಂದೂ; "ಆಸನ" ವೆಂದರೆ ಕುಳಿರುವ ವಿಗ್ರಹ, ಇದರ ಮೇಲಿನ ಗೋಪುರ ಚಪ್ಪಟೆಯಾಗಿಯೋ ಅಥವಾ ಅರ್ಧಗೋಳಾಕಾರವಾಗಿಯೋ ಇರುವ ದೆಂದೂ; "ಶಯನ" ವೆಂದರೆ ಮಲಗಿರುವ ವಿಗ್ರಹವೆಂದೂ ಅದರ ಮೇಲಿನ ಗೋಪುರವು ಪೀಪಾಯಿಯ ಆಕಾರದಲ್ಲಿರುವುದೆಂದೂ ವರ್ಣಿಸಿರುತ್ತಾರೆ.

ಕರ್ನಾಟಕವು ವಾಸ್ತುಕಲೆಗೆ ಅತಿ ಪ್ರಸಿದ್ಧಿಯಾದದ್ದು. ಇಲ್ಲಿ ಅನೇಕ ರಾಜ್ಯಗಳು ಹುಟ್ಟಿ ಬೆಳೆದು ಕಲೆ ಮತ್ತು ಸಾಹಿತ್ಯಗಳ ಬೆಳವಣಿಗೆಗೆ ಪ್ರೋತ್ಸಾಹವನ್ನು ನೀಡಿದವು. ಕದಂಬರು, ಗಂಗರು, ಚಾಳುಕ್ಯರು, ಹೊಯಿಸಳರು, ಮತ್ತು ವಿಜಯನಗರದ ಅರಸರು ತಮ್ಮ ತಮ್ಮ ಆಳ್ವಿಕೆಯಲ್ಲಿ ಸುಂದರವಾದ ದೇವಾಲಯಗಳನ್ನು ಕಟ್ಟಿಸಿ ಕರ್ನಾಟಕವು ಕಲೆಯ ತೌರೂರು ಎನ್ನುವ ಕೀರ್ತಿಯನ್ನು ತಂದುಕೊಟ್ಟರು. ನಾಗರ ರೀತಿಗೆ ಉತ್ತರಕ್ಕೆ ಹಿಮಾಚಲ ಪರ್ವತವೂ ದಕ್ಷಿಣಕ್ಕೆ ನರ್ಮದಾ ಮತ್ತು ಮಹಾನದಿಗಳೂ ಮೇರೆಗಳಾಗಿವೆ. ದ್ರಾವಿಡ ರೀತಿಗೆ ಉತ್ತರಕ್ಕೆ ಕೃಷ್ಣಾ ನದಿಯೂ ದಕ್ಷಿಣಕ್ಕೆ ಹಿಂದೂ ಸಾಗರವೂ ಮೇರೆಗಳು. ಇವೆರಡು ಆವರಣಗಳ ಮಧ್ಯದಲ್ಲಿ "ತಿರುಳ್ಗನ್ನಡ" ರಾಜ್ಯವು ಅಡಗಿದೆ. ಇದರಲ್ಲಿ ಹುಟ್ಟಿ ಬೆಳೆದು ಬಂದ ವಾಸ್ತುರೀತಿಯೇ ಬೇರೆ. ಆಧುನಿಕ ವಿದ್ವಾಂಸರು ಉತ್ತರ ಹಿಂದೂಸ್ಥಾನದ ರೀತಿಯನ್ನು ("Indo-Aryan") "ಇಂಡೋ ಆರ್ಯನ್" ಶೈಲಿ ಎಂದೂ ದಕ್ಷಿಣ ಹಿಂದೂಸ್ಥಾನದ ರೀತಿಯನ್ನು (Dravidian) "ದ್ರಾವಿಡ ಶೈಲಿ" ಎಂದೂ ಕರೆಯುತ್ತಾರೆ. ಕರ್ನಾಟಕ ದೇಶದಲ್ಲಿರತಕ್ಕ ರೀತಿಯನ್ನು ಯಾವ ಹೆಸರಿನಿಂದ ಕರೆಯಬೇಕೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈ ಶೈಲಿಯು ಚಾಳುಕ್ಯರ ಕಾಲದಲ್ಲಿ ಆರಂಭವಾದ್ದರಿಂದ ಭರತಖಂಡದ ವಾಸ್ತುಶಿಲ್ಪವನ್ನು ಮೊದಲು ಪರಿಶೀಲಿಸಿ ಅದರ ಮೇಲೆ ಗ್ರಂಥವನ್ನು ಬರೆದ ಜೇಮ್ಸ್ ಫರ್ಗ್ಯುಸನ್ (James Fergusson) ರವರು "ಚಾಳುಕ್ಯ ಶೈಲಿ" ಎಂದು ಹೆಸರಿಟ್ಟರು. ಚಾಳುಕ್ಯ ರಾಜರ ಸಾಮಂತರಾಗಿದ್ದ ಹೊಯಿಸಳರು ಹತ್ತನೆಯ ಶತಮಾನದ ಕೊನೆಯಲ್ಲಿ ಪ್ರಬಲರಾಗುತ್ತ ಬಂದು ಮಹಮ್ಮದೀಯರಿಂದ ಪರಾಜಿತರಾಗುವವರೆಗೂ, ಎಂದರೆ ಕ್ರಿ. ಶ. ೧೩೧೦ ರ ವರೆಗೂ—ಈ ದೇಶವನ್ನು ಆಳುತ್ತಿದ್ದರು. ಈಗ ತಿಳಿದುಬಂದಿರುವ ಪ್ರಸಿದ್ಧವಾದ ಕಟ್ಟಡಗಳನ್ನೆಲ್ಲ ಕಟ್ಟಿಸಿದವರು ಹೊಯಿಸಳ ರಾಜರೆಂದೂ, ಆವರ ಔದಾರ್ಯದಿಂದ ಪರಿಪೋಷಿತರಾದ ಶಿಲ್ಪಿಗಳ ಸಾಮರ್ಥ್ಯದಿಂದ ಈ ವಾಸ್ತುನಿರ್ಮಾಣ ಕೌಶಲವು ಪೂರ್ಣವಿಕಾಸವನ್ನು ಪಡೆಯಿತೆಂದೂ, ಆದ್ದರಿಂದ ಇದನ್ನು "ಚಾಳುಕ್ಯ" ವೆಂದು ಕರೆಯುವುದಕ್ಕಿಂತ "ಹೊಯಿಸಳ" ವೆಂದು ಕರೆಯುವದೇ ಸೂಕ್ತವಾದದ್ದೆಂದೂ ರಾವ ಬಹದ್ದೂರ್, ಪ್ರಾಕ್ತನ ವಿಮರ್ಶವಿಚಕ್ಷಣ ಆರ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟರು. ಹಿಂದೂ

ಚರಿತ್ರ ಲೇಖಕನಾದ ವಿನ್ಸೆಂಟ್ ಸ್ಮಿತ್ (Vincent Smith) ಮೇಲೆ ಹೇಳಿದಂತೆ ಈ ರೀತಿಯನ್ನು "ಚಾಲುಕ್ಯ" ವೆನ್ನುವುದಕ್ಕಿಂತ "ಹೊಯಿಸಳ" ವೆಂದು ಕರೆಯುವದೇ ಉತ್ತಮವೆಂದು ಒಪ್ಪಿಕೊಂಡರೂ, ಹೀಗೆ ರಾಜರ ಹೆಸರನ್ನು ಕೊಡುವುದಕ್ಕಿಂತ ದೇಶದ ಹೆಸರನ್ನು ಇಡುವುದು ಒಳ್ಳೆಯದೆಂದೂ ಆದ್ದರಿಂದ ಇದನ್ನು "ದಾಕ್ಷಿಣಾತ್ಯ" ರೀತಿ ಎಂದೂ, ಅದಕ್ಕಿಂತಲೂ "ಮೈಸೂರು" ಶೈಲಿ ಎಂದು ಕರೆಯುವುದು ಸೂಕ್ತವೆಂದೂ ಆತನ ಅಭಿಪ್ರಾಯ. ಏಕೆಂದರೆ, ಪ್ರಾಯಶಃ ಇಂಥ ಕಟ್ಟಡಗಳೆಲ್ಲ—ಅದರಲ್ಲಿಯೂ ಅವುಗಳಲ್ಲಿ ಉತ್ತಮೋತ್ತಮವಾದವುಗಳೆಲ್ಲ—ಮೈಸೂರು ರಾಜ್ಯದಲ್ಲಿಯೇ ದೊರೆಯುತ್ತವೆ. ಇ. ಬಿ. ಹ್ಯಾವೆಲ್ (E. B. Havell) ಎಂಬ ಮತ್ತೊಬ್ಬ ಇಂಗ್ಲೀಷ್ ಪಂಡಿತನು ರಾಜವಂಶದ ಹೆಸರಿಡುವುದು ಅಷ್ಟು ಸಮಂಜಸವಾಗುವುದಿಲ್ಲವೆಂದೂ ಆದ್ದರಿಂದ ಇವುಗಳಿಗೆ ಧಾರ್ಮಿಕವಾದ ಹೆಸರುಗಳನ್ನು ಇಡುವುದು ಉಚಿತವೆಂದೂ ವಾದಿಸಿ, ಚಾಳುಕ್ಯ ಶೈಲಿ ಎಂಬುವುದು "ದ್ರಾವಿಡ-ಶೈವ" ಮತ್ತು "ಆರ್ಯವೈಷ್ಣವ" ರೀತಿಗಳಿಗೆ ಮಧ್ಯಸ್ಥವಾಗಿರುವುದೆಂದೂ ಹೇಳಿರುವನು. ಹೀಗೆ ಧಾರ್ಮಿಕ ಹೆಸರುಗಳನ್ನು ಕೊಡುವುದು ಕೂಡ ಅಷ್ಟೇನೂ ತೃಪ್ತಿಕರವಾದದ್ದಲ್ಲ. ಏಕೆಂದರೆ, ಭರತಖಂಡದ ಮಿಕ್ಕಭಾಗಗಳಲ್ಲಿರುವಂತೆ ಮೈಸೂರು ರಾಜ್ಯದಲ್ಲಿಯೂ ನಾನಾಮತ, ಜಾತಿವಿಜಾತಿ ಜನಗಳಿದ್ದಾರೆ. ಆದರೆ ಶಿಲ್ಪರೀತಿಯಲ್ಲಿ ಸ್ಪಷ್ಟವಾಗಿರುವದು ಎರಡೇ ವಿಧ. ಅಲ್ಲದೆ ಯಾವುದಾದರೂ ಒಂದು ದೇಶದಲ್ಲಿ ಪ್ರಚಾರವಾಗಿರುವ ವಾಸ್ತುಪದ್ಧತಿಗೆ ಆಯಾದೇಶದ ವಾಯುಗುಣ, ಭೂಸ್ಥಿತಿ, ಶಿಲಾಸಂಪತ್ತು, ಇವು ನಿರ್ಣಾಯಕವಾಗುವಷ್ಟು ಆ ದೇಶದ ಕೇವಲ ಧರ್ಮಕರ್ಮಗಳು ನಿರ್ಣಾಯಕವಾಗುವುದಿಲ್ಲ. ಆದ್ದರಿಂದ ವಿನ್ಸೆಂಟ್ ಸ್ಮಿತ್‌ರು ಸೂಚಿಸಿರುವಂತೆ ದೇಶದ ಹೆಸರನ್ನು ಇಡುವುದು ಉತ್ತಮ. ಆದಾಗ್ಯೂ ಈ ಶೈಲಿಯನ್ನು ಮೊದಲು ಮಾಡಿದವರು ಚಾಳುಕ್ಯರು, ಅದನ್ನು ಅಭಿವೃದ್ಧಿಪಡಿಸಿದವರು ಹೊಯಿಸಳರು ಇಬ್ಬರೂ ಕರ್ನಾಟಕ ಅರಸುಮನೆತನದವರು. ಮತ್ತು ಈ ತರಹದ ಕಟ್ಟಡಗಳು ತಿರುಳ್ಗನ್ನಡವೆಂದು ಕರೆಯಿಸಿಕೊಳ್ಳುವ ಕರ್ನಾಟಕ ರಾಜ್ಯದಲ್ಲಿ ಮಾತ್ರ ಕಾಣಿಸಿಕೊಳ್ಳುವುವಾದ್ದರಿಂದಲೂ, ಅಚ್ಚಕನ್ನಡ ಶಿಲ್ಪಿಗಳಿಂದ ನಿರ್ಮಿಸಲ್ಪಟ್ಟಿರುವವಾದ್ದರಿಂದಲೂ ಈ ರೀತಿಗೆ "ಕರ್ನಾಟಕ" ಶೈಲಿ ಎಂದು ಹೆಸರಿಡುವುದು ಎಲ್ಲ ರೀತಿಯಿಂದಲೂ ಸಮಂಜಸವೆಂದು ತೋರುತ್ತದೆ. ಆದ್ದರಿಂದ ಈ ಗ್ರಂಥದಲ್ಲಿ ಇನ್ನು ಮುಂದೆ ಈ ಹೆಸರನ್ನೇ ಉಪಯೋಗಿಸಲಾಗುತ್ತದೆ.

ದ್ರಾವಿಡಶೈಲಿ

ವಾಸ್ತುಶೈಲಿಯ ದೃಷ್ಟಿಯಿಂದ ದ್ರಾವಿಡ ವಾಸ್ತು ರೀತಿಯ ಬೆಳವಣಿಗೆಯನ್ನು ಐದು ಕಾಲಗಳಾಗಿ ವಿಭಾಗಿಸಬಹುದು. ಅವು ಯಾವುವೆಂದರೆ:—

೧. ಪಲ್ಲವರ ಕಾಲ ಕ್ರಿ. ಶ. ೬೦೦ ರಿಂದ ೯೦೦ ರ ವರೆಗೆ.

೨. ಚೋಳರ ಕಾಲ ,, ೯೦೦ ರಿಂದ ೧೧೫೦ ರ ವರೆಗೆ.

೩. ಪಾಂಡ್ಯರ ಕಾಲ ,, ೧೧೫೦ ರಿಂದ ೧೩೫೦ ರ ವರೆಗೆ.

೪. ವಿಜಯನಗರದ ,, ೧೩೫೦ ರಿಂದ ೧೫೬೫ ರ ವರೆಗೆ.

೫. ಆಧುನಿಕ ಕಾಲ ,, ೧೬೦೦ ರಿಂದ ಮುಂದಕ್ಕೆ.

ಇವುಗಳಲ್ಲಿ ಮೊದಲನೆಯ ಕಾಲವೇ ಶ್ರೇಷ್ಠವಾದದ್ದು ಮತ್ತು ಪರಿಪೂರ್ಣವಾದದ್ದು. ಆಗ ಕಟ್ಟಡದ ವಿನ್ಯಾಸವು ಸುಲಭವೂ ಸರಳವೂ ಆಗಿತ್ತು. ಕಟ್ಟಡವು ಚಿಕ್ಕದು. ಚಿತ್ರಗಳೂ ಅಲಂಕಾರಗಳೂ ಕಡಮೆ. ವಿಮಾನವು ಎತ್ತರವಿಲ್ಲ. ಪಲ್ಲವರು ಮೊದಮೊದಲು ಬಂಡೆಗಳಲ್ಲಿ ಮಂಟಪಗಳನ್ನೂ ರಥಗಳನ್ನೂ ನಿರ್ಮಿಸಿದರು. ಅನಂತರ ಏಳನೆಯ ಶತಮಾನದ ತರುವಾಯ ಸ್ವತಂತ್ರವಾದ ಕಟ್ಟಡಗಳನ್ನು ಕಟ್ಟುತ್ತ ಬಂದರು. ಮಾಮಲ್ಲಪುರದ ರಥಗಳು ಅವರ ಮೊದಲ ಪ್ರಯತ್ನಕ್ಕೆ ಉದಾಹರಣೆ. ಆಮೇಲಿನ ಪ್ರಯತ್ನಕ್ಕೆ ಸಮುದ್ರ ತೀರದಲ್ಲಿರುವ "Shore temple" ಮತ್ತು ಕಂಚಿಯಲ್ಲಿರುವ ಕೈಲಾಸನಾಥ ಮತ್ತು ವೈಕುಂಠನಾಥ ದೇವಾಲಯಗಳು. ಎರಡು ಮತ್ತು ಮೂರನೆಯ ಕಾಲಗಳಲ್ಲಿ ಗರ್ಭಗೃಹದ ಮೇಲಣ ವಿಮಾನವು ಬೆಳೆಯಿತು. ನಾಲ್ಕನೆಯ ಕಾಲದಲ್ಲಿ ದೇವಾಲಯವನ್ನು ಪ್ರವೇಶಿಸುವ ಮಹಾದ್ವಾರದ ಮೇಲಣ ಗೋಪುರಗಳು ಪ್ರಾಮುಖ್ಯತೆಗೆ ಬಂದು ವಿಮಾನಕ್ಕಿಂತಲೂ ದೊಡ್ಡದಾದವು. ಆದರೂ ಈ ಕಾಲದಲ್ಲಿ ಪ್ರಾಶಸ್ತ್ಯವು ಇವಕ್ಕಿಂತಲೂ ಹೆಚ್ಚಾಗಿ ಕಲ್ಯಾಣ ಮಂಟಪಕ್ಕೆ ಬಂದಿತು. ಶಿಲ್ಪಿಗಳು ತಮ್ಮ ಸಾಮರ್ಥ್ಯವನ್ನೆಲ್ಲ ಇದರಲ್ಲಿ ತೋರಿಸುತ್ತ ಬಂದರು. ಅನೇಕ ಕಂಬಗಳುಳ್ಳ ಹಜಾರಗಳೂ, ಪ್ರತ್ಯೇಕವಾದ ಸಣ್ಣ ಸಣ್ಣ ಗುಡಿಗಳೂ ಈ ಕಾಲದ ಕಟ್ಟಡದಲ್ಲಿ ಕಂಡುಬರುವ ವೈಲಕ್ಷಣ್ಯಗಳು. ಚಿತ್ರಗಳೂ ಅಲಂಕಾರಗಳೂ ಮರದಲ್ಲಿ ಕೆತ್ತಲ್ಪಟ್ಟಂತೆ ಇರುತ್ತಿದ್ದುವು. ಕಂಬಗಳು ಒಂದೇ ಕಲ್ಲಿನವಾದರೂ ಅನೇಕ

ವೇಳೆ ಅವುಗಳ ರಚನೆಯಲ್ಲಿ ವ್ಯಾಳಿಗಳು, ನಿಂತಿರುವ ಕುದುರೆಗಳು, ರಾವುತರು, ದೇವತೆಗಳು, ಯೋಧರು ಮುಂತಾದವುಗಳು ಸೇರಿಕೊಂಡು ಇರುತ್ತಿದ್ದವು. ಇವುಗಳಲ್ಲಿ ಪ್ರಾಚೀನತಮವಾದ ದೇವಾಲಯಗಳು ದೊಡ್ಡ ದೊಡ್ಡ ಕಲ್ಲು ತುಂಡುಗಳನ್ನು ಒತ್ತಾಗಿ ಜೋಡಿಸಿ ಕಟ್ಟಿದವುಗಳು. ಅವುಗಳ ಮಧ್ಯೆ ಗಾರೆ, ಗಚ್ಚು ಯಾವುದೂ ಇರುತ್ತಿರಲಿಲ್ಲ. ಬುಡದಿಂದ ಶಿಖರದವರೆಗೆ ಕಲ್ಲಿನಲ್ಲೆ ಕಟ್ಟಿರುತ್ತಿತ್ತು. ಆಮೇಲಾಮೇಲೆ ದೇವಾಲಯದ ಕೆಳಭಾಗವೆಲ್ಲ ಎಂದರೆ ಮಹಾದ್ವಾರದ ಗಂಧವಟ್ಟಿಗೆ ಮತ್ತು ಲೋವೆ ಕಲ್ಲಿನವರೆಗೆ ಕಲ್ಲಿನಲ್ಲಿಯೂ, ಅಲ್ಲಿಂದ ಮೇಲಕ್ಕೆ ಇಟ್ಟಿಗೆ ಗಾರೆಯಲ್ಲಿಯೂ ಮಾಡಿರುತ್ತಿತ್ತು. ದ್ರಾವಿಡ ವಾಸ್ತುವು ಮೊದಲು ಗಟ್ಟಿಮುಟ್ಟಾಗಿ ಒರಟು ಒರಟಾಗಿದ್ದರೂ ಮನಸ್ಸಿಗೆ ಅಂಟು ವಂತೆಯೂ ಇಂಪನ್ನು ಬೀರುವಂತೆಯೂ ಇರುತ್ತಿತ್ತು. ಆದರೆ ಆ ವಿದ್ಯೆಯು ಒಂದು ಶತಮಾನಕ್ಕಿಂತ ಮತ್ತೊಂದು ಶತಮಾನಕ್ಕೆ ಕ್ರಮವಾಗಿ ಕೀಳಾಗುತ್ತ ಬಂತು. ಈಚಿನ ಕಟ್ಟಡಗಳು ಅನೇಕವು ಮೊದಲಿನವುಗಳಿಗಿಂತ ಅತ್ಯಂತ ದೊಡ್ಡವಾಗಿದ್ದರೂ ಹಿಂದಿನವುಗಳಲ್ಲಿಲ್ಲದಿದ್ದಂಥ ಒಂದು ವಿಧವಾದ ನಾಜೂಕು ಇದ್ದರೂ, ಘನವಾದ ಲಕ್ಷಣಗಳನ್ನು ನೋಡಬೇಕಾದರೆ ಹಿಂದಿನ ಕಟ್ಟಡಗಳಿಗೇ ಹೋಗಬೇಕು.

ಈ ರೀತಿಯಲ್ಲಿ ರಚಿಸಿದ ಪ್ರಾಚೀನತಮವಾದ ಕಟ್ಟಡಗಳು ಒಂದೇ ಕಲ್ಲಿನಿಂದ ಮಾಡಿದ "ರಥಗಳು." ಇವು ಮದರಾಸಿಗೆ ಸುಮಾರು ೩೨ ಮೈಲು ದಕ್ಷಿಣಕ್ಕೆ ಇರುವ ಮಾಮಲ್ಲಪುರದ (Mahabalipuram) ಹತ್ತಿರ ಸಮುದ್ರದ ತೀರದಲ್ಲಿವೆ. ಇಂಥವು ಒಟ್ಟು ಐದು ಇವೆ. ಇವು ಕ್ರಿ. ಶ. ಏಳನೆಯ ಶತಮಾನದಲ್ಲಿ ಕಗ್ಗಲ್ಲಿನಲ್ಲಿ ಕೊರೆದವುಗಳು. ಇವುಗಳಲ್ಲೆಲ್ಲ ಧರ್ಮರಾಜ ರಥವೆಂಬುದೇ ಅತ್ಯಂತ ಸುಂದರವಾದದ್ದು. ಮೈಸೂರು ರಾಜ್ಯಕ್ಕೆ ಸೇರಿದ ಬಿಜಾಪುರ ಡಿಸ್ಟ್ರಿಕ್ಟಿನ ಐಹೊಳೆ ಗ್ರಾಮದಲ್ಲಿ ಇದೇ ರೀತಿಯ ಒಂದು ಜೈನಬಸದಿ ಇದೆ. ಇದು ಎರಡನೆ ಪುಲಕೇಶಿಯಿಂದ ಕ್ರಿ. ಶ. ೬೩೪ ರಲ್ಲಿ ರಚಿಸಲ್ಪಟ್ಟಿತು. ಇದಾದ ಮೇಲೆ ಪ್ರಾಮುಖ್ಯತೆಯನ್ನು ಅನುಸರಿಸಿ ಬರತಕ್ಕದ್ದು ಕಂಚಿಯಲ್ಲಿರುವ ಕೈಲಾಸೇಶ್ವರ ದೇವಾಲಯ. ಕ್ರಿ. ಶ. ಏಳನೆಯ ಶತಮಾನದಲ್ಲಿ ಕಂಚಿಯಲ್ಲಿ ಆಳುತ್ತಿದ್ದ ರಾಜಸಿಂಹನೆಂಬ ಪಲ್ಲವ ಅರಸನು ಇದನ್ನು ಕಟ್ಟಿಸಿದನು. ಈಗ

ಆಂಧ್ರ ರಾಜ್ಯಕ್ಕೆ ಸೇರಿರುವ ಎಲ್ಲೋರಾದಲ್ಲಿ ಬೆಟ್ಟದ ಒಂದು ಭಾಗವನ್ನೇ ಕಡಿದು ಬೇರ್ಪಡಿಸಿ ಒಂದೇ ಬಂಡೆಯಲ್ಲಿ ಕೊರೆದಿರುವ ಕೈಲಾಸ ದೇವಾಲಯವು ಸಕಲ ಲಕ್ಷಣ ಪರಿಪೂರ್ಣವಾದ ದ್ರಾವಿಡ ರೀತಿಯ ಕಟ್ಟಡ. ಅಷ್ಟೇ ಅಲ್ಲ, ಭರತ ಖಂಡದ ವಾಸ್ತು ಕಲೆಯನ್ನು ನಿದರ್ಶಿಸುವ ಒಂದು ಅತ್ಯಂತ ವಿಚಿತ್ರವೂ ರಮ್ಯವೂ ಆದ ಕಟ್ಟಡ. ಬಾದಾಮಿಯಲ್ಲಿರುವ ಮಾಲೆಗಿತ್ತಿ ಶಿವಾಲಯವೂ ಈ ರೀತಿಯ ಒಂದು ಸುಂದರವಾದ ಕಟ್ಟಡ. ಇದೂ ಈ ಕಾಲಕ್ಕೆ ಸೇರಿದುದೇ, ಎಂದರೆ ಕ್ರಿ. ಶ. ಎಂಟನೆಯ ಶತಮಾನ. ಸ್ವಲ್ಪವೂ ಅಳಿಯದೆ ಉಳಿದಿರುವ ಅತ್ಯಂತ ಪ್ರಾಚೀನ ದೇವಾಲಯಗಳಲ್ಲಿ ಇದೂ ಒಂದಾಗಿದೆ. ಅದೇ ಡಿಸ್ಟ್ರಿಕ್ಟಿನ ಪಟ್ಟದಕಲ್ಲಿನಲ್ಲಿರುವ ವಿರೂಪಾಕ್ಷ ದೇವಾಲಯವು ಕರ್ನಾಟಕ ದೇಶದಲ್ಲೆಲ್ಲ ಅತ್ಯಂತ ದೊಡ್ಡದೂ ಪ್ರಾಶಸ್ತ್ಯವುಳ್ಳದ್ದೂ ಆದ ಈ ರೀತಿಯ ಕಟ್ಟಡ. ಇದನ್ನು ಚಾಳುಕ್ಯ ರಾಜನಾದ ಎರಡನೆ ವಿಕ್ರಮಾದಿತ್ಯನ ರಾಣಿಯಾದ ಲೋಕ ಮಹಾ ದೇವಿಯು ಕಟ್ಟಿಸಿದಳು. ಈ ಮೇಲ್ಕಂಡ ದೇವಾಲಯಗಳು ಪ್ರಾಚೀನ ದ್ರಾವಿಡ ಶೈಲಿಯ ಲಕ್ಷಣಗಳನ್ನು ನಿದರ್ಶಿಸುವುದಕ್ಕೆ ಉತ್ತಮವಾದ ಉದಾ ಹರಣೆಗಳಾಗಿವೆ. ತಂಜಾವೂರು ಮತ್ತು ಗಂಗೈಕೊಂಡಪುರಗಳಲ್ಲಿರುವ ಭವ್ಯ ವಾದ ವಿಮಾನಗಳು, ಗೋಪುರಗಳು ಎರಡನೆಯ ಅಥವಾ ಚೋಳರಕಾಲಕ್ಕೆ ಬರುತ್ತವೆ. ಚಿದಂಬರ, ಮಧುರೆ, ಶ್ರೀರಂಗ ಗಳಲ್ಲಿರುವ ದೇವಾಲಯಗಳು ಈಚಿನ ಚೋಳರ ಕಾಲಕ್ಕೆ ಸೇರಿದವುಗಳು. ಹೊಸಪೇಟೆ ತಾಲ್ಲೂಕು ಹಂಪೆ ಯಲ್ಲಿಯೂ ಕಂಚಿಯಲ್ಲಿಯೂ ಇರುವ ಕಲ್ಯಾಣ ಮಂಟಪಗಳು ವಿಜಯ ನಗ ರದ ಕಾಲದಲ್ಲಿ ಕಟ್ಟಿದ ಕಟ್ಟಡಗಳಿಗೆ ಒಳ್ಳೆಯ ಉದಾರಣೆಗಳಾಗಿವೆ. ಹದಿನೇಳು ಹದಿನೆಂಟು ಮತ್ತು ಹತ್ತೊಂಬತ್ತನೆ ಶತಮಾನಗಳಲ್ಲಿ ಕಟ್ಟಿದ ತಕ್ಕಮಟ್ಟಿಗೆ ಚೆನ್ನಾಗಿರುವ ಕಟ್ಟಡವು ಅಲ್ಲೊಂದು ಇಲ್ಲೊಂದು ಕಂಡು ಬಂದರೂ ಆಧುನಿಕ ಕಾಲದ ಕಟ್ಟಡಗಳಿಗೆ ಉತ್ತಮವಾದ ಉದಾಹರಣೆ ಬೇಕೆಂದರೆ ಸಿಕ್ಕುವಂತಿಲ್ಲ. ಅದರಲ್ಲಿಯೂ ಈಚೀಚೆಗೆ ನಾಟುಕೋಟೆ ಶೆಟ್ಟಿಗಳೂ ಸಾಹುಕಾರರೂ ಕಟ್ಟಿಸಿ ದ್ದೆಂದು ಹೇಳುವ ಕೆಲವು ದೇವಾಲಯಗಳಂತೂ ಹಿಂದಿನವುಗಳನ್ನು ಅನುಕರಣ ಮಾಡಿ ರಚಿಸಿದ ವಿಕಾರ ಸ್ವರೂಪಗಳಾಗಿವೆ. ಅವುಗಳಲ್ಲಿ ವಿನ್ಯಾಸ ಶುದ್ಧಿ ಇಲ್ಲ. ಒಳ್ಳೆಯ ಅಭಿರುಚಿ ಇಲ್ಲ. ಪ್ರಾಚೀನ ದೇವಾಲಯಗಳು ಪ್ರಾಯಶಃ ಮೊದಲು ಚಿಕ್ಕವಾಗಿಯೇ ಇದ್ದಿರಬೇಕು. ಇವು ಆಮೇಲೆ ಬಂದ ರಾಜರ ಕಾಲದಲ್ಲಿ

ವಿಸ್ತೃತವಾಗಿರಬೇಕು. ಚಿದಂಬರ ದೇವಸ್ಥಾನವು ಬಹು ಪ್ರಾಚೀನದ್ದಂತೆ. ಅದು ಸುಮಾರು ಕ್ರಿ. ಶ. ಹತ್ತನೆಯ ಶತಮಾನದಲ್ಲಿ ಕಟ್ಟಿಸಿದ್ದೆಂದು ಹೇಳುತ್ತಾರೆ. ಆದರೆ ಹೊರಗಿನ ಗೋಪುರಗಳು ಹದಿನಾಲ್ಕು ಹದಿನೈದನೆಯ ಶತಮಾನಗಳಲ್ಲಿ ಕಟ್ಟಿದವುಗಳು. ಇದರಂತೆಯೇ ಮಧುರೆಯ ದೇವಸ್ಥಾನದ ಗರ್ಭಗುಡಿಯು ಕ್ರಿ. ಶ. ಹದಿಮೂರನೆಯ ಶತಮಾನದ್ದು. ಸುಂದರ ಪಾಂಡ್ಯನು ಕಟ್ಟಿಸಿದ್ದು. ಆದರೆ ಅದನ್ನು ತಿರುಮಲ ನಾಯಕನು ಹದಿನೇಳನೆಯ ಶತಮಾನದಲ್ಲಿ ಜೀರ್ಣೋದ್ಧಾರಮಾಡಿ ವಿಸ್ತರಿಸಿದನು. ಹೀಗೆಯೇ ಕೋಲಾರ ಡಿಸ್ಟ್ರಿಕ್ಟ್ ನಂದಿ ಬೆಟ್ಟದ ಬುಡದಲ್ಲಿರುವ ಭೋಗನಂದೀಶ್ವರ ದೇವಾಲಯದಲ್ಲಿ ಅನೇಕ ಶತಮಾನಗಳ ಕೈವಾಡವನ್ನು ಕಾಣಬಹುದು.

ಸಾಮಾನ್ಯವಾಗಿ ದ್ರಾವಿಡ ದೇವಾಲಯಗಳ ಮಧ್ಯದಲ್ಲಿರುವ ಗರ್ಭಗೃಹದ ಮೇಲಿನ ವಿಮಾನವು ಚಿಕ್ಕದಾಗಿರುತ್ತದೆ. ಮಹಾದ್ವಾರದ ಮೇಲಿನ ಬಹು ಎತ್ತರವಾದ ಗೋಪುರಗಳ ಮಗ್ಗುಲಲ್ಲಿ ಇದು ಗಿಡ್ಡಾಗಿ ಕಾಣುತ್ತದೆ. ಈ ವಿಧವಾದ ಕಟ್ಟಾಣಿಕೆಯು ಅಂದವಾಗಿರುವುದಿಲ್ಲವೆಂದೂ ವಾಸ್ತು ವಿನ್ಯಾಸದಲ್ಲಿ ಇದು ಒಂದು ದೊಡ್ಡ ದೋಷವೆಂದೂ ಕೆಲವು ವಿದ್ವಾಂಸರು ಇದನ್ನು ಖಂಡಿಸಿದ್ದಾರೆ. ಆದರೆ ಮತ್ತೆ ಕೆಲವರು ಇದು ದೋಷವಲ್ಲವೆಂದೂ ಜಪತಪಾದಿ ಕರ್ಮಗಳಿಗೆ ಉದ್ದಿಷ್ಟವಾದ ಗರ್ಭಗುಡಿಯನ್ನು ಬೇಕೆಂದೇ ಚಿಕ್ಕದಾಗಿಯೂ ಸಾಧಾರಣವಾಗಿಯೂ ಕಟ್ಟಿರುತ್ತದೆಯೆಂದೂ, ಅದರಲ್ಲಿ ಭಕ್ತರ ಮನಸ್ಸನ್ನು ಆಕರ್ಷಿಸಿ ಚಂಚಲಗೊಳಿಸುವ ಅಲಂಕಾರಾದಿಗಳೂ ವಿಗ್ರಹಗಳೂ ಯಾವುವೂ ಇರುವುದಿಲ್ಲವೆಂದೂ ಈ ಅಸಾಮಂಜಸ್ಯಕ್ಕೆ ಸಮಾಧಾನ ಹೇಳುತ್ತಾರೆ.

ಪೂರ್ತಿಯಾಗಿ ವಿಕಾಸವನ್ನು ಪಡೆದ ದ್ರಾವಿಡ ದೇವಾಲಯಗಳಲ್ಲಿ ಈ ಕೆಳಗಿನ ಭಾಗಗಳಿರುತ್ತವೆ:

೧. ವಿಮಾನ : ಇದರಲ್ಲಿ ಗರ್ಭಗುಡಿ, ಸುಕನಾಸಿ ಅಥವಾ ಅಂತರಾಳ ಎಂದು ಎರಡು ಭಾಗಗಳುಂಟು. ಇವುಗಳ ತಳವು ಚೌಕವಾಗಿರುತ್ತದೆ. ಶಿಖರವು ಒಂದು ಅಥವಾ ಹೆಚ್ಚು ಅಂತಸ್ತು ಹೊಂದಿರುತ್ತದೆ.

೨. ನವರಂಗ : ಇದು ಸುಕನಾಸಿಯ ಮುಂಭಾಗದಲ್ಲಿ ಸಾಧಾರಣವಾಗಿ ಒಂಭತ್ತು ಅಂಕಣದ ಮಂಟಪ.

೩. ಹಜಾರ : ನವರಂಗದ ಮುಂದೆ ಕೆಲವು ದೇವಸ್ಥಾನಗಳಲ್ಲಿ ಎತ್ತರವಾದ ಕಂಬಗಳಿಂದೊಡಗೂಡಿ ಅನೇಕ ಅಂಕಣಗಳಾಗಿ ವಿಭಾಗಿಸಲ್ಪಟ್ಟಿರುತ್ತದೆ.

೪. ಮುಖಮಂಟಪ : ದೇವಾಲಯಗಳಲ್ಲಿ ನವರಂಗದ ಮುಂಭಾಗದಲ್ಲಿ ಸಾಧಾರಣವಾಗಿ ಇರುತ್ತದೆ. ಇದರ ಮೂಲಕವೇ ಜನಗಳು ಒಳಕ್ಕೆ ಹೋಗುವುದು.

೫. ಮಹಾದ್ವಾರ: ಇದು ದೇವಾಲಯದ ಕಟ್ಟಡವನ್ನು ಪ್ರತ್ಯೇಕಿಸಿ ಪ್ರಾಕಾರದ ಗೋಡೆಗೆ ಹೊಂದಿಕೊಂಡು ಇರುತ್ತದೆ. ಇದು ಭವ್ಯವಾಗಿಯೂ ಇದರ ಮೇಲ್ಗಡೆ ಎತ್ತರವಾದ ಗೋಪುರವನ್ನುಳ್ಳದ್ದಾಗಿಯೂ ಇರುತ್ತದೆ.

೬. ಗೋಪುರ : ಇದು ಅನೇಕ ಅಂತಸ್ತುಗಳನ್ನೊಳಗೊಂಡು, ಚಿತ್ರಗಳೊಡನೆ ಸೂಚ್ಯಾಕಾರವಾಗಿ ಮೇಲಕ್ಕೆ ಹೋಗುತ್ತದೆ. ತುಟ್ಟತುದಿಯಲ್ಲಿ ಚಿನ್ನದ ಕಲಶಗಳಿರುತ್ತವೆ. ದೊಡ್ಡ ದೇವಾಲಯಗಳಲ್ಲಿ ಇಂತಹ ದ್ವಾರಗಳೂ ಗೋಪುರಗಳೂ ಪ್ರಾಕಾರದ ನಾಲ್ಕು ದಿಕ್ಕುಗಳಲ್ಲಿಯೂ ಇರುವುದುಂಟು.

ಇವುಗಳಲ್ಲದೆ ಇತರ ದೇವತೆಗಳ ಗುಡಿಗಳೂ, ರಂಗಮಂಟಪ, ಕಲ್ಯಾಣ ಮಂಟಪ, ಸಭಾಮಂಟಪ ಮುಂತಾದ ಮಂಟಪಗಳೂ, ಸುತ್ತಲೂ ಕಲ್ಲು ಮೆಟ್ಟಲುಗಳನ್ನುಳ್ಳ ಕಲ್ಯಾಣಿಯೂ, ಎತ್ತರವಾದ ಪ್ರಾಕಾರದ ಗೋಡೆಗಳೂ ಇರುವುದುಂಟು.

ಈ ಶೈಲಿಯ ದೇವಸ್ಥಾನಗಳು ಮೈಸೂರು ರಾಜ್ಯದಲ್ಲಿ ಎಲ್ಲ ಕಡೆಗಳಲ್ಲಿಯೂ ಕಾಣಿಸಿಕೊಳ್ಳುತ್ತವೆ. ಚಾಳುಕ್ಯ ಮತ್ತು ಹೊಯಿಸಳ ಅರಸರ ಕಾಲ

ದಲ್ಲಿ ಅಷ್ಟು ಹೆಚ್ಚು ಪ್ರಾಮುಖ್ಯತೆಗೆ ಬರಲಿಲ್ಲ. ಹೊಯಿಸಳ ರಾಜ್ಯವು ಅಳಿದು ಹೋಗಿ ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾದ ಮೇಲೆ ಮತ್ತೆ ಈ ಶೈಲಿಗೆ ಉತ್ತೇಜನ ದೊರೆತು ವಿಜಯನಗರದ ಅರಸರು ಆ ಶೈಲಿಯಲ್ಲಿಯೇ ಸುಂದರವಾದ ಮತ್ತು ಹೆಚ್ಚು ಆಕರ್ಷಕವಾದ ದೇವಾಲಯಗಳನ್ನು ಕಟ್ಟಿಸಿದರು. ಇಲ್ಲಿ ಕಾಣುವ ದ್ರಾವಿಡ ಶೈಲಿಯು ಐಹೊಳೆ, ಬಾದಾಮಿಯಲ್ಲಿರುವ ದೇವಾಲಯ ಗಳಿಗೂ ದಕ್ಷಿಣದ ಪಲ್ಲವ ಮತ್ತು ಚೋಳರು ಕಟ್ಟಿಸಿರುವ ಭವ್ಯವಾದ ದೇವಾ ಲಯಗಳಿಗೂ ಮಧ್ಯದ ಹೆಜ್ಜೆಯನ್ನಾಗಿ ಪರಿಗಣಿಸಬಹುದಾಗಿದೆ. ವಿಜಯ ನಗರವು ನಾಶವಾದ ಮೇಲೆ ಹಿಂದೂ ಮತಕ್ಕೆ ಧಕ್ಕೆಯುಂಟಾಗಿ ಅದರ ಅಸ್ತಿ ತ್ವಕ್ಕೇ ಅಪಾಯ ಒದಗಿದ್ದರಿಂದ ಹಿಂದೂ ದೇವಾಲಯಗಳು ಎಲ್ಲೋ ಅಲ್ಲೊಂದು ಇಲ್ಲೊಂದು ಮುಂದೆ ಬಂದ ರಾಜರಿಂದ ಕಟ್ಟಲ್ಪಟ್ಟವು. ಅವೆಲ್ಲವೂ ದ್ರಾವಿಡ ಶೈಲಿಯಲ್ಲಿಯೇ ಇವೆ.

ದ್ರಾವಿಡ ದೇವಸ್ಥಾನಗಳಲ್ಲಿ ಪ್ರಾಯಶಃ ಒಂದೇ ಗರ್ಭಗುಡಿ, ಒಂದೇ ಪ್ರಧಾನದೇವತೆ, ಒಂದೇ ಮೂಲ ವಿಗ್ರಹ. ತಿಪಟೂರು ತಾಲ್ಲೂಕಿನ ನೊಣವಿನ ಕೆರೆಯಲ್ಲಿ ಮಾತ್ರ ಮೂರು ಗರ್ಭಗುಡಿಗಳನ್ನುಳ್ಳ ದೇವಸ್ಥಾನವಿದೆ. ದ್ರಾವಿಡ ದೇವಾಲಯಗಳೆಲ್ಲವೂ ಕಗ್ಗಲ್ಲಿನಿಂದಲೇ ಕಟ್ಟಲ್ಪಟ್ಟಿರುವುವು. ಈ ಕಲ್ಲು ಬಹು ಗಟ್ಟಿಯಾಗಿದ್ದು ನಾಜೂಕಾದ ಕೆತ್ತನೆಯ ಕೆಲಸಕ್ಕೆ ಅರ್ಹವಾದುದಲ್ಲ.

ದ್ರಾವಿಡ ದೇವಸ್ಥಾನದ ತಳವಿನ್ಯಾಸವು ಯಾವಾಗಲೂ ಚತುರಸ್ರಾಕಾರ ವಾಗಿರುತ್ತದೆ. ವಿಮಾನವು ತಳದಲ್ಲಿ ಚತುರಸ್ರಾಕಾರವಾಗಿದ್ದು ಅಂತಸ್ತು ಗಳಾಗಿ ಮೇಲಕ್ಕೆ ಹೋಗುತ್ತಾ ಚಿಕ್ಕದಾಗಿ ತುದಿಯಲ್ಲಿ ಸ್ತೂಪಾಕಾರವಾಗಿ ಯಾಗಲಿ ಪೀಪಾಯಿಯ ಆಕಾರವಾಗಿಯಾಗಲಿ ಇರುತ್ತದೆ. ಕೆಲವು ಕಡೆ ಗರ್ಭ ಗುಡಿಯ ಮೇಲಿನ ಗೋಪುರದಲ್ಲಿ ಗೂಡುಗಳನ್ನು ಮಾಡಿ ಅವುಗಳಲ್ಲಿ ದೇವ ದೇವಿಯರ ಮೂರ್ತಿಗಳನ್ನು ಇಟ್ಟಿರುತ್ತಾರೆ. ಲೋವೆ ಕಲ್ಲು ದ್ವಿಭಂಗಿಯಾ ಕಾರದಲ್ಲಿ ದೊಡ್ಡದಾಗಿದ್ದು ಸುಮಾರು ಎರಡು ಅಡಿಗಿಂತ ಹೆಚ್ಚಾಗಿ ಮುಂದಕ್ಕೆ ಚಾಚಿಕೊಂಡಿರುತ್ತದೆ. ಅಲಂಕಾರ ರಚನೆಯಲ್ಲಿ ವ್ಯಾಳಿಗಳು, ಸಿಂಹಗಳು, ಹಂಸಗಳು, ಕುಬ್ಜಾವತಾರದ ಗಣಗಳು ವಿಶೇಷವಾಗಿ ಉಪಯೋಗಿಸಲ್ಪಟ್ಟಿರು ತ್ತವೆ. ಕಂಬಗಳ ಮೇಲೆ ಚಿತ್ರವಿಚಿತ್ರವಾದ ಬೋದಿಗೆಗಳೂ, ಒಟ್ಟೊಟ್ಟಿಗೆ ಅನೇಕ

ಕಂಬಗಳನ್ನು ಕೂಡಿಸಿ ನಿಲ್ಲಿಸುವುದೂ, ಒಂದೇ ಕಲ್ಲಿನಲ್ಲಿ ದೊಡ್ಡ ಕಂಬದ ಸುತ್ತಲೂ ಸಣ್ಣ ಸಣ್ಣ ಕಂಬಗಳನ್ನು ಕೆತ್ತಿರುವುದೂ ಈ ಶೈಲಿಯ ವಿಶೇಷ ವೈಲಕ್ಷಣ್ಯಗಳಾಗಿವೆ.

ಬಾದಾಮಿಯ ಮಾಲೆಗಿತ್ತಿ ದೇವಾಲಯವು ಅತ್ಯಂತ ಪ್ರಾಚೀನವಾದದ್ದು. ಚಿಕ್ಕಬಳ್ಳಾಪುರದ ತಾಲ್ಲೂಕು ನಂದಿಗ್ರಾಮದಲ್ಲಿರುವ ಭೋಗ ನಂದೀಶ್ವರ ದೇವಾಲಯವು ಬಹು ಸೊಗಸಾದದ್ದು. ಮುಳಬಾಗಿಲು ತಾಲ್ಲೂಕು ಕುರುಡುಮಲೆ ಗ್ರಾಮದಲ್ಲಿರುವ ಸೋಮೇಶ್ವರ ದೇವಾಲಯವು ಚಿಕ್ಕದಾದರೂ ಅತ್ಯಂತ ಸುಂದರವಾದದ್ದು.

ಕರ್ನಾಟಕ ಶೈಲಿ

ಈ ಶೈಲಿಯು ಪ್ರಾಯಶಃ ಎಂಟನೆಯ ಶತಮಾನದಲ್ಲಿ ಹುಟ್ಟಿತೆಂದು ಹೇಳಬಹುದು. ಇದು ಬಹು ಬೇಗನೆ ಒಂದು ತೀರದಿಂದ ಮತ್ತೊಂದು ತೀರದ ವರೆಗೆ ಕರ್ನಾಟಕ ರಾಜ್ಯದಲ್ಲೆಲ್ಲ ವ್ಯಾಪಿಸಿಕೊಂಡಿತೆಂದು ತೋರುತ್ತದೆ. ಇಷ್ಟು ಬೇಗ ಪ್ರಾಮುಖ್ಯತೆಗೆ ಬರುವುದಕ್ಕೆ ಕರ್ನಾಟಕ ರಾಜರ ಪರಾಕ್ರಮವೇ ಕಾರಣ ವೆಂದು ಹೇಳಬೇಕು. ರಾಜರುಗಳು ಒಬ್ಬರಾದ ಮೇಲೊಬ್ಬರು ದೇಶದಲ್ಲೆಲ್ಲ ದಂಡೆತ್ತಿ ಹೋಗಿ ಶತೃಗಳನ್ನು ಗೆದ್ದು ಪರರಾಜ್ಯಗಳನ್ನು ವಶಮಾಡಿಕೊಂಡು ಆ ದಿಗ್ವಿಜಯದ ಕುರುಹಾಗಿ ಹೋದ ಕಡೆಯಲ್ಲೆಲ್ಲ ಸುಂದರವಾದ ದೇವಾಲಯ ಗಳನ್ನು ಕಟ್ಟಿಸಿ ದತ್ತಿಗಳನ್ನು ಬಿಡುತ್ತಾ ಬಂದರು. ಮತ್ತು ಕರ್ನಾಟಕ ರಾಜರ ಕೃಪಾಪೋಷಿತರಾದ ಒಂದು ರೂವಾರಿಗಳ ತಂಡವು ಊರಿಂದ ಊರಿಗೆ ಹೋಗಿ ದೇವಾಲಯಗಳನ್ನು ಒಂದೇ ತೆರನಾದ ಶೈಲಿಯಲ್ಲಿ ಕಟ್ಟುತ್ತಾ ಬಂದರು.

ಕರ್ನಾಟಕ ರಾಜ್ಯವನ್ನು ಕ್ರಿ. ಶ. ೫ ನೆಯ ಶತಮಾನದಲ್ಲಿ ಆಳುತ್ತಿದ್ದ ಕದಂಬ ಅರಸರು ಕಟ್ಟಿಸಿದ ದೇವಾಲಯಗಳೇ ಅತ್ಯಂತ ಪುರಾತನವಾದುವೆಂದು ಹೇಳಬಹುದು. ತಾಳಗುಂದದಲ್ಲಿರುವ ಪ್ರಣವೇಶ್ವರ ದೇವಾಲಯವು ಹಲಸಿ ಯಲ್ಲಿರುವ ಜೈನಬಸದಿ ಮತ್ತು ಕಲ್ಲೇಶ್ವರ ದೇವಾಲಯಗಳು ಅತ್ಯಂತ ಪುರಾತನ ವಾದುವು. ಆದಾಗ್ಯೂ ಚಾಳುಕ್ಯ ರಾಜರು ತಲೆ ಎತ್ತಿದ ಮೇಲೆಯೇ ವಾಸ್ತು ಶಿಲ್ಪದ ಪ್ರಗತಿಯನ್ನು ನಾವು ಕಾಣುವುದು.

ಕೃಷ್ಣರಾಜಪೇಟೆ ತಾಲ್ಲೂಕು ತೊಣಚಿಯಲ್ಲಿರುವ ಬಸವೇಶ್ವರ ದೇವ ಸ್ಥಾನವೂ, ಮೂಡಗೆರೆ ತಾಲ್ಲೂಕು ಅಂಗಡಿಯಲ್ಲಿರುವ ಮಲ್ಲಿನಾಥ ಬಸ್ತಿಯೂ

ಈ ರೀತಿಯಲ್ಲಿ ಕಟ್ಟಿದ ಪ್ರಾಚೀನತಮವಾದ ಕಟ್ಟಡಗಳು. ಶಿಕಾರಿಪುರದ ತಾಲ್ಲೂಕು ಬೆಳಗಾವಿಯಲ್ಲಿರುವ ಕೇದಾರೇಶ್ವರ ದೇವಸ್ಥಾನವು ಇವುಗಳನ್ನು ಕಟ್ಟಿದ ಮೇಲೆ ಕಟ್ಟಿದ್ದಾದರೂ ಶಿಲ್ಪದೃಷ್ಟಿಯಿಂದ ಇದಕ್ಕೆ ಹೆಚ್ಚು ಪ್ರಾಶಸ್ತ್ಯವಿದೆ. ಕುಪ್ಪತ್ತೂರಿನಲ್ಲಿರುವ ದೇವಸ್ಥಾನಗಳು ಒಂದಾನೊಂದು ಕಾಲದಲ್ಲಿ ಬಹು ಶ್ಲಾಘ್ಯವಾದ ಕಟ್ಟಡಗಳಾಗಿದ್ದುವೆಂದು ಊಹಿಸಬಹುದಾಗಿದೆ. ಬೇಲೂರಿನ ಚನ್ನಕೇಶವ ದೇವಾಲಯ, ಹಳೇಬೀಡಿನ ಹೊಯಿಸಳೇಶ್ವರ, ಕೇದಾರೇಶ್ವರ ದೇವಾಲಯಗಳು, ನುಗ್ಗೆಹಳ್ಳಿಯ ಮತ್ತು ವಿಘ್ನಸಂತೆಯ ಲಕ್ಷ್ಮೀನರಸಿಂಹ ದೇವಾಲಯಗಳು, ಹೊಸಹೊಳಲಿನಲ್ಲಿರುವ ಲಕ್ಷ್ಮೀನಾರಾಯಣ ದೇವಸ್ಥಾನವು, ಹರಿಹರದಲ್ಲಿರುವ ಹರಿಹರೇಶ್ವರ ದೇವಸ್ಥಾನ, ಲಕ್ಕುಂಡಿಯ, ಗದುಗಿನ ದೇವಾಲಯಗಳು ಈ ರೀತಿಯ ಕಟ್ಟಡಗಳಲ್ಲಿ ಮುಖ್ಯವಾದವುಗಳು.

ಈ ದೇವಾಲಯಗಳಲ್ಲಿ ಪ್ರಾಯಶಃ ಈ ಕೆಳಗೆ ಕಂಡ ಭಾಗಗಳಿರುತ್ತವೆ.

೧. ವಿಮಾನ : ಇದರಲ್ಲಿ ಗರ್ಭಗುಡಿ, ಅದರ ಮುಂದೆ ಸುಕನಾಸಿ ಎಂಬ ಎರಡು ಒಳಭಾಗಗಳು ಇರುತ್ತವೆ. ಇದರ ತಳ ವಿನ್ಯಾಸವು ಬಹು ಮೂಲೆಗಳನ್ನುಳ್ಳದ್ದಾಗಿಯೋ ಅಷ್ಟಭದ್ರಾಕಾರ ನಕ್ಷತ್ರಾಕಾರವಾಗಿಯೋ ಇರುತ್ತದೆ.

೨. ನವರಂಗ : ಇದು ಸುಕನಾಸಿಯ ಮುಂಭಾಗದಲ್ಲಿನ ಒಂಭತ್ತು ಅಂಕಣದ ಹಜಾರ.

೩. ಮುಖಮಂಟಪ: ಇದು ನವರಂಗದ ಮುಂಭಾಗದಲ್ಲಿ ಅದಕ್ಕೆ ಸೇರಿದ ಹಾಗೆ ಇರತಕ್ಕ ಮಂಟಪ. ಇದು ಚೌಕವಾಗಿಯಾಗಲಿ ಬಹುಶಃ ಚತುರಸ್ರಾಕಾರವಾಗಿಯಾಗಲಿ ಇರುತ್ತದೆ.

೪. ದ್ವಾರಮಂಟಪ : ಮುಖಮಂಟಪಗಳಿಲ್ಲದ ಸ್ಥಳಗಳಲ್ಲಿ ನವರಂಗದ ಮುಂಭಾಗದಲ್ಲಿ ಇರತಕ್ಕ ಒಂದು ಅಂಕಣ ಅಗಲವುಳ್ಳ ಮಂಟಪ. ಇದು ಸಾಮಾನ್ಯವಾಗಿ ಚೌಕವಾಗಿರುತ್ತದೆ. ಆದರೆ ಅರಸೀಕೆರೆಯ ಈಶ್ವರ ದೇವಾಲಯದ ಮುಂದಿರುವ ಮಂಟಪ ಎಂಟು ಮುಖವುಳ್ಳದ್ದಾಗಿದೆ.

೫. ಸಭಾಮಂಟಪ: ಇದು ಕೆಲವು ದೇವಸ್ಥಾನಗಳಲ್ಲಿ ಮಾತ್ರ ಮುಖಮಂಟಪದ ಮುಂದೆ ಅದಕ್ಕೆ ಸೇರಿದ ಹಾಗೆಯೇ ಇರುತ್ತದೆ. ಆದರೆ ಮುಖಮಂಟಪಕ್ಕಿಂತಲೂ ಹೆಚ್ಚು ವಿಸ್ತಾರವುಳ್ಳದ್ದು.

೬. ಶಿಖರ: ಶಿಖರವು ದ್ರಾವಿಡ ದೇವಾಲಯದಷ್ಟು ಎತ್ತರವಾಗಿರುವುದಿಲ್ಲ. ಮತ್ತು ಅವುಗಳ ಹಾಗೆ ಮೆಟ್ಟಲು ಮೆಟ್ಟಲಾಗಿರದೆ ಸೂಚ್ಯಾಕಾರದಲ್ಲಿ ತಳವಿನ್ಯಾಸದ ಕ್ರಮವನ್ನೇ ಅನುಸರಿಸಿಕೊಂಡು ಮೇಲಕ್ಕೆ ಹೋಗುತ್ತದೆ.

ಈ ದೇವಸ್ಥಾನಗಳಲ್ಲೆಲ್ಲ ಮೇಲೆ ಹೇಳಿದ ಸಾಮಾನ್ಯ ಲಕ್ಷಣಗಳಿದ್ದರೂ ಅವುಗಳ ರಚನೆಯಲ್ಲಿ ವೈವಿಧ್ಯವಿರುತ್ತದೆ. ಈ ರೀತಿಯ ಕಟ್ಟಡಗಳು ಪ್ರಾಯಶಃ ಮೂರು ಗರ್ಭಗುಡಿಗಳುಳ್ಳ "ತ್ರಿಕೂಟಾಚಲವೇ" ಆಗಿರುವುವು. ಆದರೆ ಬೇಲೂರಿನ ಕೇಶವ ದೇವಸ್ಥಾನದಲ್ಲಿ ಒಂದೇ ಗರ್ಭಗುಡಿ, ಹಳೇಬೀಡಿನ ಹೊಯಿಸಳೇಶ್ವರ ದೇವಸ್ಥಾನದಲ್ಲಿ ಎರಡು ಗರ್ಭಗುಡಿಗಳು, ದೊಡ್ಡಗದ್ದವಳ್ಳಿಯಲ್ಲಿ ನಾಲ್ಕು ಗರ್ಭಗುಡಿಗಳೂ, ಕೃಷ್ಣರಾಜಪೇಟೆ ಗೋವಿಂದನ ಹಳ್ಳಿಯಲ್ಲಿ ಐದು ಗರ್ಭಗುಡಿಗಳೂ ಇವೆ.

ಈ ದೇವಾಲಯಗಳೆಲ್ಲವೂ ಬಳಪದ ಕಲ್ಲಿನಿಂದ ಮಾಡಿದವುಗಳು.* ಈ ಜಾತಿಯ ಕಲ್ಲು ಭೂಮಿಯಿಂದ ತೆಗೆದಾಗ ಮೊದಲು ಮೃದುವಾಗಿದ್ದು ಆಮೇಲೆ ಗಾಳಿ ಬೆಳಕುಗಳು ತಗಲಿ ಕಠಿಣವಾಗುವುದೆಂದು ಹೇಳುತ್ತಾರೆ. ಇದು ಹಸುರು ಮಿಶ್ರವಾದ ಕಪ್ಪುಬಣ್ಣವುಳ್ಳದ್ದಾಗಿಯೂ ಕೆಲವೆಡೆಗಳಲ್ಲಿ ಕಪಿಲವರ್ಣವುಳ್ಳದ್ದಾಗಿಯೂ ಕಣ್ಣಿಗೆ ಬಹು ಮನೋಹರವಾಗಿಯೂ, ಬಹು ನುಣುಪಾಗುವಂತೆ ನಯಮಾಡುವುದಕ್ಕೆ ಸಾಧ್ಯವಾದದ್ದಾಗಿಯೂ ಇರುತ್ತದೆ. ಇದು ಎಂಥ ಮಳೆಗಾಳಿಗಳ ಹೊಡೆತಕ್ಕೆ ಎಷ್ಟುಕಾಲ ಸಿಕ್ಕಿದರೂ ಸ್ವಲ್ಪವೂ ಸವೆಯದೆ ಗಟ್ಟಿಯಾಗಿ ನಿಲ್ಲುವಂತೆ ತೋರುತ್ತದೆ. ಏಕೆಂದರೆ ಈ ದೇವಸ್ಥಾನಗಳೆಲ್ಲವೂ ಏಳೆಂಟು ಶತಮಾನಗಳಿಂದ ಮಳೆಗಾಳಿಗಳಿಗೆ ಗುರಿಯಾಗಿ ಅರಕ್ಷಕವಾದ ಸ್ಥಿತಿಯಲ್ಲಿದ್ದರೂ

---

* ನಂಜನಗೂಡು ತಾಲ್ಲೂಕು ಹೆಡತಲೆಯಲ್ಲಿ ಮಾತ್ರ ಲಕ್ಷ್ಮೀಕಾಂತ ದೇವಾಲಯವು ಪೂರ್ತಿ ಕಗ್ಗಲ್ಲಿನಲ್ಲಿಯೇ ಕಟ್ಟಲ್ಪಟ್ಟಿರುತ್ತದೆ.

ಅವುಗಳ ಸಣ್ಣ ಸಣ್ಣ ಚಿತ್ರಕೆಲಸಗಳೂ, ಒಂದೊಂದು ಗೀಟೂ ಒಂದೊಂದು ಮಣಿಯೂ ಅಚ್ಚಳಿಯದೆ ನಿನ್ನೆ ಮೊನ್ನೆ ಮಾಡಿದವುಗಳಂತೆ ಕಂಗೊಳಿಸುತ್ತಿವೆ. ಈ ರೀತಿಯ ಕಟ್ಟಡಗಳನ್ನು ಬೇರೆಯ ವಿಧವಾದ ಕಲ್ಲಿನಿಂದ ಕಟ್ಟಿರುವುದು ಅಪ ರೂಪ. ನಂಜನಗೂಡು ತಾಲ್ಲೂಕು ಸುತ್ತೂರಿನಲ್ಲಿರುವ ಸೋಮೇಶ್ವರ ದೇವ ಸ್ಥಾನದ ಒಂದು ಭಾಗ ಮಾತ್ರ ಕಗ್ಗಲ್ಲಿನಿಂದ ಮಾಡಿದ್ದಾಗಿದೆ.

ಕರ್ನಾಟಕ ಶೈಲಿಯ ದೇವಾಲಯಗಳ ವಿನ್ಯಾಸವು ಸಾಮಾನ್ಯವಾಗಿ ಬಹು ಕೋಣಾಕಾರವಾಗಿ ಎಂದರೆ ನಕ್ಷತ್ರಾಕಾರವಾಗಿರುತ್ತದೆ. ನಕ್ಷತ್ರಾಕಾರ ವನ್ನು ಪಡೆಯುವ ಮಾರ್ಗವನ್ನು ಈ ಕೆಳಗಿನ ನಕ್ಷೆಯಿಂದ ತಿಳಿದುಕೊಳ್ಳ ಬಹುದು. ಇವು ಯಾವಾಗಲೂ ತಲವಿನ್ಯಾಸವನ್ನು ಅನುಸರಿಸಿಕೊಂಡು ಅದೇ ಆಕಾರದಲ್ಲಿ ಎತ್ತರವಾಗಿ ಜಗಲಿಯಂತೆ ನಿರ್ಮಿಸಿರುವ ಪೀಠದ ಮೇಲೆ ಕಟ್ಟಲ್ಪಟ್ಟಿ ರುತ್ತವೆ. ಈ ಪೀಠವಿರುವುದರಿಂದ ಇದರ ಮೇಲಿರುವ ಕಟ್ಟಡವು ಅಚಲವಾಗಿ ಘನತೆ ಗಾಂಭೀರ್ಯಗಳೊಡನೆ ಕುಳಿತುಕೊಂಡಿರುವಂತೆ ಭಾಸವಾಗುವುದು. ಗೋಪುರವು ಸೂಚ್ಯಾಕಾರವಾಗಿರುತ್ತದೆ. ಆದರೆ ಇದು ಕೆಳಗಿರುವ ಗೋಡೆಗಳ ಅವಯವ ಸನ್ನಿವೇಶದ ಆಕಾರವನ್ನು ಅನುಸರಿಸಿಕೊಂಡೇ ಮೇಲಕ್ಕೆ ಸಣ್ಣದಾಗಿ ಹೋಗುತ್ತದೆ. ಕಂಬಗಳು ಸಾಮಾನ್ಯವಾಗಿ ದುಂಡು. ಇವು ನೋಡುವು ದಕ್ಕೆ ಒಂದರಂತೆ ಮತ್ತೊಂದು ಇರುವಂತೆ ಕಂಡರೂ ಇವುಗಳ ಮಾದರಿ ಯಲ್ಲಿಯೂ ನಕಾಸೆಯಲ್ಲಿಯೂ ಬೇಕಾದಷ್ಟು ವೈವಿಧ್ಯವಿರುತ್ತದೆ. ಇವು ಚಕ್ರಕ್ಕೆ ಕೊಟ್ಟು ಕಡೆದು ಮಾಡಿರುವಂತೆಯೂ ನಯಮಾಡಲ್ಪಟ್ಟು ನುಣುಪಾಗಿ ಹೊಳೆಯುತ್ತಲೂ ಇರುತ್ತವೆ. ಕರ್ನಾಟಕ ರೀತಿಯ ಶಿಲ್ಪಿಗಳು ಎರಡು ತರದ ಸೂರುಗಲ್ಲನ್ನು (ಲೋವೆಕಲ್ಲನ್ನು) ಉಪಯೋಗಿಸಿರುತ್ತಾರೆ. ದ್ರಾವಿಡ ಪದ್ಧ ತಿಯ ದ್ವಿಭಂಗಿಯಾಕಾರದ್ದು ಒಂದು, ಸಣ್ಣ ತರಹದ ಇಳಿಜಾರಾದದ್ದು ಇನ್ನೊಂದು. ಮುಖಮಂಟಪ, ಸಭಾಮಂಟಪಗಳಿಗೆ ದ್ವಿಭಂಗಿ ಆಕಾರದ ಲೋವೆಕಲ್ಲಿರುತ್ತದೆ. ಗಟ್ಟಿ ಗೋಡೆಗಳ ಮೇಲೆ ಸಣ್ಣ ಲೋವೆಕಲ್ಲನ್ನು ಇಟ್ಟಿರು ತ್ತಾರೆ. ಶಿಲ್ಪಿಗಳು ಅನೇಕ ವೇಳೆ ಬಾಗಿಲುವಾಡಗಳ ಮೇಲೆ ತಮ್ಮ ಕೌಶಲ ಸಾಮರ್ಥ್ಯಗಳನ್ನೆಲ್ಲ ವೆಚ್ಚಮಾಡಿದ್ದಾರೆ. ಬೆಳಗಾಂವ, ಬಂಕಾಪುರ, ಗದಗು ಮತ್ತು ಲಕ್ಕುಂಡಿಯ ದೇವಾಲಯಗಳ ಬಾಗಿಲುವಾಡಗಳು ಮತ್ತು ಬೇಲೂರು ಕೇಶವದೇವಾಲಯದ ಸುಕನಾಸಿಯ ಗೋಡೆ ಮತ್ತು ಬಾಗಿಲುವಾಡ ಇದಕ್ಕೆ

ಒಳ್ಳೆಯ ಉದಾಹರಣೆಗಳು. ಶಿಲ್ಪಿಗಳು ಕೊರೆದು ಮಾಡಿದ ರಂಧ್ರಗಳುಳ್ಳ ಜಾಲಂದ್ರಗಳನ್ನು ಬಹು ಅಂದವಾದ ರೀತಿಯಲ್ಲಿ ಉಪಯೋಗಿಸಿರುತ್ತಾರೆ. ಇವುಗಳು ಸುಕನಾಸಿಯ ದ್ವಾರದ ಎರಡು ಪಕ್ಕಗಳಲ್ಲಿಯೂ ಮುಖಮಂಟಪದ ಅಥವಾ ನವರಂಗದ ಕಂಬಗಳ ಮಧ್ಯ ಪ್ರದೇಶಗಳಲ್ಲಿಯೂ ಕಂಡುಬರುತ್ತವೆ. ಬೇಲೂರು ದೇವಾಲಯದ ನವರಂಗದ ಗೋಡೆಯಲ್ಲಿರುವ ಮತ್ತು ಒಂದನಿಕೆಯ ಪಾಳು ಸೋಮೇಶ್ವರದಲ್ಲಿರುವ ಬೆಳಗಾಂವೆಯ ತ್ರಿಪುರಾಂತೇಶ್ವರ ಮತ್ತು ಉನಕಲ್‌ನಲ್ಲಿರುವ ದೇವಾಲಯದ ಜಾಲಂಧ್ರಗಳು ಉತ್ತಮ ಉದಾಹರಣೆಗಳು.

ಗೋಡೆಗಳ ಹೊರಭಾಗದಲ್ಲಿ ಏಕರೂಪತೆಯನ್ನು ಹೋಗಲಾಡಿಸುವುದಕ್ಕಾಗಿ ಆಯಾ ಭಾಗಗಳ ಅಕ್ಷ ಪ್ರದೇಶದಲ್ಲಿ (axial lines) ಸೊಗಸಾಗಿ ಕೆತ್ತಿ ಕೆಲಸಮಾಡಿದ ಗೂಡುಗಳು ಕಟ್ಟಲ್ಪಟ್ಟಿರುತ್ತವೆ. ಬೇಲೂರು ಕೇಶವ ದೇವಾಲಯ, ಇಟ್ಟಗಿಯ ಮಹದೇವ ದೇವಾಲಯದ ಹೊರಮುಖದಲ್ಲಿ ಇದನ್ನು ನೋಡಬಹುದು. ಇವು ಚಿಕ್ಕ ಚಿಕ್ಕ ದೇವಸ್ಥಾನಗಳಂತೆಯೇ ಸಣ್ಣ ಸಣ್ಣ ಕಂಬಗಳು, ಗೋಪುರಗಳಿಂದಲೂ ಉಪದೇವತಾ ವಿಗ್ರಹಗಳಿಂದಲೂ ಕೂಡಿರುತ್ತವೆ. ಕೆಲವು ದೇವಸ್ಥಾನಗಳಲ್ಲಿ ಇಂತಹ ಗೂಡುಗಳು ದೇವಸ್ಥಾನದ ಒಳಭಾಗದಲ್ಲಿಯೂ ಇರುವುದುಂಟು. ಬೇಲೂರು ಕಪ್ಪೆಚನ್ನಿಗರಾಯನ ದೇವಾಲಯದ ನವರಂಗದಲ್ಲಿ ಇಂತಹ ಗೂಡುಗಳನ್ನು ನೋಡಬಹುದು. ಕರ್ನಾಟಕ ಶೈಲಿಯ ದೇವಾಲಯಗಳು ವಿಗ್ರಹ ಭಾಂಡಾಗಾರಗಳಂತಿದ್ದು ಮೂರ್ತಿವಿದ್ಯೆಯನ್ನು ಕಲಿಯುವವರಿಗೆ ಅಮೂಲ್ಯವಾದ ಸಂಗತಿಗಳನ್ನು ಒದಗಿಸಿಕೊಡುತ್ತವೆ. ಅನೇಕ ದೇವದೇವಿಯರ ವಿಗ್ರಹಗಳು ಗೋಡೆಗಳ ಹೊರಮುಖದ ಮೇಲೆ ಒಂದೊಂದು ಸಣ್ಣ ಸಣ್ಣ ಅಂಶದಲ್ಲಿಯೂ ಶಿಲ್ಪ ಶಾಸ್ತ್ರನಿಯಮವನ್ನು ಚಾಚೂ ತಪ್ಪದಂತೆ ಅನುಸರಿಸಿ ಕೆತ್ತಲ್ಪಟ್ಟಿರುತ್ತವೆ.

ಈ ರೀತಿಯ ಕಟ್ಟಡಗಳಲ್ಲಿ ಆಶ್ಚರ್ಯದಿಂದ ಬೆರಗುಮಾಡುವ ಭಾಗವೆಂದರೆ ಅವುಗಳ ಭುವನೇಶ್ವರಿಗಳು. ಇವು ದ್ರಾವಿಡ ಶೈಲಿಯ ಕಟ್ಟಡಗಳಲ್ಲಿರುವುದಿಲ್ಲ. ಇವುಗಳ ವಿನ್ಯಾಸ ಆಕಾರ ನಕ್ಷೆ ನಕಾಸುಗಳಲ್ಲಿ ಬೇಕಾದಷ್ಟು ವೈವಿಧ್ಯವು ಕಂಡುಬರುತ್ತದೆ. ಶಿಲ್ಪಿಯ ಸಾಮರ್ಥ್ಯವೆಲ್ಲ ಇಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸಣ್ಣ ಸಣ್ಣ ಬೆರಳನ್ನು ಕೂಡ ಹಾಕಲು ಬರದಂತಿರುವ ರಂಧ್ರಗಳಲ್ಲಿ ನಾಜೂ

ಕಾಗಿ ಕೊರೆದಿರುವುದನ್ನು ನೋಡಿದರೆ ಅವರುಗಳು ಉಪಯೋಗಿಸುತ್ತಿದ್ದ ಸಲಕರಣೆಗಳು ಎಂಥವಿರಬೇಕೆನ್ನುವುದನ್ನು ಊಹಿಸಲು ಸಾಧ್ಯವಿಲ್ಲ. ಈ ಭುವನೇಶ್ವರಿಗಳಲ್ಲಿ ರೇಖಾಗಣಿತ ನೈಪುಣ್ಯವನ್ನು ಸೂಚಿಸುವ ವಿಚಿತ್ರತರವಾದ ಆಕಾರಗಳುಳ್ಳ ಕೆತ್ತನೆಯ ಕೆಲಸಗಳೂ ಬಹು ಸೂಕ್ಷ್ಮವಾದ ನಕಾಸೆ ಕೆಲಸ ಮಾಡಿದ ಸೊಗಸಾದ ಮೂರ್ತಿಗಳೂ ಇರುತ್ತವೆ.

ಹಾನಗಲ್ಲಿನಲ್ಲಿರುವ ತಾರಕೇಶ್ವರ ದೇವಾಲಯದ ಮುಂದಿನ ಮಂಟಪದಲ್ಲಿರುವ ಭುವನೇಶ್ವರಿಯು ಅತ್ಯಂತ ದೊಡ್ಡದಾದದ್ದು ಮತ್ತು ಆಶ್ಚರ್ಯವನ್ನುಂಟುಮಾಡುವಂಥಾದ್ದು. ಇದರ ವ್ಯಾಸವು ೨೧ ಅಡಿಗಳು. ಎಂಟು ಮೂಲೆಯ ಆಕಾರವುಳ್ಳ ಅಂಕಣದ ಮೇಲೆ ನಿಂತಿದೆ. ೧೬ ಕಂಬಗಳು ಇದನ್ನು ಹೊತ್ತುಕೊಂಡಿವೆ. ಭುವನೇಶ್ವರಿಯು ಒಂಬತ್ತು ಅಡಿ ಆಳವಾಗಿದೆ. ಅದರಲ್ಲಿ ಐದು ಸಾಲು ಚಿತ್ರಗಳಿವೆ. ಮಧ್ಯದಲ್ಲಿ ಮೇಲಿನಿಂದ ಐದು ಅಡಿಯಷ್ಟು ಕೆಳಕ್ಕೆ ಸೊಗಸಾಗಿ ಕೆತ್ತಿದ ಕಮಲವು ಇಳಿಬಿದ್ದಿದೆ. ಇದರ ತರುವಾಯ ಬೇಲೂರಿನಲ್ಲಿರುವ ಭುವನೇಶ್ವರಿಯು ಸುಂದರವಾದದ್ದು.

ಈ ದೇವಾಲಯಗಳಿಗೆ ಯಾವಾಗಲೂ ಎರಡು ಚಾವಣಿಗಳು ಇರುತ್ತವೆ. ಭುವನೇಶ್ವರಿಯ ಕಲ್ಲುಗಳನ್ನು ಜೋಡಿಸಿ ಮಾಡಿರುವುದು ಒಂದು. ಅವು ನಾಜೂಕಾಗಿ ಕೆತ್ತಲ್ಪಟ್ಟಿರುವುದರಿಂದ ಅವುಗಳ ಮೇಲೆ ಭಾರವು ಬೀಳದಂತೆ ಕೆಳಗಿನ ಕಂಬಗಳ ತಲೆಯ ಮೇಲೆಯೇ ಸ್ಥೂಲವಾದ ಗಿಡ್ಡಕಂಬಗಳನ್ನು ನಿಲ್ಲಿಸಿ ಆ ಕಂಬಗಳ ಮೇಲೆ ಮತ್ತೊಂದು ಚಾವಣಿ ಇರುತ್ತದೆ. ಈ ಎರಡು ಚಾವಣಿಗಳ ಮಧ್ಯೆ ಇಕ್ಕಟ್ಟಾದ ಜಾಗವಿರುತ್ತದೆ. ಕೆಲವು ಕಡೆಗಳಲ್ಲಿ ಈ ಸ್ಥಳವನ್ನು ದೇವಸ್ಥಾನಕ್ಕೆ ಸಂಬಂಧಪಟ್ಟ ಪದಾರ್ಥಗಳನ್ನು ಇಟ್ಟುಕೊಳ್ಳುವುದಕ್ಕೆ ಉಪಯೋಗಿಸುತ್ತಾರೆ.

ಕೆಲವು ದೇವಾಲಯಗಳ ಗರ್ಭಗುಡಿಯ ಗೋಪುರದ ಮುಂಭಾಗದಲ್ಲಿ ಸುಕನಾಸಿಯ ಮೇಲುಗಡೆ ಒಬ್ಬ ಮನುಷ್ಯನು ಹುಲಿಯೊಂದನ್ನು ಇರಿಯುತ್ತಿರುವಂತೆ ಇರುವ ಒಂದು ವಿಗ್ರಹವನ್ನು ಇಟ್ಟಿರುತ್ತಾರೆ. ಇಂತಹ ಕಟ್ಟಡಗಳು ಹೊಯಿಸಳ ರಾಜರ ಕಾಲದಲ್ಲಿ ಕಟ್ಟಿದ್ದುವೆನ್ನುವುದಕ್ಕೆ ಇದೇ ಹೆಗ್ಗುರುತು.

ಎತ್ತರವಾದ ಜಗಲಿಯ ಮೇಲೆ ದೇವಸ್ಥಾನವು ನಿಂತಿರುತ್ತದೆ ಎಂದು ಹಿಂದೆಯೇ ಹೇಳಿದೆಯಷ್ಟೆ. ಈ ಜಗಲಿಯ ಮೇಲೆ ಆರಂಭವಾಗುವ ಗೋಡೆಗಳ ಹೊರಭಾಗದಲ್ಲಿ ಬುಡದಿಂದ ಸುಮಾರು ಐದು ಅಡಿಯವರೆಗೆ ಅಡ್ಡಡ್ಡವಾಗಿ ಒಂದರ ಮೇಲೆ ಒಂದರಂತೆ ಚಿತ್ರದ ಸಾಲುಗಳಿರುತ್ತವೆ. ಇವುಗಳಲ್ಲಿ ಒಂದು ಸಾಲಿನಲ್ಲಿ ಉದ್ದಕ್ಕೂ ಆನೆಗಳು, ಇನ್ನೊಂದರಲ್ಲಿ ಶಾರ್ದೂಲಗಳೂ, ಮತ್ತೊಂದರಲ್ಲಿ ರಾವುತರು, ಮಗದೊಂದರಲ್ಲಿ ಹಂಸಗಳು, ಇನ್ನೊಂದರಲ್ಲಿ ಪುರಾಣದ ಕತೆಗಳು ಇವು ದೇವಾಲಯದ ಸುತ್ತಲೂ ಕೆತ್ತಲ್ಪಟ್ಟಿರುತ್ತವೆ. ಇವುಗಳನ್ನು ಚಿತ್ರಪಟ್ಟಿಕೆಗಳೆಂದು ಕರೆಯಬಹುದು. ಇವು ಈ ಕಟ್ಟಡಗಳಲ್ಲಿರುವ ಒಂದು ವಿಶೇಷ. ಈ ಚಿತ್ರಪಟ್ಟಿಕೆಗಳು ಮುಖಮಂಟಪದ ಸುತ್ತಲೂ ಕಟ್ಟಲ್ಪಟ್ಟು ಅವಕ್ಕೆ ಹೊಂದಿಕೊಂಡು ಒಳಭಾಗದಲ್ಲಿ ಎತ್ತರವಾದ ಜಗಲಿ ಇರುತ್ತದೆ. ಈ ಜಗಲಿಗೆ ಒಂದು ಒರಗುಕಲ್ಲು ಇರುತ್ತದೆ. ಈ ಒರಗುಕಲ್ಲು ಕೊಂಚ ಓರೆಯಾಗಿ ಇಡಲ್ಪಟ್ಟಿರುತ್ತದೆ ಮತ್ತು ಅದರ ಹೊರಮುಖದಲ್ಲಿ ಮೇಲೂ ಕೆಳಗೂ ಚಿತ್ರಪಟ್ಟಿಕೆಗಳೂ, ಮಧ್ಯದಲ್ಲಿ ಜೋಡು ಕಂಬಗಳೂ, ಅವುಗಳ ಮಧ್ಯದಲ್ಲಿ ಚಿಕ್ಕ ವಿಗ್ರಹಗಳೂ ಕೆತ್ತಲ್ಪಟ್ಟಿರುತ್ತವೆ.

ತುಂಗಭದ್ರಾ ನದಿಯ ದಡದ ಮೇಲಿರುವ ಹರಲಹಳ್ಳಿಗೆ ಆರು ಮೈಲು ದೂರದಲ್ಲಿರುವ ಗಳಗನಾಥದಲ್ಲಿರುವ ದೇವಾಲಯದಲ್ಲಿ ದೇವಸ್ಥಾನದ ಬುಡವು ವಿಚಿತ್ರ ರೀತಿಯದಾಗಿದೆ. ಎಲ್ಲ ದೇವಸ್ಥಾನಗಳಲ್ಲಿರುವಂತೆ ಚಿತ್ರಪಟ್ಟಿಕೆಗಳು ಇರುವುದಿಲ್ಲ. ತಳದಿಂದಲೆ ಸಣ್ಣ ಸಣ್ಣ ಮೆಟ್ಟಲುಗಳಿಂದ ಸೂಚ್ಯಾಕಾರವಾಗಿ ಮೇಲಕ್ಕೆ ಎದ್ದಿದೆ ಮತ್ತು ಅದರ ಮೇಲೆ ಗೋಪುರವು ಕಟ್ಟಲ್ಪಟ್ಟಿದೆ. ಗೋಪುರವು ಮಾತ್ರ ವಿಚಿತ್ರವಾಗಿ ಎಲ್ಲ ಕರ್ನಾಟಕ ಗೋಪುರಗಳಂತೆಯೇ ಇದೆ.

ಈ ಶೈಲಿಯ ದೇವಾಲಯದ ತಲವಿನ್ಯಾಸವು ಬಹು ಕೋಣಾಕಾರವಾಗಿರುತ್ತದೆ ಎಂದು ಮೇಲೆ ಹೇಳಿದೆಯಷ್ಟೆ. ಆದರೆ ಕೆಲವು ಚತುರಸ್ರಾಕಾರದಲ್ಲಿಯೇ ಇವೆ. ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿರುವ ಹನ್ನೆರಡನೆಯ ಶತಮಾನಗಳ ದೇವಾಲಯಗಳು ಕೆಲವು ಚತುರಸ್ರಾಕಾರದಲ್ಲಿಯೇ ಇವೆ ಎಂದು ಚಾಳುಕ್ಯ ಶೈಲಿಯ ವಿಷಯದಲ್ಲಿ ಗ್ರಂಥವನ್ನು ಬರೆದಿರುವ ಎ. ರೀ (A. Rea) ಯವರು ತಿಳಿಸುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿರುವ ಬಾಗಲಿ, ನಲಗುಂದ, ಮಾಗಲ, ಕುರುವತ್ತಿ, ಹುವಿನ

ಹಡಗಲಿ, ಹಿರೆಹಡಗಲಿ, ಈ ಸ್ಥಳಗಳಲ್ಲಿರುವ ದೇವಸ್ಥಾನಗಳು ಉದಾಹರಣೆಗಳು. ಕೃಷ್ಣರಾಜಪೇಟೆ ತಾಲ್ಲೂಕಿನ ತೊಣಚಿ ದೇವಸ್ಥಾನವೂ ಚತುರಸ್ರಾಕಾರದಲ್ಲಿಯೇ ಇದೆ. ಈ ದೇವಸ್ಥಾನವು ಹತ್ತನೆಯ ಶತಮಾನದ್ದು. ಅದರ ಗೋಡೆಗಳು ಕೆತ್ತನೆಯೆ ಇಲ್ಲದೆಯೂ ಸುತ್ತಲೂ ಒಂದೇ ದಪ್ಪನಾಗಿಯೂ ಇವೆ. ಈಚಿನ ಶಿಲ್ಪಿಗಳು ಈ ಪ್ರಾಚೀನ ರೀತಿಯನ್ನು ಉತ್ತಮಗೊಳಿಸಬೇಕೆಂಬ ಇಚ್ಛೆಯಿಂದ ಗೋಡೆಗಳನ್ನು ಬಹುಮುಖವಾಗಿ ವಿಭಾಗಿಸಿಕೊಂಡು ಕೆಲವು ಕಡೆ ದಪ್ಪನಾಗಿದ್ದು ಮುಂದಕ್ಕೆ ಚಾಚಿಕೊಂಡಿರುವಂತೆಯೂ, ಕೆಲವು ಕಡೆ ಹಿಂದಕ್ಕೆ ಹೋಗಿರುವಂತೆಯೂ ಗೋಡೆಗಳನ್ನು ಕಟ್ಟಿದರು. ಇಂತಹ ಮುಖಗಳಲ್ಲಿ ಅಲ್ಲೊಂದು ಇಲ್ಲೊಂದು ಒಂಟಿ ಕಂಬದಮೇಲೆ ನಿಂತಿರುವ ಗೋಪುರವೂ, ಮಧ್ಯೆ ಮಧ್ಯೆ ಒಂದು ವಿಗ್ರಹವೂ ಕೆತ್ತಲ್ಪಟ್ಟವು. ಗೋಪುರವು ಕೂಡ ಗೋಡೆಗಳಿಗನುಸಾರವಾಗಿಯೇ ಹಿಂದಕ್ಕೂ ಮುಂದಕ್ಕೂ ತಳ್ಳಿಕೊಂಡಂತೆಯೂ ದಪ್ಪನಾದ ಪಟ್ಟಿಕೆಗಳಂತೆಯೂ ಇರುತ್ತಿತ್ತು. ಚಿಕ್ಕನಾಯಕನಹಳ್ಳಿ ತಾಲ್ಲೂಕು ಸೆಟ್ಟಿಗೆರೆಯಲ್ಲಿರುವ ಯೋಗಮಾಧವ ದೇವಾಲಯವು, ತುರುವೆಕೆರೆ ತಾಲ್ಲೂಕಿನ ತಂಡಗದಲ್ಲಿರುವ ಚನ್ನಕೇಶವ ದೇವಾಲಯವೂ ಇದಕ್ಕೆ ಉದಾಹರಣೆಗಳು. ಕೊನೆಗೆ ಹನ್ನೆರಡನೆಯ ಶತಮಾನ ಮುಗಿಯುವ ಹೊತ್ತಿಗೆ ಈ ಹೊರಮುಖಗಳಲ್ಲೆಲ್ಲಾ ವಿಗ್ರಹಗಳನ್ನು ಕೆತ್ತುವುದು ಸರ್ವಸಾಧಾರಣವಾದ ಸಂಪ್ರದಾಯವಾಗಿ ಹೋಯಿತು. ಪ್ರಾಸಾದ ನಿರ್ಮಾಣ ವಿದ್ಯೆಯು ಇಷ್ಟುಹೊತ್ತಿಗೆ ಪರಾಕಾಷ್ಠದೆಶೆಗೆ ಬಂದು ಕೌಶಲಪರಿಪೂರ್ಣತೆಯನ್ನು ವ್ಯಕ್ತಗೊಳಿಸುವಂತಾಯಿತು. ಪ್ರಸಿದ್ಧರಾದ ರೂವಾರಿಗಳು ಬೇಲೂರು, ಹಳೇಬೀಡು, ಸೋಮನಾಥಪುರ ಮುಂತಾದ ಅತ್ಯುತ್ತಮ ಕಟ್ಟಡಗಳಲ್ಲಿ ಭಾಗವಹಿಸಿದ್ದರೆಂದು ತಿಳಿಯಬರುತ್ತದೆ. ಮೂರ್ತಿಗಳನ್ನು ಕೆತ್ತಿರುವ ಕೆತ್ತನೆಯ ಕೆಲಸವನ್ನು ನೋಡಬೇಕೆಂದರೆ ಈ ಕಟ್ಟಡಗಳಲ್ಲಿ ನೋಡಬೇಕು. ಅಖಂಡ ಹಿಂದುಸ್ಥಾನದಲ್ಲೇ ಇಂಥ ಕೆಲಸವು ಮತ್ತೆಲ್ಲಿಯೂ ಕಾಣಬರುವುದಿಲ್ಲ. ಇ. ಬಿ. ಹಾವೆಲ್‌ರು (Havell) ಹಳೇಬೀಡು ದೇವಸ್ಥಾನವು ಶ್ಲಾಘ್ಯತಮವಾದದ್ದಲ್ಲವೆಂದು ಅಭಿಪ್ರಾಯ ಪಡುತ್ತಾರೆ. ಈ ದೇವಾಲಯದಲ್ಲಿ ಅಸಂಖ್ಯಾತವಾದ ವಿಗ್ರಹಗಳನ್ನು ಕೆತ್ತಿರುವುದನ್ನು ಇವರು ಒಪ್ಪದೆ ಈ ರೀತಿ ಬರೆದಿರಬಹುದೆಂದು ತೋರುತ್ತದೆ. ಆದರೆ ಶಿಲ್ಪವಿಚಾರ-ವಿಚಕ್ಷಣರಾದವರು ಈ ವಿಚಾರದಲ್ಲಿ ಭಿನ್ನಾಭಿಪ್ರಾಯವುಳ್ಳವರಾಗಿದ್ದಾರೆ. ಕೆಲವು ವಿಗ್ರಹಗಳಲ್ಲಿ ಪರಿಷ್ಕರಣ ನೈಪುಣ್ಯವೂ ಸಾಮಂಜಸ್ಯವೂ ಅಷ್ಟೇನೂ ಒಪ್ಪುವಂತಿಲ್ಲದಿರಬಹುದು. ಮತ್ತೆ ಕೆಲವು ಕಡೆಗಳಲ್ಲಿ

ಮಾಡಿದ ಕೆಲಸವು ಅಸಮಗ್ರವಾಗಿರಬಹುದು. ಆದರೆ ಒಟ್ಟಿನ ಮೇಲೆ ಅವುಗಳ ಸೂತ್ರಪಾತವೂ (Design) ವಿನ್ಯಾಸವೂ ಅವಯವ ಸಂಯೋಜನವೂ (Grouping) ಬಹು ರಮಣೀಯವಾಗಿರುತ್ತವೆ. ಅಡ್ಡಡ್ಡವಾಗಿಯೂ ಉದ್ದುದ್ದವಾಗಿಯೂ ಬರುವ ಏಣುಗಳು ಮತ್ತು ರೇಖೆಗಳು ಹೊಂದಿಕೆಯಾಗಿ ಸುಂದರವಾಗಿರುವಂತೆ ಸೇರಿಸಲ್ಪಟ್ಟಿರುವುದರಲ್ಲಿಯೂ, ಕಟ್ಟಡದ ಸ್ಥೂಲ ರೇಖಾಕಾರಗಳು ಸ್ಪಷ್ಟವಾಗಿ ಗೋಚರವಾಗುವಂತೆ ಮಾಡಿರುವ ಏರ್ಪಾಟಿನಲ್ಲಿಯೂ, ಬೆಳಕು ನೆರಳುಗಳು ಮನೋಹರವಾಗಿ ಕಟ್ಟಡದ ಮೇಲೆ ಬೀಳುವಂತೆ ಸಾಮಗ್ರಿಗಳನ್ನ ಜೋಡಿಸಿರುವ ನೈಪುಣ್ಯದಲ್ಲಿಯೂ ಇವು ಅನಾದೃಶ್ಯವಾಗಿವೆ.

ದೇವಸ್ಥಾನದ ಗೋಡೆಗಳಲ್ಲಿ ವಿಗ್ರಹಗಳನ್ನು ಕೆತ್ತುವ ಪದ್ಧತಿಯು ಬೇರೂರಿದನಂತರ ಶಿಲ್ಪಿಗಳು ಇರುವಷ್ಟು ಸ್ಥಲದಲ್ಲಿಯೇ ಗೋಡೆಗಳ ಮೇಲೆ ಆದಷ್ಟು ಹೆಚ್ಚು ಉದ್ದ ಜಾಗವನ್ನು ಪಡೆಯುವುದು ಹೇಗೆಂದು ಯೋಚಿಸಿ, ಆದಷ್ಟು ಮೂಲೆಗಳನ್ನು ಉಂಟುಮಾಡಿದರು. ಮೂಲೆಗಳು ಹೆಚ್ಚಿದಷ್ಟು ತಲವಿನ್ಯಾಸವು ದುಂಡಗೆ ಅಥವಾ ನಕ್ಷತ್ರಾಕಾರವಾಗುತ್ತ ಬಂತು. ಗೋಪುರದ ಆಕಾರವೂ ಹೀಗೆಯೇ ಬದಲಾವಣೆಯನ್ನು ಹೊಂದುತ್ತಾ ಬಂತು. ತಲವಿನ್ಯಾಸವು ಮೊದಲು ಶುದ್ಧ ಚತುರಸ್ರವಾಗಿದ್ದಾಗ ಗೋಪುರವು ಉಬ್ಬುತಗ್ಗುಗಳಿಲ್ಲದೆ ಸಮತಲವಾದ ಮೆಟ್ಟಿಲುಗಳಂತಿರುವ ಕಲ್ಲುಗಳಿಂದ ಮಾಡಲ್ಪಟ್ಟು ಸೂಚ್ಯಾಕಾರವಾಗಿ ಮೇಲಕ್ಕೆ ಹೋಗುತ್ತಿತ್ತು. ಆದರೆ ಏಕರೂಪತೆಯನ್ನು ಹೋಗಲಾಡಿಸುವದಕ್ಕೆ ಪ್ರತಿ ಮೆಟ್ಟಲಿನ ಎರಡು ತುದಿಗಳಲ್ಲಿಯೂ ಮಧ್ಯದಲ್ಲಿಯೂ ಚಚ್ಚೌಕವಾದ ಭಾಗಗಳನ್ನು ಕೆತ್ತಿರುತ್ತಿದ್ದರು. ತೊಣಚಿಯಲ್ಲಿರುವ ದೇವಸ್ಥಾನವೂ ಹಾಸನ ತಾಲ್ಲೂಕು ದೊಡ್ಡಗದ್ದವಳ್ಳಿಯ ದೇವಸ್ಥಾನವೂ ಇದಕ್ಕೆ ಉದಾಹರಣೆ. ಈ ತರಹದ ಗೋಪುರಗಳು ಕದಂಬರ ಕಾಲದಿಂದ ಬಂದದ್ದೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಚಾಲುಕ್ಯರ ಮತ್ತು ಹೊಯಿಸಳರ ಕಾಲದ ಕಟ್ಟಡಗಳಲ್ಲಿಯೂ ಅನೇಕ ಕಡೆ ಈ ತರಹದ ಗೋಪುರಗಳನ್ನು ಕಾಣುತ್ತೇವೆ. ವಿನ್ಯಾಸವು ಬಹುಕೋಣಾಕಾರಕ್ಕೆ ತಿರುಗಿ ಗೋಪುರವು ಸುಂದರವಾಗಿ ಪರಿಣಮಿಸಿತು.

ಕರ್ನಾಟಕ ಸಾಹಿತ್ಯದ ಅಭಿವೃದ್ಧಿಗೆ ಹೇಗೋ ಹಾಗೆಯೇ ಮೈಸೂರು ರಾಜ್ಯದ ಶಿಲ್ಪದ ಅಭಿವೃದ್ಧಿಗೂ ಬ್ರಾಹ್ಮಣರು, ಜೈನರು, ವೀರಶೈವರು ಈ

ಮೂರು ಪಂಗಡದವರೂ ಕಾರಣರಾಗಿರುತ್ತಾರೆ. ಜೈನ ಮತವು ಕ್ರಿ. ಪೂ. ನಾಲ್ಕನೆಯ ಶತಮಾನದಿಂದ ಕ್ರಿ. ಶ. ಹನ್ನೊಂದನೆಯ ಶತಮಾನದ ವರೆಗೆ ಮೈಸೂರು ರಾಜ್ಯದಲ್ಲಿ ಪ್ರಬಲವಾಗಿತ್ತು. ಆಮೇಲೆ ಬ್ರಾಹ್ಮಣ ಮತದ ಪ್ರಾಬಲ್ಯದಿಂದಲೂ ವೀರಶೈವ ಮತದ ಸ್ಥಾಪನೆಯಿಂದಲೂ ಕ್ರಮವಾಗಿ ಹಿಂದಕ್ಕೆ ಬಿತ್ತು. ಆದರೆ ಇದು ಬೌದ್ಧಮತದಂತೆ ಅದೃಶ್ಯವಾಗದೆ ಇತರ ಮತಗಳೊಡನೆ ಇಂದಿಗೂ ನಡೆದುಕೊಂಡು ಬರುತ್ತಿದೆ. ಜೈನರು ಬಸದಿಗಳನ್ನೂ, ಬ್ರಾಹ್ಮಣರು ದೇವಾಲಯಗಳನ್ನೂ, ವೀರಶೈವರು ಮಠಗಳನ್ನೂ ಶಿವಾಲಯಗಳನ್ನೂ ಕಟ್ಟುತ್ತ ಬಂದರು. ಜೈನ ಮತವು ಕರ್ನಾಟಕದಲ್ಲಿ ಬಹಳ ಕಾಲದವರೆಗೂ ನೆಲೆಸಿತ್ತು. ಬಾದಾಮಿಯ ಚಾಳುಕ್ಯರ ಮತ್ತು ಮಲಖೇಡದ ರಾಷ್ಟ್ರಕೂಟರ ಕಾಲದಲ್ಲಿ ಜೈನ ಮತದ ಪ್ರಾಬಲ್ಯ ಹೆಚ್ಚಾಗಿತ್ತು. ಕಲಚೂರ್ಯ ದೊರೆಯಾದ ಬಿಜ್ಜಳನೂ ಅನಿಲವಾಡದ ಕುಮಾರಪಾಲನೂ ಜೈನ ಭಕ್ತರಾಗಿದ್ದರಂತೆ. ಈ ಕಾರಣಗಳಿಂದ ಕರ್ನಾಟಕದ ಎಲ್ಲ ಕಡೆಗಳಲ್ಲಿಯೂ ಜೈನ ಬಸದಿಗಳನ್ನು ನೋಡುತ್ತೇವೆ. ಕರ್ನಾಟಕ ಅರಸರು ಸನಾತನಿಗಳಾದ ಮೇಲೆ, ಮತ್ತು ವೀರಶೈವ ಮತವು ಸ್ಥಾಪನೆಯಾದ ಮೇಲೆ, ದೇಶದಲ್ಲೆಲ್ಲ ಹರಡಿದ್ದ ಅನೇಕ ಬಸದಿಗಳು ವೈಷ್ಣವ ಅಥವಾ ಶೈವ ದೇವಾಲಯಗಳಾಗಿ ಮಾರ್ಪಾಟಾದವು. ನಮ್ಮ ದೇಶದಲ್ಲಿ ಹೆಜ್ಜೆ ಹೆಜ್ಜೆಗೂ ಪುಣ್ಯಕ್ಷೇತ್ರಗಳು ಸಾಮಾನ್ಯವಾಗಿ, ಈ ತೀರ್ಥಕ್ಷೇತ್ರಗಳಲ್ಲೆಲ್ಲಾ ಶಿಲ್ಪಕುಶಲತೆಯನ್ನು ವ್ಯಕ್ತಗೊಳಿಸುವ ಕಟ್ಟಡಗಳು ಇದ್ದೇ ಇರುತ್ತವೆ. ಜೈನರಿಗೆ ಮುಖ್ಯವಾದ ಪುಣ್ಯಕ್ಷೇತ್ರವು ಹಾಸನ ಡಿಸ್ಟ್ರಿಕ್ಟನಲ್ಲಿರುವ ಶ್ರವಣಬೆಳಗೊಳ. ಇದರಂತೆ ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಮಲೆಯೂರು, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಹುಂಬಚವೂ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮೂಡಬಿದರೆ, ಕಾರ್ಕಳ ಮತ್ತು ವೇಣೂರುಗಳೂ ಪ್ರಸಿದ್ಧಗಳಾಗಿವೆ. ಚಿತ್ರದುರ್ಗದ ಮುರಗಿಮಠ, ಬಾಳೆಹೊನ್ನೂರು ಮಠ, ಬಾಗೇವಾಡಿ, ಕೂಡಲಸಂಗಮ, ಕಲ್ಯಾಣಿ ಮತ್ತು ಉಳವಿ ಇವುಗಳು ವೀರಶೈವರಿಗೆ ಪುಣ್ಯಕ್ಷೇತ್ರಗಳಲ್ಲಿ ಮುಖ್ಯವಾದವು. ಬ್ರಾಹ್ಮಣ ದೇವಾಲಯಗಳು ಪುಣ್ಯಕ್ಷೇತ್ರಗಳಂತೂ ಹೇರಳವಾಗಿವೆ.

ಕರ್ನಾಟಕ ಶೈಲಿಯ ದೇವಾಲಯಗಳನ್ನು ಜಕಣಾಚಾರಿ ಎಂಬ ಶ್ರೇಷ್ಠ ದೇವಾಂಶ ಶಿಲ್ಪಿಯು ಒಂದೊಂದು ದೇವಸ್ಥಾನವನ್ನು ಒಂದೊಂದು ರಾತ್ರಿಯಲ್ಲಿ ಪ್ರಾರಂಭಮಾಡಿ ಮುಗಿಸಿದನೆಂದು ಜನಗಳಲ್ಲಿ ವಾಡಿಕೆಯಾಗಿದೆ. ಇದಕ್ಕೆ

ಆಧಾರವೇನೂ ಇಲ್ಲ. ಇನ್ನು ಕೆಲವು ಕಡೆ ಜಕಣಾಚಾರಿಯು ಒಬ್ಬ ರಾಜನೆಂದೂ ಆತನಿಂದ ಒಬ್ಬ ಬ್ರಾಹ್ಮಣನು ಕೊಲ್ಲಲ್ಪಟ್ಟನೆಂದೂ, ಆ ಬ್ರಹ್ಮಹತ್ಯದ ಪಾಪವನ್ನು ಕಳೆದುಕೊಳ್ಳುವುದಕ್ಕಾಗಿ ದೇಶದಲ್ಲೆಲ್ಲ ದೇವಾಲಯಗಳನ್ನು ಕಟ್ಟುತ್ತಾ ಹೋದನೆಂದು ಪ್ರತೀತಿ. ಉತ್ತರ ಕರ್ನಾಟಕದಲ್ಲಿ ಕೆಲವು ಕಡೆ ಇಂತಹ ಚಿತ್ರಕಲೆಯಿರುವ ದೇವಾಲಯಗಳನ್ನು "ಹೇಮಾಡ ಪಂತ" ದೇವಾಲಯಗಳೆಂದು ಕರೆಯುತ್ತಾರೆ. ಈ ಹೇಮಾಡಪಂತರನ್ನು ಕುರಿತು ಎರಡು ದಂತಕಥೆಗಳು ಪ್ರಚಾರದಲ್ಲಿವೆ. ಈತನಿಗೆ ಹೇಮಾದ್ರಿ ಎಂದು ಇನ್ನೊಂದು ಹೆಸರು. ಒಂದು: ಈತನು ಪ್ರಸಿದ್ಧನಾದ ವೈದ್ಯನಾಗಿದ್ದನಂತೆ. ರಾಜನಿಗೆ ಬಂದಿದ್ದ ಒಂದು ಕಠಿಣವಾದ ರೋಗವನ್ನು ವಾಸಿಮಾಡಿದ್ದಕ್ಕೆ ಪ್ರತಿಯಾಗಿ ಮುನ್ನೂರು ದೇವಾಲಯಗಳನ್ನು ರಾಜನು ಕಟ್ಟಿಸಬೇಕೆಂದು ಕೇಳಿಕೊಂಡನಂತೆ. ಅದರಂತೆ ಮಾಡಲಾಯಿತೆಂದೂ, ಆ ಕಾಲದಲ್ಲಿ ಕಟ್ಟಿದ ದೇವಾಲಯಗಳಿಗೆಲ್ಲಾ ಹೇಮಾಡ ಪಂತ ದೇವಾಲಯಗಳೆಂದು ಕರೆಯಲಾಗುತ್ತದೆ ಎಂದೂ; ಎರಡನೆಯದು : ಹೇಮಾದ್ರಿಯು ದೇವಗಿರಿಯ ಯಾದವ ವಂಶದ ರಾಮಚಂದ್ರದೇವನ ಹತ್ತಿರ ಮಂತ್ರಿಯಾಗಿದ್ದನೆಂದೂ, ಆತನು ಮುನ್ನೂರು ದೇವಾಲಯಗಳನ್ನು ಕಟ್ಟಿಸಿದನೆಂದೂ ಪ್ರತೀತಿ. ಈ ತರಹ ದೇವಾಲಯಗಳು ಹೊರಭಾಗದಲ್ಲಿ ಯಾವ ತರಹ ಚಿತ್ರ ಕೆಲಸವೂ ಇಲ್ಲದೆ ಸಾಧಾರಣ ದೇವಾಲಯಗಳಂತೆ ಕಾಣುವುವು. ಒಳಗೆ ಮಾತ್ರ ಇತರ ಹೊಯಿಸಳ ದೇವಾಲಯಗಳಂತೆಯೇ ವಿಗ್ರಹಗಳಿಂದಲೂ ಚಿತ್ರ ಕೆಲಸದಿಂದಲೂ ತುಂಬಿರುತ್ತವೆ. ವಿಗ್ರಹ ಭೇದಕರಾದ ಮುಸಲ್ಮಾನರ ಕಣ್ಣಿಗೆ ಯಾವ ತರಹ ವಿಗ್ರಹಗಳೂ ಕಾಣಿಸಕೂಡದೆಂದು ಹೀಗೆ ಮಾಡಿರಬಹುದೆಂದು ಕಾರಣವನ್ನು ಹೇಳುತ್ತಾರೆ. ಇದು ನಂಬಲರ್ಹವಾದುದಲ್ಲ. ರಾವಬಹದ್ದೂರ್ ಆರ್. ನರಸಿಂಹಾಚಾರ್ಯರು ಜಕಣಾಚಾರಿ ಎಂಬುವುದು ದಕ್ಷಿಣಾಚಾರಿ ಎಂಬ ಶಬ್ದದ ತದ್ಭವವೆಂದೂ, ದಕ್ಷಿಣದಿಂದ ಬಂದ ಆಚಾರಿ ಎಂದು ಅರ್ಥಮಾಡಲು ಸಾಧ್ಯವೆಂದೂ ಹೇಳುತ್ತಾರೆ. ಕರ್ನಾಟಕ ದೇಶದಲ್ಲಿರುವ ದೇವಾಲಯಗಳ ನಿರ್ಮಾಣ ವಿಷಯದಲ್ಲಿ ಮಾತ್ರ ಜಕಣಾಚಾರಿಯ ಹೆಸರು ಬರುತ್ತದೆ. ಈತನು ದಕ್ಷಿಣದಿಂದ ಕರ್ನಾಟಕಕ್ಕೆ ಬಂದನೆಂದು ಹೇಳಿದರೆ ಕರ್ನಾಟಕ ಶೈಲಿಗೂ ದಕ್ಷಿಣದಲ್ಲಿ ಕಾಣಬರುವ ಶೈಲಿಗೂ ಸ್ವಲ್ಪವಾದರೂ ಹೋಲಿಕೆ ಇರಲಿಕ್ಕೆ ಬೇಕಾಗುತ್ತದೆ. ಆದರೆ ಇವೆರಡಕ್ಕೂ ಯಾವ ತರದ ಹೋಲಿಕೆಯೂ ಕಾಣಬರುವು

ದಿಲ್ಲ. ಆದ್ದರಿಂದ ಜಕಣಾಚಾರಿಯು ಪಕ್ಕಾ ಕರ್ನಾಟಕದವನೇ ಇರಬೇಕೆಂದೂ ಅವನ ಹೆಸರು ಇತರ ರೂವಾರಿಗಳಂತೆ ಜಕ್ಕಣ್ಣ ಎಂದಿದ್ದು ಆತನು ಶಿಲ್ಪಿಯಾದ್ದರಿಂದ ಜಕ್ಕಣ್ಣಾಚಾರಿ, ಜಕಣಾಚಾರಿಯಾಗಿರಬೇಕೆಂದು ಊಹಿಸಬಹುದಾಗಿದೆ. ಈತನು ರೂವಾರಿಗಳ ಸಂಗಡಕ್ಕೆ ಮುಖಂಡನಾಗಿದ್ದು ಸಂಗಡಕ್ಕೆ ಸೇರಿದ್ದ ರೂವಾರಿಗಳಿಂದ ಜಕಣಾಚಾರಿಯ ನಾಯಕತ್ವದಲ್ಲಿ ದೇವಾಲಯಗಳು ನಿರ್ಮಿತವಾಗಿರಬೇಕು. ಏಕೆಂದರೆ ಈ ಶೈಲಿಯ ದೇವಾಲಯಗಳಲ್ಲಿ ಕೆತ್ತಿರುವ ಮೂರ್ತಿಗಳ ಪೀಠಗಳಲ್ಲಿ ಅನೇಕ ರೂವಾರಿಗಳ ಹೆಸರುಗಳು ಕಂಡುಬರುತ್ತವೆ. ಬೇಲೂರು ದೇವಸ್ಥಾನದ ವಿಗ್ರಹಗಳ ಕೆಳಗೆ ಈ ಹೆಸರುಗಳು ಕಾಣಬರುತ್ತವೆ: ದಾಸೋಜ, ಅವನ ಮಗ ಚಾವನ, ಚಿಕ್ಕಹಂಪ, ಮಲ್ಲಿಯಣ್ಣ, ಪದರಿಮಲ್ಲೋಜ, ನಾಗೋಜ, ಕೇಶವದೇವ, ಮಾಯಿನ, ಮಲ್ಲತಮ್ಮ. ಇವರೆಲ್ಲ ಬಳ್ಳಿಗಾವೆ ಗುಂಪಿಗೆ ಸೇರಿದವರು. ಲಕ್ಕುಂಡಿಯಿಂದ ಬಂದ ರೂವಾರಿ, ಗದುಗಿನಿಂದ ಬಂದ ದಾಸೋಜ ಮುಂತಾದವರು. ಇವುಗಳಲ್ಲದೆ ಇನ್ನೂ ಅನೇಕ ರೂವಾರಿಗಳ ಹೆಸರುಗಳನ್ನು ನೋಡುತ್ತೇವೆ. ಇವರೆಲ್ಲರೂ ಪ್ರಸಿದ್ಧರಾದ ಶಿಲ್ಪಿಗಳು. ಒಬ್ಬನು "ಬಿರುದ ರೂವಾರಿಗೊಂಡಲ ಬಡಿವ", ಮತ್ತೊಬ್ಬನು "ಬಿರುದ ರೂವಾರಿ ಮದನ ಮಹೇಶ", ಇನ್ನೊಬ್ಬನು "ಮಚ್ಚರಿಪು ರೂವಾರಿ ಶರಭ ಭೇರುಂಡ", ಮಗದೊಬ್ಬನು "ಮಚ್ಚರಿಪು ರೂವಾರಿಗಳ ಗಂಡ" ಎಂದು ಕರೆದುಕೊಳ್ಳುತ್ತಾರೆ. ಮಲ್ಲಿಯಣ್ಣನು "ರೂವಾರಿ ಪುಲಿ" ಮತ್ತು "ಮಚ್ಚರಿಪು ಬಿರುದ ರೂವಾರಿ ಗಿರಿವಜ್ರದಂಡ" ಎಂದು ಕರೆದುಕೊಳ್ಳುತ್ತಾನೆ. ಶ್ರವಣಬೆಳಗೊಳದ ಚಂದ್ರಗುಪ್ತ ಬಸದಿಯಲ್ಲಿರುವ ಕಲ್ಲಿನ ಜಾಲಂದ್ರದ ಪರದೆಯನ್ನು ದಾಸೋಜನು ಮಾಡಿದ್ದಂತೆ. ತುರುವೆಕೆರೆಯ ಮೂಲ ಸಂಕೇಶ್ವರದೇವಾಲಯದಲ್ಲಿ ಜಕ್ಕಣ್ಣನ ಹೆಸರು ಬರುತ್ತದೆ. ಇವನೇ ಪ್ರಸಿದ್ಧನಾದ ದಂತ ಕಥೆಗೆ ಸಂಬಂಧಪಟ್ಟ ಜಕಣಾಚಾರಿ ಇರಬಹುದೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಇದೇ ರೀತಿ ಅನೇಕ ದೇವಾಲಯಗಳಲ್ಲಿ ಅವುಗಳನ್ನು ನಿರ್ಮಿಸಿದ ರೂವಾರಿಗಳ ಹೆಸರುಗಳು ಸಿಕ್ಕುತ್ತವೆ. ಬೇಲೂರಿನಲ್ಲಿ ಕಂಬಗಳ ಮೇಲಿರುವ "ಮದನಿಕೆ" ವಿಗ್ರಹಗಳನ್ನು ಕೆತ್ತಿದವರು ನಿಜವಾಗಿಯೂ ಶಿಲ್ಪಿಶ್ರೇಷ್ಠರೆಂದೂ, ಅವರು ಹೇಳಿಕೊಳ್ಳುವ ಬಿರುದುಗಳು ಅವರಿಗೆ ನಿಜವಾಗಿಯೂ ಒಪ್ಪುತ್ತವೆ ಎಂದೂ ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ.



ಸೋಮನಾಥ ಪುರದ ದೇವಾಲಯದಲ್ಲಿ ವೇಣುಗೋಪಾಲ ವಿಗ್ರಹ



ಬೇಲೂರು ದೇವಸ್ಥಾನದ ಒಂದು ಮದನಕೈವಿಗ್ರಹ


ತದ್ಧಿಮಿ ತಕಧಿಮಿ ಥೈಯಾ ತಾ। ತಜ್ಝಣು ತೋಂ ಝಣು ರೆನುತಾ ॥
ವಿದ್ಯಾಧರಾನಂದಭರಿತಾ-ಇದು। ಮುದ್ದು ಮೋಹನೆ ನಿನ್ನ ಬೆಡಗಿನ ಕುಣಿತಾ ॥



ಸೋಮನಾಥಪುರದ ಕೇಶವದೇವಾಲಯ - ಗರ್ಭಗೃಹ ಮತ್ತು ಗೋಪುರ




ನಂದಿ, ಭೋಗ ನಂದೀಶ್ವರ ದೇವಾಲಯ – ದಕ್ಷಿಣದಿಂದ ಗೋಪುರದ ನೋಟ.




ಸೋಮನಾಥಪುರ, ಕೇಶವದೇವಾಲಯದ ತಲವಿನ್ಯಾಸ.




ಲಕ್ಕುಂಡಿಯ ಕಾಶೀ ವಿಶ್ವನಾಥ ದೇವಾಲಯ, ಪಶ್ಚಿಮಬಾಗಿಲಿನ ನೋಟ.




ಹೊಯಿಸಳೇಶ್ವರ ದೇವಾಲಯದ " ತಲವಿನ್ಯಾಸ " ಹಳೇಬೀಡು



ಚೆನ್ನಕೇಶವ ದೇವಾಲಯದ ತಲವಿನ್ಯಾಸ, ಬೇಲೂರು.




ಎಲ್ಲೋರ, ಕೈಲಾಸ ದೇವಾಲಯ – ಮೇಲಿನಿಂದ ಕಾಣುವ ದೃಶ್ಯ.



ಭಟಕಳ, ಕೇತಪಿ ನಾರಾಯಣ ದೇವಸ್ಥಾನ



ಗೋಮಟೇಶ್ವರ



ದೊಡ್ಡ ದೇವಸ್ಥಾನದ ವಿನ್ಯಾಸ
ಚಿತ್ರಕಾರರು: ಗ್ರಂಥಕರ್ತರು

ದೇವಸ್ಥಾನಗಳ ಗೋಡೆಗಳ ಮೇಲೆ ಸುತ್ತಲೂ ವಿಗ್ರಹಗಳನ್ನು ಕೆತ್ತುವ ಪದ್ಧತಿ ಕರ್ನಾಟಕ ಶೈಲಿಯ ಒಂದು ವೈಶಿಷ್ಟ್ಯವೆಂದು ಮೇಲೆ ಹೇಳಿದೆಯಷ್ಟೆ. ವಿಗ್ರಹಗಳು ದೇವದೇವಿಯರದು. ಅವರ ಪರಿವಾರ ಸೇವಕ ಸೇವಕಿಯರು, ಇಲ್ಲವೆ ನರ್ತಕಿಯರು, ಗಾಯಕರು, ವಾದ್ಯವೃಂದದವರೂ ಆಗಿರುತ್ತದೆ. ಇವುಗಳಲ್ಲದೆ ಮಧ್ಯೆ ಮಧ್ಯೆ ಕಾಮಶಾಸ್ತ್ರಕ್ಕೆ ಸಂಬಂಧಪಟ್ಟ ವಿಗ್ರಹಗಳೂ ಕಾಣಬರುತ್ತವೆ. ಇದೇ ರೀತಿ ದೇವರ ರಥೋತ್ಸವಕಾಲದಲ್ಲಿ ಎಳೆಯುವ ತೇರುಗಳಲ್ಲಿಯೂ ಕೂಡ ಇಂತಹ ವಿಗ್ರಹಗಳನ್ನು ಕೆತ್ತಿರುವುದನ್ನು ನಾವು ನೋಡುತ್ತೇವೆ.

ಇಂತಹ ಮಿಥುನಸಮಾಗಮ ವಿಗ್ರಹಗಳನ್ನು ಮೌರ್ಯ, ಗಾಂಧಾರ, ಕುಶಾನ, ಮತ್ತು ಗುಪ್ತರ ಕಾಲದ ಕಟ್ಟಡಗಳಲ್ಲಿ ಕೆತ್ತುವ ವಾಡಿಕೆ ಇತ್ತೆಂದೂ ಹತ್ತನೆಯ ಶತಮಾನದಿಂದ ಈಚೆಗೆ ಇಂತಹ ವಿಗ್ರಹಗಳನ್ನು ಜಾಸ್ತಿಯಾಗಿ ಕಟ್ಟಡಗಳಲ್ಲಿ ಸೇರಿಸುವುದು ಪದ್ಧತಿಯಾಯಿತೆಂದೂ ವಿದ್ವಾಂಸರು ಹೇಳುತ್ತಾರೆ. ಸೌರಾಷ್ಟ್ರದಲ್ಲಿರುವ ಹನ್ನೊಂದನೆಯ ಶತಮಾನದ ಖಜುರಾಹೋ ದೇವಾಲಯಗಳಲ್ಲಿ ಮಿಥುನ ವಿಗ್ರಹಗಳು ಹೇರಳವಾಗಿ ಕೆತ್ತಲ್ಪಟ್ಟಿವೆ. ಹಾಗೆಯೇ ಭುವನೇಶ್ವರ, ಪೂರಿ, ಕೊನಾರಕ್ ದೇವಾಲಯಗಳಲ್ಲಿಯೂ ಇವೆ. ದಕ್ಷಿಣ ಭಾರತದ ದೇವಾಲಯಗಳಲ್ಲಿಯೂ ಕರ್ನಾಟಕ ಶೈಲಿಯ ದೇವಾಲಯಗಳಲ್ಲಿಯೂ ಅಲ್ಲೊಂದು ಇಲ್ಲೊಂದು ಕಾಣಬರುತ್ತವೆ. * ಖಜರಾಹೊ, ಪೂರಿ ದೇವಾಲಯಗಳಲ್ಲಿ ವಿಗ್ರಹಗಳು ಗಾತ್ರದಲ್ಲಿ ದೊಡ್ಡವು. ಕರ್ನಾಟಕ ದೇವಾಲಯಗಳಲ್ಲಿ ಚಿಕ್ಕವು. ಕಂಡೂ ಕಾಣದ ಹಾಗೆ ಕೆತ್ತಲ್ಪಟ್ಟಿವೆ. "ಆನಂದದ ಅಸಂಖ್ಯೇಯ ರೂಪಗಳಲ್ಲಿ ಸರ್ವವಿದಿತವಾದದ್ದು, ಸರ್ವಸುಲಭವಾದದ್ದು, ಸರ್ವಪ್ರಿಯವಾದದ್ದು ಶೃಂಗಾರ ಅಥವಾ ಸ್ತ್ರೀಪುರುಷರ ಪರಸ್ಪರ ಆಕರ್ಷಣೆ. ಅದೇ ಸೃಷ್ಟಿಯ ಮೂಲಶಕ್ತಿ. ಉಪನಿಷತ್ತುಗಳು ಅದರ ಮಹಿಮೆಯನ್ನು ಸ್ಮರಿಸುತ್ತವೆ. ದೇವಕಥೆ, ಋಷಿಕಥೆಗಳು ಅದಕ್ಕೆ ದೃಷ್ಟಾಂತಗಳಾಗಿವೆ. ಪರಮೇಶ್ವರನ ಅನಂತಾನಂತ ವಿಲಾಸಗಳಲ್ಲಿ ಅದು ಒಂದು ನಿತ್ಯಪ್ರಕಾರದ್ದು. ಅದು ಒಂದು ಜಗದ್ಧರ್ಮ" † ಪವಿತ್ರವಾದ

* ಕೈಲಾಸ ದೇವಾಲಯದ ಆವರಣದಲ್ಲಿರುವ ಲಂಕೇಶ್ವರ ಗುಹಾಂತರ್ದೇವಾಲಯದಲ್ಲಿ ಇಂತಹ ಅನೇಕ ವಿಗ್ರಹಗಳು ಕೆತ್ತಲ್ಪಟ್ಟಿವೆ.

† ಡಿ. ವಿ. ಜಿ. "ಆಕಾಶವಾಣಿ" ಭಾಷಣ.

ಸ್ಥಳಗಳಲ್ಲಿ ದೇವತಾ ವಿಗ್ರಹಗಳ ಮಧ್ಯದಲ್ಲಿ ಇಂತಹ ವಿಗ್ರಹಗಳನ್ನು ಕೆತ್ತಿರುವ ಕಾರಣವೇನಿರಬಹುದು ಎನ್ನುವದಕ್ಕೆ ಯಾರೂ ಸರಿಯಾದ ಉತ್ತರವನ್ನು ಕೊಟ್ಟಿರುವದಿಲ್ಲ. ಮನುಷ್ಯರ ದೃಷ್ಟಿಯಲ್ಲಿ ಒಂದು ವಿಲಕ್ಷಣವಾದ ಶಕ್ತಿ ಇರುತ್ತದೆ. ಕೆಲವು ದೃಷ್ಟಿಗಳು ಬಹು ಕ್ರೂರ ಮತ್ತು ಹಾನಿಕರವಾದವುಗಳು. ಅಂತಹ ದೃಷ್ಟಿಗಳು ಕಾಮಶಾಸ್ತ್ರದ ವಿಗ್ರಹಗಳ ಕಡೆ ತಿರುಗಿ ದೇವಾಲಯಕ್ಕೆ ಹಾನಿ ಬರದಂತೆ ಮಾಡುವುದೇ ಇದರ ಉದ್ದೇಶವಿರಬಹುದೆಂದು ಕೆಲವರ ನಂಬಿಕೆ. ದೇವಸ್ಥಾನಕ್ಕೆ ಹೋಗುವವರ ದೃಷ್ಟಿಯನ್ನು ಆ ಕಡೆ ಸೆಳೆದು ಮನಸ್ಸನ್ನು ಕಲಕುವಂತೆ ಮಾಡಿ ನಿಜವಾದ ದೃಡಭಕ್ತಿಯುಳ್ಳವನನ್ನು ಕಂಡು ಹಿಡಿಯಲು ಇದು ಭಗವಂತನ ಆಜ್ಞಾನುಸಾರ ಒಂದು ಮಾರ್ಗವೆಂದು; ಹಾಗೆ ಧೃಡ ಭಕ್ತಿಯುಳ್ಳವನೇ ಭಗವಂತನ ಅನುಗ್ರಹಕ್ಕೆ ಅರ್ಹನು ಎಂಬುದನ್ನು ತಿಳಿಯಪಡಿಸುವುದಕ್ಕಾಗಿ ಇರಬಹುದು ಎಂದು ಮತ್ತೆ ಕೆಲವರು ಹೇಳುತ್ತಾರೆ. ಈ ವಿಷಯವನ್ನೆ ಪಾಮರರಿಗೆ ತಿಳಿಸಿಕೊಟ್ಟು ಅವರನ್ನು ಉದ್ಧಾರಗೊಳಿಸುವ ಉದ್ದೇಶ್ಯದಿಂದಲೇ ಕೆತ್ತಲ್ಪಟ್ಟಿರುತ್ತವೆ ಎಂದು ಮತ್ತೆ ಕೆಲವು ವಿದ್ವಾಂಸರು ಹೇಳುತ್ತಾರೆ. ಈ ಮೂರು ಕಾರಣಗಳಲ್ಲಿ ಯಾವುದು ಸಮಂಜಸವೋ ಗೊತ್ತಾಗುವುದಿಲ್ಲ. ಹದಿನಾಲ್ಕನೆಯ ಶತಮಾನದ ಮಧ್ಯಭಾಗದಲ್ಲಿ ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾದಮೇಲೆ ವಿಜಯನಗರದ ಅರಸರು ಕುಶಲಕಲೆಗಳಿಗೆ ಇತ್ತ ಪ್ರೋತ್ಸಾಹದ ಫಲವಾಗಿ ವಾಸ್ತುಕಲೆಗೂ ಅಭಿವೃದ್ಧಿಯಾಗಲು ಅವಕಾಶ ಸಿಕ್ಕಿತು. ಮಹಮ್ಮದೀಯರ ದಾಳಿಯನ್ನು ಹಿಮ್ಮೆಟ್ಟಿಸಿ ಹಿಂದೂ ಪರರಾಜರನ್ನೆಲ್ಲ ಸೋಲಿಸಿ ಸಾಮಂತರನ್ನಾಗಿ ಮಾಡಿಕೊಂಡು "ವೀರಭೋಜ್ಯಾವಸುಂಧರಾ" ಎಂಬಂತೆ ಏಕಚಕ್ರಾಧಿಪತ್ಯವನ್ನು ಹೊಂದಿದ್ದ ಅರಸರ ಕಾಲದಲ್ಲಿ ಎಲ್ಲೆಲ್ಲಿಯೂ ದೇವಾಲಯಗಳು ಸ್ಥಾಪಿಸಲ್ಪಟ್ಟವು. ಅವರ ರಾಜಧಾನಿಯು ಬೆಟ್ಟಗುಡ್ಡಗಳ ಮಧ್ಯದಲ್ಲಿ ದುರ್ಗಮವೆನಿಸಿಕೊಂಡು ಎರಡು ಶತಮಾನಗಳವರೆಗೂ ನಿಂತಿತ್ತು. ಅಲ್ಲಿ ಸಿಕ್ಕುತ್ತಿದ್ದ ಕಗ್ಗಲ್ಲನ್ನೇ ಉಪಯೋಗಿಸಿ ದೇವಾಲಯಗಳನ್ನು ಕಟ್ಟುವುದು ಅಲ್ಲಿಯ ಶಿಲ್ಪಿಗಳಿಗೆ ಸಂಭವವೆಂದು ಕಂಡಿತು. ಆ ಕಲ್ಲನ್ನೇ ತಮ್ಮ ಚಾತುರ್ಯದ ಪ್ರದರ್ಶನಕ್ಕೆ ಅಳವಡಿಸಿಕೊಂಡು ಅವರದೇ ಒಂದಾದ ದ್ರಾವಿಡ ಶೈಲಿಯಲ್ಲಿ ದೇವಾಲಯಗಳು, ಮಂಟಪಗಳು, ತೋರಣಗಳು ಕಟ್ಟಲ್ಪಟ್ಟವು. ಹಿಂದೆಯೇ ಹೇಳಿದಂತೆ ಈ ಕಾಲದಲ್ಲಿ ದೇವಸ್ಥಾನದ ಆವರಣದಲ್ಲಿ ಅನೇಕ ಸುಂದರವಾದ

ಮಂಟಪಗಳು ಉದ್ಭವಿಸಿದವು. ಅವುಗಳಲ್ಲಿ ಶಿಲ್ಪಿಗಳು ತಮ್ಮ ಚಾತುರ್ಯವನ್ನೆಲ್ಲ ತೋರಿಸಲು ತೊಡಗಿದರು. ಗುಡಿಯ ಕಂಬಗಳು ಹೆಚ್ಚು ಹೆಚ್ಚು ಅಲಂಕಾರ ಯುತವಾದವು. ಒಂದೇ ಕಲ್ಲಿನಲ್ಲಿ ಒಂದು ದಪ್ಪನಾದ ಕಂಬ, ಅದರ ಸುತ್ತಲೂ ಸಣ್ಣ ಕಂಬಗಳೂ ಅಥವಾ ಕಂಬದ ಮುಂದುಗಡೆ ವಿಗ್ರಹಗಳು, ರಾವುತರು, ಸಿಂಹಗಳು ಕೆತ್ತಲ್ಪಟ್ಟವು. ಬೋದಿಗೆಗಳು ಅನೇಕ ಮುಖಗಳಾಗಿ ಬಾಳೆಯ ಮೊಗ್ಗಿನಾಕಾರವಾಗಿ, ಲೋವೆಕಲ್ಲು ಮುಂದಕ್ಕೆ ಚಾಚಿಕೊಂಡು ತಲೆ ಎತ್ತಿ ನಿಂತಿರುವಂತೆ ಕೊರೆಯಲ್ಪಟ್ಟವು. ಲೋವೆಕಲ್ಲಿನ ಮೇಲೆ ಅನೇಕ ಕಡೆ ಹಾವು ಗಳು, ಕೋತಿಗಳು ಮತ್ತು ಯಾಳಿಗಳು ಇವುಗಳು ಅನೇಕ ಭಂಗಿಗಳಲ್ಲಿ ಕೆತ್ತ ಲ್ಪಟ್ಟಿರುತ್ತಿದ್ದವು. ಜಗಲಿಯು ಎತ್ತರವಾಗಿ, ದೇವಸ್ಥಾನದೊಳಕ್ಕೆ ಹತ್ತಿ ಹೋಗಲು ಮೆಟ್ಟಲುಗಳೂ ಅವುಗಳ ಅಕ್ಕಪಕ್ಕದಲ್ಲಿ ನಿಂತಿರುವ ಸೊಂಡಿಲುಳ್ಳ ಸಿಂಹದಾಕಾರದ ಮೃಗಗಳೂ ನಿಂತಿರುತ್ತಿದ್ದುವು. ದೇವಸ್ಥಾನಗಳು ಬಹಳ ಎತ್ತರವಿಲ್ಲ. ಆದಾಗ್ಯೂ ಗೋಪುರವು ಬಹು ಚಿತ್ರಿತವಾಗಿರುತಿತ್ತು. ಹಂಪೆ ಯಲ್ಲಿರುವ ಪಂಪಾಪತಿ ದೇವಾಲಯದ ಮಹಾ ದ್ವಾರದ ಮೇಲಿನ ಗೋಪುರವು ಈಚೆಗೆ ಕಟ್ಟಿರಬೇಕೆಂದು ತೋರುತ್ತದೆ.

ವಿಜಯನಗರದ ರಾಜರು ಹಿಂದಿನ ರಾಜರಂತೆಯೇ ತಾವು ಧಾಳಿಮಾಡಿ ಗೆದ್ದ ರಾಜ್ಯದಲ್ಲೆಲ್ಲ ದೇವಾಲಯಗಳನ್ನು ಕಟ್ಟಿರುತ್ತಾರೆ. ಆದರೆ ಮುಖ್ಯವಾದ, ಅತ್ಯಂತ ಸುಂದರವೆನಿಸಿದ ವಿಜಯನಗರದ ಶೈಲಿಯ ದೇವಾಲಯಗಳೆಲ್ಲ ಇರು ವುದು ಹಂಪೆಯಲ್ಲಿಯೇ. ಆ ಪಾಳುಬಿದ್ದ ರಾಜಧಾನಿಯಲ್ಲಿ ಎಲ್ಲೆಲ್ಲಿಯೂ ಮುರುಕು ದೇವಾಲಯಗಳು ಕಣ್ಣಿಗೆ ಬೀಳುತ್ತವೆ. ಅವುಗಳಲ್ಲಿ ಗಮನಾರ್ಹ ವಾದವುಗಳು ವಿಜಯ ವಿಠ್ಠಲ ರಾಯನ ಗುಡಿ ಮತ್ತು ಹಜಾರ ರಾಮನ ಗುಡಿ. ಇವೆರಡರಲ್ಲಿ ವಿಠ್ಠಲ ರಾಯನ ಗುಡಿಯೇ ಹೆಚ್ಚು ಅಲಂಕೃತವಾದದ್ದು. ಈ ಶೈಲಿಯು ವಿಜಯನಗರ ಸಂಸ್ಥಾನವು ಅಳಿದು ಹೋದ ಕೂಡಲೆ ಮಾಯ ವಾಯಿತು.

ಅಲ್ಲಿಂದೀಚೆಗೆ ಮುಂದಿನ ಎರಡು ಮೂರು ಶತಮಾನಗಳಲ್ಲಿ ದಕ್ಷಿಣ ಭಾರತದಲ್ಲಿ ನಾಯಕರ ಆಳ್ವಿಕೆಯಲ್ಲಿ ಕಟ್ಟಿದ ಅನೇಕ ದೇವಾಲಯಗಳು ಕಂಡು ಬರುತ್ತವೆ. ಮೈಸೂರು ರಾಜ್ಯದಲ್ಲಿ ಮುಮ್ಮಡಿ ಕೃಷ್ಣರಾಯರ ಕಾಲದಲ್ಲಿ

ಅಲ್ಲೊಂದು ಇಲ್ಲೊಂದು ದೇವಾಲಯಗಳು ಕಟ್ಟಲ್ಪಟ್ಟವು. ಹದಿನೆಂಟನೆಯ ಶತಮಾನದಿಂದೀಚೆಗೆ ಬ್ರಿಟಿಷರ ಸಾಮ್ರಾಜ್ಯವು ಪ್ರಾರಂಭವಾದ ಮೇಲೆ ಭಾರತೀಯ ವಾಸ್ತುಕಲೆಯ ಪ್ರೋತ್ಸಾಹಕ್ಕೆ ಸ್ಥಳವಿಲ್ಲದೆ ಹೋಗಿ ಹಿಂದಿನಿಂದ ವಂಶ ಪಾರಂಪರ್ಯವಾಗಿ ನಡೆದುಕೊಂಡು ಬಂದಿದ್ದ ಸ್ಥಪತಿಗಳ ಮತ್ತು ಶಿಲ್ಪಿಗಳ ವಂಶಗಳೆಲ್ಲ ನಾಶವಾಗಿ ಹೋದವು.

ಶಿಲ್ಪಕಲೆ

ಭರತಖಂಡದ ವಾಸ್ತುಕಲೆಯು ಶಿಲ್ಪಪ್ರಾಧಾನ್ಯವಾದದ್ದು. ಹಿಂದಿನ ಯಾವ ಕಟ್ಟಡವನ್ನೇ ತೆಗೆದುಕೊಳ್ಳಲಿ, ನಾವು ಅದರ ಸೌಂದರ್ಯವನ್ನು ಅದರಲ್ಲಿ ಶಿಲ್ಪಿಯು ತೋರಿಸಿರುವ ಕೌಶಲ್ಯದ ಮಟ್ಟದಿಂದಲೇ ಅಳೆಯ ಬೇಕಾಗುತ್ತದೆ. ಒಂದು ಕಟ್ಟಡದ ಸೌಂದರ್ಯವು ಅದರ ಗಾತ್ರದಲ್ಲಿಲ್ಲ. ಗಾತ್ರದಲ್ಲಿ ಅಡಗಿರುವ ಬೇರೆ ಬೇರೆ ಅವಯವಗಳಲ್ಲಿಯೂ, ಅವುಗಳ ಪರಸ್ಪರ ಹೊಂದಾಣಿಕೆಯಲ್ಲಿಯೂ, ಅವುಗಳಲ್ಲಿ ಪ್ರತಿಯೊಂದರಲ್ಲಿಯೂ ಅಳವಡಿಸಿರುವ ಶಿಲ್ಪಚಾತುರ್ಯದಲ್ಲಿಯೂ ಮತ್ತು ಅವುಗಳು ಒಟ್ಟಿಗೆ ಮನಸ್ಸಿನ ಮೇಲೆ ಉಂಟುಮಾಡುವ ಪ್ರಭಾವದಲ್ಲಿಯೂ ಇದೆ. ದೊಡ್ಡ ಕಟ್ಟಡಗಳು ದೊಡ್ಡ ಪ್ರಮಾಣದಲ್ಲಿಯೂ, ಚಿಕ್ಕವುಗಳು ಚಿಕ್ಕ ಪ್ರಮಾಣದಲ್ಲಿಯೂ ಸುಂದರವೆನ್ನಿಸಿಕೊಳ್ಳಬಹುದು. ಇದಕ್ಕೆ ಇಂಗ್ಲೀಷಿನಲ್ಲಿ Scale ಎಂದು ಹೆಸರು. ಶ್ರವಣಬೆಳಗೊಳದ ಗೋಮಟೇಶ್ವರ ವಿಗ್ರಹವು ದೊಡ್ಡ ಪ್ರಮಾಣದಲ್ಲಿ ಸುಂದರವಾಗಿದೆ; ಸೊರಬ ಸಾಗರದ ಗುಡಿಗಾರರು ಕೆತ್ತುವ ಶ್ರೀಗಂಧದ ಮತ್ತು ದಂತದ ಸಣ್ಣ ಸಣ್ಣ ವಿಗ್ರಹಗಳು ಸಣ್ಣ ಪ್ರಮಾಣ ದಲ್ಲಿ ಸುಂದರವೆನಿಸಿಕೊಳ್ಳುತ್ತವೆ. ದಕ್ಷಿಣ ಭಾರತದ ಮಧುರೆ, ರಾಮೇಶ್ವರ ಮುಂತಾದ ಸ್ಥಳಗಳಲ್ಲಿರುವ ದೇವಾಲಯಗಳು ದೊಡ್ಡ ಪ್ರಮಾಣದವು. ಮಹಾ ಬಲಿಪುರ, ಸೋಮನಾಥಪುರ ಮುಂತಾದ ಸ್ಥಳಗಳಲ್ಲಿರುವ ದೇವಾಲಯಗಳು ಸಣ್ಣ ಪ್ರಮಾಣದವು. ಇವೆಲ್ಲವೂ ಸುಂದರವಾದವುಗಳೇ.

ಭಾರತೀಯರು ಅನಾದಿಯಿಂದಲೂ ಕುಶಲಕಲೆಗಳಲ್ಲಿ ಆಸಕ್ತಿಯುಳ್ಳವರು. ನಮಗೆ ಅತ್ಯಂತ ಪ್ರಾಚೀನವಾದದ್ದೆಂದು ತಿಳಿದಿರುವ ಕಟ್ಟಡಗಳನ್ನು ನೋಡಿದರೆ, ಅಷ್ಟು ಹೊತ್ತಿಗಾಗಲೆ ಶಿಲ್ಪಿಗಳು ಹೆಚ್ಚಿನ ಕೌಶಲ್ಯವನ್ನು ಪಡೆದಿದ್ದರೆನ್ನುವದು ವ್ಯಕ್ತವಾಗುತ್ತದೆ. ಕ್ರಿ. ಪೂ. ಮೂರನೆಯ ಶತಮಾನದಲ್ಲಿ ಸ್ಥಾಪಿಸಿದ ಅಶೋ ಕನ ಶಾಸನ ಸ್ತಂಭಗಳೂ, ಸಾಂಚಿ ಸ್ತೂಪದ ಸುತ್ತಲೂ ಆಂಧ್ರರು ಕಟ್ಟಿಸಿದ

ಕಲ್ಲಿನ ತೋರಣವೂ ಕಟಿಕಟೆಯೂ ಹೆಚ್ಚಾದ ಶಿಲ್ಪ ಕುಶಲತೆಯನ್ನು ತೋರುವುವು. ಅಶೋಕನು ಪರ್ಷಿಯಾದಿಂದ ಶಿಲ್ಪಿಗಳನ್ನು ಕರೆಯಿಸಿಕೊಂಡಿದ್ದನೆಂದು ಹೇಳುತ್ತಾರೆ. ಕ್ರಿ. ಶ. ಎರಡನೆಯ ಶತಮಾನದಲ್ಲಿ ಆಳುತ್ತಿದ್ದ ಕುಶಾನರ ರಾಜನಾದ ಕನಿಷ್ಕನು ಬೌದ್ಧಮತವನ್ನು ಅವಲಂಬಿಸಿ ಸಾಹಿತ್ಯ ಮತ್ತು ಕಲೆಗಳಿಗೆ ಪೋಷಣೆಯನ್ನು ಕೊಟ್ಟನು. ತನ್ನ ರಾಜ್ಯದ ಭವನಗಳನ್ನು ಸಿಂಗರಿಸಲು ಗ್ರೀಕ್ ಕಲಾವಿದರನ್ನು ಕರೆಸಿ ನೇಮಿಸಿದನು. ನಂತರ ಸುಸಂಸ್ಕೃತರಾದ ಗುಪ್ತರ ಕಾಲದಲ್ಲಿ ಅವರ ಪೋಷಣೆಯಲ್ಲಿ ಕುಶಲಕಲೆಗಳು ವೃದ್ಧಿಯಾದವು. ಗುಪ್ತರ ಕಾಲವನ್ನು "ಸ್ವರ್ಣಯುಗ" ವೆಂದು ಚರಿತ್ರಕಾರರು ಕರೆಯುತ್ತಾರೆ.

ಇವರ ಕಾಲದಲ್ಲಿ ಹೊರಗಿನ ಪ್ರಭಾವಗಳೆಂದು ಹೇಳುವ, ಪರ್ಷಿಯಾ ಮತ್ತು ಗ್ರೀಕ್‌ರ ಸಂಪರ್ಕದ ಕುರುಹುಗಳು ನಾಶವಾಗಿ ಪೂರ್ಣ ಭಾರತೀಯ ಸ್ವರೂಪವು ಮೂರ್ತಿಗೊಂಡಿತು ಮತ್ತು ವಿಗ್ರಹಗಳ ನಿರ್ಮಾಣಕ್ಕೆ ಹೆಚ್ಚು ಪ್ರಾಶಸ್ತ್ಯ ಬಂತು. ವಿಗ್ರಹಗಳ ಕೆತ್ತನೆಯೂ ಹೆಚ್ಚಾಯಿತು. ಆ ಕಾಲದಲ್ಲಿ ಕೆತ್ತಿದ ವಿಗ್ರಹಗಳೆಲ್ಲವೂ ಬೌದ್ಧಮತಕ್ಕೆ ಸಂಬಂಧಿಸಿದ್ದುವಾಗಿದ್ದವು. ಮೊದಮೊದಲು ಕೆತ್ತಿದ ವಿಗ್ರಹಗಳು ಧೃಡಕಾಯವುಳ್ಳವುಗಳಾಗಿದ್ದು ಮುಗ್ಧಗೊಳಿಸುವಷ್ಟು ಅಂಗಸೌಷ್ಠವವನ್ನೂ ದೇಹಮಾರ್ದವವನ್ನೂ ವ್ಯಕ್ತಗೊಳಿಸುತ್ತವೆ. ಅಲ್ಲದೆ ಶಾಂತ ಸ್ವರೂಪವನ್ನು ಹೊಂದಿರುತ್ತವೆ. ಗುಡ್ಡಗಳನ್ನು ಕೊರೆದು ಗುಹಾಂತರ್ದೇವಾಲಯಗಳನ್ನು ನಿರ್ಮಿಸುವ ಪದ್ಧತಿ ಕ್ರಿ. ಶ. ಒಂದು ಎರಡನೆಯ ಶತಮಾನದಲ್ಲಿಯೇ ಪ್ರಾರಂಭವಾಗಿತ್ತು. ಕನ್ಹೇರಿ, ಕಾರ್ಲೆ, ಅಜಂತಾ ಈ ಸ್ಥಳಗಳಲ್ಲಿ ಗುಹಾಂತರ್ದೇವಾಲಯಗಳು ನಿರ್ಮಿತವಾಗಿದ್ದುವು. ಆಗ ಕೊರೆದವುಗಳೆಲ್ಲ ಬೌದ್ಧಮತಕ್ಕೆ ಸೇರಿದುವು. ಕ್ರಿ. ಶ. ೫ ನೆಯ ಶತಮಾನದಿಂದೀಚೆಗೆ ಬೌದ್ಧ, ಜೈನ ಮತ್ತು ವೈದಿಕ ಮತಗಳಿಗೂ ಗುಹಾಂತರ್ದೇವಾಲಯಗಳು ನಿರ್ಮಿತವಾದವು. ಅವುಗಳಲ್ಲಿ ಕಂಡು ಬರುವ ಶಿಲ್ಪ ಕೌಶಲ್ಯವು ಪ್ರಶಂಸನೀಯವಾಗಿತ್ತು. *

---

* ಗುಹೆಗಳನ್ನು ಕೊರೆಯುವ ವಿದ್ಯೆಯನ್ನು ಪರ್ಷಿಯಾ ದೇಶದಿಂದ ಅರಿತುಕೊಂಡದ್ದೆಂದೂ ಅಲ್ಲಿಂದಲೇ ಕೆಲವು ಕೆಲಸಗಾರರು ಬಂದು ಮೊದಲಿನ ಗುಹೆಗಳನ್ನು ಕೆತ್ತಿದರೆಂದೂ ಹೇಳುತ್ತಾರೆ. ಆದರೆ ೫ ನೆಯ ಶತಮಾನದಿಂದ ಈಚೆಗೆ ಕೊರೆಯಲ್ಪಟ್ಟಿರುವ ಗುಹಾಂತರ್ದೇವಾಲಯಗಳಲ್ಲಿ ಹೊರಗಿನವರ ಕೈವಾಡ ಕಂಡುಬರುವುದಿಲ್ಲ. ಇವುಗಳನ್ನೆಲ್ಲ ನಮ್ಮ ನಾಡಿನ ಶಿಲ್ಪಿಗಳೇ ನಿರ್ಮಿಸಿರಬೇಕೆಂದು ಧೃಡವಾಗಿ ಹೇಳಬಹುದು.

ನಮಗೆ ಗೊತ್ತಿರುವ ಹಾಗೆ ಕರ್ನಾಟಕದ ದಕ್ಷಿಣದಲ್ಲಿ ಕೇರಳ, ಪಾಂಡ್ಯ, ಚೋಳ ಎಂದು ಮೂರು ಮುಖ್ಯ ರಾಜ್ಯಗಳಿದ್ದುವು. ಇವರ ಜತೆಗೆ ಕ್ರಿ. ಶ. ನಾಲ್ಕನೆಯ ಶತಮಾನದ ಹೊತ್ತಿಗೆ ಪಲ್ಲವರು ತಲೆ ಎತ್ತಿದರು. ಪಲ್ಲವರ ಕಾಲ ದಲ್ಲಿ (ಕ್ರಿ. ಶ. ೬೦೦—೯೦೦) ಶಿಲ್ಪವು ವೃದ್ಧಿ ಹೊಂದಿತು. ಇವರು ಅನೇಕ ದೇವಾಲಯಗಳನ್ನು ಕಟ್ಟಿಸಿದರು. ಇವರ ವಂಶಕ್ಕೆ ಸೇರಿದ ನರಸಿಂಹವರ್ಮನು ಚಾಲುಕ್ಯ ದೊರೆಯಾದ ಪುಲಕೇಶಿಯನ್ನು ಗೆದ್ದುದರ ಜ್ಞಾಪಕಾರ್ಥವಾಗಿ ಮದ ರಾಸಿನ ಬಳಿ ಮಾಮಲ್ಲಪುರದಲ್ಲಿ ಸಪ್ತಮಂಟಪಗಳನ್ನು ಕಟ್ಟಿಸಿದನು. (Seven Pagodas) (ಕ್ರಿ. ಶ. ೬೪೫) ಇವೆಲ್ಲವೂ ಒಂದೇ ಕಲ್ಲುಬಂಡೆಗಳಲ್ಲಿ ಕೊರೆಯ ಲ್ಪಟ್ಟುವು. ಪಲ್ಲವರ ಪತನವಾದ ಮೇಲೆ ಚೋಳರು ತಲೆ ಎತ್ತಿದರು. (ಕ್ರಿ. ಶ. ೯೦೦—೧೧೫೦) ಚೋಳರು ಶಿಲ್ಪ ಪ್ರಿಯರು. ಹಲವು ಸುಂದರವಾದ ದೇವಾ ಲಯಗಳನ್ನು ಕಟ್ಟಿಸಿದರು. ಈ ವಿಷಯದಲ್ಲಿ ಇವರ ಕೀರ್ತಿ ಎಷ್ಟಿತ್ತೆಂದರೆ ದೇಶದಲ್ಲಿ ಎಲ್ಲಿ ಸುಂದರವಾದ ದೇವಾಲಯ ಕಂಡರೂ ಅದು "ಚೋಳಪ್ರತಿಷ್ಠೆ" ಎಂದು ಜನಗಳು ಹೇಳಲು ತೊಡಗಿದರು. ತಂಜಾವೂರಿನಲ್ಲಿ ರಾಜರಾಜನಿಂದ ಕಟ್ಟಿಸಲ್ಪಟ್ಟ ಗುಡಿಯು ಚೋಳರ ಶಿಲ್ಪಕ್ಕೆ ಒಳ್ಳೆಯ ಉದಾಹರಣೆ. ಈ ದೇವ ಸ್ಥಾನದ ಗೋಪುರವು ಸುಮಾರು ೨೦೦ ಅಡಿ ಎತ್ತರವಾಗಿದ್ದು ಅದರ ತಲೆಯ ಮೇಲೆ ಒಂದೇ ಕಲ್ಲಿನಲ್ಲಿ ಕೊರೆದ ಭಾರಿ ಶಿಖರವಿದೆ. ಚೋಳರ ವಾಸ್ತು ಕಲೆಯ ವಿಷಯದಲ್ಲಿ "ಅವರು ದೈತ್ಯರಂತೆ ಮನಸ್ಸುಮಾಡಿ ಅಕ್ಕಸಾಲಿಗರಂತೆ ಮುಗಿಸುತ್ತಿದ್ದರು" ಎಂದು ಒಬ್ಬ ಆಂಗ್ಲಪಂಡಿತನು ಹೇಳಿದ್ದಾನೆ. ಅವರ ಶಿಲ್ಪ ಚಾತುರ್ಯವು ಅಷ್ಟು ಸೊಗಸಾಗಿತ್ತು. ಅನಂತರ ಬಂದವರು ಪಾಂಡ್ಯರು (ಕ್ರಿ. ಶ. ೧೧೦೦—೧೩೫೦). ಇವರು ಮುಂಚೆಯೇ ೭ ನೆಯ ಶತಮಾನದಿಂದ ೧೨ ನೆಯ ಶತಮಾನದವರೆಗೆ ಸಾಮಂತರಾಜರಾಗಿ ಬಾಳಿದರು. ೧೩ ನೆಯ ಶತಮಾನದಲ್ಲಿ ದಕ್ಷಿಣ ಇಂಡಿಯಾದಲ್ಲಿ ಅವರೇ ಪ್ರಮುಖ ರಾಜರಾಗಿದ್ದರು. ಇವರಲ್ಲಿ ಸುಂದರಪಾಂಡ್ಯನು ಮುಖ್ಯನು. ಮಧುರೆ ಅವನ ರಾಜಧಾನಿಯಾಗಿತ್ತು. ಅವನು ಅಲ್ಲೊಂದು ಸುಂದರವಾದ ದೇವಾಲಯವನ್ನು ಕಟ್ಟಿಸಿದ್ದನಂತೆ ಇವೆಲ್ಲವೂ ಕಗ್ಗಲ್ಲಿನಲ್ಲಿ ಒಂದೇ ಶೈಲಿಯಲ್ಲಿ ನಿರ್ಮಿತವಾದವುಗಳು. ಈ ಶೈಲಿಗೆ ದ್ರಾವಿಡ ಶೈಲಿ ಎಂದು ಹೆಸರು. ಇವುಗಳಲ್ಲಿ ಶಿಲ್ಪವು ದೃಢವಾಗಿಯೂ, ಗಡುಸಾಗಿಯೂ, ಸ್ಫುಟ ವಾಗಿಯೂ ಕಂಡುಬರುತ್ತದೆ. ಇವುಗಳು ನಿರ್ಮಿತವಾಗಿ ಅನೇಕ ಶತಮಾನಗಳು

ಕಳೆದುಹೋಗಿದ್ದರೂ ನಿನ್ನೆಯೊ ಮೊನ್ನೆಯೊ ನಿರ್ಮಿಸಲ್ಪಟ್ಟಿರುವಂತೆ ಕಾಣುತ್ತಿವೆ.

ಉತ್ತರ ಹಿಂದುಸ್ಥಾನಕ್ಕೆ ದಕ್ಷಿಣ ಹಿಂದುಸ್ಥಾನಗಳ ಮಧ್ಯೆ ಇರುವ ಪ್ರದೇಶವಾದ ಕರ್ನಾಟಕದಲ್ಲಿ ಬೇರೆ ಒಂದು ಶಿಲ್ಪಕಲೆಯು ವೃದ್ಧಿಯಾಯಿತು. ಉತ್ತರ ಹಿಂದುಸ್ಥಾನದ ಕಲೆಯಂತೆ ಮಿಶ್ರವಾಗಿರದೆ, ಸ್ವತಂತ್ರವಾದ ಪೂರ್ಣ ಭಾರತೀಯವಾದ, "ಕರ್ನಾಟಕ" ವೆಂದು ಎನಿಸಿಕೊಳ್ಳುವ ಈ ಕಲೆ ವಿಂಧ್ಯಪರ್ವತದಿಂದ ಹಿಡಿದು ಕೃಷ್ಣಾ ನದಿಯವರೆಗೂ ಪಸರಿಸಿತು. ೬–೭ ನೆಯ ಶತಮಾನಗಳಲ್ಲಿ ಎಲ್ಲೋರಾ, ಅಜಂತಾ, ಬಾದಾಮಿ ಗುಹಾಂತರ್ದೇವಾಲಯಗಳಲ್ಲಿ ಹುಟ್ಟಿ ಹನ್ನೊಂದು ಹನ್ನೆರಡನೆಯ ಶತಮಾನಗಳಲ್ಲಿ ಪರಮಾವಧಿಯನ್ನು ಮುಟ್ಟಿ, ಹೊಯಿಸಳ ರಾಜರ ಅವನತಿಯ ಜತೆಯಲ್ಲಿಯೇ ಕೊನೆಗಂಡಿತು. ಮೊದಮೊದಲು ಕಠಿನವಾದ ಕಗ್ಗಲ್ಲಿನಲ್ಲಿ ಕೆತ್ತಲ್ಪಟ್ಟ ವಿಗ್ರಹಗಳು ಉನ್ನತವೂ, ಉದಾತ್ತವೂ, ಸರಳವೂ ಆಗಿದ್ದು ಜೀವಕಳೆಯಿಂದ ತುಂಬಿದ್ದುವು. ಬರಬರುತ್ತಾ ಮೃದುವಾದ, ಬಳಪದ ಕಲ್ಲನ್ನು ಉಪಯೋಗಿಸತೊಡಗಿದಾಗ, ವಿಗ್ರಹಗಳು ಸುಂದರವೂ, ಲಾವಣ್ಯಮಯವೂ, ಮನಮೋಹಕವೂ ಆದವು, ಚಿತ್ರಗಳಂತೂ ಅತ್ಯಂತ ನಾಜೋಕಾಗಿ ಕೊರೆಯಲ್ಪಟ್ಟವು. ಆದರೆ ಹಿಂದಿನ ಶತಮಾನಗಳಲ್ಲಿನ ಗುಹಾಂತರ್ದೇವಾಲಯಗಳಲ್ಲಿರುವ ವಿಗ್ರಹಗಳಲ್ಲಿ ಕಾಣಬರುವ ಭವ್ಯತೆಯೂ, ಓಜಸ್ಸೂ, ಲವಲವಿಕೆಯೂ ಹನ್ನೊಂದನೇ ಶತಮಾನದಿಂದ ಈಚೆಗೆ ನಿರ್ಮಿಸಲ್ಪಟ್ಟವುಗಳಲ್ಲಿ ಕಾಣಬರುವುದಿಲ್ಲ. ಆದಾಗ್ಯೂ ಕರ್ನಾಟಕ ಶಿಲ್ಪವು ತನ್ನದೇ ಆದ ಒಂದು ಸ್ವರೂಪವನ್ನು ತಾಳಿ ಇಡೀ ಜಗತ್ತಿನ ಮೆಚ್ಚುಗೆಯನ್ನು ಪಡೆದಿದೆ ಎಂದು ಹೇಳಿದರೆ ತಪ್ಪಾಗಲಾರದು.

ಭಾರತದ ಶಿಲ್ಪಕಲೆಯು ಮೊದಲಿನಿಂದಲೂ ಸ್ವತಂತ್ರವಾಗಿ ಬೆಳೆದುಬಂದಿದೆ. ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಶಿಲ್ಪಿಗಳ ತಂಡಗಳು ಹುಟ್ಟಿಕೊಂಡಿರುವುದನ್ನು ಸ್ಪಷ್ಟವಾಗಿ ಕಾಣಬಹುದು. ಉತ್ತರ ಹಿಂದುಸ್ಥಾನದಲ್ಲಿ ಮಥುರ, ಗಾಂಧಾರ, ಸಾರಾನಾಥ್ ಪಂಗಡಗಳು, ದಕ್ಷಿಣದಲ್ಲಿ ಅಮರಾವತಿ, ನಾಗಾರ್ಜುನ ಕೊಂಡಕ್ಕೆ ಸಂಬಂಧಪಟ್ಟಂತೆ ಆಂಧ್ರ ಪಂಗಡವೂ, ಅಲ್ಲಿಂದೀಚೆಗೆ ಚೋಳ ಪಲ್ಲವರಿಗೆ ಸೇರಿದ ದ್ರಾವಿಡ ಪಂಗಡವೂ, ಕರ್ಣಾಟಕ ಅರಸುಗಳ ಪ್ರೋತ್ಸಾಹಕ್ಕೆ ಒಳಪಟ್ಟ

ಕರ್ಣಾಟಕ ಪಂಗಡವೂ, ಇದ್ದಂತೆ ತೋರುತ್ತದೆ. ಕರ್ಣಾಟಕ ಶಿಲ್ಪಕಲಾವಿದರೂ ರೂವಾರಿಗಳೂ ಕಡೆದಿರಿಸಿರುವ ವಿಗ್ರಹಗಳಲ್ಲಿ ಉತ್ತರದ ಕಲಾಮೂರ್ತಿಗಳ ಅಂಗಸೌಷ್ಟವವೂ, ರೂಪುರೇಖಾಸ್ಪಷ್ಟತೆಯೂ, ದಕ್ಷಿಣ ದೇಶದ ಮೂರ್ತಿಗಳ ಲಾಲಿತ್ಯವೂ, ಸೊಬಗೂ, ಅಂಗವಿನ್ಯಾಸಗಳ ಸಿರಿಯೂ ಮೈಗೂಡಿಬಂದಿವೆ. ಈ ವಿಶಿಷ್ಟ ಸಮನ್ವಯದಿಂದ ನಮ್ಮ ಕಲಾವಿದರು ಸೃಜಿಸಿರುವ ಈ ಲೋಕೋತ್ತರವಾದ ಶಿಲ್ಪಕಲೆಯು ಜಗತ್ತಿನ ಮೆಚ್ಚಿಗೆಯನ್ನು ಪಡೆದಿರುವುದೇನು ಆಶ್ಚರ್ಯವಲ್ಲ.

ಕರ್ಣಾಟಕದ ಶಿಲ್ಪವನ್ನು ದೇವಾಲಯಗಳಲ್ಲದೆ ವೀರಗಲ್ಲು, ಮಾಸ್ತಿಕಲ್ಲುಗಳು, ಸ್ತಂಭಗಳು, ಜಾಲಂಧ್ರಗಳು, ಚಿತ್ರಪಟ್ಟಿಕೆಗಳು ಮತ್ತು ವಿಗ್ರಹಗಳು ಎಂಬದಾಗಿ ವಿಂಗಡಿಸಬಹುದು. ವೀರಗಲ್ಲುಗಳು ದೇಶದ ಎಲ್ಲ ಭಾಗಗಳಲ್ಲಿಯೂ ಕಂಡುಬರುತ್ತವೆ. ಇವು ಪ್ರತಾಪಶಾಲಿಯಾದ ಮನುಷ್ಯನೊಬ್ಬನು ಶತ್ರುಗಳೊಡನೆ ಹೋರಾಡಿ ಸತ್ತವಿಷಯವನ್ನು ಹೇಳಿ ಅವನು ವೀರಸ್ವರ್ಗಕ್ಕೆ ಹೋದ ವಿಷಯವನ್ನು ತಿಳಿಸುವಂಥವು. ಇಂತಹ ಪ್ರತಿ ಒಂದು ಕಲ್ಲೂ ಆತನು ಹೇಗೆ ಹೋರಾಡಿದನು, ಏತಕ್ಕಾಗಿ ಹೋರಾಡಿದನು ಎನ್ನುವದನ್ನು ಚಿತ್ರದಲ್ಲಿ ಕೊರೆದು ತೋರಿಸಿರುತ್ತದೆ. ಇಂಥವುಗಳಲ್ಲಿ ಕೆಲವು ಬಹು ಸುಂದರವಾಗಿ ಕೆತ್ತಲ್ಪಟ್ಟಿರುತ್ತವೆ. ತಿಪಟೂರು ತಾಲ್ಲೂಕು ಆಲ್ಬೂರಿನಲ್ಲಿ ಈಶ್ವರ ದೇವಾಲಯದ ಹತ್ತಿರ ನಿಂತಿರುವ ಕಲ್ಲು ಬಹು ಸೊಗಸಾಗಿದೆ. ಶಿವಮೊಗ್ಗ ಡಿಸ್ಟ್ರಿಕ್ಟು ಸೊರಬ ತಾಲ್ಲೂಕು ಮಾವಳ್ಳಿಯಲ್ಲಿರುವ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳು ಬಹು ಸುಂದರವಾಗಿವೆ. ಮಾಸ್ತಿಕಲ್ಲು ಎಂದರೆ ಮಹಾಸತಿಕಲ್ಲು. ಯಾವುದಾದರೂ ಒಬ್ಬ ಪತಿವ್ರತೆಯಾದ ಹೆಂಗಸು ತನ್ನ ಗಂಡನು ಸತ್ತುಹೋದರೆ ಅವನ ಜತೆಯಲ್ಲಿಯೇ ಚಿತಿಯನ್ನು ಏರಿ ಸಹಗಮನಮಾಡಿದ ಸಂಗತಿಯನ್ನು ಸೂಚಿಸುವಂತೆ ಆ ಸ್ಥಳದಲ್ಲಿ ನೆಟ್ಟಕಲ್ಲಿಗೆ ಮಾಸ್ತಿಕಲ್ಲು ಎಂದು ಹೆಸರು. ಇಂತಹ ಕಲ್ಲುಗಳು ದೇಶದಲ್ಲಿ ಎಲ್ಲೆಲ್ಲಿಯೂ ಕಂಡುಬರುತ್ತವೆ. ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಇರುವ ಒಂದು ಮಾಸ್ತಿಕಲ್ಲು ನೂಗು ಪಾಳೆಯಗಾರನ ಮಗಳು ದೇಕವ್ವೆ ತನ್ನ ಗಂಡನು ತಲಕಾಡಿನಲ್ಲಿ ಶತ್ರುಗಳಿಂದ ಕೊಲ್ಲಲ್ಪಟ್ಟ ಸಮಾಚಾರವನ್ನು ಕೇಳಿ ತಾನೂ ಪ್ರಾಣಬಿಟ್ಟ ಸಂಗತಿಯನ್ನು ಸೂಚಿಸುತ್ತದೆ. ಈ ಮಾಸ್ತಿಕಲ್ಲುಗಳು ಶಿಲ್ಪದೃಷ್ಟಿಯಿಂದ ಅಷ್ಟೇನೂ ಗಮನಾರ್ಹವಾಗಿರುವುದಿಲ್ಲ.

ಸ್ತಂಭಗಳು ಅನೇಕ ವಿಧವಾಗಿವೆ. ಜೈನ ಬಸ್ತಿಗಳ ಮುಂಭಾಗದಲ್ಲಿ ನಿಲ್ಲಿಸಿರುವ ಮಾನ ಸ್ತಂಭಗಳು ಮತ್ತು ಬ್ರಹ್ಮದೇವರ ಸ್ತಂಭಗಳು. ವೈದಿಕ ದೇವಾಲಯಗಳ ಮುಂದೆ ನಿಲ್ಲಿಸಿರುವ ಗರುಡಗಂಬಗಳು, ಧ್ವಜಸ್ತಂಭಗಳು, ಜಯಸ್ತಂಭಗಳು ಅಥವಾ ದೀಪಮಾಲೆ ಸ್ತಂಭಗಳು. ಈ ಸ್ತಂಭಗಳೆಲ್ಲ ಮೂವತ್ತು ಅಥವಾ ನಲವತ್ತು ಅಡಿ ಎತ್ತರವಿರುವುವು. ಐದು ಅಥವಾ ಆರು ಅಡಿ ಎತ್ತರವಾದ ಕಟ್ಟೆಯ ಮೇಲೆ ನಿಲ್ಲಿಸಲ್ಪಟ್ಟಿರುತ್ತವೆ. ಕಟ್ಟೆಯ ಸುತ್ತಲೂ ಚಿತ್ರಪಟ್ಟಿಕೆಗಳೂ, ವಿಗ್ರಹಗಳೂ ಇರುವುದುಂಟು. ಕಂಬವು ಬುಡದಲ್ಲಿ ಸ್ವಲ್ಪ ಎತ್ತರದವರೆಗೆ ಚಚ್ಚೌಕವಾಗಿಯೂ, ಅನಂತರ ಎಂಟು-ಹದಿನಾರು ಮುಖ ಗಳನ್ನುಳ್ಳದ್ದಾಗಿಯೂ, ಅನಂತರ ದುಂಡಗೂ ಮೇಲಕ್ಕೆ ಏರುತ್ತದೆ. ಕಂಬದ ಉದ್ದಕ್ಕೂ ಅಲ್ಲಲ್ಲೆ ಚಿತ್ರಪಟ್ಟಿಕೆಗಳಿರುತ್ತವೆ. ಜೈನ ಬಸ್ತಿಗಳ ಮುಂದಿರುವ ಮಾನ ಸ್ತಂಭದ ತುದಿಯಲ್ಲಿ ಒಂದು ಸಣ್ಣ ಮಂಟಪವೂ ಅದರಲ್ಲಿ ಒಂದು ಜೈನ ವಿಗ್ರಹವೂ ಇರುತ್ತವೆ. ಬ್ರಹ್ಮದೇವ ಸ್ತಂಭದ ತುದಿಯಲ್ಲಿ ಬ್ರಹ್ಮದೇವರ ವಿಗ್ರ ಹವು ಕೆತ್ತಿ ಕೂರಿಸಲ್ಪಟ್ಟಿರುತ್ತದೆ. ಶ್ರವಣಬೆಳಗೊಳದಲ್ಲಿ ಪಾರ್ಶ್ವನಾಥ ಬಸ್ತಿಯ ಮುಂಭಾಗದಲ್ಲಿ ನಿಂತಿರುವ ಮತ್ತು ಘಟ್ಟದ ಕೆಳಗೆ ಮೂಡಬಿದರೆಯಲ್ಲಿ ಗುರುಬಸದಿಯ ಮುಂಭಾಗದಲ್ಲಿರುವ ಮಾನ ಸ್ತಂಭಗಳು ಒಳ್ಳೆಯ ಉದಾಹರಣೆ ಗಳು. ಕಾರ್ಕಳದ ಹತ್ತಿರ ಹಳೆ ಅಂಗಡಿಯಲ್ಲಿಯೂ ಒಂದು ಸೊಗಸಾದ ಮಾನ ಸ್ತಂಭವಿದೆ.

ಶ್ರವಣಬೆಳಗೊಳದ ಚಂದ್ರಗಿರಿ ಬೆಟ್ಟದ ಮೇಲೆ ಪ್ರಾಕಾರದ ದಕ್ಷಿಣ ದ್ವಾರದ ಹತ್ತಿರ ಒಂದು ಬ್ರಹ್ಮದೇವರ ಸ್ತಂಭವಿದೆ. ಇದರ ಜಗಲಿಗೆ ಮೊದಲು ಅಷ್ಟ ದಿಗ್ಗಜಗಳು ಇದ್ದಂತೆ ತೋರುತ್ತದೆ. ಅಲ್ಲಿಯೇ ಇನ್ನೊಂದು ಬೆಟ್ಟದ ಮೇಲೆ ಇರುವ ತ್ಯಾಗದ ಬ್ರಹ್ಮದೇವರ ಸ್ತಂಭವೂ ಇದೆ. ಮಂಡ್ಯ ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕು ಕಂಬದ ಹಳ್ಳಿಯಲ್ಲಿ ೫೦ ಅಡಿ ಎತ್ತರದ ಬ್ರಹ್ಮದೇವರ ಸ್ತಂಭವಿದೆ. ಇದರ ತುದಿಯಲ್ಲಿ ಒಂದು ಬ್ರಹ್ಮದೇವ ವಿಗ್ರಹವೂ ಕೂರಿಸಲ್ಪಟ್ಟಿದೆ. ಸುತ್ತಲೂ ಗಂಟೆಗಳನ್ನು ತಗಲು ಹಾಕಿದೆ. ಈ ದೇಶದಲ್ಲೆಲ್ಲ ಇದೇ ಅತ್ಯಂತ ಎತ್ತರವಾದ ಸ್ತಂಭವೆಂದು ತೋರುತ್ತದೆ. ಗರುಡಗಂಬ, ಧ್ವಜಸ್ತಂಭ ವೈದಿಕ ದೇವಾಲಯಗಳ ಮುಂಭಾಗದಲ್ಲಿ ಇರುತ್ತದೆ. ಕೆಲವುಗಳ ತುದಿಯಲ್ಲಿ

ಕಲಶವೂ, ಇನ್ನು ಕೆಲವುಗಳ ತುದಿಯಲ್ಲಿ ದೀಪದ ಹಣತೆಯೂ ಇರುತ್ತದೆ. ಈ ಸ್ತಂಭಗಳೆಲ್ಲ ಬಹಳ ನಾಜೂಕಾಗಿ ಕೆತ್ತಲ್ಪಟ್ಟು ನೋಡುವುದಕ್ಕೆ ಅಂದವಾಗಿರುತ್ತವೆ. ಮಂಡ್ಯ ಡಿಸ್ಟ್ರಿಕ್ಟು ನಾಗಮಂಗಲದಲ್ಲಿ ಸೌಮ್ಯಕೇಶವ ದೇವಾಲಯದ ಮುಂಭಾಗದಲ್ಲಿರುವ ಧ್ವಜಸ್ತಂಭವು ಬಹು ಸೊಗಸಾಗಿದೆ. ಇದು ಐವತ್ತೈದು ಅಡಿ ಎತ್ತರವಿದ್ದು ಮೇಲಿನಿಂದ ಕೆಳಗಿನವರೆಗೂ ಚಿತ್ರಪಟ್ಟಿಕೆಗಳಿಂದ ಅಲಂಕೃತವಾಗಿದೆ. ಸಾವನ ದುರ್ಗದ ಬೆಟ್ಟದ ಮೇಲೆ ಅರವತ್ತು ಅಡಿ ಎತ್ತರದ ದೀಪಸ್ತಂಭವಿದೆ ಕೋಲಾರ ಡಿಸ್ಟ್ರಿಕ್ಟು ಕಂದವಾರದಲ್ಲಿಯೂ, ತುಮಕೂರು ಡಿಸ್ಟ್ರಿಕ್ಟು ಮಿಡಿಗೇಸಿಯಲ್ಲಿಯೂ ಉಮ್ಮತ್ತೂರಿನಲ್ಲಿಯೂ, ಕಡಬದಲ್ಲಿಯೂ ಇರುವ ಗರುಡಗಂಬಗಳು ಅಂದವಾಗಿವೆ. ನುಗ್ಗಿಹಳ್ಳಿಯ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ಮುಂಭಾಗದಲ್ಲಿ ಒಂದು ಧ್ವಜಸ್ತಂಭವೂ ಅದರ ಪಕ್ಕದಲ್ಲಿ ಒಂದು ಜಯಸ್ತಂಭವೂ ಇವೆ. ಈ ಜಯಸ್ತಂಭವನ್ನು ದೇವಾಲಯವನ್ನು ಕಟ್ಟಿದ ಸ್ಥಪತಿಯು ಇತರರ ಮೇಲೆ ತಾನು ಗೆದ್ದ ಜ್ಞಾಪಕಾರ್ಥವಾಗಿ ಕಟ್ಟಿದನೆಂದು ಪ್ರತೀತಿ. ಶಿವಮೊಗ್ಗ ಡಿಸ್ಟ್ರಿಕ್ಟು ಷಿಕಾರಿಪುರದ ತಾಲ್ಲೂಕು ಬೆಳಗಾಂವಿಯಲ್ಲಿ ಕದಂಬರ ಕಾಲದ ಒಂದು ಗಂಡಭೇರುಂಡ ಸ್ತಂಭವಿತ್ತು. ಎತ್ತರವಾದ ಜಗಲಿಯ ಮೇಲೆ ಸುಮಾರು ಐವತ್ತು ಅಡಿ ಎತ್ತರವಿರುವ ಕಲ್ಲುಕಂಬ. ಅದರ ತುದಿಯಲ್ಲಿ ಎತ್ತರವಾಗಿ ನಿಂತಿರುವ ಗಂಡಭೇರುಂಡ ವಿಗ್ರಹ ಇತ್ತು. ವಿಗ್ರಹವು ಬಹು ಸೊಗಸಾಗಿತ್ತು. ಈ ಕಂಬವು ಈಗ್ಗೆ ಕೆಲವು ವರ್ಷಗಳ ಹಿಂದೆ ಮುರಿದು ಬಿದ್ದುಹೋಯಿತು. ಕೃಷ್ಣರಾಜಪೇಟೆ ತಾಲ್ಲೂಕು ಅಗ್ರಹಾರ ಬಾಚಳ್ಳಿ ಗ್ರಾಮದ ಊರಿನ ಮುಂದೆ ಮೂರು ಕಲ್ಲುಕಂಬಗಳು ನಿಂತಿವೆ. ಅವುಗಳ ಪ್ರತಿಯೊಂದರ ತುದಿಯಲ್ಲಿಯೂ ಒಂದು ಆನೆ, ಆನೆಯ ಕತ್ತಿನ ಮೇಲೆ ಗರುಡ ವಿಗ್ರಹ, ಅದರ ಹಿಂದುಗಡೆ ಆನೆಯ ಬೆನ್ನಿನ ಮೇಲೆ ಮೂರು ಅಥವಾ ನಾಲ್ಕು ಮನುಷ್ಯರು ಈ ರೀತಿ ಕೆತ್ತಿದೆ. ಇದು ಚಾಳುಕ್ಯ ದೊರೆಯಾದ ಸೋಮೇಶ್ವರ ದೇವನ ಆಳ್ವಿಕೆಯ ಒಂದು ಚರಿತ್ರೆಯ ಅಂಶವನ್ನು ತೋರ್ಪಡಿಸುವ ಕಂಬಗಳೆಂದು ಹೇಳಿದೆ. ಇವುಗಳಲ್ಲದೆ ಕಲ್ಲಿನಲ್ಲಿ ಸೊಗಸಾದ ಕೆತ್ತನೆಯ ಕೆಲಸದಿಂದ ಕೂಡಿದ ಮಹಾದ್ವಾರದಂತಿರುವ ಕೀರ್ತಿ ಸ್ತಂಭಗಳು. ಇವುಗಳನ್ನು ತೋರಣಗಳೆಂದೂ ಉಯ್ಯಾಲೆ ಕಂಬಗಳೆಂದೂ ಕರೆಯುತ್ತಾರೆ. ಐಹೊಳೆಯಲ್ಲಿ ಗಳಗನಾಥ ದೇವಾಲಯದ ಮುಂಭಾಗದಲ್ಲಿಯೂ, ಇನ್ನೊಂದು ಅದೇ ಊರಿನ ಒಂದು

ಹಳೆಯ ಕಲ್ಯಾಣಿಯ ಮುಂಭಾಗದಲ್ಲಿಯೂ ಇವೆ. ಮತ್ತು ವಿಜಯನಗರ ಪಟ್ಟಣವಾದ ಹಂಪೆಯಲ್ಲಿಯೂ ಅಮೃತೂರಿನಲ್ಲಿಯೂ ಇವೆ. ಈಗ ಆಂಧ್ರದಲ್ಲಿ, ಮೈಸೂರು ರಾಜ್ಯದಿಂದ ಹೊರಗಿರುವ ವರಂಗಲ್ಲಿನ ಕೀರ್ತಿಸ್ತಂಭವು ಚಿತ್ರದ ಕೆಲಸದಿಂದ ಕೂಡಿದೆ. ನೋಡಲು ಅಂದವಾಗಿದೆ. ಕಂಬಗಳನ್ನು ಕೊರೆದು ದೇವಸ್ಥಾನದ ಮುಂದೆ ನೆಡಿಸಿ ಅದರಲ್ಲಿ ಶಾಸನವನ್ನು ಕೊರೆಯುವ ಪದ್ಧತಿ ಇತ್ತೆಂದು ತೋರುತ್ತದೆ. ಇಂತಹ ಪುರಾತನ ಶಾಸನ ಸ್ತಂಭಗಳು ಎರಡು ಈ ದೇಶದಲ್ಲಿ ದೊರೆತಿವೆ. ಷಿಕಾರಿಪುರ ತಾಲ್ಲೂಕಿನ ತಾಳಗುಂದದಲ್ಲಿ ಪುರಾತನ ಪ್ರಣವೇಶ್ವರ ದೇವಾಲಯದ ಮುಂಭಾಗದಲ್ಲಿ ಒಂದು ಶಾಸನ ಕಂಬವಿದೆ. ಇದು ಕ್ರಿ. ಶ. ಐದನೆಯ ಶತಮಾನಕ್ಕೆ ಸೇರಿದ್ದು. ಪ್ರಣವೇಶ್ವರ ದೇವಾಲಯ ಎರಡು ಮೂರನೆಯ ಶತಮಾನದ್ದಿರಬಹುದೆಂದು ಊಹಿಸಲಾಗಿದೆ. ಮೈಸೂರು ರಾಜ್ಯದಲ್ಲಿ ಇದೇ ಅತ್ಯಂತ ಪುರಾತನವಾದ ದೇವಾಲಯವೆಂದು ಕಾಣುತ್ತದೆ. ಇನ್ನೊಂದು ಶಾಸನ ಕಂಬ ಅದೇ ತಾಲ್ಲೂಕಿನ ಮಳವಳ್ಳಿಯಲ್ಲಿದೆ. ಇದು ಕ್ರಿ. ಶ. ಎರಡನೆಯ ಶತಮಾನಕ್ಕೆ ಸೇರಿದ್ದು. ಅಶೋಕನ ಶಾಸನಗಳ ತರುವಾಯ ಇದೇ ಅತ್ಯಂತ ಪುರಾತನವಾದ ಶಾಸನ.

ಕಲ್ಲಿನಲ್ಲಿ ಕೊರೆದ ಜಾಲಂಧ್ರಗಳು, ಶಿಲ್ಪಗಳ ಕುಶಲತೆಯನ್ನು ತೋರಿಸುವಂಥವು ಅನೇಕ ದೊರೆಯುತ್ತವೆ. ಪ್ರತಿ ದೇವಸ್ಥಾನದ ಸುಕನಾಸಿಯ ದ್ವಾರದ ಅಕ್ಕಪಕ್ಕಗಳಲ್ಲಿ ಜಾಲಂಧ್ರಗಳನ್ನು ನಿಲ್ಲಿಸಿರುವುದು ಕರ್ನಾಟಕ ಶೈಲಿಯ ಪದ್ಧತಿಯಾಗಿದೆ. ಇದಲ್ಲದೆ ಕೆಲವು ದೇವಸ್ಥಾನಗಳಲ್ಲಿ–ಉದಾಹರಣೆಗೆ ಬೇಲೂರಿನ ಕೇಶವ ದೇವಾಲಯ–ನವರಂಗದ ಗೋಡೆಯ ತುಂಬಾ ಜಾಲಂಧ್ರಗಳನ್ನು ನಿಲ್ಲಿಸಿರುತ್ತಾರೆ. ಜಾಲಂಧ್ರದ ಹೊರ ಭಾಗದಲ್ಲಿ ಚಿತ್ರಗಳನ್ನು ಕೊರೆದಿರುತ್ತಾರೆ. ಇಂತಹ ಜಾಲಂಧ್ರಗಳನ್ನು ಶ್ರವಣಬೆಳಗೊಳದ ಚಂದ್ರಗುಪ್ತ ಬಸ್ತಿಯಲ್ಲಿಯೂ, ಬಂದನಿಕೆಯಲ್ಲಿ ಪಾಳು ಬಿದ್ದಿರುವ ಸೋಮೇಶ್ವರ ದೇವಾಲಯದಲ್ಲಿಯೂ ನೋಡಬಹುದು.

ನಾಜೂಕಾಗಿ ಕೊರೆದ ಚಿತ್ರಪಟ್ಟಿಕೆಗಳು ಕರ್ನಾಟಕ ಶೈಲಿಯ ಒಂದು ವೈಶಿಷ್ಟ್ಯ. ಈ ಪಟ್ಟಿಕೆಗಳು ಸಾಲು ಸಾಲಾಗಿ ಬುಡದಿಂದ ಐದು ಆರು ಅಡಿ ಮೇಲಿನವರೆಗೂ ಎಲ್ಲ ದೇವಾಲಯಗಳಲ್ಲಿಯೂ ಕಂಡುಬರುತ್ತವೆ. ಒಂದು

ಸಾಲಿನಲ್ಲಿ ಆನೆಗಳು, ಇನ್ನೊಂದರಲ್ಲಿ ಕುದುರೆಗಳೂ, ರಾವುತರೂ, ಮತ್ತೊಂದರಲ್ಲಿ ಹಂಸಗಳು, ಮಗದೊಂದರಲ್ಲಿ ಬಳ್ಳಿಗಳೂ, ಬಳ್ಳಿಗಳ ಮಧ್ಯದಲ್ಲಿ ನರ್ತನ ಮಾಡುತ್ತಿರುವ ಸಣ್ಣ ವಿಗ್ರಹಗಳು- ಈ ರೀತಿ ವಿಧವಿಧವಾಗಿ ಕೆತ್ತಲ್ಪಟ್ಟಿರುತ್ತವೆ. ಕರ್ನಾಟಕ ರೂವಾರಿಗಳು ಮೃದುವಾದ ಕಲ್ಲನ್ನು ಉಪಯೋಗಿಸಿರುವುದರಿಂದ ಅತ್ಯಂತ ನಾಜೂಕಾಗಿ ಕೊರೆಯಲು ಅವರಿಗೆ ಸಾಧ್ಯವಾಗಿತ್ತೆಂದು ಹೇಳಬಹುದು. ಅಷ್ಟು ಸೂಕ್ಷ್ಮವಾಗಿ ಕೊರೆಯುವುದಕ್ಕೆ ಅವರು ಉಪಯೋಗಿಸುತ್ತಿದ್ದ ಆಯುಧಗಳಾದರೂ ಎಷ್ಟು ಹರಿತವಾಗಿಯೂ ಮೊನಚಾಗಿಯೂ ಇರಬಹುದು ಎನ್ನುವುದನ್ನು ಊಹಿಸುವುದಕ್ಕೆ ಕೂಡ ಸಾಧ್ಯವಿಲ್ಲದೆ ಹೋಗುತ್ತದೆ.

ವಿಗ್ರಹಗಳ ನಿರ್ಮಾಣ ಕೌಶಲ್ಯವನ್ನಂತೂ ವರ್ಣಿಸಲು ಅಸಾಧ್ಯ. ಅತ್ಯಂತ ದೊಡ್ಡದಾದ ಗೋಮಟೇಶ್ವರ ವಿಗ್ರಹಗಳು, ಹಂಪೆಯ ನಾರಸಿಂಹ ಮತ್ತು ಸಾಸಿವೆಕಾಳು ಗಣಪತಿ ಎನ್ನಿಸಿಕೊಳ್ಳುವ ವಿಗ್ರಹಗಳೂ ಕೆಲವು ಈಶ್ವರ ದೇವಾಲಯಗಳ ಮುಂದೆ ನಿಲ್ಲಿಸಿರುವ ದೊಡ್ಡ ದೊಡ್ಡ ನಂದಿ ವಿಗ್ರಹಗಳಾಗಲಿ— ಉದಾಹರಣೆಗೆ, ಹಳೇಬೀಡಿನ ಹೊಯಿಸಳೇಶ್ವರ ದೇವಾಲಯದಲ್ಲಿ, ಬೆಂಗಳೂರು ಬಸವೇಶ್ವರ ದೇವಾಲಯದಲ್ಲಿ, ಮತ್ತು ಮೈಸೂರು ಚಾಮುಂಡಿ ಬೆಟ್ಟದ ಮೇಲೆ-* ಅಥವಾ ದೇವಾಲಯಗಳ ಕಂಭಗಳಲ್ಲಿ ಅತ್ಯಂತ ಸೂಕ್ಷ್ಮವಾಗಿ ಕೆತ್ತಿರುವ ನಂದಿ ವಿಗ್ರಹಗಳಾಗಲಿ ನರ್ತಕಿಯರ ವಿಗ್ರಹಗಳಾಗಲಿ, ಉದಾಹರಣೆಗೆ- ಬೇಲೂರು ವಿಜಯ ನಾರಾಯಣ ದೇವಾಲಯದ ನವರಂಗದಲ್ಲಿನ ಕಂಬದಲ್ಲಿಯೂ, ಲಕ್ಕುಂಡಿ ದೇವಸ್ಥಾನಗಳ ಬಾಗಿಲುವಾಡಗಳಲ್ಲಿಯೂ ಅಂಗ ವಿನ್ಯಾಸ, ದೇಹರಚನೆ, ಆಭರಣದ ಔಚಿತ್ಯ, ಮನಮೋಹಕ ಭಂಗಿ, ಇವುಗಳಲ್ಲಿ ಸ್ವಲ್ಪವೂ ಸೌಂದರ್ಯಕ್ಕೆ ಭಂಗ ಬರದಂತೆ ಕೆತ್ತಲ್ಪಟ್ಟಿರುತ್ತವೆ. ಕರ್ನಾಟಕ ಶೈಲಿಯ ದೇವಾಲಯಗಳ ಹೊರಮುಖವೆಲ್ಲ ದೇವತಾವಿಗ್ರಹಗಳಿಂದ ತುಂಬಿಹೋಗಿರುತ್ತದೆ. ಪ್ರತಿ ಒಂದೂ ಶಾಸ್ತ್ರಸಮ್ಮತವಾಗಿ ಕೆತ್ತಲ್ಪಟ್ಟಿರುತ್ತವೆ. ದೇವಾಲಯಗಳ ಗರ್ಭಗೃಹದಲ್ಲಿರುವ ಮೂಲವಿಗ್ರಹಗಳಂತೂ ಸೌಂದರ್ಯ ನಿಧಿಗಳು. ದೇವಾಲಯಗಳ ಅರ್ಚಕರು ಅಲಂಕಾರ ಮಾಡುತ್ತೇವೆಂದು ಹೋಗಿ ವಿಕಾರವಾಗಿ ಮಾಡಿಡದೆ

---

* ೧೬೫೯-೧೬೭೨ ಮೈಸೂರಿನಲ್ಲಿ ಆಳುತ್ತಿದ್ದ ದೊಡ್ಡದೇವರಾಜ ಅರಸಿನವರು ಇದನ್ನು ಸ್ಥಾಪಿಸಿದರು. ಇದರ ಉದ್ದ ೨೫ ಅಡಿ, ಎತ್ತರ ೧೬ ಅಡಿ.

ಹೋದಲ್ಲಿ, ಅವುಗಳ ಸೌಂದರ್ಯವನ್ನು ನೋಡುವುದಕ್ಕೆ ಎರಡು ಕಣ್ಣುಗಳೂ ಸಾಲವೆಂದೆನಿಸುತ್ತದೆ. ಕರ್ನಾಟಕ ವಾಸ್ತು ಶೈಲಿಯ ಮತ್ತೊಂದು ವಿಶೇಷವೆಂದರೆ, ಕಂಬಕ್ಕೂ ಮೇಲಿನ ತೊಲೆಗೂ ಊರೆಕೊಟ್ಟು ನಿಲ್ಲಿಸಿರುತ್ತಿದ್ದ ಶಿಲಾಬಾಲಿಕೆಯರ ವಿಗ್ರಹಗಳು. ಇವುಗಳನ್ನು ಕೆತ್ತುವುದರಲ್ಲಿ ಕರ್ನಾಟಕ ರೂವಾರಿಗಳು ತಮ್ಮ ಕೌಶಲ್ಯದ ಪರಾಕಾಷ್ಠತೆಯನ್ನು ವ್ಯಕ್ತಪಡಿಸಿದ್ದಾರೆ. ಇವುಗಳನ್ನು ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರು "ಮದನಿಕೆ" ವಿಗ್ರಹಗಳೆಂದು ಕರೆದಿದ್ದಾರೆ. ಇಂತಹ ವಿಗ್ರಹಗಳು ಪ್ರಾಯಶಃ ಎಲ್ಲ ದೇವಾಲಯಗಳಲ್ಲಿಯೂ ಇದ್ದುವೆಂದು ತೋರುತ್ತದೆ. ಈಗ ಕೆಲವು ಬೇಲೂರು ದೇವಾಲಯದಲ್ಲಿಯೂ ಹಳೇಬೀಡು ದೇವಾಲಯಗಳಲ್ಲಿಯೂ, ಇನ್ನೂ ಕೆಲವು ದೇವಾಲಯಗಳಲ್ಲಿಯೂ ಅಲ್ಲೊಂದು ಇಲ್ಲೊಂದು ಕಂಡು ಬರುತ್ತಿವೆ. ಮಿಕ್ಕವುಗಳೆಲ್ಲ ಪರದೇಶಗಳಿಗೆ ಒಯ್ಯಲ್ಪಟ್ಟಿರಬೇಕೆಂದು ತೋರುತ್ತದೆ. ಬೆಳಗಾಮಿನ ಹತ್ತಿರ ಇರುವ ದೆಗಾಂವೆಯ ಕಲ್ಲುಗುಡಿಯಲ್ಲಿಯೂ ಬಳ್ಳಾರಿ ಡಿಸ್ಟ್ರಿಕ್ಟಿನ ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯದಲ್ಲಿಯೂ ಕೆಲವು ಭಿನ್ನವಾದ ವಿಗ್ರಹಗಳಿವೆ.

ವಿಜಯನಗರ ಸಾಮ್ರಾಜ್ಯದ ಉಚ್ಛ್ರಾಯ ಕಾಲದಲ್ಲಿ ಎಲ್ಲೆಲ್ಲಿಯೂ ಕಟ್ಟಿಸಿದ ದೇವಾಲಯಗಳೆಲ್ಲವೂ ಕಗ್ಗಲ್ಲಿನಲ್ಲಿ ನಿರ್ಮಿತವಾದವು. ಈ ಕಲ್ಲು ಅತಿ ಗಡುಸಾಗಿಯೂ ನಾಜೂಕಾಗಿ ಕೊರೆಯಲು ಅತ್ಯಂತ ಕಷ್ಟಸಾಧ್ಯವಾದುದಾಗಿಯೂ ಇದೆ. ಆದಾಗ್ಯೂ ಹಂಪೆಯಲ್ಲಿ ಈಗಲೂ ನಿಂತಿರುವ ಪಾಳುದೇವಸ್ಥಾನಗಳಲ್ಲಿನ ಕೆತ್ತನೆಯ ಕೆಲಸ ನೋಡುವವರನ್ನು ಮುಗ್ಧಗೊಳಿಸುವಂತಿದೆ. ಕ್ರಿ. ಶ. ಹತ್ತು, ಹನ್ನೊಂದು, ಹನ್ನೆರಡನೆಯ ಶತಮಾನಗಳಲ್ಲಿ ಹೊಯಿಸಳ ಅರಸರ ಪೋಷಣೆಯಲ್ಲಿದ್ದ ರೂವಾರಿಗಳ ತಂಡವೂ ದಕ್ಷಿಣ ದೇಶದಿಂದ ಪಲ್ಲವ ಚೋಳ ರಾಜರ ಪೋಷಣೆಯಲ್ಲಿದ್ದ ದ್ರಾವಿಡ ರೂವಾರಿಗಳ ತಂಡವೂ ಸೇರಿ ವಿಜಯನಗರದ ದೇವಾಲಯಗಳನ್ನೂ ಇತರ ಕಟ್ಟಡಗಳನ್ನೂ ನಿರ್ಮಿಸಿರಬಹುದೆಂದು ಊಹಿಸಬಹುದಾಗಿದೆ. ಒಟ್ಟಿನಲ್ಲಿ ವಿಜಯನಗರದ ಶಿಲ್ಪ ಕಲೆಯು ದ್ರಾವಿಡ ರೂವಾರಿಗಳ ಪಳಗಿದ ಕೈಚಳಕವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತದೆ.

"ಒಂದು ದೇಶದ ಕಲಾಕೃತಿಗಳನ್ನು ಅದರ ಸ್ವೀಯ ಚರಿತ್ರೆ ಎಂದು ಹೇಳುವುದುಂಟು. ಒಂದು ಜನರ ಕಾವ್ಯ, ಸಂಗೀತ, ಶಿಲ್ಪ, ಚಿತ್ರಣ–ಇವುಗಳಲ್ಲಿ

ಆ ಜನದ ಸ್ವಭಾವ ವ್ಯಕ್ತಪಟ್ಟಿರುತ್ತದೆ. ಅವರ ಮನಸ್ಸಿನ ಅಂತರಾಳದಲ್ಲಿ ಅಡಗಿಕೊಂಡಿರುವ ಗುಣಶಕ್ತಿಗಳು ಎಂಥವು, ಅವರ ಮೂಲಧ್ಯೇಯ ಸಂಕಲ್ಪಗಳು ಎಂಥವು ಎಂಬುದಕ್ಕೆ ಕಲಾಕೃತಿಗಳು ಸಾಕ್ಷೀಭೂತವಾಗಿರುತ್ತವೆ. ನಮ್ಮ ದೇಶದಲ್ಲಿ ಸಾಹಿತ್ಯವನ್ನು ಬಿಟ್ಟರೆ, ಜನರ ಅಂತರಂಗ ಚರಿತ್ರೆ ಮೂರ್ತೀಭವಿಸಿ ನಿಂತಿರುವುದು ನಮ್ಮ ದೇವಾಲಯ ಶಿಲ್ಪದಲ್ಲಿ—ಅದರಲ್ಲಿಯೂ ದಕ್ಷಿಣ ದೇಶದ ದೇವಾಲಯಗಳಲ್ಲಿ, ನಮ್ಮ ಪೂರ್ವಿಕರು ಮನುಷ್ಯಕೃತಿಗಳಲ್ಲಿ ಶಾಶ್ವತವಾಗಿರಬಹುದಾದದ್ದೂ, ಹಾಗೆ ಇರಲರ್ಹವಾದದ್ದೂ, ದೇವಮಂದಿರವೊಂದೇ ಎಂದು ತಿಳಿದುಕೊಂಡಿದ್ದಂತೆ ಕಾಣುತ್ತದೆ. ಗುಡಿಯೇ ಊರಿನ ಜೀವನ ಕೇಂದ್ರ. ಜನ ತಮ್ಮ ಆಹಾರ ನಿದ್ರೆ ಉದ್ಯೋಗಗಳ ವೇಳೆ ಬಿಟ್ಟು, ಮಿಕ್ಕೆಲ್ಲ ಹೊತ್ತನ್ನೂ ಗುಡಿಯ ಆವರಣದೊಳಗೇ ಕಳೆಯುತ್ತಿದ್ದರು. ಅದೇ ಅವರ ಪಾಠಶಾಲೆ, ಅವರ ಚಾವಡಿ, ಅವರ ನ್ಯಾಯಸ್ಥಾನ. ಅಲ್ಲಿಯೇ ಪುರಾಣಶ್ರವಣ, ಸಂಗೀತ, ನರ್ತನ. ಅಲ್ಲಿಯೇ ಬಂಧು ಮಿತ್ರರ ದರ್ಶನ, ಊರಿನ ಯೋಗಕ್ಷೇಮ ವಿಚಾರ, ವಿನೋದ ಕಾಲಕ್ಷೇಪ, ಮಂಗಳಕಾರ್ಯ. ಹೀಗೆ ನಮ್ಮ ಪೂರ್ವಿಕರಿಗೆ ಊರಿನಲ್ಲಿ ಮನೆಗಿಂತ ಮುಖ್ಯವಾದದ್ದು ದೇವಸ್ಥಾನ. ಸುಖದಲ್ಲಿ ಸುಕೃತಕ್ಕೂ ದುಃಖದಲ್ಲಿ ಧೈರ್ಯಕ್ಕೂ ಆಕರ ಭೂಮಿಯಾಗಿದ್ದದ್ದು ದೇವಸನ್ನಿಧಿ." *

---

* ಡಿ. ವಿ. ಜಿ. ಯವರ 'ಆಕಾಶವಾಣಿ' ಭಾಷಣದಿಂದ.

ದೇವಾಲಯಗಳ ನಿರ್ಮಾಣದ ಕಾಲದಿಂದಲೇ ಲೋಹದಲ್ಲಿಯೂ ಮೂರ್ತಿಗಳನ್ನು ನಿರ್ಮಿಸುವ ಕಲೆಯು ನೆಲಸಿತ್ತೆಂದು ಊಹಿಸಬಹುದಾದರೂ ನಿರ್ದಿಷ್ಟವಾಗಿ ಹೇಳಲು ಸಾಕಷ್ಟು ಆಧಾರಗಳು ದೊರೆತಿಲ್ಲ. ಎಲ್ಲ ದೇವಾಲಯಗಳಲ್ಲಿಯೂ ಮೂಲದೇವರ ಜತೆಯಲ್ಲಿ ಉತ್ಸವ ದೇವರು ಇದ್ದೇ ಇರಬೇಕೆಂದು ಹೇಳಬಹುದು. ಹತ್ತು, ಹನ್ನೊಂದನೆಯ ಶತಮಾನದಿಂದ ಈಚೆಗೆ ನಿರ್ಮಿಸಿರುವ ಉತ್ಸವ ವಿಗ್ರಹಗಳು ಬಹು ಸುಂದರವಾದವುಗಳಾಗಿವೆ. ಅದರಲ್ಲಿಯೂ ಚೋಳರ ಕಾಲದಲ್ಲಿ ತಯಾರಾಗಿರುವ ನಟರಾಜ, ರಾಮ, ಕೃಷ್ಣ, ಪಾರ್ವತಿ, ಲಕ್ಷ್ಮಿ ವಿಗ್ರಹಗಳು, ದಕ್ಷಿಣಾಮೂರ್ತಿ ವಿಗ್ರಹಗಳು ಅನೇಕ ದೇವಾಲಯಗಳಲ್ಲಿ ಕಣ್ಣಿಗೆ ಬೀಳುತ್ತಿವೆ. ತಾಮ್ರ, ಹಿತ್ತಾಳೆ ಅಥವಾ ಪಂಚಲೋಹದಲ್ಲಿ ಎರಕ ಹೊಯ್ದು ಮೂರ್ತಿಗಳನ್ನು ಮಾಡುವ ವಿದ್ಯೆಯು ಕ್ರಿ. ಶ. ೬ ನೆಯ ಶತಮಾನದಲ್ಲಿಯೇ ದಕ್ಷಿಣ ಭಾರತದಲ್ಲಿ ಇತ್ತೆಂದೂ ಅಲ್ಲಿಂದಲೆ ತಯಾರಾದ ವಿಗ್ರಹಗಳನ್ನು ಜಾವಾ ದ್ವೀಪಕ್ಕೆ ಕಳುಹಿಸಲ್ಪಟ್ಟಿತೆಂದೂ ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ ಬ್ರಿಟಿಷರ ಆಳ್ವಿಕೆಯಿಂದ ಈಚೆಗೆ ಆ ಕಲೆಯು ಪ್ರೋತ್ಸಾಹವಿಲ್ಲದೆ ನಶಿಸಿ ಹೋಯಿತು. ಶ್ರೀರಂಗ

ಶಿಲ್ಪಿಯಾದರೋ ತಾನು ಮಾಡುವ ಕಾರ್ಯವು ದೇವರ ಸೇವೆಯೆಂದೂ ಆ ಮೂಲಕವೇ ದೈವ ಕೃಪೆಯನ್ನು ಸಾಧಿಸಲು ಸಾಧ್ಯವೆಂದೂ ತಿಳಿದಿರುತ್ತಿದ್ದನು. ಆದ್ದರಿಂದಲೇ ಆತನು ಮಾಡುವ ಕೆಲಸವನ್ನು ಕಾಯಾ ವಾಚಾ ಮನಸಾ ಧೃಡಸಂಕಲ್ಪನಾಗಿ, ತನ್ನ ಎಲ್ಲ ಶಕ್ತಿ ಚಾತುರ್ಯಗಳನ್ನೂ ವೆಚ್ಚಮಾಡಿ ಶ್ರಮಿಸುತ್ತಿದ್ದನು. ಹಾಗೆಂತಲೇ ದೇವಾಲಯಗಳೆಲ್ಲವೂ ಶಿಲ್ಪಕೌಶಲದಿಂದ ತುಂಬಿ ಹೋಗಿರುತ್ತವೆ. ಕಣ್ಣಿಗೆ ಗೋಚರವಾಗದ, ಬೆಳಕು ಕೂಡ ನುಸುಳಲಸಾಧ್ಯವಾದ ಸಂದು ಗೊಂದುಗಳಲ್ಲಿ ಕೂಡ ಶಿಲ್ಪಿಯು ಮೈಮರೆಯದೆ ಅನಾದರಣೆಯನ್ನು ತೋರದೆ ತನ್ನ ಚಾತುರ್ಯವನ್ನು ಬೀರಿರುತ್ತಾನೆ. ಒಬ್ಬ ಆಂಗ್ಲಕವಿಯು ಈ ವಿಷಯದಲ್ಲಿ ಹೀಗೆ ಬರೆದಿರುತ್ತಾನೆ.

"In the elder days of Eastern Art
Builders wrought with greatest care
Each minute and unseen part ;
For gods see every where."

ಪಟ್ಟಣದಲ್ಲಿರುವ ಗಂಗಾಧರೇಶ್ವರ ದೇವಸ್ಥಾನದಲ್ಲಿ ಕಳಲೆ ನಂಜರಾಜಯ್ಯನು ದೇವಸ್ಥಾನಕ್ಕೆ ಒಪ್ಪಿಸಿದ ನಟರಾಜ ವಿಗ್ರಹವಿದೆ. ಶೃಂಗೇರಿಯಲ್ಲಿ ವಿದ್ಯಾಶಂಕರ ದೇವಾಲಯದಲ್ಲಿ ನಂಬಿನಾರಾಯಣ, ತಾಂಡವೇಶ್ವರ, ಶ್ರೀನಿವಾಸ ವಿಗ್ರಹಗಳಿವೆ. ಇವುಗಳ ಪೈಕಿ ತಾಂಡವೇಶ್ವರ ವಿಗ್ರಹವು ಅತ್ಯಂತ ಸುಂದರವಾದದ್ದು. ಬೆಟ್ಟದಪುರದ ದೇವಾಲಯದಲ್ಲಿಯೂ ಇಂತಹ ಒಂದು ಸುಂದರ ವಿಗ್ರಹವಿದೆ. ಮುಮ್ಮಡಿ ಕೃಷ್ಣರಾಜ ಒಡೆಯರವರು ನೂರಾರು ಪಂಚಲೋಹದ ವಿಗ್ರಹಗಳನ್ನು ಮಾಡಿಸಿ ದೇಶದಲ್ಲೆಲ್ಲಾ ಅನೇಕ ದೇವಾಲಯಗಳಿಗೆ ಅರ್ಪಿಸಿದರೆಂದು ತಿಳಿಯಬರುತ್ತದೆ. ಈಗ ಎಲ್ಲ ದೇವಾಲಯಗಳಲ್ಲಿಯೂ ಉತ್ಸವ ವಿಗ್ರಹಗಳು ಇದ್ದೇ ಇರುತ್ತವೆ. ಇವುಗಳಲ್ಲಿ ಕೆಲವು ಮಾತ್ರ ಕಲಾದೃಷ್ಟಿಯಲ್ಲಿ ಶ್ಲಾಘ್ಯತಮವಾದವುಗಳು.

ಐಹೊಳೆ, ಪಟ್ಟದಕಲ್ಲು, ಬಾದಾಮಿ, ಬಳ್ಳಿಗಾವೆ

ಕ್ರಿ. ಶ. ಮೂರನೆಯ ಶತಮಾನದಿಂದ ಎಂಟನೆಯ ಶತಮಾನದವರೆಗೂ ಇರುವ ಕಾಲ ವಾಸ್ತುಕಲೆಯ ದೃಷ್ಟಿಯಿಂದ ಒಂದು ಪರ್ವ ಕಾಲವೆಂದು ಎಣಿಸಬಹುದು. ಒಂದು ಕಡೆ ಹಿಂದಿನಿಂದ ನಡೆದುಕೊಂಡು ಬಂದಿದ್ದ ವಾಸ್ತುಕಲೆಯ ರೀತಿಗಳು ಮತ್ತು ಪದ್ಧತಿಗಳು ಹಿಂದಕ್ಕೆ ಸರಿದು ಹೋಗುತ್ತ ಬಂದವು. ಮತ್ತೊಂದು ಕಡೆ ದೇವಾಲಯದ ನಿರ್ಮಾಣ ಮತ್ತು ಅಭಿವೃದ್ಧಿಯನ್ನು ಕುರಿತು ಒಂದು ಹೊಸ ಯುಗವೇ ತಲೆದೋರುತ್ತ ಬಂದಿತು. ಎಂಟನೆಯ ಶತಮಾನದ ಹೊತ್ತಿಗೆ ವಾಸ್ತುಶೈಲಿಗಳು ನಿಷ್ಕೃಷ್ಟವಾದ ಆಕಾರವನ್ನು ಧರಿಸಿ ನೆಲೆಯಾಗಿನಿಂತವು. ಇದುವರೆಗೂ ವಾಸ್ತುವಿದ್ಯೆ ಎಲ್ಲಾ ಗುಹಾಂತರ್ದೇವಾಲಯಗಳಲ್ಲಿ ವ್ಯಕ್ತವಾಗಿತ್ತು. ಇದರಲ್ಲಿ ಸ್ಥಪತಿಯ ಕೆಲಸ ಬಹಳ ಕಡಮೆ. ಇಲ್ಲಿ ಕಾಣಬರುವುದು ಶಿಲ್ಪಿಯ ಕೊರೆತದ ಚಾತುರ್ಯವೇ ಹೊರತು ಮತ್ತೇನೂ ಇಲ್ಲ. ಇದನ್ನು ಬೇಕಾದರೆ "ಶಿಲಾಶೈಲಿ" (Rock-architecture) ಎಂದು ಕರೆಯಬಹುದು. ತುಂಡು ಕಲ್ಲುಗಳನ್ನು ಜೋಡಿಸಿ ಭದ್ರವಾಗಿ ನಿಲ್ಲಿಸಿ ದೇವಾಲಯಗಳನ್ನು ಕಟ್ಟಲು ಪ್ರಯೋಗಗಳು ಕ್ರಿ. ಶ. ಐದನೆಯ ಶತಮಾನದಲ್ಲಿಯೇ ಉತ್ತರ ಹಿಂದುಸ್ಥಾನದಲ್ಲಿ ಪ್ರಾರಂಭವಾಗಿ ದಕ್ಷಿಣ ಹಿಂದುಸ್ಥಾನದಲ್ಲಿ ಮೊದಲು ಕಾಣಿಸಿಕೊಂಡದ್ದು ಏಳನೆಯ ಶತಮಾನದಲ್ಲಿ. ದೇವಾಲಯದ ವಿನ್ಯಾಸದ ಮತ್ತು ರೂಪದ ವಿಷಯದಲ್ಲಿ ಅನೇಕ ಪ್ರಯೋಗಗಳು ನಡೆದವು ಮತ್ತು ಕೊನೆಗೆ ನಿಷ್ಕೃಷ್ಟವಾಗಿ ನಿಲ್ಲುವುದಕ್ಕೆ ಕೆಲವು ಕಾಲ ಹಿಡಿಯಿತು. ಅಲ್ಲಿಂದೀಚೆಗೆ ದೇಶದ ಎಲ್ಲ ಕಡೆಗಳಲ್ಲಿಯೂ ದೇವಾಲಯಗಳು ಏಳ ತೊಡಗಿದವು.

ಐಹೊಳೆ, ಪಟ್ಟದ ಕಲ್ಲು ಮತ್ತು ಬಾದಾಮಿ–ಈ ಮೂರು ಪ್ರದೇಶಗಳು ವಾಸ್ತುವಿದ್ಯೆಯಲ್ಲಿ ಆಸಕ್ತಿಯುಳ್ಳವರಿಗೆ ಯಾತ್ರಾಸ್ಥಳಗಳೆಂದು ಹೇಳಬಹುದು.

ಸ್ವತಂತ್ರ ದೇವಾಲಯಗಳು ಮೊದಲು ದಕ್ಷಿಣ ಭಾರತದಲ್ಲಿ ಕಾಣಿಸಿಕೊಂಡದ್ದು ಐಹೊಳೆಯಲ್ಲಿ. ದೇವಾಲಯದ ಪ್ರಥಮ ಪ್ರಯತ್ನಗಳು ನಡೆದದ್ದು ಇಲ್ಲಿಯೇ. ಉತ್ತರದ ಮತ್ತು ದಕ್ಷಿಣ ಭಾರತದ ಶಿಲ್ಪ ಕಲೆಯ ಚಾತುರ್ಯಗಳನ್ನು ಅಕ್ಕಪಕ್ಕಗಳಲ್ಲಿ ಕಾಣುವುದು ಇಲ್ಲೇ. * ಮತ್ತು ದಕ್ಷಿಣದಲ್ಲೆಲ್ಲ ಹರಡಿ ದ್ರಾವಿಡ ಶೈಲಿ ಎಂದು ಹೆಸರು ಪಡೆದ ವಾಸ್ತು ರೀತಿಯ ಕಟ್ಟಡಗಳು ಇಲ್ಲಿಂದಲೇ ಹೊರಕ್ಕೆ ಹೊರಟವು. ಇದೂ ಅಲ್ಲದೆ ಉತ್ತರ ಭಾರತದ ಮತ್ತು ದಕ್ಷಿಣ ಭಾರತದ ಶೈಲಿಗಳ ಮಿಲನವು ಹೇಗೆ ನಡೆಯುತ್ತ ಬಂದು ಮೂರನೆಯದಾದ ಕರ್ನಾಟಕ ಶೈಲಿಯು ಹೇಗೆ ಹುಟ್ಟಿತೆಂಬುದನ್ನು ಕಾಣುವುದು ಇಲ್ಲಿಯೇ.

೧

ಐಹೊಳೆಯು (ಶಾಸನಗಳಲ್ಲಿ ಆರ್ಯಪುರವೆಂದು ಕರೆಯಲ್ಪಟ್ಟಿದೆ) ಬಿಜಾಪುರ ಡಿಸ್ಟ್ರಿಕ್ಟಿನ ಹುನಗುಂದ ತಾಲೂಕಿಗೆ ಸೇರಿದ ಒಂದು ಹಳ್ಳಿ. ಇದು ಬಾದಾಮಿಯ ಪೂರ್ವಕ್ಕೆ ಹನ್ನೆರಡು ಮೈಲಿ ದೂರದಲ್ಲಿ ಮಲಪ್ರಭಾ ನದಿಯ ದಡದ ಮೇಲಿದೆ. ಇದು ಈಗ ಸಣ್ಣ ಹಳ್ಳಿಯಾದರೂ ಒಂದಾನೊಂದು ಕಾಲದಲ್ಲಿ ಒಂದು ದೊಡ್ಡ ಪಟ್ಟಣವಾಗಿತ್ತೆಂದೂ ಚಾಳುಕ್ಯರಾಜರು ಮೊದಲು ಉತ್ತರದಿಂದ ದಕ್ಷಿಣಕ್ಕೆ ಬಂದಾಗ ಇಲ್ಲಿಯೇ ನೆಲೆಸಿದರೆಂದೂ ಗೊತ್ತಾಗುತ್ತದೆ. ಈ ಊರನ್ನು "ದೇವನಗರ" ವೆಂದು ಕರೆಯ ಬಹುದಾಗಿತ್ತು. ಈ ಊರಿನಲ್ಲಿ ಕೋಟೆಯ ಒಳಗಡೆ ಮೂವತ್ತು, ಹೊರಗಡೆ ನಲವತ್ತು, ಈ ರೀತಿ ಸುಮಾರು ಎಪ್ಪತ್ತು ದೇವಾಲಯಗಳು ಇದ್ದುದನ್ನು ಕಾಣುತ್ತೇವೆ. ಇವೆಲ್ಲವೂ ಐದು, ಆರು, ಏಳನೆಯ ಶತಮಾನಗಳಲ್ಲಿ ಕಟ್ಟಲ್ಪಟ್ಟವು. ಇವುಗಳಲ್ಲಿ ಕೆಲವು ಮಾತ್ರ ಜಿನಾಲಯಗಳು, ಮಿಕ್ಕೆಲ್ಲವೂ ದೇವಾಲಯಗಳು. ಹೀಗೆ ದೇವಾಲಯ ನಿರ್ಮಾಣ ಕಾರ್ಯವು ಮೂರು ಶತಮಾನಗಳವರೆಗೂ ಬಹಳ ಹುರುಪಿನಿಂದ ನಡೆದು ಬಂದು ಅನಂತರ ಇಲ್ಲಿಗೆ ಹದಿನೈದು ಮೈಲಿ ದೂರದಲ್ಲಿರುವ ಪಟ್ಟದಕಲ್ಲಿಗೆ ತೆರಳಿತು. ಐಹೊಳೆಯಲ್ಲಿರುವ ಕಟ್ಟಡಗಳಲ್ಲೆಲ್ಲ ಲಾಡಖಾನ, ಕೊಂಟಗುಡಿ, ದುರ್ಗಾ, ಮೇಗುತಿ, ಹುಚ್ಚಿಮಲ್ಲಿ, ನುಂಗಣ ಮತ್ತು ಜೈನಬಸದಿಯೂ ಮುಖ್ಯ

* ಮೈಸೂರು ರಾಜ್ಯದಿಂದ ಇನ್ನೂ ಹೊರಕ್ಕೇ ಉಳಿದಿರುವ ಅಲಂಪುರದಲ್ಲಿಯೂ ಈ ರೀತಿ ಕಾಣಬಹುದು.

ವಾದವುಗಳು. ಇವುಗಳಲ್ಲಿ ಲಾಡ್‌ಖಾನ್ ದೇವಾಲಯ ಅತ್ಯಂತ ಪ್ರಾಚೀನ ವಾದದ್ದು ಮತ್ತು ದೊಡ್ಡದಾದದ್ದು. ಮುಸಲ್ಮಾನರು ಪಟ್ಟಣವನ್ನು ಲೂಟಿ ಮಾಡಿ ದೇವಾಲಯಗಳನ್ನೆಲ್ಲಾ ನಾಶಮಾಡಿದ ಮೇಲೆ ಪಾಳುಬಿದ್ದಿದ್ದ ಈ ದೇವಾಲಯದಲ್ಲಿ ಲಾಡ್‌ಖಾ ಎಂಬ ಮುಸಲ್ಮಾನನು ವಾಸಮಾಡಲು ತೊಡ ಗಿದ್ದರಿಂದ ಈ ದೇವಾಲಯಕ್ಕೆ ಲಾಡ್‌ಖಾನ ದೇವಾಲಯವೆಂದು ಹೆಸರಾಯಿತು. ಇದು ಯಾವಾಗ ನಿರ್ಮಿಸಿದ್ದು ಎಂದು ಹೇಳಲು ಯಾವ ಆಧಾರವೂ ಇಲ್ಲ. ಆದರೂ ಅದರ ಇರುವಿಕೆಯಿಂದ ಇದೇ ಅತ್ಯಂತ ಪುರಾತನವಾದದ್ದೆಂದೂ ಸುಮಾರು ಐದನೆಯ ಶತಮಾನದ್ದಿರಬೇಕೆಂದೂ ಊಹಿಸಲಾಗಿದೆ. ಇದು ಐವತ್ತು ಅಡಿ ಚದರವುಳ್ಳ ಒಂದು ಗೃಹ. ಅದರ ಮೂರು ಕಡೆಯೂ ಗೋಡೆ ಗಳಿಂದ ಮುಚ್ಚಲ್ಪಟ್ಟು ನಾಲ್ಕನೆಯ ಎಂದರೆ ಪೂರ್ವದಿಕ್ಕಿನಲ್ಲಿ ಮಾತ್ರ ತೆರೆದಿದ್ದು, ಮೂರು ಅಂಕಣದ ಮುಖಮಂಟಪವಿದೆ. ಪಕ್ಕದ ಎರಡು ಗೋಡೆಗಳಲ್ಲಿಯೂ ಜಾಲಂಧ್ರಗಳಿವೆ. ದೇವಾಲಯದ ಒಳಭಾಗದಲ್ಲಿ ಹದಿನಾರು ಕಂಬಗಳಿವೆ. ಮಧ್ಯದ ನಾಲ್ಕು ಕಂಬಗಳ ಮೇಲೆ ಒಂದು ಸಣ್ಣ ಗೃಹವಿದೆ. ಈ ಮೇಲಿನ ಅಂತಸ್ತಿನ ಮನೆಯನ್ನು ಆಮೇಲೆ ಯಾವಾಗಲೋ ಕಟ್ಟಿರಬೇಕೆಂದು ತೋರು ತ್ತದೆ. ಬಾಕಿ ಅಂಕಣಗಳ ಚಾವಣಿಯು ಇಳಿಜಾರಾಗಿದೆ. ಗುಹಾಂತರ್ದೇವಾ ಲಯಗಳ ಛಾವಣಿಯ ಮಾದರಿಯಲ್ಲಿ ಗುಡಿಗಳನ್ನು ಕಟ್ಟುವುದು ಅಪರೂಪವಾಗಿ ಸುಲಭವಾದ ಈ ತೆರನಾದ ಛಾವಣಿಯನ್ನು ಉಪಯೋಗಿಸಲಾಯಿತೆಂದು ಕಾಣುತ್ತದೆ. ಕೊಂಚ ಕಾಲದ ಮೇಲೆ ಈ ಇಳಿಜಾರು ಛಾವಣಿಯನ್ನು ಬಿಟ್ಟು ಚಪ್ಪಟೆಯಾದ ಛಾವಣಿಯನ್ನು ನಿರ್ಮಿಸಲು ತೊಡಗಲಾಯಿತು. ಈ ದೇವಾಲಯದ ಹಿಂದಿನ ಗೋಡೆಗೆ ತಗಲಿಕೊಂಡಂತೆ ಮಧ್ಯದ ಅಂಕಣದಲ್ಲಿ ಒಂದು ಸಣ್ಣ ಗರ್ಭಗೃಹವನ್ನು ನಿರ್ಮಿಸಿ ಅದರಲ್ಲಿ ಲಿಂಗವನ್ನು ಪ್ರತಿಷ್ಠೆಮಾಡ ಲಾಗಿದೆ. ಕೊಂಟಿ * ಗುಡಿಯು ಇದೇ ರೀತಿಯದು. ಮೊದ ಮೊದಲು ಒಂದು ದೊಡ್ಡ ಸಭಾಂಗಣವನ್ನು ಕಟ್ಟಿ ಅದರೊಳಗೆ ಗರ್ಭಗೃಹವನ್ನು ನಿರ್ಮಿಸುವ ಪದ್ಧತಿ ಇತ್ತೆಂದು ತೋರುತ್ತದೆ. ಕಂಬಗಳು ಚತುರಸ್ರಾಕಾರವಾಗಿದ್ದು ದಪ್ಪ

---

* ದಸರಾ ಕಾಲದಲ್ಲಿ ಪ್ರತಿವರ್ಷವೂ ಊರಿನ ಗಡಿ ಪ್ರದೇಶಕ್ಕೆ ಕೊಂಟ (ತ್ರಿಶೂಲ) ವನ್ನು ಹೊತ್ತುಕೊಂಡು ಹೋಗುವ ಕೆಲಸಕ್ಕೆ ನೇಮಕವಾಗಿದ್ದವನು ಈ ಗುಡಿಯಲ್ಲಿ ವಾಸಿಸುತ್ತಿದ್ದನಾದ್ದರಿಂದ ಈ ಹೆಸರು ಬಂದಿತೆಂದು ತಿಳಿಯಬರುತ್ತದೆ.

ನಾಗಿ ಗುಹಾಂತರ್ದೇವಾಲಯಗಳಲ್ಲಿ ಕಾಣಬರುವ ಆಕಾರವನ್ನು ಹೊಂದಿರುತ್ತವೆ. ಮುಂಭಾಗದಲ್ಲಿರುವ ಮುಖಮಂಟಪವು ಚಿತ್ರಿತವಾಗಿದೆ. ಕಂಬಗಳ ಮೇಲೂ ಜಗಲಿಯ ಹೊರಮುಖದಲ್ಲಿಯೂ ವಿಗ್ರಹಗಳೂ ಕುಂಭಗಳೂ ಮುಂತಾದ ಚಿತ್ರಗಳು ಸ್ಫುಟವಾಗಿ ಕೆತ್ತಲ್ಪಟ್ಟಿವೆ. ಮುಖಮಂಟಪದ ಸುತ್ತಲೂ ಒಳಭಾಗದಲ್ಲಿ ಒಂದು ಜಗಲಿ ಇದೆ.

ದುರ್ಗಾ ದೇವಾಲಯವು ದೇವಾಲಯನಿರ್ಮಾಣ ಕಾರ್ಯದಲ್ಲಿ ಎರಡನೆಯ ಪ್ರಯತ್ನವೆಂದು ಹೇಳಬಹುದು. ಸ್ವತಂತ್ರ ದೇವಾಲಯಗಳನ್ನು ಪ್ರಾರಂಭ ಮಾಡಿದಾಗ ಬೌದ್ಧ ಚೈತ್ಯಾಲಯ ತಲವಿನ್ಯಾಸವನ್ನೇ ಪ್ರಾಯಶಃ ಅನುಸರಿಸ ಲಾಯಿತೆಂದು ಹಿಂದಿನ ಅಧ್ಯಾಯಗಳಲ್ಲಿ ಹೇಳಿದೆಯಷ್ಟೆ. ಅದಕ್ಕೆ ಈ ದೇವ ಸ್ಥಾನವೇ ಉದಾಹರಣೆ. ಈ ದೇವಾಲಯದ ಹಿಂದಿನ ಗೋಡೆಯು ಅರ್ಧ ಗೋಳಾಕಾರವಾಗಿ (ಗಜಪೃಷ್ಠದಂತೆ) ಇರುತ್ತದೆ. ಒಳಗಡೆ ಗರ್ಭಗೃಹ, ಅದರ ಮುಂದುಗಡೆ ಒಂದು ಉದ್ದವಾಗಿರುವ ಹಜಾರ, ಪ್ರದಕ್ಷಿಣೆಗೆ ಮಾರ್ಗ. ಹಜಾರದ ಮುಂಭಾಗದಲ್ಲಿ ಒಂದು ಎರಡು ಅಂಕಣದ ಮುಖಮಂಟಪ, ಈ ಇಡೀ ದೇವಾಲಯದ ಸುತ್ತಲೂ ಕೈಸಾಲೆ, ದೇವಾಲಯದ ಒಳಕ್ಕೆ ಬರಲು ಮುಂಭಾಗದ ಎರಡು ಕಡೆಗಳಿಂದಲೂ ಮೆಟ್ಟಲುಗಳು. ಇಷ್ಟು ಇವೆ. ಹೊರಭಾಗದಲ್ಲಿ ಸುತ್ತಲೂ ಇರುವ ಕೈಸಾಲೆಯ ಮೇಲೆ ಚಪ್ಪಟೆಯಾಗಿ ಕಾಣುವ ಸ್ವಲ್ಪ ಇಳಿಜಾರಾದ ಛಾವಣಿ. ದೇವಾಲಯದ ಮೇಲುಗಡೆ ಅದೇ ತರಹದ, ಅದಕ್ಕಿಂತಲೂ ಸ್ವಲ್ಪ ಎತ್ತರವಾದ ಛಾವಣಿ. ಗರ್ಭಗೃಹದ ಮೇಲುಗಡೆ ಚತುರಸ್ರಾಕಾರವಾಗಿ ಕಾಣುವ ಸೂಚ್ಯಾಕಾರವಾದ ಶಿಖರ. ಶಿಖರದ ಮೇಲ್ಭಾಗವು ಬಿದ್ದುಹೋಗಿದೆ. ಈ ಶಿಖರವು ಔತ್ತರೇಯ ಪದ್ಧತಿಯದು. ಇದನ್ನು ಕ್ರಿ. ಶ. ಆರನೆಯ ಶತಮಾನದಲ್ಲಿ ಕಟ್ಟಿಸಿದ್ದಿರಬೇಕು. ಇದರ ಉದ್ದ ೮೪ ಅಡಿಗಳು, ಅಗಲ ೩೬ ಅಡಿಗಳು. ಕಂಬಗಳ ಮೇಲೆ ವಿಗ್ರಹಗಳು ಸ್ಫುಟವಾಗಿ ಕೆತ್ತಲ್ಪಟ್ಟಿವೆ. ಹುಚ್ಚಮಲ್ಲಿ ಗುಡಿಯೂ ಇದೇ ತರಹದ್ದೇ. ಆದರೆ ಅದರ ವಿನ್ಯಾಸವು ಗಜಪೃಷ್ಠದಂತೆ ಇರದೆ ಚತುರಸ್ರವಾಗಿದೆ. ಇದರಲ್ಲಿನ ಒಂದು ವಿಶೇಷವೇನೆಂದರೆ ಗರ್ಭಗೃಹಕ್ಕೂ ನವರಂಗಕ್ಕೂ ಮಧ್ಯೆ ಸುಕನಾಸಿ ಅಥವಾ ಅಂತರಾಳವಿದೆ. ದೇವಸ್ಥಾನದ ವಿನ್ಯಾಸದಲ್ಲಿ ಸುಕನಾಸಿಯು ಬಂದಿರುವುದು ಇದೇ ಮೊದಲು. ಗ್ರಾಮದ

ಪೂರ್ವಕ್ಕೆ ಸ್ವಲ್ಪ ಮೇಲ್ಭಾಗದಲ್ಲಿ ಮೇಗುತಿ ದೇವಾಲಯವಿದೆ. [ಮೇಗುತಿ ಎನ್ನುವುದು ಮೇಗುಡಿ (ಮೇಲಿನ ಗುಡಿ) ಎಂಬುದರ ಅಪಭ್ರಂಶವೆಂದು ಹೇಳುತ್ತಾರೆ]. ಈ ದೇವಾಲಯದಲ್ಲಿರುವ ಒಂದು ಶಾಸನದಿಂದ ಈ ದೇವಸ್ಥಾನವು ಕ್ರಿ. ಶ. ೬೩೪ ರಲ್ಲಿ ರವಿಕೀರ್ತಿ ಎಂಬುವನಿಂದ ನಿರ್ಮಿಸಲ್ಪಟ್ಟಿತೆಂದು ಗೊತ್ತಾಗುತ್ತದೆ. ಈ ದೇವಾಲಯದಲ್ಲಿ ಒಂದು ಗರ್ಭಗೃಹ, ಅಂತರಾಳ, ನವರಂಗ ಇವೆ. ಗರ್ಭಗುಡಿಯ ಸುತ್ತಲೂ ಪ್ರದಕ್ಷಿಣೆಗಾಗಿ ಏರ್ಪಟ್ಟಿದ್ದ ಸ್ಥಳ ಇದೆ. ನವರಂಗವನ್ನು ಹಿಂದಿದ್ದ ತಳಹದಿಯ ಮೇಲೆ ಈಚೆಗೆ ಕಟ್ಟಿರಬಹುದೆಂದು ಕಾಣುತ್ತದೆ. ಇದರ ಶಿಖರವು ದ್ರಾವಿಡ ಶೈಲಿಗೆ ಸೇರಿದ್ದು. ಗರ್ಭಗುಡಿಯಲ್ಲಿ ಒಂದು ಜೈನ ವಿಗ್ರಹವೂ ಪ್ರಾಕಾರದಲ್ಲಿ ಒಂದು ದೇವೀ ವಿಗ್ರಹವೂ ಇವೆ.

ದ್ರಾವಿಡ ಶೈಲಿಯಲ್ಲಿ ಇದಕ್ಕಿಂತಲೂ ಹಿಂದೆ ಕಟ್ಟಿದ ಕಟ್ಟಡವು ಬಾದಾಮಿಯಲ್ಲಿದೆ. ಬಾದಾಮಿ ಊರಿಗೆ ಪಶ್ಚಿಮಕ್ಕೆ ಮೂರು ಮೈಲಿ ದೂರದಲ್ಲಿ ಮಹಾಕೂಟೇಶ್ವರ ದೇವಾಲಯವಿದೆ. ಅಲ್ಲಿರುವ ಶಾಸನದ ಪ್ರಕಾರ ಅದು ಕ್ರಿ. ಶ. ೬೦೦ ರಲ್ಲಿ ಕಟ್ಟಿದ್ದೆಂದು ಗೊತ್ತಾಗುತ್ತದೆ. ಇದು ಸಣ್ಣದಾದರೂ ದ್ರಾವಿಡ ಶೈಲಿಯ ಗೋಪುರವು ಇರಬೇಕಾದ ರೀತಿಯಲ್ಲಿ ಮೆಟ್ಟಲು ಮೆಟ್ಟಲಾಗಿ ಮೇಲಕ್ಕೆ ಹೋಗುತ್ತಾ ತಲೆಯಮೇಲೆ ಅಷ್ಟಕೋಣಾಕಾರವಾದ ಶಿಖರದೊಡನೆ ಕೂಡಿದೆ. ಈ ಸ್ಥಳದಲ್ಲಿಯೇ ವಾತಾಪಿ ಮತ್ತು ಇಲ್ವಲರೆಂಬ ರಾಕ್ಷಸರನ್ನು ಕೊಂದದ್ದೆಂದು ಸ್ಥಳಪುರಾಣವಿದೆ. ಶಾಸನದಲ್ಲಿ ಮಕುಟೇಶ್ವರನಾಥನೆಂದು ಕರೆದಿದೆ. ಇದರ ಪಕ್ಕದಲ್ಲಿಯೇ ಮಲ್ಲಿಕಾರ್ಜುನ ದೇವಾಲಯ ಔತ್ತರೇಯ ಶಿಖರದೊಡನೆ ನಿಂತಿದೆ. ಮಹಾಕೂಟೇಶ್ವರ ದೇವಾಲಯದ ಮುಂದುಗಡೆ ಒಂದು ಎತ್ತರವಾದ ಜಯಸ್ತಂಭವಿತ್ತಂತೆ. (ಅದು ಈಗ ಬಿಜಾಪುರದಲ್ಲಿದೆ). ಅದರಲ್ಲಿರುವ ಶಾಸನದಲ್ಲಿ ಮಂಗಲೇಶನ ಅಪ್ಪಣೆಯ ಪ್ರಕಾರ ಆತನ ತಾಯಿಯಾದ ದುರ್ಲಭ ದೇವಿಯು ದೇವರ ಸೇವೆಗಾಗಿ ಹತ್ತು ಗ್ರಾಮಗಳನ್ನು ದತ್ತಿಯಾಗಿ ಬಿಟ್ಟದ್ದಳೆಂದೂ ಅವುಗಳಲ್ಲಿ ಪಟ್ಟದಕಲ್ಲು, ಐಹೊಳೆ ಗ್ರಾಮಗಳೂ ಸೇರಿದ್ದುವೆಂದೂ ತಿಳಿಯಬರುತ್ತೆ. ಇದೇ ಶೈಲಿಗೆ ಸೇರಿದ ಮತ್ತು ಘಟ್ಟಿಮುಟ್ಟಾಗಿ ಕಟ್ಟಲ್ಪಟ್ಟ ದೇವಾಲಯವು ಬಾದಾಮಿ ಊರಿನ ಪಕ್ಕದಲ್ಲಿರುವ ಗುಡ್ಡದ ಮೇಲಿದೆ. ಇದಕ್ಕೆ ನೂಲೆಗಿತ್ತಿ ಶಿವಾಲಯವೆಂದು ಹೆಸರು. ಇದು ಅಷ್ಟೇನು ದೊಡ್ಡದಲ್ಲದಿದ್ದರೂ (ಇದರ

ಉದ್ದ ೫೬ ಅಡಿಗಳು ಮಾತ್ರ) ಸಂಪೂರ್ಣವಾದ ಗುಡಿಗೆ ಬೇಕಾದ ಗರ್ಭಗೃಹ, ನವರಂಗ ಮತ್ತು ಮುಖಮಂಟಪದೊಡನೆ ಕೂಡಿಕೊಂಡು ದಪ್ಪನಾದ ಕಂಬಗಳಿಂದಲೂ ಚಿತ್ರಿತವಾದ ಬೋದಿಗೆಗಳಿಂದಲೂ, ಅಗಲವಾದ ಚಿತ್ರದ ಪಟ್ಟಿಕೆಯಿಂದಲೂ ಮೊಟಕಾದ ಲೋವೆಕಲ್ಲಿನಿಂದಲೂ, ಅರೆ ಕಂಬಗಳ ಮಧ್ಯದಲ್ಲಿ ಕೊರೆದ ವಿಗ್ರಹಗಳಿಂದಲೂ ಅಲಂಕೃತವಾಗಿ ಸುಂದರವಾದ ಗೋಪುರದೊಡನೆ 'ಆಚಂದ್ರಾರ್ಕತಾರಾಬಲಂ' ನಿಲ್ಲಲು ಅರ್ಹವಾದುದಾಗಿದೆ.

೨

ವಾಸ್ತುಕಲೆಯ ಮುಂದಿನ ಹೆಜ್ಜೆಯು ಪಟ್ಟದಕಲ್ಲಿನಲ್ಲಿ ಕಾಣುತ್ತದೆ. ಪಟ್ಟದಕಲ್ಲಿಗೆ ಕಿಸುವೊಳಲ್ ಎಂಬುದು ಪೂರ್ವದ ಹೆಸರು. ಅಲ್ಲಿರುವ * ಶಾಸನಗಳಲ್ಲಿ ಇದೇ ಹೆಸರಿದೆ. ಕಿಸು ಎಂದರೆ ಕೆಂಪು ಎಂದರ್ಥ, ವೊಳಲ್ ಎಂದರೆ ಊರು ಎಂದರ್ಥ. ಕಿಸುವೊಳಲ್-ಕೆಂಪು ಊರು ಎಂದು ಅರ್ಥವಾಗುತ್ತದೆ. ಈ ಪಟ್ಟಣದ ಸುತ್ತಲೂ "ಕಿಸುಕಾಡು" ಎಂಬ ದಟ್ಟವಾದ ಕಾಡು ಇತ್ತೆಂದೂ ಯಲಬರ್ಗಿಯಲ್ಲಿ ಆಳುತ್ತಿದ್ದ ಸಿಂಧದ ರಾಜನಿಗೆ ಸೇರಿತ್ತೆಂದೂ ಆತನು ಆರನೆಯ ವಿಕ್ರಮಾದಿತ್ಯನ ಸಾಮಂತನಾಗಿದ್ದನೆಂದೂ ತಿಳಿಯಬರುತ್ತದೆ. ಇಲ್ಲಿಯ ಕೆಲವು ದೇವಾಲಯಗಳು ಏಳನೆಯ ಶತಮಾನದ ಕೊನೆಯಲ್ಲಿ ಕಟ್ಟಿದುವು. ಈ ಊರಿನಲ್ಲಿ ಉತ್ತರದ ಮತ್ತು ದಕ್ಷಿಣದ ಶೈಲಿಗಳ ಕಟ್ಟಡಗಳು ಪಕ್ಕ ಪಕ್ಕದಲ್ಲಿಯೇ ಕಟ್ಟಲ್ಪಟ್ಟಿರುತ್ತವಲ್ಲದೆ ಒಂದು ಶೈಲಿಯ ಕುರುಹುಗಳು ಇನ್ನೊಂದು ಶೈಲಿಯ ದೇವಾಲಯಗಳಲ್ಲಿಯೂ ಕಾಣಬರುತ್ತವೆ. ಈ ಊರಿನಲ್ಲಿ ಗಮನಾರ್ಹವಾದ ಹತ್ತು ದೇವಾಲಯಗಳು ಇವೆ. ಅವು ಯಾವುವೆಂದರೆ: ಪಾಪನಾಥ, ಜಂಬುಲಿಂಗ, ಕರಿಸಿದ್ಧೇಶ್ವರ, ಕಾಶಿನಾಥ, ಸಂಗಮೇಶ್ವರ, ವಿರೂಪಾಕ್ಷ, ಮಲ್ಲಿಕಾರ್ಜುನ, ಗಳಗನಾಥ, ಸಂಗಮೇಶ್ವರ ಮತ್ತು ಬಸದಿ. ಸಂಗಮೇಶ್ವರ ದೇವಾಲಯವು ಅತ್ಯಂತ ಪ್ರಾಚೀನವಾದದ್ದು. ವಿರೂಪಾಕ್ಷ ದೇವಾಲಯವು ಅತ್ಯಂತ ದೊಡ್ಡದು. ಇವುಗಳಲ್ಲಿ ಮೊದಲಿನ ನಾಲ್ಕು

---

* ಭವ ಭವ ನಂಗಳಿನಂಬುಜ। ಭವ ಭವ ನಂಗಳಿ ನನೂನ ವಸುದೇವತನ ॥
ಭವ ಭವ ನಂಗಳಿನೇನು। ಧ್ರುವಭವನಮೊ ಸಿರಿಗೆ ಕಿಸುವೊಳಲಃ ವಸುಮತಿಯೊಳ್ ॥
ಕ್ರಿ. ಶ. ೧೧೬೨.

ಔತ್ತರೇಯ ಶಿಖರವನ್ನು ಹೊಂದಿವೆ. ಉಳಿದ ಆರರಲ್ಲಿ ದ್ರಾವಿಡ ಶೈಲಿಯ ಶಿಖರವಿದೆ. ಪಾಪನಾಥ ದೇವಾಲಯವು ಔತ್ತರೇಯ ರೀತಿಗೂ ವಿರೂಪಾಕ್ಷ ದೇವಾಲಯವು ದ್ರಾವಿಡ ರೀತಿಗೂ ಒಳ್ಳೆಯ ಉದಾಹರಣೆಗಳು. ಪಾಪನಾಥ ದೇವಾಲಯವು ಏಳನೆಯ ಶತಮಾನದ್ದು, ವಿರುಪಾಕ್ಷ ದೇವಾಲಯವು ಎಂಟನೆಯ ಶತಮಾನಕ್ಕೆ ಸೇರಿದ್ದು.

ಪಾಪನಾಥದಲ್ಲಿ ಒಂದು ಗರ್ಭಗೃಹವೂ, ಅದರ ಸುತ್ತಲೂ ಪ್ರದಕ್ಷಿಣ ಪಥವೂ ಅದರ ಮುಂದೆ ನವರಂಗವೂ ಅದರ ಮುಂದೆ ಒಂದು ಸಭಾ ಮಂಟಪವೂ ಇವೆ. ಸಾಧಾರಣವಾಗಿ ಗರ್ಭಗೃಹದ ಮುಂದೆ ಇರಬೇಕಾದ ಸುಕನಾಸಿ ಇರುವುದಿಲ್ಲ. ಶಿಖರವಾದರೋ ಔತ್ತರೇಯ ರೀತಿಯ ಉತ್ತಮವಾದ ಆಕಾರದ್ದು. ದೇವಸ್ಥಾನದ ಹೊರಮುಖದಲ್ಲೆಲ್ಲ ಗೂಡುಗಳೂ ಅವುಗಳೊಡನೆ ವಿಗ್ರಹಗಳೂ ತುಂಬಿವೆ. ವಿಗ್ರಹಗಳು ಸದೃಢವಾಗಿಯೂ ಸ್ಫುಟವಾಗಿಯೂ ಕೆತ್ತಲ್ಪಟ್ಟಿವೆ. ಸಂಗಮೇಶ್ವರ ದೇವಾಲಯವು ಅದೇ ಕಾಲದಲ್ಲಿಯೇ ಅದಕ್ಕೂ ಸ್ವಲ್ಪ ಮುಂಚಿತವಾಗಿಯೇ ನಿರ್ಮಾಣವಾದದ್ದಿರಬೇಕು. ೬೯೬ ರ ವರೆಗೂ ಆಳಿದ ವಿಜಯಾದಿತ್ಯ ಸತ್ಯಾಶ್ರಯನ ಕಾಲದಲ್ಲಿ ವಿಜಯೇಶ್ವರವೆಂಬ ಹೆಸರಿನಿಂದ ಕಟ್ಟಿಸಲ್ಪಟ್ಟಿತು. ದೇವಾಲಯವು ನೋಡುವುದಕ್ಕೆ ಸಾಧಾರಣವಾಗಿ ಕಾಣುತ್ತದೆ ಮತ್ತು ಶಿಖರವು ಕೇವಲ ದ್ರಾವಿಡ ಶೈಲಿಯದು. ವಿರೂಪಾಕ್ಷ ದೇವಾಲಯವು ಪಾಪನಾಥ ದೇವಾಲಯದ ಅನಂತರ ಕ್ರಿ. ಶ. ೭೪೦ ರಲ್ಲಿ ವಿಕ್ರಮಾದಿತ್ಯನ ಹಿರಿಯ ರಾಣಿಯಾದ ಲೋಕಮಹಾದೇವಿಯಿಂದ ಕಟ್ಟಿಸಲ್ಪಟ್ಟಿತು. ಕಿರಿಯ ರಾಣಿಯೂ ಅದರ ಪಕ್ಕದಲ್ಲಿಯೇ ಮಲ್ಲಿಕಾರ್ಜುನ ದೇವಾಲಯವನ್ನು ಕಟ್ಟಿಸಿದಳು. ಪಾಪನಾಥ ದೇವಾಲಯಕ್ಕೂ ವಿರೂಪಾಕ್ಷ ದೇವಾಲಯಕ್ಕೂ ಐವತ್ತೇ ವರ್ಷಗಳು ಅಂತರವಿದ್ದರೂ ವಾಸ್ತುಕಲೆಯು ಇಷ್ಟು ಹೊತ್ತಿಗಾಗಲೇ ಎಷ್ಟೋ ಮುಂದುವರಿದಿರುವಂತೆ ಕಾಣುತ್ತದೆ. ವಾಸ್ತುಕಲೆಯ ದೃಷ್ಟಿಯಲ್ಲಿ ಇದರ ತಲವಿನ್ಯಾಸವು ಅಚ್ಚುಕಟ್ಟಾಗಿದೆ. ಅವಯವ ಸಂಯೋಜನೆಯು ಗಮನಾರ್ಹವಾಗಿದೆ. ಹೊರಮುಖದ ಚಿತ್ರಣವು ಮೆಚ್ಚುವಂತಿದೆ. ಒಟ್ಟಿನಲ್ಲಿ ಈ ದೇವಾಲಯವು ಎಲ್ಲ ವಿಷಯದಲ್ಲಿಯೂ ಸೌಂದರ್ಯವನ್ನು ಬೀರುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ಕಟ್ಟಿಸಿದವನು ಚಪ್ಪರ

ರೇವಡಿ ಓವಜ್ಜನೆಂದೂ ಆತನು ಸರ್ವಸಿದ್ಧಿ ಆಚಾರ್ಯರ ಗುಂಪಿಗೆ ಸೇರಿದವನೆಂದೂ ಹೇಳಿದೆ. ಈತನು ತಮಿಳುನಾಡಿನಿಂದ ಬಂದಿರಬೇಕೆಂದು ಊಹಿಸಲಾಗಿದೆ. ಆದರೆ ತಮಿಳುನಾಡಿನ ದ್ರಾವಿಡ ಶೈಲಿಯ ಅನುಕರಣವೇನೂ ಈ ದೇವಸ್ಥಾನ ದಲ್ಲಿ ಕಾಣಿಸುವುದಿಲ್ಲ. ಅಲ್ಲದೆ ಇಲ್ಲಿ ಕೆತ್ತಿರುವ ವಿಗ್ರಹಗಳೇ ಆಗಲಿ ಇತರ ಚಿತ್ರ ಕೆಲಸಗಳೇ ಆಗಲಿ ಕನ್ನಡ ನಾಡಿನ ರೂಪು ಲಾವಣ್ಯಗಳನ್ನೇ ವ್ಯಕ್ತ ಪಡಿಸುತ್ತವೆ. "A thing of beauty is a joy for ever" ಎಂಬ ಇಂಗ್ಲಿಷ್ ನಾಣ್ಣುಡಿಯಂತೆ, ವಿರೂಪಾಕ್ಷ ದೇವಾಲಯವು ಸಾವಿರದ ಇನ್ನೂರು ವರ್ಷಗಳ ಹಿಂದೆಯೇ ಕಟ್ಟಿದ್ದಾದರೂ ಇಂದಿಗೂ ಅದನ್ನು ನೋಡುವವರಿಗೆ ಬೆರಗನ್ನೂ ಮೆಚ್ಚಿಗೆಯನ್ನೂ ಉಂಟುಮಾಡದೆ ಇರಲಾರದು. ವಿಕ್ರಮಾದಿ ತ್ಯನು ಕಾಂಚೀಪುರವನ್ನು ಮುತ್ತಿ ವಶಪಡಿಸಿಕೊಂಡ ಮೇಲೆ ಅಲ್ಲಿದ್ದ ಕೈಲಾಸ ನಾಥ ದೇವಾಲಯವನ್ನು ಕಟ್ಟಿ, ಅಲ್ಲಿ ಕೆಲಸಮಾಡುತ್ತಿದ್ದ ಸ್ಥಪತಿಗಳನ್ನೂ ರೂವಾರಿಗಳನ್ನೂ ಕನ್ನಡ ನಾಡಿನಲ್ಲಿ ದೇವಾಲಯಗಳನ್ನ ಕಟ್ಟುವದಕ್ಕಾಗಿ ಕರೆಸಿಕೊಂಡನೆಂದು ತಿಳಿಯಬರುತ್ತದೆ.

ರಾಯಚೂರು ಡಿಸ್ಟ್ರಿಕ್ಟಿನಲ್ಲಿ ತುಂಗಭದ್ರಾ ನದಿಯ ಪಶ್ಚಿಮ ದಡದ ಮೇಲೆ ಇರುವ ಆಲಂಪುರದಲ್ಲಿ ಐಹೊಳೆಯಲ್ಲಿರುವಂತೆಯೇ ಕೋಟೆ ಗೋಡೆಯ ಆವರಣದಲ್ಲಿ ಆರು ಗುಡಿಗಳಿವೆ. ಇವೆಲ್ಲವು ಪಟ್ಟದಕಲ್ಲಿನ ಪಾಪನಾಥ ದೇವಾ ಲಯದ ಮಾದರಿಯಲ್ಲಿವೆ. ವಿನ್ಯಾಸದಲ್ಲಿಯೂ, ರಚನೆಯಲ್ಲಿಯೂ, ಅಲಂಕಾರ ದಲ್ಲಿಯೂ, ಗೋಪುರದಲ್ಲಿಯೂ ಆ ದೇವಾಲಯವನ್ನೇ ಹೋಲುತ್ತವೆ. ಇವು ಗಳನ್ನು ಏಳನೆಯ ಶತಮಾನದ ಕೊನೆಯ ಭಾಗದಲ್ಲಿ ಕಟ್ಟಿದವುಗಳೆಂದು ಊಹಿಸಬಹುದಾಗಿದೆ. ನವರಂಗದ ಏರ್ಪಾಟು ಎಲ್ಲೋರದಲ್ಲಿರುವ ರಾವಣ-ಕಿ-ಖಾಯ್ ಗುಹೆಯ ಮಾದರಿಯಲ್ಲಿದೆ.

ಗದಗ ತಾಲ್ಲೂಕು ಕುಕ್ಕನೂರಿನಲ್ಲಿರುವ ಕಲ್ಲೇಶ್ವರ ದೇವಾಲಯವು ಕರ್ನಾಟಕ ಶೈಲಿಯ ಪ್ರಥಮ ಪ್ರಯತ್ನದಂತೆ ಕಾಣುತ್ತದೆ. ಇದರಲ್ಲಿ ಗರ್ಭ ಗುಡಿ, ಉದ್ದವಾದ ಸುಕನಾಸಿ, ನವರಂಗ ಇಷ್ಟು ಇವೆ. ದೇವಾಲಯದ ಗೋಡೆಗಳು ಬಹಳ ದಪ್ಪನಾಗಿವೆ. ಅವುಗಳಲ್ಲಿ ನಾಲ್ಕು ಜಾಲಂಧ್ರದ ಕಿಟಕಿ

ಗಳಿವೆ. ಇದರ ಮೇಲಿರುವ ಗೋಪುರವು ದ್ರಾವಿಡ ಶೈಲಿಯಿಂದ ಕರ್ನಾಟಕ ಶೈಲಿಗೆ ತಿರುಗುತ್ತಿರುವಂತೆ ಕಾಣುತ್ತದೆ.

೩

ವಾಸ್ತುಕಲೆಯ ದೃಷ್ಟಿಯಿಂದ ಐಹೊಳೆ ಪಟ್ಟದಕಲ್ಲುಗಳು ಹೇಗೆ ಮುಖ್ಯವಾದುವೋ ಅಷ್ಟೇ ಮುಖ್ಯವಾದುದು ಬಳ್ಳಿಗಾವೆ. ಇದು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಷಿಕಾರಿಪುರ ತಾಲ್ಲೂಕಿಗೆ ಸೇರಿದ ಗ್ರಾಮ. ಇದನ್ನು ಬಳ್ಳಿಗಾವೆ, ಬೆಳ್ಳಿಗಾವೆ, ಬೆಳ್ಳಿಂಗಾವೆ, ಬಳ್ಳಿಗ್ರಾಮ, ಬಳ್ಳಿಪುರ, ಬಲಿಪುರ ಎಂಬುದಾಗಿ ಅನೇಕ ತರಹದಲ್ಲಿ ಶಾಸನದಲ್ಲಿ ಹೆಸರಿಸಲಾಗಿದೆ. ಈಗ ಇದು ಒಂದು ಪಾಳಾದ ಗ್ರಾಮವಾಗಿದ್ದರೂ ಪೂರ್ವದಲ್ಲಿ ಒಂದು ಪ್ರಸಿದ್ಧ ಪಟ್ಟಣವಾಗಿತ್ತು. ಇದು ಬನವಾಸಿ ನಾಡಿನ ರಾಜಧಾನಿಯಾಗಿತ್ತು. ಚಾಳುಕ್ಯರ ಮತ್ತು ಕಳಚೂರ್ಯರ ಅಧೀನದಲ್ಲಿತ್ತು. ಇದನ್ನು "ಅನಾದಿ ರಾಜಧಾನಿ" ಎಂದೂ "ದಕ್ಷಿಣ ಕೇದಾರ" ವೆಂದೂ "ಕಮಠ" ವೆಂದೂ ಕರೆಯುತ್ತಿದ್ದರು ಮತ್ತು ಬಲಿಚಕ್ರವರ್ತಿಯ ಊರೆಂದೂ ಪ್ರತೀತಿ. ಇದು ದೊಡ್ಡ ಪಟ್ಟಣವಾಗಿತ್ತೆಂದೂ ಅನೇಕ ದೊಡ್ಡ ಪ್ರಾಸಾದಗಳನ್ನು ಹೊಂದಿತ್ತೆಂದೂ ಶಾಸನಗಳಿಂದ ತಿಳಿದುಬರುತ್ತದೆ.* ಇಲ್ಲಿ ಬ್ರಹ್ಮ, ವಿಷ್ಣು, ಶಿವ, ಜೈನ ಮತ್ತು ಬೌದ್ಧ ಮತಗಳಿಗೆ ಸಂಬಂಧಪಟ್ಟಹಾಗೆ ಐದು ಮಠಗಳಿದ್ದುವು. ಇವುಗಳಲ್ಲದೆ, ಮೂರು ಆಯುರ್ವೇದಾಶ್ರಮಗಳೂ, ಮೂರು ಬ್ರಹ್ಮಪುರಿಗಳೂ ಇದ್ದುವು. ಹೊಯಿಸಳರ ಮತ್ತು ಯಾದವರ ಕಾಲದಲ್ಲಿ ಈ ಪಟ್ಟಣವು ಪ್ರವರ್ಧಮಾನಕ್ಕೆ ಬಂದಿತು. ಈ ಊರಿನ ತುಂಬ ಶಿಲಾಶಾಸನ

---

* ೧. "ಬನವಾಸಿ ದೇಶಕ್ಕೆ ತಿಳಕಮುಪ್ಪಂತಿಪ್ಪ ಮಹಾ ಪಟ್ಟಣಂ ವಿನಿರ್ಜಿತ ಪುರಂದರ ಪುರಂ ಬಳಿಪುರಂ"

೨. "ಕಲಹಂಸಗತಿಯ ಮೃದು ಕೋ। ಕಿಲ ನಾದದೆ ನೀಲಕಚದ ತನುಮಧ್ಯದ ಮಂ॥
ಗಲ ಕಳಸಕುಚದ ಸೊಗಯಿಪ। ಲಲಿತ ಮನೋಜನಮದೆತ್ತಲುಂ ಬಳ್ಳಿಪುರ ದೋಳ್॥" (Sorab 277)

೩. "ತ್ರಿಪುರಾರಿಗೆ ಲೀಲಾನಿವಾಸಮೆನಿಪ ಮೂರುಂ ಪುರಂಗಳಿಂ, ಸ್ವದರುಶನಾನುಸಾರಿ ಸದಾಚಾರಾಚರಣದಿಂ
ನಿಸ್ಸಾರ್‍ಥ್ಯಮೆನಿಪ ಪಂಚಮಠಗಳಿಂ। ಧರ್ಮಪ್ರವರ್ಧನಕೆಂದು ಮೂರುಂ ವೃಥಂಗಳುಂ ಮನೆಕಟ್ಟಿದಂತಿರೊಪ್ಪುವ ಮೂರುಂ ಬ್ರಹ್ಮಪುರಿಗಳಿಂ॥"

ಗಳು ಕಂಡುಬರುತ್ತವೆ. ಇವೆಲ್ಲವೂ ಹದಿಮೂರನೆಯ ಶತಮಾನಕ್ಕೆ ಹಿಂದಿನವು. ಇದು ಮುಸಲ್ಮಾನರ ದಾಳಿಗೆ ಸಿಕ್ಕಿ ಹಾಳಾಯಿತು. ಈ ಊರಿನಲ್ಲಿ ಎಲ್ಲೆಲ್ಲಿಯೂ ನೂರಾರು ಮುರುಕು ವಿಗ್ರಹಗಳೂ ದೇವಾಲಯದ ಕಲ್ಲುತುಂಡುಗಳೂ ಬಿದ್ದಿರುತ್ತವೆ. ಇಲ್ಲಿರುವ ದೇವಾಲಯಗಳಲ್ಲೆಲ್ಲ ಕೇದಾರೇಶ್ವರ, ಕೈಟಭೇಶ್ವರ, ಸೋಮೇಶ್ವರ, ತ್ರಿಪುರಾಂತಕೇಶ್ವರ ಮತ್ತು ಪಂಚಲಿಂಗ ದೇವಾಲಯಗಳು ವಾಸ್ತುಶಿಲ್ಪ ರೀತಿಯಲ್ಲಿ ಪ್ರಸಿದ್ಧವಾದವು. ಇಲ್ಲಿ ಜಿನಾಲಯವು ಯಾವುದೂ ಕಾಣದಿದ್ದರೂ ಅನೇಕ ಜಿನ ವಿಗ್ರಹಗಳು ಊರಿನ ಒಳಗೂ ಹೊರಗೂ ಬಿದ್ದಿರುವುದನ್ನು ಈಗಲೂ ನೋಡಬಹುದು. ಕೇದಾರೇಶ್ವರ ದೇವಾಲಯವು ಅತ್ಯಂತ ಸುಂದರವಾದದ್ದು ಮತ್ತು ಪುರಾತನವಾದದ್ದು. ತೊಣಚಿಯ ದೇವಾಲಯವನ್ನು ಬಿಟ್ಟರೆ ಇದೇ ಹೊಯಿಸಳ ಕಟ್ಟಡಗಳಲ್ಲಿ ಅತಿ ಹಿಂದಿನದೆಂದು ಹೇಳಬಹುದು. ಕೇದಾರೇಶ್ವರ ದೇವಾಲಯವು ನಮ್ಮ ರಾಜ್ಯದ ತ್ರಿಕೂಟಾಚಲ ದೇವಾಲಯಗಳಲ್ಲೆಲ್ಲಾ ಪ್ರಾಚೀನವಾದದ್ದು. ಇದನ್ನು ಕಟ್ಟಿದ್ದು ಕ್ರಿ. ಶ. ೧೦೬೦ ರಲ್ಲಿ. ಹೊಯಿಸಳರು ಈ ಭಾಗವನ್ನು ಆಕ್ರಮಿಸುವುದಕ್ಕೆ ಮುಂಚೆಯೇ ದೇವಸ್ಥಾನವು ಇದ್ದಿರಬೇಕು. ಆಮೇಲೆ ಯಾರೋ ಹೊಯಿಸಳ ರಾಜರು ಜೀರ್ಣೋದ್ಧಾರ ಮಾಡಿ ಹೊಯಿಸಳ ವಿಗ್ರಹಗಳನ್ನು ದೇವಾಲಯದ ಗೋಪುರಗಳ ಮುಂಭಾಗದಲ್ಲಿ ನಿಲ್ಲಿಸಿರಬೇಕೆಂದು ತೋರುತ್ತದೆ. ಈ ದೇವಸ್ಥಾನದಲ್ಲಿ ಕಂಡು ಬರುವ ಕೆಲಸವು ಬೇಲೂರು ಹಳೇಬೀಡು ದೇವಸ್ಥಾನಗಳ ಕೆಲಸದಷ್ಟು ಶ್ಲಾಘ್ಯವಲ್ಲದಿದ್ದರೂ, ಇದರಲ್ಲಿ ಶಿಲ್ಪಕೌಶಲ ಸೂಚಕವಾದ ಎಷ್ಟೋ ಅಂಶಗಳಿವೆ. ಅಲ್ಲದೆ ಮುಂದೆಬಂದ ಹೊಯಿಸಳ ಶಿಲ್ಪ ಸೌಂದರ್ಯದ ಪರಾಕಾಷ್ಠೆಗೆ ಇದು ಮೂಲಭೂತವಾಗಿದೆ ಎಂಬುದನ್ನು ಮನಸ್ಸಿಗೆ ತಂದುಕೊಂಡರೆ ಇದರ ಪ್ರಾಮುಖ್ಯತೆ ಅಲ್ಪವೆಂದು ಅಲ್ಲಗಳೆಯುವ ಹಾಗಿರುವುದಿಲ್ಲ. ಇದರಲ್ಲಿ ಮೂರು ಗರ್ಭಗುಡಿಗಳೂ ಒಂದು ನವರಂಗವೂ ಇವೆ. ಮಧ್ಯದಲ್ಲಿರುವ ಗರ್ಭಗೃಹಕ್ಕೂ ನವರಂಗಕ್ಕೂ ನಡುವೆ ಸುಕನಾಸಿ ಇದೆ. ನವರಂಗದ ಮುಂಭಾಗದಲ್ಲಿ ಒಂದು ಮುಖಮಂಟಪವಿದೆ. ಮುಖಮಂಟಪದ ಸುತ್ತಲೂ ಒಳಮುಖದಲ್ಲಿ ಜಗಲಿ ಇದೆ. ಪೂರ್ವ ಮತ್ತು ಉತ್ತರಾಭಿಮುಖವಾಗಿರುವ ಗರ್ಭಗುಡಿಗಳಲ್ಲಿ ಶಿವಲಿಂಗಗಳೂ ದಕ್ಷಿಣಾಭಿಮುಖವಾಗಿರುವುದರಲ್ಲಿ ವಿಷ್ಣು ವಿಗ್ರಹವೂ ಇವೆ. ಮೂರು ಗರ್ಭಗುಡಿಗಳ ಮೇಲೂ ಗೋಪುರಗಳೂ ಅವುಗಳ ಮುಂದೆ

ಹೊಯಿಸಳ ವಿಗ್ರಹಗಳೂ ಇವೆ. ಇಲ್ಲಿರುವ ಸಳ ವಿಗ್ರಹಗಳು ಮಿಕ್ಕ ಕಡೆಗಳಲ್ಲಿರುವವುಗಳಿಗಿಂತ ಎಷ್ಟೋ ಚೆನ್ನಾಗಿ ಕೆತ್ತಲ್ಪಟ್ಟಿರುತ್ತವೆ.*

ಕ್ರಿ. ಶ. ೧೦೭೦ ರಲ್ಲಿ ಕಟ್ಟಿದ ತ್ರಿಪುರಾಂತಕೇಶ್ವರ ದೇವಾಲಯ ಎರಡು ದೇವಸ್ಥಾನಗಳು ಒಟ್ಟಿಗೆ ಕೂಡಿಸಿ ಕಟ್ಟಿದಂತಿರುವ ದೇವಾಲಯ. ಆದರೆ ದಕ್ಷಿಣಕ್ಕೆ ಇರುವ ಭಾಗವು ಆಮೇಲೆ ಕಟ್ಟಿದ್ದೆಂದು ಊಹಿಸಲು ಅವಕಾಶವಿದೆ. ಉತ್ತರದಿಕ್ಕಿನ ದೇವಾಲಯವು ಬೇಲೂರಿನ ಕಪ್ಪೆಚನ್ನಿಗರಾಯನ ದೇವಾಲಯದಂತೆ ಉತ್ತರಕ್ಕೆ ಒಂದು, ಪಶ್ಚಿಮಕ್ಕೆ ಒಂದು, ಈ ರೀತಿ ಎರಡು ಗರ್ಭಗೃಹಗಳನ್ನು ಹೊಂದಿದೆ. ಎರಡರ ಮುಂದೂ ಸುಕನಾಸಿ ಇದೆ. ಶಿವಲಿಂಗದ ಮುಂದೆ ಇರುವ ಸುಕನಾಸಿಯ ಬಾಗಿಲುವಾಡವು ಬಹು ಸೊಗಸಾಗಿ ಚಿತ್ರಿಸಲ್ಪಟ್ಟಿದೆ. ಮತ್ತು ಮೇಲುಗಡೆ ಶಿವನ ತ್ರಿಪುರಾಸುರ ಸಂಹಾರದ ಅವತಾರವನ್ನು ನಾಜೂಕಾದ ಕೆತ್ತನೆಯ ಕೆಲಸದಲ್ಲಿ ಚಿತ್ರಿಸಲಾಗಿದೆ. ದಕ್ಷಿಣದ ಕಡೆ ಬಾಗಿಲಿನ ಎರಡು ಕಡೆಗಳಲ್ಲಿಯೂ ಜಾಲಂಧ್ರಗಳಿವೆ. ಜಾಲಂಧ್ರಗಳಲ್ಲಿ ನರ್ತನ ಮಾಡುವ ನಾಗಕನ್ನಿಕೆಯರ ವಿಗ್ರಹಗಳನ್ನು ಕೆತ್ತಿದೆ. ದಕ್ಷಿಣದ ದೇವಾಲಯವು ಅಷ್ಟೇನೂ ಸುಂದರವಲ್ಲದೆ ಇದ್ದರೂ ಅದರ ಜಗಲಿಯಲ್ಲಿ ನರ್ತಕಿಯರ ಚಿತ್ರಗಳೂ ಪಂಚತಂತ್ರದ ಕತೆಗಳೂ ಕೆತ್ತಲ್ಪಟ್ಟಿವೆ. ಈ ದೇವಸ್ಥಾನವನ್ನು ಕ್ರಿ. ಶ. ೧೦೭೦ ರಲ್ಲಿ ಕಟ್ಟಿದ್ದೆಂದು ಈಚೆಗೆ ಗೊತ್ತಾಗಿದೆ. ಪಂಚಲಿಂಗ ದೇವಾಲಯದಲ್ಲಿದ್ದ ದ್ವಾರಪಾಲಕ ವಿಗ್ರಹಗಳನ್ನು ತೆಗೆದುಕೊಂಡು ಹೋಗಿ ಈಗ ಬೆಂಗಳೂರಿನ ತಮಾಷೆ ಬಂಗಲೆಯಲ್ಲಿ ಇರಿಸಿದ್ದಾರೆ. ಕಳಚೂರ್ಯರ ದೊರೆಯಾದ ಕೇಶಿರಾಜನು ಚಾಳುಕ್ಯರನ್ನು ಸೋಲಿಸಿ ಬೆಳಿಗಾವೆಯನ್ನು ವಶಪಡಿಸಿಕೊಂಡು ಕ್ರಿ. ಶ. ೧೧೫೯

---

* ದೇವಸ್ಥಾನದ ಹೊರಗೆ, ಮಹಾದ್ವಾರದ ಎಡಗಡೆಯಲ್ಲಿ ಒಂದು ಸಣ್ಣ ಗುಡಿ ಇದೆ. ಇದರಲ್ಲಿ ಒಂದು ನಿರ್ವಾಣವಾದ ವಿಗ್ರಹವಿದೆ. ತಲೆ ಇರಬೇಕಾದ ಸ್ಥಳದಲ್ಲಿ ಒಂದು ಕಮಲವಿದೆ. ಅಲ್ಲದೆ ಇದು ಹೊಟ್ಟೆಯ ಕೆಳಭಾಗವನ್ನೆಲ್ಲ ಕಾಣಿಸಿಕೊಂಡು ಕುಳಿತಿರುವ ಪರಿಯೂ ವಿಜಾತೀಯವಾಗಿದೆ. ಈ ವಿಗ್ರಹವನ್ನು "ಉಡುತಡಿಯಮ್ಮ" ನೆಂದು ಕರೆಯುತ್ತಾರೆ. ಇದರ ವಿಚಾರವಾಗಿ ಸ್ಥಳೀಕರಾದ ಲಿಂಗಾಯಿತರು, ಈಕೆಯು ಉಡಿತಡಿ ರಾಜನ ಮಗಳೆಂದೂ, ಈಕೆಯು ಬಸವೇಶ್ವರನ ಕಾಲದಲ್ಲಿ ಕೆಲವು ಭಕ್ತರ ಮುಂದೆ ನಿರ್ವಾಣವಾಗಿ ಕಾಣಿಸಿಕೊಂಡದ್ದರಿಂದ ಆಕೆಯ ತಲೆಯು ಅದೃಶ್ಯವಾಗಿ ಅದರ ಸ್ಥಾನದಲ್ಲಿ ಕಮಲವು ಉದ್ಭವಿಸಿತೆಂದೂ ಒಂದು ಕಥೆಯನ್ನು ಹೇಳುತ್ತಾರೆ.

ರಲ್ಲಿ ಬೆಳಗಾವಿಯ ದಕ್ಷಿಣದಲ್ಲಿ ವೀರಕೇಶವಪುರವೆಂಬ ಹೆಸರಿನಿಂದ ಒಂದು ಅಗ್ರಹಾರವನ್ನು ಕಟ್ಟಿಸಿದನೆಂದೂ ಅಲ್ಲಿ ಒಂದು ಕೇಶವದೇವಾಲಯವನ್ನು ಸ್ಥಾಪಿಸಿದನೆಂದೂ ಒಂದು ಶಾಸನದಲ್ಲಿ ಹೇಳಿದೆ. ಅದು ಈಗ ನಾಶವಾಗಿ ಹೋಗಿದೆ. ಈ ಊರಿನ ಮಹತ್ವವನ್ನು ಚನ್ನಾಗಿ ಅರಿಯಬೇಕಾದರೆ ಅಲ್ಲಿಯೇ ಹೋಗಿ ನೋಡಿಕೊಂಡು ಬರಬೇಕೇ ಹೊರತು ಅವುಗಳನ್ನೆಲ್ಲ ವಿವರಿಸಲು ಸಾಧ್ಯವಿಲ್ಲ. ಒಟ್ಟಿನಲ್ಲಿ ಹೇಳಬೇಕಾದರೆ ಬೆಳಗಾವಿಯು ಕುಶಲಕಲೆಗಳ ಬೀಡು ಎಂದು ಹೇಳಬಹುದು.

ನಂದಿಗ್ರಾಮ

ಬೆಂಗಳೂರಿನಿಂದ ಉತ್ತರಕ್ಕೆ ಸುಮಾರು ಮುವತ್ತಾರು ಮೈಲಿ ದೂರದಲ್ಲಿ ನಂದಿ ದುರ್ಗದ ಕಿಬ್ಬಿಯಲ್ಲಿರುವ ನಂದಿಗ್ರಾಮದ ಭೋಗನಂದೀಶ್ವರ ದೇವಾಲಯವು ಮೈಸೂರು ರಾಜ್ಯದೊಳಗೆ ದ್ರಾವಿಡ ಶೈಲಿಯಲ್ಲಿ ಕಟ್ಟಿದ ವಿಸ್ತಾರವಾದ ಮತ್ತು ವಿಭೂಷಿತವಾದ ಕಟ್ಟಡಗಳಲ್ಲಿ ಒಂದು. ನಂದಿಯು ಈಗ ಒಂದು ಸಣ್ಣ ಗ್ರಾಮವಾಗಿರುವುದಾದರೂ ಒಂದಾನೊಂದು ಕಾಲದಲ್ಲಿ ಅದು ಪ್ರವರ್ಧಮಾನವಾದ ಪಟ್ಟಣವಾಗಿತ್ತು. ಯುದ್ಧಾದಿಗಳ ದೃಷ್ಟಿಯಿಂದ ದುರ್ಗಕ್ಕೆ ಹೆಚ್ಚಾದ ಪ್ರಾಶಸ್ತ್ಯವಿತ್ತು. ಆದ್ದರಿಂದ ಈ ಊರು ಮತ್ತು ದುರ್ಗವೂ ನಮ್ಮ ದೇಶದ ಪ್ರಾಚೀನ ಇತಿಹಾಸದಲ್ಲಿ ಆಗಾಗ್ಗೆ ದೃಷ್ಟಿಗೆ ಬೀಳುತ್ತಲೇ ಇರುತ್ತವೆ. ಈ ಭೋಗನಂದೀಶ್ವರ ದೇವಾಲಯದ ವಿಚಾರವನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾದರೆ ಆಗಿನ ಕಾಲದ ಚರಿತ್ರೆಯನ್ನು ಸ್ವಲ್ಪ ಮಟ್ಟಿಗೆ ಮುಂದಟ್ಟುಮಾಡಿಕೊಳ್ಳಬೇಕು.

ಚರಿತ್ರೆಗೆ ಗೊತ್ತಿರುವ ಹಾಗೆ ಸುಮಾರು ಕ್ರಿ. ಶ. ಎರಡನೆಯ ಶತಮಾನದಿಂದ ಹನ್ನೊಂದನೆಯ ಶತಮಾನದ ವರೆಗೆ ಮೈಸೂರಿನ ಬಹು ಭಾಗವನ್ನು ಆಳುತ್ತಿದ್ದವರು ಗಂಗರಸರು. ಅವರಿಗೆ "ನಂದಗಿರಿ ನಾಥರು" ಎಂಬ ಬಿರದು ಇತ್ತು. ಎಂಟನೆಯ ಶತಮಾನದ ಕೊನೆಯಲ್ಲಿ ಗಂಗರು ರಾಷ್ಟ್ರಕೂಟರಿಗೆ ಅಧೀನರಾದರು. ಪಾಲಾರ್ ನದಿಯ ಪೂರ್ವಪ್ರಾಂತದಲ್ಲಿ ಆಳುತ್ತಿದ್ದ ಬಾಣರಸರು ಕೆಲವು ವೇಳೆ ಗಂಗರಿಗೂ ಮತ್ತೆ ಕೆಲವು ವೇಳೆ ರಾಷ್ಟ್ರಕೂಟರಿಗೂ ಅಧೀನರಾಗಿದ್ದರು. ಇವರಂತೆಯೇ ನೊಳಂಬರೂ ಈ ಕಾಲದಲ್ಲಿ ಗಂಗರಿಗೋ ರಾಷ್ಟ್ರಕೂಟರಿಗೋ ಅಧೀನರಾಗಿದ್ದುಕೊಂಡು ಚಿತ್ರದುರ್ಗದ ಪ್ರದೇಶವನ್ನೆಲ್ಲ ಆಳು

ತ್ತಿದ್ದರು. ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿ ಚೋಳರು ಗಂಗರನ್ನು ಜಯಿಸಿ ಈ ಪ್ರದೇಶವನ್ನು ನಿಗಿರಿಲಿ ಚೋಳಮಂಡಲವೆಂದು ಕರೆದರು. ಹನ್ನೆರಡು ಹದಿಮೂರನೆಯ ಶತಮಾನಗಳಲ್ಲಿ ಗಂಗವಂಶೀಯರೆಂದು ಹೇಳಿಕೊಳ್ಳುತ್ತಾ ಚೋಳರ ಬಿರುದಾವಳಿಗಳನ್ನು ಧರಿಸಿಕೊಂಡು ಇದ್ದ ಒಂದು ರಾಜವಂಶದವರು ಈ ಕಾಲದಲ್ಲಿ ಪ್ರಬಲರಾಗಿದ್ದ ಹೊಯಿಸಳರಿಗೆ ಅಧೀನರಾಗಿ ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ಕೆಲವು ಭಾಗಗಳನ್ನು ಆಳುತ್ತಿದ್ದರು.

ಸುಮಾರು ಕ್ರಿ. ಶ. ೧೧೧೭ ರಲ್ಲಿ ಹೊಯಿಸಳರು ಚೋಳರನ್ನು ಮೈಸೂರು ದೇಶದಿಂದ ಓಡಿಸಿಬಿಟ್ಟರು. ಹೊಯಿಸಳ ರಾಜನಾದ ಸೋಮೇಶ್ವರನ ಮರಣಾನಂತರ (೧೨೫೪) ಕೋಲಾರ ಡಿಸ್ಟ್ರಿಕ್ಟು ಅವನ ಮಗನಾದ ರಾಮನಾಥನ ಕೈಗೆ ಬಂತು. ಹದಿನೈದರಿಂದ ಹದಿನೇಳನೆಯ ಶತಮಾನದವರೆಗೆ ನಂದಿಯು ವಿಜಯನಗರದ ಅರಸರ ಅಧೀನವಾಗಿ ಆವತಿಯ ಪಾಳೆಯಗಾರನಿಂದ ಆಳಲ್ಪಡುತ್ತಿತ್ತು. ಸುಮಾರು ಹದಿನೇಳನೆಯ ಶತಮಾನದ ಮಧ್ಯಭಾಗದಲ್ಲಿ ಬಿಜಾಪುರದ ಸುಲ್ತಾನನು ಈ ಪ್ರಾಂತ್ಯವನ್ನು ಜಯಿಸಿ ನಂದಿಯನ್ನು ಶಿವಾಜಿಯ ತಂದೆಯಾದ ಷಾಜಿಗೆ ಜಹಗೀರಿಯಾಗಿ ಕೊಟ್ಟನು. ಔರಂಗಜೇಬನ ಆಳಿಕೆಯಲ್ಲಿ ಮೈಸೂರು ದೇಶವು ಮೊಗಲರ ಸ್ವಾಧೀನವಾಯಿತು. ಸುಮಾರು ಹದಿನೆಂಟನೆಯ ಶತಮಾನದ ಮಧ್ಯಕಾಲದ ಹೊತ್ತಿಗೆ ಕೋಲಾರದ ಸುತ್ತಮುತ್ತಲ ಪ್ರದೇಶವೆಲ್ಲ ಹೈದರಾಲಿಯ ವಶವಾಯಿತು. ದುರ್ಗದ ಮೇಲ್ಭಾಗದಲ್ಲಿ ಉದ್ದಕ್ಕೂ ಈಗ ಪಾಳುಪಾಳಾಗಿ ನಿಂತಿರುವ ದೊಡ್ಡ ಕೋಟೆ ಅವನೂ ಅವನ ಮಗನಾದ ಟೀಪೂವೂ ಕಟ್ಟಿಸಿದ್ದು. ಟೀಪುವು ನಂದಿಯ ಊರನ್ನು ವಿಸ್ತರಿಸಿ ಅದರಲ್ಲಿ ಅರಮನೆಯನ್ನೂ ಪೇಟೆಯನ್ನೂ ಕಟ್ಟಿಸಿದನು. ನಂದಿಬೆಟ್ಟದ ಬುಡದಲ್ಲಿ ಈಗಲೂ ಊರಿನ ಒಂದು ಭಾಗ ಸುಲ್ತಾನಪೇಟೆಯೆಂದು ಕರೆಯಲ್ಪಡುತ್ತಿದೆ. ೧೭೯೧ ರಲ್ಲಿ ಬ್ರಿಟಿಷರು ಈ ದುರ್ಗವನ್ನು ಹಿಡಿದು ಮೂರನೆಯ ವರ್ಷ ಟೀಪುವಿಗೆ ವಾಪಸು ಕೊಟ್ಟುಬಿಟ್ಟರು. ಟೀಪೂವಿನ ಮರಣಾನಂತರ ಅದು ಮೈಸೂರು ಸಂಸ್ಥಾನಕ್ಕೆ ಸೇರಿ ಮುಮ್ಮಡಿ ಕೃಷ್ಣರಾಜ ಒಡೆಯರ ವಶಕ್ಕೆ ಬಂದಿತು.

ಇಲ್ಲಿರುವ ಭೋಗನಂದೀಶ್ವರ ದೇವಾಲಯವು ಕ್ರಿ. ಶ. ೮೧೧ ನೆಯ ಇಸವಿಯದು. ಇದನ್ನು ಹಿಂದೆ ಹೇಳಿದ ಬಾಣರಸರಲ್ಲಿ ಒಬ್ಬನಾದ ಬಾಣ ವಿದ್ಯಾ

ಧರನ ಹೆಂಡತಿ ರತ್ನಾವಳಿ ಎಂಬಾಕೆಯು ಕಟ್ಟಿಸಿದಳೆಂದು ಹೇಳುತ್ತಾರೆ. ಆಗಿನಿಂದ ನಂದಿಗ್ರಾಮವು ಅನುಭವಿಸಿದ ಕಷ್ಟನಿಷ್ಠುರಗಳನ್ನೆಲ್ಲಾ ಈ ದೇವಸ್ಥಾನವೂ ಅನುಭವಿಸಿದೆ. ಆಯಾ ಕಾಲದ ಒಂದೊಂದು ಅನುಭವಕ್ಕೂ ಈ ನಿದರ್ಶನವಿದೆ. ಈ ದೇವಾಲಯವು ಹಳೆಯಬೀಡಿನ ಹೊಯಿಸಳೇಶ್ವರ ದೇವಾಲಯದ ಹಾಗೆ ಒಂದರ ಮಗ್ಗುಲಲ್ಲಿ ಒಂದರಂತೆ ಎರಡು ಗರ್ಭಗೃಹಗಳುಳ್ಳ ಜೋಡಿ ಕಟ್ಟಡ. ಇದು ಪೂರ್ವಾಭಿಮುಖವಾಗಿಯೂ, ಒಂದು ವಿಸ್ತಾರವಾದ ಪ್ರಾಕಾರದ ಮಧ್ಯದಲ್ಲಿ ನೆಲಸಿದೆ. ಪ್ರಾಕಾರದ ದಕ್ಷಿಣದ ಗೋಡೆಯಲ್ಲಿ ಒಂದು ಮಹಾ ದ್ವಾರವಿದೆ. ಈಚೆಗೆ ಪೂರ್ವದಿಕ್ಕಿನ ಗೋಡೆಯನ್ನು ಒಡೆದು ಒಂದು ಹೊಸ ಗೇಟನ್ನು ಇಟ್ಟಿದ್ದಾರೆ. ಪ್ರಾಕಾರದ ಅಕ್ಕಪಕ್ಕಗಳ ಗೋಡೆಗಳಿಗೆ ಅಂಟಿಕೊಂಡು ಕೈಸಾಲೆ ಇದೆ. ಇಲ್ಲಿ ವರ್ಷಕ್ಕೊಂದಾವರ್ತಿ ದೊಡ್ಡ ಜಾತ್ರೆಯಾಗುತ್ತದೆ. ಆ ವೇಳೆಯಲ್ಲಿ ಜನಗಳು ಬಂದು ಈ ಕೈಸಾಲೆಯಲ್ಲಿ ಇಳಿದುಕೊಳ್ಳುತ್ತಾರೆ. ದೇವಾಲಯದ ಎರಡು ಗರ್ಭಗೃಹಗಳ ಪೈಕಿ ಉತ್ತರದಿಕ್ಕಿನ ಗೃಹದಲ್ಲಿ ಭೋಗನಂದೀಶ್ವರ ದಕ್ಷಿಣ ಗೃಹದಲ್ಲಿ ಅ ರು ಣಾ ಚ ಲೇ ಶ್ವ ರ ಇವೆ. ದೇವೀ ಗೃಹಗಳು ಈ ಎರಡು ಗರ್ಭ ಗೃಹಗಳ ಹಿಂಭಾಗದಲ್ಲಿ ಪ್ರಾಕಾರಕ್ಕೆ ಅಂಟಿಕೊಂಡು ಕಟ್ಟಲ್ಪಟ್ಟಿವೆ. ದೇವೀ ವಿಗ್ರಹಗಳಿಗೆ ಕ್ರಮವಾಗಿ "ಪ್ರಸನ್ನ ಪಾರ್ವತಿ" ಮತ್ತು "ಅಪೀತಕುಚಾಂಬಾ" ಎಂದು ಹೆಸರುಗಳು.

ಈ ಕಟ್ಟಡದಲ್ಲಿ ಎರಡು ಗರ್ಭಗೃಹಗಳಿರುವಂತೆಯೇ ಎರಡು ಸುಕನಾಸಿಗಳೂ ಎರಡು ನವರಂಗಗಳೂ, ಈ ನವರಂಗಗಳ ಮುಂದುಗಡೆ ಬಯಲಾದ ಮಂಟಪಗಳೂ ಇವೆ. ಎರಡು ನವರಂಗಗಳನ್ನೂ ಸೇರಿಸುವಂತೆ ಮಧ್ಯೆ ಒಂದು ಗೋಡೆ ಇದೆ. ಈ ಗೋಡೆಯ ಮುಂಭಾಗದಲ್ಲಿ ದೇವಾಲಯದ ಉತ್ಸವ ಮೂರ್ತಿಗಳನ್ನು ಇಡುವುದಕ್ಕೆಂದು ಒಂದು ಸಣ್ಣ ಗೃಹವೂ ಒಂದು ಚೌಕವಾದ ಚಿಕ್ಕ ರಂಗಮಂಟಪವೂ ಇವೆ. ಇದರ ಮುಂದುಗಡೆ ಎರಡು ನಂದಿ ಮಂಟಪಗಳನ್ನು ಸೇರಿಸಿದ ಹಾಗೆ, ಅದೇ ಸಾಲಿನಲ್ಲಿ ಮತ್ತೊಂದು ಮಂಟಪವಿದೆ. ಇದನ್ನು ಕಲ್ಯಾಣ ಮಂಟಪವೆಂದು ಕರೆಯಬಹುದು. ಇದಕ್ಕೂ ಮುಂದೆ ಸ್ವಲ್ಪ ತಗ್ಗಿನಲ್ಲಿ ಒಂದು "ಪಾತಾಳಾಂಕಣ" ವಿದೆ. ಅಮ್ಮನವರ ಗುಡಿಗಳನ್ನೂ ಒಳಗೊಂಡು ಒಂದು ಅಂಗಳವೂ ಸುತ್ತಲೂ ಕೈಸಾಲೆಯೂ ಇದೆ. ಈ ಅಂಗಳದ

ಉತ್ತರ ಗೋಡೆಯ ಮಧ್ಯೆ ಒಂದು ದ್ವಾರವಿದೆ. ಇದರಿಂದ ಹೊರಕ್ಕೆ ಹೋದರೆ ಸುತ್ತಲೂ ಕೈಸಾಲೆ ಇರುವ ಮತ್ತೊಂದು ಅಂಗಳವು ಸಿಕ್ಕುತ್ತದೆ. ಈ ಅಂಗಳ ದಲ್ಲಿ ಎರಡು ಮಂಟಪಗಳಿವೆ. ಒಂದು ದೊಡ್ಡದು, ಇನ್ನೊಂದು ಸಣ್ಣದು. ಈ ಎರಡನೆಯ ಅಂಗಳದ ಉತ್ತರ ಬಾಗಿಲಿನಿಂದ ಹೊರಕ್ಕೆ ಮೂರನೆಯದಾದ ಇನ್ನೊಂದು ಅಂಗಳ. ಅದರ ಮಧ್ಯೆ ಕೆತ್ತಿ ಹದಮಾಡಿದ ಕಲ್ಲುಗಳಿಂದ ಕಟ್ಟಿ ರುವ ಒಂದು ಸುಂದರವಾದ ಕೊಳವಿದೆ. ದೇವಾಲಯದ ಮುಂದೆ ಪೂರ್ವಕಡೆ ಮಹಾದ್ವಾರವಿದೆ. ಇದರ ಮೇಲುಗಡೆ ಗೋಪುರವಿದ್ದಿರಬೇಕು. ಈಗ ಬಿದ್ದು ಹೋಗಿದೆ. ದ್ವಾರದ ಕೆತ್ತನೆ ಕಂಬಗಳುಳ್ಳ "ಪರ್ವಕೈಮಂಟಪ" ವೆಂಬ ಒಂದು ಸೊಗಸಾದ ಮಂಟಪವಿದೆ. ಇದರ ಹತ್ತಿರ ವೀರಭದ್ರ ಮತ್ತು ವೆಂಕಟರಮಣ ಸ್ವಾಮಿ ದೇವಾಲಯಗಳು, ತೊಟ್ಟಿತೀರ್ಥ ಎಂಬ ಒಂದು ಸಣ್ಣ ಕೊಳವೂ ಇವೆ.

ಮೇಲಣ ವಿವರಣೆಯಿಂದ ಈ ದೇವಸ್ಥಾನವು ಎಷ್ಟು ವಿಸ್ತಾರವಾದದ್ದೆಂದು ಗೊತ್ತಾಗುತ್ತದೆ. ೩೭೦ ಅಡಿಗಳ ಉದ್ದ, ೨೫೦ ಅಡಿಗಳ ಅಗಲ. ಆದರೆ ದೇವಸ್ಥಾನವನ್ನು ಪ್ರತಿಷ್ಠಿಸಿದ ರಾಣಿ ರತ್ನಾವಳಿಯೇನೋ ಉತ್ತರದ ಕಡೆ ಇರುವ ಭೋಗನಂದೀಶ್ವರದ ಗರ್ಭಗೃಹ ಸುಕನಾಸಿ ನವರಂಗವನ್ನೊಳಗೊಂಡ ಗುಡಿಯನ್ನು ಮಾತ್ರ ಕ್ರಿ. ಶ. ೮೧೦ ರಲ್ಲಿ ಕಟ್ಟಿಸಿ, ಅದನ್ನು ನಡೆಸಿಕೊಂಡು ಬರುವುದಕ್ಕಾಗಿ ದತ್ತಿಯನ್ನು ಬಿಟ್ಟಳು. ಸುಮಾರು ಕ್ರಿ. ಶ. ೮೮೦ ರಲ್ಲಿ "ಪಲ್ಲವ ಕುಲತಿಳಕ ನೊಳಂಬಾದಿರಾಜಂ ರಾಜ್ಯಂಗೈಯುತ್ತಿರೆ" ಐನೂರ್ವಾ ಚಾರಿಯ ಮಗ ಪಳಿಯಣ ನೆಂಬವನು ಗುಡಿಯ ಮೇಲೆ ಗೋಪುರವನ್ನು ಕಟ್ಟಿಸಿದನು. ದಕ್ಷಿಣ ಕಡೆಯ ದೇವಾಲಯವೂ ಅದರ ಮೇಲಣ ಗೋಪುರವೂ ಹತ್ತನೆಯ ಶತಮಾನದಲ್ಲಿ ಕಟ್ಟಿಸಿದವುಗಳು. ನವರಂಗಗಳ ಮುಂದಿರುವ ನಂದಿಮಂಟಪಗಳು ಹನ್ನೊಂದನೆಯ ಶತಮಾನದವೆಂದು ತಿಳಿಯಬರುತ್ತದೆ. ಮಿಕ್ಕ ಭಾಗಗಳೆಲ್ಲ ವಿಜಯನಗರದ ರಾಜರ ಕಾಲದಲ್ಲಿ ಕಟ್ಟಿದವುಗಳು.

ಈ ದೇವಾಲಯದಲ್ಲಿ ಎರಡು ಗರ್ಭಗೃಹಗಳು ಇವೆ ಎಂದು ಹೇಳಿದೆ ಯಷ್ಟೆ. ಉತ್ತರ ಭಾಗದಲ್ಲಿರುವುದಕ್ಕೆ ಭೋಗನಂದೀಶ್ವರನೆಂದೂ ದಕ್ಷಿಣ ಭಾಗದಲ್ಲಿರುವುದಕ್ಕೆ ಅರುಣಾಚಲೇಶ್ವರನೆಂದೂ ಹೆಸರು. ಭೋಗನಂದೀಶ್ವರ

ದೇವಾಲಯವು ಮೊದಲು ಜೈನ ದೇವಾಲಯವಾಗಿದ್ದಿರಬಹುದೆಂದು ಕೆಲವರು ಊಹಿಸುತ್ತಾರೆ. ಅರುಣಾಚಲೇಶ್ವರ ದೇವಾಲಯವು ಮೊದಲು ವಿಷ್ಣು ದೇವಾಲಯವಾಗಿತ್ತೆಂದೂ ಶ್ರೀನಿವಾಸದೇವರ ವಿಗ್ರಹವಿತ್ತೆಂದೂ ಅದು ಈಚೆಗೆ ಯಾವಾಗಲೋ ನಾಶವಾಗಿ ಲಿಂಗವು ಸ್ಥಾಪಿಸಲ್ಪಟ್ಟಿತೆಂದೂ ಸ್ಥಳೀಕರಲ್ಲಿ ಒಂದು ಹೇಳಿಕೆ ಇದೆ. ಆ ವಿಷ್ಣುದೇವರಿಗಾಗಿ ಬಿಟ್ಟ ಒಂದು ಇನಾಮತಿ ಜಮೀನು ಈಗಲೂ ಆ ದೇವರ ಹೆಸರಿನಲ್ಲಿಯೇ ಇರುವುದಾಗಿ ಹೇಳುತ್ತಾರೆ. ಭೋಗನಂದೀಶ್ವರದ ನವರಂಗದಲ್ಲಿ ಮೂರು ಅಡಿ ಎತ್ತರವಿರುವ ಧ್ಯಾನಾಸನದಲ್ಲಿರುವ ಒಂದು ವಿಗ್ರಹವಿದೆ. ಇದನ್ನು ಯಾವುದೋ ಒಬ್ಬ ಚೋಳ ರಾಜನ ವಿಗ್ರಹವೆಂದು ಹೇಳುತ್ತಾರೆ. ಅದರ ಎಡಭಾಗದಲ್ಲಿ ನಿಂತಿರುವ ಸೂರ್ಯವಿಗ್ರಹವಿದೆ. ಅರುಣಾಚಲೇಶ್ವರದ ನವರಂಗದಲ್ಲಿ ಒಂದು ಗಣಪತಿ ವಿಗ್ರಹವಿದೆ. ಇದಕ್ಕೆ ಸಿಂಹದ ಮುಖವೂ ತೆಳ್ಳಗಿರುವ ಒಂದು ಸೊಂಡಿಲೂ ಇದೆ. ಎರಡು ಗರ್ಭಗೃಹಗಳ ಮೇಲೆಯೂ ಗೋಪುರಗಳಿವೆ. ಉತ್ತರದಲ್ಲಿರುವುದು ಕಗ್ಗಲ್ಲಿನಿಂದ ಮಾಡಿದುದು. ಅದರ ತುದಿಯಲ್ಲಿ ಕರಿಯ ಕಲ್ಲಿನ ಕಲಶವಿದೆ. ನಾಲ್ಕು ಮೂಲೆಯಲ್ಲಿಯೂ ನಾಲ್ಕು ನಂದಿ ವಿಗ್ರಹಗಳು ಸ್ಥಾಪಿಸಲ್ಪಟ್ಟಿವೆ. ಗೋಪುರದ ನಾಲ್ಕು ಕಡೆಯ ಗೂಡುಗಳ ಮುಂದೆಯೂ ಸುಮಾರು ಮೂರು ಅಡಿ ಎತ್ತರದ ನಾಲ್ಕು ಕರಿಯ ಕಲ್ಲಿನ ವಿಗ್ರಹಗಳು ಇವೆ. ಅರುಣಾಚಲೇಶ್ವರ ದೇವಾಲಯದ ಮೇಲಿರುವ ಗೋಪುರವೂ ಅದೇ ತರಹ ಇದೆ. ಆದರೆ ಗಾರೆಯಿಂದ ಕಟ್ಟಿರುವಂತೆ ತೋರುತ್ತದೆ. ಈ ಗುಡಿಗಳ ಗೋಡೆಗಳ ಹೊರಮುಖದಲ್ಲಿ ಸಣ್ಣ ಕಂಬಗಳೂ, ಮಧ್ಯೆ ಗೋಪುರಗಳೂ, ಕೊರೆದು ಮಾಡಿದ ರಂಧ್ರಗಳುಳ್ಳ ಕಿಟಕಿಗಳೂ, ಅಲ್ಲಲ್ಲೆ ಕೆಲವು ವಿಗ್ರಹಗಳೂ ಇವೆ. ಬುಡದಲ್ಲಿ ಆನೆ, ಯಾಳಿ, ಸಿಂಹಗಳನ್ನು ಬರೆಸಿ ಕೆತ್ತಿದ ಬೇಲಿಗಳಿವೆ. ಉತ್ತರ ದಿಕ್ಕಿನ ನವರಂಗದ ಗೋಡೆಯ ಹೊರಮುಖದ ಮಧ್ಯದಲ್ಲಿ ಒಂದು ವೈಷ್ಣವೀ ವಿಗ್ರಹವು ಕೋಣನ ತಲೆಯ ಮೇಲೆ ನಿಂತಿದೆ. ಇದು ಪಲ್ಲವರ ಕಾಲದ ಶಿಲ್ಪವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಉತ್ತರ, ದಕ್ಷಿಣ ಎರಡು ನವರಂಗಗಳ ಹಿಂಗೋಡೆಗಳನ್ನು ಸೇರಿಸಿಕೊಂಡು ಎರಡು ದೇವಾಲಯಗಳ ಮಧ್ಯೆ ಪರದೆಯಂತೆ ಒಂದು ಗೋಡೆ ಇದೆ. ಇದರಲ್ಲಿ ಕೊರೆದು ಮಾಡಿದ ಜಾಲಂಧ್ರದ ಎರಡು ಕಿಟಕಿಗಳಿವೆ. ಈ ಗೋಡೆಯು

ಚಿತ್ರಿತವಾದ ಅರೆಗಂಬಗಳಿಂದ ಫಲಕಗಳಾಗಿ ವಿಂಗಡಿಸಲ್ಪಟ್ಟ್ವು ಈ ಫಲಕಗಳಲ್ಲಿ ಎರಡು ಸಾಲು ವಿಗ್ರಹಗಳಿವೆ. ಮೇಲಿನ ಸಾಲಿನಲ್ಲಿ ಮಧ್ಯೆ ಪಾರ್ವತಿ ವಿಗ್ರಹವೂ ಎರಡು ಕಡೆಯೂ ಪರಿಚಾರಿಕೆಯರ ವಿಗ್ರಹಗಳೂ ಇವೆ. ಅಡಿಯ ಸಾಲಿನಲ್ಲಿ ಮಧ್ಯೆ ನಿಂತಿರುವ ವಿಘ್ನೇಶ್ವರ ವಿಗ್ರಹವೂ ಪಾರ್ಶ್ವಗಳಲ್ಲಿ ಕಾಲಭೈರವ ಮತ್ತು ಋಷಿಗಳ ವಿಗ್ರಹಗಳೂ ಇವೆ. ಈ ಪರದೆ ಗೋಡೆಯ ಮೇಲ್ಭಾಗದಲ್ಲಿ ನಾನಾ ಭಂಗಿಗಳಲ್ಲಿರುವ ಸಣ್ಣ ಸಣ್ಣ ನಂದಿ ವಿಗ್ರಹಗಳೂ ಅವುಗಳು ಹತ್ತಿಕೊಂಡಿರುವ ಸಿಂಹ ಲಲಾಟಗಳ ಸಾಲೂ ಇವೆ. ಕೆಳಭಾಗದಲ್ಲಿ ಯಾಳಿಗಳು, ಸಿಂಹಗಳು ಮತ್ತು ಆನೆಗಳು ಕೆತ್ತಲ್ಪಟ್ಟಿವೆ. ಎರಡು ದೇವಾಲಯಗಳ ನವರಂಗಗಳ ಮಧ್ಯೆ ಈ ಪರದೆಯ ಮುಂಭಾಗದಲ್ಲಿ ಒಂದು ಸಣ್ಣ ಗುಡಿ ಇದೆ. ಇದಕ್ಕೆ ಉಮಾಮಹೇಶ್ವರ ಗುಡಿ ಎಂದು ಹೆಸರು. ಇದನ್ನು ಉತ್ಸವ ವಿಗ್ರಹಗಳನ್ನು ಇಡುವುದಕ್ಕೆ ಉಪಯೋಗಿಸಲಾಗುತ್ತಿದೆ. ಪ್ರದಕ್ಷಿಣೆಗೋಸ್ಕರ ಗುಡಿಯ ಸುತ್ತಲೂ ಸ್ವಲ್ಪ ಜಾಗವನ್ನು ಬಿಟ್ಟಿದೆ. ಈ ಗುಡಿಯ ಗೋಡೆಗಳ ಹೊರಮುಖದಲ್ಲಿ ಗಿರಿಜಾ ಕಲ್ಯಾಣದ ವಿಗ್ರಹಗಳೂ ಮೇಲುಗಡೆ ಒಂದು ಹಂಸಗಳ ಸಾಲೂ ಕೆತ್ತಲ್ಪಟ್ಟಿವೆ. ಈ ಗುಡಿಯ ಮುಂದಿರುವ ರಂಗಮಂಟಪ ಸೊಗಸಾದ ಕಲಾಕೌಶಲತೆಯನ್ನು ವ್ಯಕ್ತಗೊಳಿಸುತ್ತದೆ. ದೇವಸ್ಥಾನದಲ್ಲೆಲ್ಲ ಇವೇ ಬಹು ಸ್ವಾರಸ್ಯವಾದ ಭಾಗ. ಮೈಸೂರು ರಾಜ್ಯದಲ್ಲಿರುವ ದ್ರಾವಿಡ ಶೈಲಿಯ ಮತ್ತಾವ ದೇವಾಲಯದಲ್ಲಿಯೂ ಈ ಕೈವಾಡವೂ ನಯುಗೆಲಸವೂ ಕಂಡು ಬರುವುದಿಲ್ಲ. ಇದನ್ನು ಕಟ್ಟಿರುವುದು ಕರಿಕಲ್ಲಿನಲ್ಲಿ. ಕಟ್ಟಿಸಿದವರಾರೆಂಬುದು ತಿಳಿದುಬಂದಿಲ್ಲ. ಕಂಬಗಳ ಬುಡದಿಂದ ತುದಿಯವರೆಗೂ ಕೆತ್ತನೆಯ ಕೆಲಸ ಮಾಡಿದವುಗಳಾಗಿವೆ. ಹಕ್ಕಿ, ಮೃಗ, ಲತೆ, ಮೂರ್ತಿಗಳು ಅಂದವಾಗಿ ಕೆತ್ತಲ್ಪಟ್ಟಿವೆ. ಈ ಮಂಟಪದೊಳಗಾಗಿ ಹುಡುಕಿದರೂ ಕೆತ್ತದೆ ಇರುವ ಜಾಗವು ಸಿಕ್ಕುವದಿಲ್ಲ. ಪ್ರತಿಯೊಂದು ಕಂಬದಲ್ಲಿಯೂ ಎರಡು ಮುಮ್ಮೊಗಗಳಲ್ಲಿ ಸುಮಾರು ಎರಡಡಿಯಷ್ಟು ಎತ್ತರವಾದ ಸ್ತ್ರೀ ಮೂರ್ತಿಗಳೂ ಮಿಕ್ಕ ಎರಡು ಕಡೆ ಕಲಶಗಳೂ ಅವುಗಳಲ್ಲಿ ಲತೆಗಳೂ, ಆಲತೆಗಳ ಮೇಲೆ ನಾನಾ ರೀತಿಗಳಲ್ಲಿ ಕುಳಿತಿರುವ ಗಿಣಿಗಳೂ ಇವೆ. ಸ್ತ್ರೀ ಮೂರ್ತಿಗಳ ಮಧ್ಯೆ ಪೂರ್ತಿಯಾಗಿ ಕೆತ್ತಿ ಕೆಲಸ ಮಾಡಿದ ಮತ್ತೊಂದು ಸಣ್ಣ ಕಂಬವಿದೆ. ಇವೆಲ್ಲವುಗಳೂ ಒಂದೇ ಕಲ್ಲಿನಲ್ಲಿ ಕೊರೆದು ಮಾಡಿದವುಗಳು. ಈ ಮಂಟಪದ ಯಾವ ಭಾಗ

ವನ್ನು ತೆಗೆದುಕೊಂಡರೂ ಚಿತ್ರಕೆಲಸವಿದೆ! ಇದನ್ನು ತಕ್ಕಂತೆ ವರ್ಣಿಸುವ ದೆಂದರೆ ಅಸಾಧ್ಯವಾದ ಕೆಲಸ. ಇಲ್ಲಿಯ ಕೆತ್ತನೆಯಲ್ಲಿ ಪಕ್ಷಿಯೇ ಮುಖ್ಯವಸ್ತು: ಕಂಬದ ಮೇಲೆ ಹಕ್ಕಿಗಳು, ಬೋದಿಗೆ ಮೇಲೆ ಹಕ್ಕಿಗಳು, ಭುವನೇಶ್ವರಿಯಲ್ಲಿ ಹಕ್ಕಿಗಳು, ಎಲ್ಲೆಲ್ಲಿ ನೋಡಿದರೂ ಹಕ್ಕಿಗಳೆ! ಈ ಮಂಟಪದ ಭುವನೇಶ್ವರಿ ಸುಮಾರು ನಾಲ್ಕು ಅಡಿ ಆಳವಾಗಿದೆ. ಇದರೊಳಗೆ ಒಂದು ಸಾಲಿನಲ್ಲಿ ವಾದ್ಯ ಗಳನ್ನು ಹಿಡಿದುಕೊಂಡು ನರ್ತಿಸುತ್ತಿರುವ ವಿಗ್ರಹಗಳು, ಇನ್ನೊಂದರಲ್ಲಿ ಒಂದರ ಪಕ್ಕದಲ್ಲಿ ಒಂದರಂತೆ ಅಷ್ಟದಿಕ್ಪಾಲಕರು ಮತ್ತು ಶಿವಮೂರ್ತಿಗಳು ಇವೆ. ಮಧ್ಯದಲ್ಲಿ ಮೇಲಿನಿಂದ ಜೋತು ಬಿದ್ದಿರುವ ಕಮಲವನ್ನು ನಾಲ್ಕು ಗಿಣಿಗಳು ಧರಿಸಿಕೊಂಡಿವೆ. ತೊಲೆಗಳ ಒಳಮುಖದಲ್ಲಿ: ಗೌರೀಶಂಕರ, ಲಕ್ಷ್ಮೀನಾರಾ ಯಣ, ಸ್ವಾಹಾದೇವಿಯೊಡನೆ ಎರಡು ತಲೆಯುಳ್ಳ ವಿಘ್ನೇಶ್ವರ, ಸರಸ್ವತಿ ಮತ್ತು ಬ್ರಹ್ಮ, ಈ ವಿಗ್ರಹಗಳು ಕೆತ್ತಲ್ಪಟ್ಟವೆ. ಇದರ ಮುಂದುಗಡೆ ಎರಡು ನಂದಿ ಮಂಟಪಗಳ ನಡುವೆ ಕಲ್ಯಾಣಮಂಟಪವಿದೆ. ಇದರಲ್ಲಿ ಹನ್ನೆರಡು ಕರಿಕಲ್ಲಿನ ಕಂಬಗಳಿವೆ. ಇವುಗಳನ್ನು ನಯಮಾಡಿ ಸುತ್ತಲೂ ಚಿತ್ರ ಕೆಲಸ ಮಾಡ ಲಾಗಿದೆ. ಇವುಗಳೊಳಗೆ ಎಂಟರ ಮುಮ್ಮೊಖದಲ್ಲಿ ಸುಮಾರು ಮೂರು ಅಡಿ ಎತ್ತರವಾಗಿ ನಿಂತಿರುವ ಸ್ತ್ರೀ ವಿಗ್ರಹಗಳಿವೆ. ಈ ವಿಗ್ರಹಗಳ ಆಕಾರ, ಸೌಂದರ್ಯ, ಅಂಗಾಂಗ ಸಾಮಂಜಸ್ಯ, ಸ್ಪಷ್ಟವಾದ ರೂಪರೇಖೆ, ಇವೆಲ್ಲವೂ ಮೆಚ್ಚುವ ಹಾಗಿವೆ. ಕಂಬಗಳ ಬುಡದ ಫಲಕಗಳಲ್ಲಿ ಸಿಂಹಗಳು, ಮಿಕ್ಕ ಫಲಕಗಳಲ್ಲಿ ಮತ್ಸ್ಯಾವ ತಾರ, ವರಾಹಾವತಾರ, ಯೋಗಾನರಸಿಂಹ, ನಟರಾಜ, ತಾಂಡವ ಗಣಪತಿ, ಬ್ರಹ್ಮ, ಆಂಜನೇಯ, ರಾಮಲಕ್ಷ್ಮಣರು, ಕಾಲಭೈರವ, ಉಮಾಮಹೇಶ್ವರ, ಪರಶುರಾಮ, ಈ ವಿಗ್ರಹಗಳನ್ನು ಕೆತ್ತಿದೆ. ಕಂಬಗಳ ಮೇಲೆ ಮಂಟಪದ ನಾಲ್ಕು ಕಡೆಗಳಲ್ಲಿಯೂ ಒಂದು ಚಿತ್ರಪಟ್ಟಿಕೆ ಇದೆ. ಇದರಲ್ಲಿ ಪಾರ್ವತೀ ಪರಮೇಶ್ವರರು, ಬ್ರಹ್ಮ, ವಿಷ್ಣು, ಪರಿವಾರ ದೇವತೆಗಳು, ಋಷಿಗಳು, ಸೂರ್ಯ, ತಾಂಡವೇಶ್ವರ ಮತ್ತು ಗಾಯಕ ಪರಿವಾರ, ಕೆಳಗಡೆ ಆನೆ ಸಾಲು ಇವುಗಳನ್ನು ಕೆತ್ತಿದೆ. ಕಲ್ಯಾಣಮಂಟಪದ ಮುಂದುಗಡೆ ಇರುವ ಪಾತಾಳಾಂಕ ಣದ ಸುತ್ತಲೂ ಒಳಮುಖದಲ್ಲಿ ಜಗಲಿ ಇದೆ. ಈ ಅಂಕಣಕ್ಕೆ ಮೂರು ಕಡೆ ಗಳಲ್ಲಿಯೂ ಹೊರಕ್ಕೆ ಹೋಗುವುದಕ್ಕೆ ದಾರಿ ಇದೆ. ಕಲ್ಲನ್ನು ಕೊರೆದು ಮಾಡಿರುವ ಕಿಟಕಿಗಳು ಈ ದೇವಸ್ಥಾನದ ಒಂದು ವಿಶೇಷಾಂಶ. ಇವುಗಳಿಂದ

ಈ ಕಟ್ಟಡದಲ್ಲಿ ಒಂದೊಂದು ಭಾಗವು ಒಂದೊಂದು ಕಾಲದಲ್ಲಿ ಕಟ್ಟಿದ್ದೆಂದು ಗೊತ್ತಾಗುವಂತಿದೆ. ಎಲ್ಲಾ ಒಟ್ಟು ಇಂಥ ಕಿಟಕಿಗಳು ಉತ್ತರದ ಗುಡಿಯಲ್ಲಿ ನಾಲ್ಕು, ದಕ್ಷಿಣದ ಗುಡಿಯಲ್ಲಿ ನಾಲ್ಕು, ಇವೆರಡರ ಮಧ್ಯೆ ಇರುವ ಪರದೆ ಗೋಡೆಯಲ್ಲಿ ಎರಡು, ಈ ರೀತಿಯಾಗಿ ಹತ್ತು ಇವೆ. ಇವು ದ್ರಾವಿಡ ಶೈಲಿಯ ಮಿಕ್ಕ ದೇವಾಲಯಗಳಲ್ಲಿ ಇರುವ ಜಾಲಂಧ್ರದ ಕಿಟಕಿಗಳಂತಿಲ್ಲ. ಇವುಗಳ ಒಂದೊಂದರಲ್ಲಿಯೂ ಸುಂದರವಾದ ಒಂದು ಅಥವಾ ಹೆಚ್ಚು ವಿಗ್ರಹಗಳಿದ್ದು, ಮಿಕ್ಕ ಜಾಗದಲ್ಲಿ ಬೆಳಕು ಬರುವುದಕ್ಕೋಸ್ಕರ ರಂಧ್ರಗಳಿರುತ್ತವೆ. ಇವುಗಳಲ್ಲಿ ಒಂದರೊಳಗೆ ತಾಂಡವೇಶ್ವರನೂ, ಎರಡರಲ್ಲಿ ಲತೆಗಳೂ ಮತ್ತು ನರ್ತಕಿಯರೂ, ಮೂರು ಬಳ್ಳಿಯ ಸುರಳಿಗಳಲ್ಲಿ ಒಬ್ಬೊಬ್ಬ ಗಾಯಕನೂ ಇವೆ. ಮತ್ತೆರಡರಲ್ಲಿ ಲತೆಗಳೂ ನಾನಾ ಭಂಗಿಗಳಲ್ಲಿರುವ ವಾಮನರೂ ಇವೆ. ಒಂದರಲ್ಲಿ ನವಿಲಿನ ಮೇಲೆ ಕುಳಿತಿರುವ ಸುಬ್ರಹ್ಮಣ್ಯ ವಿಗ್ರಹವಿದೆ. ಮತ್ತೊಂದರಲ್ಲಿ ಕೋಣನ ಮೇಲೆ ನಿಂತಿರುವ ಮಹಿಷಾಸುರ ಮರ್ದಿನಿಯ ವಿಗ್ರಹವಿದೆ. ಪರದೆ ಗೋಡೆಯ ಎರಡು ಕಿಟಕಿಗಳಲ್ಲಿ ಯಾಳಿಗಳ ಮೇಲೆ ನಿಂತಿರುವ ಪುರುಷ ವಿಗ್ರಹಗಳಿವೆ. ಇವೆಲ್ಲವೂ ಶುದ್ಧವಾಗಿಯೂ ಗಡುಸಾಗಿಯೂ ಇದ್ದರೂ ನೋಡಲು ಅಂದವಾಗಿ ಕಾಣುತ್ತಿವೆ.

ಅಮ್ಮನವರ ಗುಡಿಗಳ ಪೈಕಿ ಒಂದು ಪರದೆ ಗೋಡೆಯ ಹಿಂಭಾಗದಲ್ಲಿಯೂ, ಇನ್ನೊಂದು ಅದರ ಎಡಕ್ಕೆ ಅಂಗಳದ ಮೂಲೆಯಲ್ಲಿಯೂ ಇದೆ. ಪ್ರಸನ್ನ ಪಾರ್ವತಿ ಮತ್ತು ಅಪೀತಕುಚಾಂಬಾ ವಿಗ್ರಹಗಳು ಸುಮಾರು ಐದು ಅಡಿ ಎತ್ತರವಿರುವ ಸುಂದರ ಮೂರ್ತಿಗಳು. ಈ ಎರಡು ಗುಡಿಗಳ ಗೋಡೆಯ ಹೊರ ಮುಖದಲ್ಲಿಯೂ ಗಿರಿಜಾ ಕಲ್ಯಾಣೋತ್ಸವದ ಚಿತ್ರವು ಕೆತ್ತಲ್ಪಟ್ಟಿದೆ.

ಪ್ರಧಾನ ದೇವಾಲಯದ ಉತ್ತರಕ್ಕೆ ಇರುವ ಎರಡನೆಯ ಪ್ರಾಕಾರದಲ್ಲಿ ಎರಡು ಮಂಟಪಗಳಿವೆ. ಇವುಗಳಲ್ಲಿ ಒಂದಕ್ಕೆ ಅಲಂಕಾರ ಕೆಲಸವು ಹೆಚ್ಚು. ಇದಕ್ಕೆ ವಸಂತ ಮಂಟಪವೆಂದು ಹೆಸರು. ಇದಕ್ಕೆ ಹದಿನಾರು ಕಂಬಗಳಿವೆ. ಅವುಗಳ ಪೈಕಿ ಕೊನೆಯವುಗಳಲ್ಲಿ ಮೂರು ಮೂರು ಸಣ್ಣ ಕಂಬಗಳೂ, ಮಧ್ಯದವುಗಳಲ್ಲಿ ಯಾಳಿಗಳೂ ಸಿಂಹಗಳೂ ಸವಾರರೂ ಇವೆ. ಇದರ ಎದುರಿಗೆ ನಾಲ್ಕು ಕಂಬದ ಇನ್ನೊಂದು ಮಂಟಪವಿದೆ. ಇದು ಸಣ್ಣದಾದರೂ ಎತ್ತರ

ವಾಗಿದೆ. ಇದಕ್ಕೆ ತುಲಾಭಾರ ಮಂಟಪವೆಂದು ಹೆಸರು. ಮೂರನೆಯ ಪ್ರಾಕಾರದ ಮಧ್ಯದಲ್ಲಿ ಶೃಂಗೀತೀರ್ಥವೆಂಬ ದೊಡ್ಡ ಕೊಳವಿದೆ. ಇದರ ಕಟ್ಟಡವು ಚೆನ್ನಾಗಿದೆ. ದಕ್ಷಿಣ ಪಿನಾಕಿನಿ ನದಿಯು ಇಲ್ಲಿಯೇ ಉದ್ಭವಿಸುತ್ತ ದೆಂದು ಹೇಳುತ್ತಾರೆ. ಮಹಾದ್ವಾರವು ಹದಿನಾರು ಅಡಿ ಎತ್ತರವೂ ಸುಮಾರು ಎಂಟು ಅಡಿ ಅಗಲವೂ ಇದೆ. ಇದಕ್ಕೆ ಎರಡು ಬಾಗಿಲುವಾಡಗಳಿವೆ. ಪ್ರತಿ ಯೊಂದರ ಮೇಲೂ ದ್ವಾರಪಾಲಕ ವಿಗ್ರಹಗಳೂ ಲತೆಯನ್ನು ಹಿಡಿದುಕೊಂಡಿ ರುವ ಸ್ತ್ರೀವಿಗ್ರಹಗಳೂ ಇವೆ. ಈ ಕಟ್ಟಡವು ನಾನಾ ಕಾಲಗಳ ರೀತಿಯನ್ನು ಅನುಸರಿಸಿ ಕಟ್ಟಿದ್ದಾದರೂ ಒಟ್ಟಿನ ಮೇಲೆ ಎಲ್ಲವೂ ಹೊಂದಿಕೊಂಡು ಸುಂದರ ವಾಗಿದೆ. ಕಟ್ಟಡಕ್ಕೆ ಮೇಲಿಂದ ಮೇಲೆ ಹೊಸ ಹೊಸ ಭಾಗಗಳನ್ನು ಸೇರಿಸಿ ಕಟ್ಟುತ್ತಾ ಬಂದರೆ ಹೀಗೆ ಹೊಂದಿಕೊಳ್ಳುವದು ಅಪರೂಪ. ಇದು ಇತರ ಅನೇಕ ಕಡೆಗಳಲ್ಲಿ ನಿದರ್ಶನಕ್ಕೆ ಬಂದಿದೆ. ಅಂಥ ಕಡೆಗಳಲ್ಲಿ ಮೂಲ ಕಟ್ಟಡದ ಸೌಂದರ್ಯವು ಹೆಚ್ಚುವುದಕ್ಕೆ ಬದಲು ಅಳಿಸಿ ಹೋಗಿ ಬಿಟ್ಟಿರುತ್ತದೆ. ಆದರೆ ಇಲ್ಲಿ ಹಾಗಿಲ್ಲ. ದೇವಾಲಯದ ಆಯಾ ಭಾಗಗಳೆಲ್ಲ ಹೊಂದಿಕೆಯಿಂದ ಸೇರಿಕೊಂಡು ಒಂದು ಸುಂದರವಾದ ಕಟ್ಟಡವಾಗಿ ಕಂಗೊಳಿಸುತ್ತಿದೆ. ದ್ರಾವಿಡ ಶೈಲಿಯ ದೇವಾಲಯಕ್ಕೆ ಇದನ್ನು ಉತ್ತಮವಾದ ಉದಾಹರಣೆ ಎಂದು ಹೇಳ ಬಹುದು.

ದ್ರಾವಿಡಶೈಲಿಯ ಇತರ ದೇವಾಲಯಗಳು

ನಂದಿಯ ಭೋಗನಂದೀಶ್ವರ ದೇವಾಲಯವು ೯ ನೆಯ ಶತಮಾನಕ್ಕೆ ಸೇರಿದ್ದೆಂದು ಹೇಳಿದೆಯಷ್ಟೆ. ಸುಮಾರು ಅದೇ ಸಮಯಕ್ಕೆ ಎಂದರೆ, ಒಂಬತ್ತು, ಹತ್ತು, ಹನ್ನೊಂದನೆಯ ಶತಮಾನಗಳಲ್ಲಿ ನಿರ್ಮಿಸಲ್ಪಟ್ಟ ಕೆಲವು ದೇವಾಲಯಗಳ ಅವಶೇಷಗಳು ಮೈಸೂರು ರಾಜ್ಯದಲ್ಲಿ ಇನ್ನೂ ನಿಂತಿವೆ. ಅವುಗಳಲ್ಲಿ ಚಾಮರಾಜನಗರದ ತಾಲ್ಲೂಕು, ಹಳೇ ಆಲೂರಿನಲ್ಲಿದ್ದ ಅರ್ಕೇಶ್ವರ ದೇವಾಲಯ, ನೆಲಮಂಗಲ ತಾಲ್ಲೂಕು ಬಿನ್ನಮಂಗಲದಲ್ಲಿರುವ ಮುಕ್ತಿನಾಥೇಶ್ವರ ದೇವಾಲಯ, ಚಾಮರಾಜನಗರ ತಾಲ್ಲೂಕು ನರಸಮಂಗಲದಲ್ಲಿರುವ ರಾಮೇಶ್ವರ ದೇವಾಲಯ, ಮುಳಬಾಗಿಲು ತಾಲ್ಲೂಕು ಆವನಿಯಲ್ಲಿರುವ ದೇವಾಲಯಗಳು ವಾಸ್ತುಶಿಲ್ಪದೃಷ್ಟಿಯಿಂದ ಅತ್ಯಂತ ಪುರಾತನವಾದುವು. ಇವುಗಳ ತರುವಾಯ ಶ್ರವಣಬೆಳಗೊಳದಲ್ಲಿರುವ ಚಾಮುಂಡರಾಯ ಬಸ್ತಿಯು ಗಮನಾರ್ಹವಾದದ್ದು. ಚಾಮುಂಡರಾಯ ಬಸ್ತಿಯು ಕ್ರಿ. ಶ. ಹತ್ತನೆಯ ಶತಮಾನದಲ್ಲಿ ಕಟ್ಟಿದ್ದೆಂದು ಶಾಸನಗಳಿಂದ ತಿಳಿಯಬರುತ್ತದೆ. ಮೇಲೆ ಹೇಳಿರುವ ದೇವಾಲಯಗಳು ಇದಕ್ಕಿಂತ ಹಿಂದಿನವು ಇರಬೇಕೆಂದು ಊಹಿಸಬಹುದಾಗಿದೆ.

ಹಳೇ ಆಲೂರು ಒಂದು ಬೇಚಿರಾಕು ಗ್ರಾಮ. ಅಲ್ಲಿಯ ಅರ್ಕೇಶ್ವರ ದೇವಾಲಯ ಬಹಳ ಪುರಾತನವಾದದ್ದು. ಅದನ್ನು ಈಚೆಗೆ ಯಾರೋ ಜೀರ್ಣೋದ್ಧಾರ ಮಾಡಿದ್ದಾರೆ. ದೇವಸ್ಥಾನದ ಹೊರಮುಖವೇನೂ ಚೆನ್ನಾಗಿಲ್ಲ. ಆದರೆ ಒಳಗಡೆ ಮೂಲ ದೇವಾಲಯದ ಕಂಬಗಳೂ, ಭಾವಣಿ, ಭುವನೇಶ್ವರಿಗಳೂ ಇವೆ. ಕಂಬಗಳು ಎಂಟು ಒಂಬತ್ತನೆಯ ಶತಮಾನದ ಗುಹಾಂತ ದೇವಾಲಯಗಳಲ್ಲಿರುವಂತೆ ಬೋದಿಗೆಗಳನ್ನು ಹೊಂದಿವೆ. ಕಂಬಗಳು

ದುಂಡಗಿದ್ದು ಅವುಗಳ ತುಂಬ ಚಿತ್ರಗಳು ಕೊರೆಯಲ್ಪಟ್ಟಿವೆ. ಮಧ್ಯದ ಭುವನೇಶ್ವರಿಯಲ್ಲಿ ಮಧ್ಯದಲ್ಲಿ ಈಶ್ವರನೂ ಸುತ್ತಲೂ ಅಷ್ಟದಿಕ್ಪಾಲಕರೂ ಕೆತ್ತಲ್ಪಟ್ಟಿವೆ.

ನೆಲಮಂಗಲ ತಾಲ್ಲೂಕು ಬಿನ್ನಮಂಗಲದಲ್ಲಿ ಇರುವ ಮುಕ್ತಿನಾಥೇಶ್ವರ ದೇವಾಲಯ ಚಿಕ್ಕದಾದ ದೇವಾಲಯ. ಒಂದು ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಅದರ ಹತ್ತಿರ ಇರುವ ಒಂದು ಶಾಸನದಲ್ಲಿ ಕೋಳುತ್ತುಂಗ ಚೋಳನು ಕ್ರಿ. ಶ. ೧೧೧೦ ರಲ್ಲಿ ಈ ದೇವಾಲಯಕ್ಕೆ ಒಂದು ದತ್ತಿಯನ್ನು ಬಿಟ್ಟಂತೆ ಹೇಳಿದೆ. ಆದ್ದರಿಂದ ಈ ದೇವಾಲಯವು ಇದಕ್ಕಿಂತ ಮುಂಚಿನಿಂದಲೂ ಇದ್ದಿರಬೇಕು. ದೇವಾಲಯವು ಪೂರ್ವಾಭಿಮುಖವಾಗಿದೆ. ನವರಂಗದ ಕಂಬಗಳು ಚಿತ್ರಿಸಲ್ಪಟ್ಟಿವೆ. ಅವುಗಳ ಮೇಲಿರುವ ಭಾವಣಿಯಲ್ಲಿ ಅಷ್ಟ ದಿಕ್ಪಾಲಕರು ಕೆತ್ತಲ್ಪಟ್ಟಿವೆ. ನವರಂಗದ ದ್ವಾರದ ಮೇಲೆ ಗಜಲಕ್ಷ್ಮಿ ಕೆತ್ತಿದೆ ಮತ್ತು ಬಾಗಿಲವಾಡವು ಚಿತ್ರಗಳಿಂದ ಕೂಡಿದೆ. ಗೋಡೆಯ ಹೊರಮುಖದಲ್ಲಿ ಕೆಳಗಡೆ ಸಿಂಹಗಳ ಸಾಲು ಕೆತ್ತಲ್ಪಟ್ಟಿದೆ. ಗೋಡೆಯ ಮೇಲೆ ದೊಡ್ಡ ಸಣ್ಣ ವಿಗ್ರಹಗಳು ಕೆತ್ತಲ್ಪಟ್ಟಿವೆ. ಹೊರಮುಖದಲ್ಲಿ ಏಳು ಗೂಡುಗಳಿವೆ. ಅವುಗಳಲ್ಲಿ ತಾಂಡವೇಶ್ವರ, ಗಣಪತಿ, ಶಿವ, ವಿಷ್ಣು, ಬ್ರಹ್ಮ, ಮಹಿಷಾಸುರ ಮರ್ದಿನಿ, ಕಾಳೀಯಮರ್ದನ ವಿಗ್ರಹಗಳು ಅಂದವಾಗಿ ಕೆತ್ತಲ್ಪಟ್ಟಿವೆ ಇವುಗಳಲ್ಲದೆ ಶಚೀದೇವಿ, ಭೈರವ, ವೇಣುಗೋಪಾಲ ವಿಗ್ರಹಗಳ ಬಾಗಿಲುವಾಡದ ಅಕ್ಕಪಕ್ಕದಲ್ಲಿ ಸೂರ್ಯಚಂದ್ರರೂ ಇವೆ. ಹೆಣ್ಣು ವಿಗ್ರಹಗಳು ಬಹು ಅಂದವಾಗಿ ಕೆತ್ತಲ್ಪಟ್ಟಿವೆ. ೧೧ ನೆಯ ಶತಮಾನದ ದ್ರಾವಿಡ ಶಿಲ್ಪಕ್ಕೆ ಇದು ಒಳ್ಳೆಯ ಉದಾಹರಣೆ. ತಲಕಾಡಿನಲ್ಲಿರುವ ವೈದ್ಯೇಶ್ವರ ದೇವಾಲಯವೂ ಇದೇ ಕಾಲದ್ದು. ಆದರೆ ಅದರಲ್ಲಿರುವದಕ್ಕಿಂತಲೂ ಕೆತ್ತನೆಯ ಕೆಲಸವು ಈ ದೇವಸ್ಥಾನದಲ್ಲಿ ಚೆನ್ನಾಗಿದೆ.

ದೇವನಹಳ್ಳಿ ತಾಲ್ಲೂಕು ಗಂಗವಾಡದ ದೇವಸ್ಥಾನವು ಈಗ ದೊರೆತಿರುವ ದ್ರಾವಿಡ ರೀತಿಯ ಕಟ್ಟಡಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದದ್ದೆಂದು ಊಹಿಸಬಹುದಾಗಿದೆ. ಇಲ್ಲಿರುವ ಎಂಟನೆಯ ಶತಮಾನದ ಒಂದು ಶಾಸನದಲ್ಲಿ ಈ ದೇವಾಲಯಕ್ಕೆ ದತ್ತಿಯನ್ನು ಬಿಟ್ಟಿರುವ ಅಂಶವು ದೊರಕಿದೆ. ಆದ್ದರಿಂದ

ಇದು ೮ ನೆಯ ಶತಮಾನಕ್ಕಿಂತಲೂ ಹಿಂದಿನದಿರಬೇಕೆಂದು ನಿರ್ಧರಿಸಬಹುದು. ಇದರಲ್ಲಿರುವ ದೇವರಿಗೆ "ತಬ್ಬಲೇಶ್ವರ" ನೆಂದು ಹೆಸರು. ಶಾಸನದಲ್ಲಿ ಸೋಮೇಶ್ವರನೆಂದು ಕರೆಯಲಾಗಿದೆ. ಈಗ ಈ ದೇವಾಲಯವು ಪಾಳುಬಿದ್ದುಹೋಗಿದೆ. ಪ್ರಾಕಾರದ ಒಳಗಿರುವ ಒಂದು ಸಿಂಹಸ್ತಂಭ, ಅದರ ಎಡಕ್ಕೆ ಇರುವ ಒಂದು ಪಾಳು ಮಂಟಪ. ಮಿಕ್ಕಭಾಗವೆಲ್ಲ ಈಚೆಗೆ ಕಟ್ಟಿದ್ದೆಂದು ತೋರುತ್ತದೆ.

ಬೆಂಗಳೂರು ನಗರದ ಅಲಸೂರು ಎಂಬ ಭಾಗದಲ್ಲಿ ಸೋಮೇಶ್ವರ ದೇವಾಲಯವಿದೆ. ಇದು ಕೆಂಪೇಗೌಡನ ಕಾಲಕ್ಕೆ ಎಂದರೆ ೧೮ ನೆಯ ಶತಮಾನಕ್ಕೆ ಸೇರಿದ್ದೆಂದು ತಿಳಿಯಬರುತ್ತದೆ. ದೇವಾಲಯದ ಮುಂಭಾಗದಲ್ಲಿ ಎತ್ತರವಾದ ಗೋಪುರವಿದೆ.

ಕುರುಡುಮಲೆ ಅಥವಾ ಕೂಡುಮಲೆ, ಮುಳುಬಾಗಿಲು ತಾಲ್ಲೂಕು. ಸೋಮೇಶ್ವರ ದೇವಾಲಯವು ಚಿಕ್ಕದಾದರೂ ಬಹು ಸುಂದರವಾಗಿದೆ. ಕರಿಯಕಲ್ಲಿನಿಂದ ಕಟ್ಟಲ್ಪಟ್ಟು ಹೆಚ್ಚಿಗೆ ಅಲಂಕಾರಗಳಿಲ್ಲದೆ ಮುದ್ದಾಗಿದೆ. ದಕ್ಷಿಣಾಭಿಮುಖ. ಮುಖಮಂಟಪಕ್ಕೆ ಕೆತ್ತಿದ ಕಂಭಗಳಿವೆ. ಗೋಡೆಗಳ ಹೊರಮುಖ ಸಣ್ಣ ತೆಳ್ಳನೆ ಕಂಬಗಳಿಂದಲೂ ಗೂಡುಗಳಿಂದಲೂ ಅಲಂಕೃತವಾಗಿದೆ. ಇಳವಂಜಿ ವಾಸುದೇವರಾಯನೆಂಬ ಚೋಳರಾಜನ, ಆತನ ಪತ್ನಿಯರ ವಿಗ್ರಹಗಳು ನಿಂತಿವೆ. ನವರಂಗದ ಕಂಬಗಳ ಮೇಲೆ ಶೈವ ಪುರಾಣದ ಕಥೆಗಳು ಕೆತ್ತಿವೆ.

ರಂಗಸ್ಥಳ, ಚಿಕ್ಕಬಳ್ಳಾಪುರ ತಾಲ್ಲೂಕು, ರಂಗನಾಥ ದೇವರು. ಗರ್ಭಗುಡಿ, ಸುಕನಾಸಿ, ನವರಂಗ, ಮುಖಮಂಟಪ ಇದೆ. ಮುಖಮಂಟಪದ ಕಂಬಗಳು ವಿಜಯನಗರದರಸರ ಕಾಲದಲ್ಲಿ ಕಟ್ಟಿದ್ದು. ಕಂಬಗಳು ಹೆಚ್ಚು ಚಿತ್ರಿತವಾದವಲ್ಲ. ಗೋಪುರವು ಅಂದವಾಗಿದೆ.

ತಲಕಾಡಿನಲ್ಲಿರುವ ವೈದ್ಯೇಶ್ವರ ದೇವಾಲಯವು ಪುರಾತನವಾದದ್ದು ಮತ್ತು ಶ್ಲಾಘ್ಯವಾದದ್ದು. ತಲಕಾಡು ಪ್ರದೇಶವೆಲ್ಲ ಪಕ್ಕದಲ್ಲಿಯೇ ಹರಿಯುತ್ತಿರುವ ಕಾವೇರಿ ನದಿಯು ತಂದೊಡ್ಡುತ್ತಿರುವ ಮರಳು ರಾಶಿಯಿಂದ ಮುಚ್ಚಿಹೋಗಿದೆ. ಕಾವೇರಿಯು ದಕ್ಷಿಣದಿಕ್ಕಿಗೆ ಹರಿಯುತ್ತಾ ಈ ಸ್ಥಳದಲ್ಲಿ ಪೂರ್ವ

ವಾಹಿನಿಯಾಗಿ ಹರಿಯುತ್ತದೆ. ಹಾಗೆ ತಿರುಗುವಾಗ ಮರಳನ್ನು ಬಹುವಾಗಿ ತಂದು ಊರಿನ ಮಗ್ಗುಲಲ್ಲಿ ಚಾಚುತ್ತದೆ. ಆ ಮರಳನ್ನು ಪಶ್ಚಿಮದ ಕಡೆ ಯಿಂದ ಬೀಸುವ ಗಾಳಿಯು ಸತತವಾಗಿ ಊರಿನ ಮೇಲೆ ಹೊತ್ತು ತಂದು ಹಾಕುತ್ತದೆ. ಹೀಗಾಗಿ ಮೊದಲು ಇದ್ದ ಪಟ್ಟಣ ಹಾಳಾಗಿ ಹೊಸ ಪಟ್ಟಣವು ಉತ್ತರ ದಿಕ್ಕಿನಲ್ಲಿ ಕಟ್ಟಲ್ಪಟ್ಟದೆ. ಈಚೆಗೆ ಮರಳಿನಲ್ಲಿ ಹೂತು ಹೋಗಿದ್ದ ದೇವಾಲಯಗಳನ್ನೆಲ್ಲ ಹೊರಕ್ಕೆ ಕಾಣುವ ಹಾಗೆ ಮಾಡಿ, ಪೂಜಾದಿ ಗಳು ನಡೆಯುವಂತೆ ಏರ್ಪಾಡು ಮಾಡಲಾಗಿದೆ. ಈ ದೇವಸ್ಥಾನದ ಗರ್ಭ ಗೃಹವು ಬಹಳ ಪ್ರಾಚೀನವಾದದ್ದು. ಆದರೆ ಅದರ ಹೊರ ಕಟ್ಟಡವು ವಿಜಯ ನಗರದ ಕಾಲದ್ದು. ಪ್ರಾಯಶಃ ಚಿಕ್ಕದೇವರಾಜ ಒಡೆಯರ ಕಾಲದ್ದು (೧೬೭೪). ಈ ದೇವಾಲಯವು ದ್ರಾವಿಡ ರೀತಿಯಲ್ಲಿ ಕಗ್ಗಲ್ಲಿನಿಂದ ಕಟ್ಟಿದ ಸುಂದರವಾದ ಕಟ್ಟಡವಾಗಿದೆ. ಇದರಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಈ ಭಾಗಗಳೂ, ನವರಂಗದ ಒಳಮುಖಕ್ಕೆ ಎರಡು ಸಣ್ಣ ಗೃಹಗಳೂ ಇವೆ. ದೇವಾಲಯವು ಪೂರ್ವಾಭಿಮುಖವಾಗಿದ್ದು ಅದರ ಹೊರಗೋಡೆಯಲ್ಲಿ ಸಣ್ಣ ಗೋಪುರಗಳೂ ಕಂಬಗಳೂ ಮತ್ತು ದೇವತಾ ವಿಗ್ರಹಗಳೂ ಕೆತ್ತಲ್ಪಟ್ಟವೆ. ಪೂರ್ವದ್ವಾರದ ಅಕ್ಕಪಕ್ಕಗಳಲ್ಲಿರುವ ದ್ವಾರಪಾಲಕ ವಿಗ್ರಹಗಳು ಸುಮಾರು ಒಂಬತ್ತು ಅಡಿ ಎತ್ತರವಾಗಿವೆ. ಇಷ್ಟು ಎತ್ತರವಾದ ದ್ವಾರಪಾಲಕ ವಿಗ್ರಹಗಳು ಮೈಸೂರು ರಾಜ್ಯದ ದೇವಸ್ಥಾನಗಳಲ್ಲಿ ಎಲ್ಲಿಯೂ ಕಂಡುಬರುವುದಿಲ್ಲ. ದಕ್ಷಿಣ ದ್ವಾರದ ಮುಂದೆ ಸುಂದರವಾದ ಒಂದು ದ್ವಾರಮಂಟಪವಿದೆ. ದ್ವಾರಪಾಲಕರ ಪಕ್ಕ ಗಳಲ್ಲಿ ಕೆತ್ತಿಮಾಡಿದ ಎರಡು ಕಂಬಗಳೂ ಇವೆ. ನವರಂಗವು ಹನ್ನೆರಡು ಅಂಕಣಗಳುಳ್ಳದ್ದು. ಅದರ ಭುವನೇಶ್ವರಿಗಳು ಅಚಿತ್ರಿತವಾಗಿವೆ. ಮಧ್ಯದ ರಲ್ಲಿ ಮಾತ್ರ ಶಿವಲೀಲೆಗಳನ್ನು ತೋರಿಸುವ ವಿಗ್ರಹಗಳು ಕೆತ್ತಲ್ಪಟ್ಟವೆ. ಗರ್ಭಗುಡಿಯ ಮೇಲಿರುವ ಗೋಪುರವು ಅಷ್ಟೇನೂ ಎತ್ತರವಿಲ್ಲ. ಬಹು ಮುದ್ದಾಗಿದೆ.

ಶೃಂಗೇರಿಯಲ್ಲಿರುವ ವಿದ್ಯಾಶಂಕರ ದೇವಾಲಯ ಅನೇಕ ಅಂಶಗಳಿಂದ ಗಮನಾರ್ಹವಾಗಿದೆ. ಇದು ಕ್ರಿ. ಶ. ೧೩೩೮ ರಲ್ಲಿ ಕಟ್ಟಲ್ಪಟ್ಟಿತು ಇದು ಮೈಸೂರು ರಾಜ್ಯದಲ್ಲೆಲ್ಲ ಅತ್ಯಂತ ಅಲಂಕೃತವಾದ ದ್ರಾವಿಡಶೈಲಿಯ ದೇವಾ

ಲಯ. ಹೊರಗಿನಿಂದ ನೋಡುವವರಿಗೆ ಇದು ಕರ್ನಾಟಕ ಶೈಲಿಯ ಕಟ್ಟಡ ವಿರಬಹುದೆಂದು ಊಹಿಸಲು ಶಕ್ಯವಿದೆ. ಕರ್ನಾಟಕ ಶೈಲಿಯಲ್ಲಿರುವಂತೆ ದೇವಾಲಯವು ಜಗಲಿಯ ಮೇಲೆ ನಿಂತಿದೆ. ಆ ಜಗಲಿಯು ದೇವಾಲಯದ ತಲವಿನ್ಯಾಸವನ್ನೇ ಅನುಸರಿಸಿಕೊಂಡು ಹೋಗಿದೆ. ಬುಡದಿಂದ ಸ್ವಲ್ಪ ಎತ್ತರದ ವರೆಗೆ ಚಿತ್ರಪಟ್ಟಿಕೆಗಳಿವೆ. ಮತ್ತು ಅವುಗಳ ಮೇಲೆ ದೊಡ್ಡ ವಿಗ್ರಹಗಳು ಕೆತ್ತಲ್ಪಟ್ಟಿವೆ. ಆದರೆ ಒಳಹೊಕ್ಕು ನೋಡಿದರೆ ಶುದ್ಧ ದ್ರಾವಿಡ ಶೈಲಿ ಎಂದು ವ್ಯಕ್ತವಾಗುವುದು. ತಲವಿನ್ಯಾಸವೂ ಕೂಡ ವಿಚಿತ್ರವಾಗಿದೆ. ಮುಂದುಗಡೆಯೂ ಮತ್ತು ಹಿಂದುಗಡೆಯೂ ಅರ್ಧಗೋಳಾಕಾರವಾಗಿದೆ (ಗಜಪೃಷ್ಠವತ್). ಗೋಪುರವು ಕೂಡ ದ್ರಾವಿಡ ಶೈಲಿಯಲ್ಲಿಯಲ್ಲಿರುವಂತೆ ಮೆಟ್ಟಲು ಮೆಟ್ಟಲಾಗಿ ಮೇಲಕ್ಕೆ ಹೋಗಿದೆ. ತಲವಿನ್ಯಾಸವನ್ನೇ ಅನುಸರಿಸಿ ಸೂಚ್ಯಾಕಾರವಾಗಿ ಬಹಳ ಎತ್ತರವಾಗಿ ಹೋಗಿದೆ. ಈ ಕಾರಣಗಳಿಂದ ಇದನ್ನು ಯಾವ ಶೈಲಿಗೆ ಸೇರಿಸಬೇಕೆಂಬುದೇ ಸಂಶಯಾಸ್ಪದವಾಗಿದೆ. ಈ ದೇವಾಲಯದಲ್ಲಿ ಒಂದು ಗರ್ಭಗುಡಿ, ಸುಕನಾಸಿ, ಪ್ರದಕ್ಷಿಣಪಥ ಮತ್ತು ನವರಂಗ ಇಷ್ಟು ಇವೆ. ನವರಂಗಕ್ಕೆ ಮೂರು ಕಡೆಯೂ ಮತ್ತು ಪ್ರದಕ್ಷಿಣಪಥಕ್ಕೂ ಮೂರು ಬಾಗಿಲುಗಳು, ಒಟ್ಟು ಆರು ಬಾಗಿಲುಗಳಿವೆ. ಈ ಬಾಗಿಲುವಾಡಗಳ ಮೇಲೆ ಅಂದವಾಗಿ ದ್ವಾರಪಾಲಕರುಗಳು ಕೆತ್ತಲ್ಪಟ್ಟಿವೆ. ಮತ್ತು ಬಾಗಿಲು ಮೇಲಿನ ತೊಲೆಯಲ್ಲಿ ಗಜಲಕ್ಷ್ಮಿ ವಿಗ್ರಹವಿದೆ. ಬುಡದಿಂದ ಕ್ರಮವಾಗಿ ಒಂದರಮೇಲೊಂದರಂತೆ ಇರುವ ಚಿತ್ರಪಟ್ಟಿಕೆಗಳಲ್ಲಿ ಕ್ರಮವಾಗಿ ಕುದುರೆಗಳು, ಆನೆಗಳು, ಸಿಂಹಗಳು, ಪುರಾಣದ ಕಥೆಗಳು ಮತ್ತು ಗಣಗಳು. ಕೆಳಗಿನ ಚಿತ್ರಪಟ್ಟಿಕೆಯಲ್ಲಿ ಅಲ್ಲಲ್ಲೆ ಒಂಟೆಗಳೂ ಕೆತ್ತಲ್ಪಟ್ಟಿವೆ. ಈ ಚಿತ್ರಪಟ್ಟಿಕೆಗಳ ಮೇಲೆ ಒಟ್ಟು ೧೦೪ ದೊಡ್ಡ ವಿಗ್ರಹಗಳು ಇವೆ. ಅವುಗಳಲ್ಲಿ ಇಂದ್ರ, ಶ್ರೀರಾಮ, ವ್ಯಾಸ, ಶಿವ, ಭೈರವ, ಪ್ರಜಾಪತಿ, ದುರ್ಗಾ, ಶನಿ, ನೃತ್ಯ, ಶಿವ, ಯಮ, ಗರುಡ, ಹನುಮಾನ್, ಬ್ರಹ್ಮ, ದಕ್ಷಿಣಾಮೂರ್ತಿ, ಉಮಾಮಹೇಶ್ವರ, ಸೂರ್ಯ, ಕಲ್ಕಿ, ವೇಣುಗೋಪಾಲ, ಬಲರಾಮ, ಪರಶುರಾಮ, ವಾಮನ, ನರಸಿಂಹ, ವರಾಹ, ಹರಿಹರ, ಅರ್ಧನಾರೀಶ್ವರ, ಮನ್ಮಥ, ಕಾಳಭೈರವ ಮುಂತಾದ ವಿಗ್ರಹಗಳು ಕಂಡುಬರುತ್ತವೆ. ಶೈವ ಪುರಾಣದ ಕಥೆಗಳನ್ನು ಚಿತ್ರಪಟ್ಟಿಕೆಯಲ್ಲಿ ಕೊರೆಯಲಾಗಿದೆ. ಒಂದು ಕಡೆ ಶ್ರೀ ಶಂಕರಾಚಾರ್ಯರು ಶಿಷ್ಯರಿಗೆ ಉಪದೇಶ ಮಾಡುತ್ತಿರುವಂತೆ ಕೆತ್ತಿದೆ.

ಸುಕನಾಸಿಯ ಮೇಲುಗಡೆ ಗೋಪುರದ ಮುಂಭಾಗದಲ್ಲಿ ಸೊಗಸಾದ ಶಿವನ ವಿಗ್ರಹ ಕೆತ್ತಲ್ಪಟ್ಟಿದೆ. ಲೋವೆಕಲ್ಲಿನ ಮೂಲೆಗಳಲ್ಲಿ ಕಲ್ಲಿನಲ್ಲಿ ಕೊರೆದ ಬಳೆಗಳು ನೇತಾಡುತ್ತಿವೆ. ನವರಂಗವು ಬಹಳ ಅಂದವಾಗಿದೆ. ೧೨ ಕಂಬಗಳಿವೆ. ಕಂಬಗಳಲ್ಲಿ ದೊಡ್ಡ ಸಿಂಹಗಳೂ ಅವುಗಳ ಮೇಲೆ ಸವಾರರೂ ಕೆತ್ತಲ್ಪಟ್ಟಿವೆ. ಸಿಂಹಗಳ ಬಾಯಿಯಲ್ಲಿ ಅಲ್ಲಾಡುತ್ತಿರುವ ಕಲ್ಲು ಗುಂಡುಗಳಿವೆ. ಕಂಬಗಳ ಮೇಲೆ ರಾಶಿ ವಿಗ್ರಹಗಳು ಕೆತ್ತಲ್ಪಟ್ಟಿವೆ. ಆಯಾ ರಾಶಿಯ ಕಾಲದಲ್ಲಿ ಆಯಾ ಕಂಬಗಳ ಮೇಲೆ ಸೂರ್ಯೋದಯ ಕಾಲದಲ್ಲಿ ರಶ್ಮಿಯು ಬೀಳುವುದೆಂದು ಹೇಳುತ್ತಾರೆ. ಪ್ರತಿಯೊಂದು ಕಂಬದ ಮೇಲೆ ಆಯಾ ರಾಶ್ಯಧಿಪತಿಯ ವಿಗ್ರಹವನ್ನೂ ಮತ್ತು ಸೂರ್ಯ ವಿಗ್ರಹವನ್ನೂ ಕೆತ್ತಿರುತ್ತದೆ. ನವರಂಗದ ಎತ್ತರ ೧೮ ಅಡಿಗಳು. ಮಧ್ಯದ ಛಾವಣಿಯಲ್ಲಿ ಒಂದು ದೊಡ್ಡ ಕಮಲವೂ ಮತ್ತು ನಾಲ್ಕು ಗಿಣಿಗಳೂ ಕೆತ್ತಲ್ಪಟ್ಟಿವೆ. ನವರಂಗದಲ್ಲಿ ಅನೇಕ ವಿಗ್ರಹ ಗಳಿವೆ. ಅವುಗಳಲ್ಲಿ ನಟರಾಜ ವಿಗ್ರಹವು ಸೊಗಸಾಗಿದೆ. ಸುಕನಾಸಿಯ ಎರಡು ಕಡೆಯೂ ಗೂಡುಗಳಿವೆ. ಒಂದರಲ್ಲಿ ಗಣಪತಿಯೂ ಇನ್ನೊಂದ ರಲ್ಲಿ ಮಹಿಷಾಸುರಮರ್ದಿನಿಯೂ ಇವೆ. ಗರ್ಭಗೃಹದಲ್ಲಿರುವ ಲಿಂಗಕ್ಕೆ ವಿದ್ಯಾ ಶಂಕರನೆಂದು ಹೆಸರು. ವಿಜಯನಗರದ ಸ್ಥಾಪಕರಾದ ಹರಿಹರ ಬುಕ್ಕರ ಕಾಲದಲ್ಲಿ ಇದ್ದ ವಿದ್ಯಾರಣ್ಯರ ಗುರುಗಳಾದ ವಿದ್ಯಾಶಂಕರರ ಜ್ಞಾಪಕಾರ್ಥವಾಗಿ ಈ ದೇವಾಲಯವು ಕಟ್ಟಲ್ಪಟ್ಟಿತೆಂದು ತಿಳಿಯಬರುತ್ತದೆ. ವಿದ್ಯಾಶಂಕರ ದೇವಾ ಲಯವು ಕಗ್ಗಲ್ಲಿನಿಂದ ಕಟ್ಟಿದ್ದಾದರೂ ಅದರಲ್ಲಿರುವ ಚಿತ್ರ ಕೆಲಸವು ಶ್ಲಾಘನೀಯ ವಾಗಿದೆ.

ಶೃಂಗೇರಿಯಲ್ಲಿರುವ ಶಾರದಾ ದೇವಾಲಯವೂ ಅಂದವಾದ ಕಟ್ಟಡ. ಗರ್ಭಗುಡಿ, ಸುಕನಾಸಿ, ನವರಂಗ ಮತ್ತು ಸುತ್ತಲೂ ಪ್ರಾಕಾರ ಇವುಗಳಿಂದ ಕೂಡಿದೆ. ನವರಂಗದಲ್ಲಿ ಎರಡು ಸಾಲು ಕಂಬಗಳಿವೆ. ಕಂಬಗಳೆಲ್ಲವೂ ವಿಗ್ರಹ ಗಳಿಂದ ಕೂಡಿವೆ. ಈ ವಿಗ್ರಹಗಳು ಬಹು ಅಂದವಾಗಿ ಕೆತ್ತಲ್ಪಟ್ಟಿವೆ. ದೇವಾ ಲಯದಲ್ಲಿ ಎರಡು ದೊಡ್ಡ ಕಂಚಿನ ಶಾರದಾ ಮತ್ತು ಸರಸ್ವತಿ ವಿಗ್ರಹಗಳೂ ಇವೆ. ಶ್ರೀ ವಿದ್ಯಾತೀರ್ಥರು ಇವುಗಳನ್ನು ಸ್ಥಾಪಿಸಿದರಂತೆ, ಮೊದಲು ಒಂದು ವಿಗ್ರಹವನ್ನು ಮಾಡಿಸಿ ಅದನ್ನು ಒಪ್ಪದೆ ಅದಕ್ಕಿಂತಲೂ ದೊಡ್ಡದಾದ

ಮತ್ತೊಂದು ವಿಗ್ರಹವನ್ನು ಮಾಡಿಸಿದರಂತೆ. ಈ ಎರಡು ವಿಗ್ರಹಗಳೂ ಶಾಸ್ತ್ರೋಕ್ತವಾಗಿ ಪ್ರತಿಷ್ಠಿಸಲ್ಪಟ್ಟು ಎರಡೂ ಪೂಜಿಸಲ್ಪಡುತ್ತಿವೆ.

ಇಕ್ಕೇರಿಯ ಅಘೋರೇಶ್ವರ ದೇವಾಲಯವು ಕಗ್ಗಲ್ಲಿನಿಂದ ಕಟ್ಟಿದ ದೇವಸ್ಥಾನ. ಇದು ಕ್ರಿ. ಶ. ೧೫೬೦ ರಲ್ಲಿ ನಿರ್ಮಿಸಲ್ಪಟ್ಟಿತು. ಇದರಲ್ಲಿ ಹೊಯಿಸಳ ರೀತಿಯ ಕೆಲವು ಚಿಹ್ನೆಗಳನ್ನು ಮತ್ತು ಮುಸಲ್ಮಾನ ರೀತಿಗೆ ಸೇರಿದ ಕೆಲವು ಚಿಹ್ನೆಗಳನ್ನೂ ನೋಡ ಬಹುದು. ದೇವಾಲಯವು ಉತ್ತರಾಭಿಮುಖವಾಗಿದೆ ಮತ್ತು ಎತ್ತರವಾದ ಛಾವಣಿಯುಳ್ಳದ್ದಾಗಿದೆ. ಗರ್ಭಗುಡಿ, ಸುಕನಾಸಿ ಮತ್ತು ನವರಂಗಗಳಿವೆ. ನವರಂಗದ ಉತ್ತರಕ್ಕೂ, ಪಶ್ಚಿಮಕ್ಕೂ, ಪೂರ್ವಕ್ಕೂ ಬಾಗಿಲುಗಳಿವೆ. ಉತ್ತರದ ಕಡೆ ಬಾಗಿಲು ಎಲ್ಲಕ್ಕಿಂತಲೂ ಸುಂದರವಾದದ್ದು. ಗರ್ಭಗೃಹದಲ್ಲಿ ಒಂದು ದೊಡ್ಡ ಜಗಲಿ ಕಟ್ಟಲ್ಪಟ್ಟಿದೆ. ಹೊರಮುಖದಲ್ಲಿ ಸುತ್ತಲೂ ಮೂವತ್ತೆರಡು ಕುಳಿತುಕೊಂಡಿರುವ ಹೆಣ್ಣು ವಿಗ್ರಹಗಳು ಕೆತ್ತಿವೆ. ಸುಕನಾಸಿಯಲ್ಲಿ ಕಲ್ಲಿನಲ್ಲಿ ಕೆತ್ತಿರುವ ವಿಚಿತ್ರವಾದ ನಂದಿ ವಿಗ್ರಹವಿದೆ. ಈ ದೇವಾಲಯದಲ್ಲಿ ನವರಂಗವಿಲ್ಲ, ಮುಖಮಂಟಪ ಮಾತ್ರವಿದೆ. ಸುಕನಾಸಿಯ ದ್ವಾರದ ಪಕ್ಕಗಳಲ್ಲಿ ಗೂಡು ಗಳಿವೆ. ಅವುಗಳಲ್ಲಿ ಗಣೇಶ, ಸುಬ್ರಹ್ಮಣ್ಯ, ಮಹಿಷಾಸುರ ಮರ್ದಿನಿ, ಭೈರವ ವಿಗ್ರಹಗಳಿವೆ. ಮುಖಮಂಟಪದ ಗೋಡೆಯಲ್ಲಿ ಸುಮಾರು ಇಪ್ಪತ್ತು ಕಿಟಕಿ ಗಳು ಇವೆ. ಕಿಟಕಿಗಳಿಗೆ ಕಮಾನುಗಳಿವೆ. ಕಿಟಕಿಗಳ ಕೆಳಗೆ ಕೊರೆದ ಫಲಕ ಗಳ ಸಾಲು ಇದೆ. ಅವುಗಳಲ್ಲಿ ಅಲ್ಲಲ್ಲೆ ಸಣ್ಣ ಸಣ್ಣ ಗೋಪುರಗಳು ಕೆತ್ತಲ್ಪ ಟ್ಟಿವೆ. ದೇವಸ್ಥಾನದ ಮೇಲೆ ಒಂದು ಎತ್ತರವಾದ ಗೋಪುರವಿದೆ. ಗೋಪು ರವು ಕರ್ನಾಟಕ ಶೈಲಿಯಲ್ಲಿರುವಂತೆ ಸುಕನಾಸಿಯ ಛಾವಣಿಯ ಮೇಲಕ್ಕೆ ಮುಂದಕ್ಕೆ ಚಾಚಿಕೊಂಡಿದೆ. ದೇವಸ್ಥಾನದ ಮುಂಭಾಗದಲ್ಲಿ ಒಂದು ನಂದಿ ಮಂಟಪವಿದೆ. ಈ ಮಂಟಪವು ಬಹು ಅಂದವಾಗಿದೆ. ದೇವಸ್ಥಾನಕ್ಕೆ ಎದು ರಾಗಿ ಒಂದು ದೊಡ್ಡ ಕಮಾನು ಬಾಗಿಲೂ, ಬಾಕಿ ಇತರ ಮೂರು ಕಡೆಗಳಲ್ಲಿ ಎರಡೆರಡು ಸಣ್ಣ ಕಮಾನಿನ ಬಾಗಿಲುಗಳೂ ಇವೆ. ಇದು ವಿಜಯನಗರದ ಅರಸರ ಕಾಲದಲ್ಲಿ ಕಟ್ಟಿದ್ದೆಂದು ತೋರುತ್ತದೆ.

ಶ್ರೀರಂಗಪಟ್ಟಣದಲ್ಲಿರುವ ರಂಗನಾಥಸ್ವಾಮಿ ದೇವಾಲಯವು ರಾಜ್ಯದಲ್ಲಿ ರುವ ದೊಡ್ಡ ದೇವಸ್ಥಾನಗಳ ಪೈಕಿ ಒಂದು. ದೇವಸ್ಥಾನವು ಪೂರ್ವಾಭಿಮುಖ

ವಾಗಿದೆ. ಈ ದೇವಾಲಯದ ಗರ್ಭಗೃಹದ ಗೋಡೆಯ ಮೇಲೆ ಕ್ರಿ.ಶ. ೧೨೧೦ರ ತಮಿಳು ಶಾಸನವೊಂದು ದೊರೆತಿದೆ. ಆದ್ದರಿಂದ ಈ ದೇವಸ್ಥಾನವು ಅದಕ್ಕಿಂತಲೂ ಹಿಂದೆಯೇ ನಿರ್ಮಿಸಲ್ಪಟ್ಟಿರಬೇಕೆಂದು ಊಹಿಸಬಹುದಾಗಿದೆ. ಪ್ರಾಕಾರದೊಳಗಿರುವ ಇತರ ಮಂಟಪಗಳೂ ದೇವಾಲಯಗಳೂ ೧೪ ನೆಯ ಶತಮಾನದಿಂದ ಈಚೆಗೆ ನಿರ್ಮಿಸಲ್ಪಟ್ಟಿರಬೇಕು. ರಂಗನಾಥನ ವಿಗ್ರಹವು ಆಜಾನುಬಾಹುವಾಗಿ ಆದಿಶೇಷನ ಮೇಲೆ ನಿದ್ರಿಸುತ್ತಿರುವ ಭಂಗಿಯಲ್ಲಿದೆ. ದೇವರ ಪಾದಗಳ ಹತ್ತಿರ ಶ್ರೀ ಕಾವೇರಿಯ ವಿಗ್ರಹವಿದೆ. ಶ್ರೀರಂಗಪಟ್ಟಣವು ಗೌತಮಋಷಿಯ ಆಶ್ರಮವಾಗಿತ್ತೆಂದೂ ಸ್ಥಳ ಪುರಾಣವಿದೆ. ಈಗಲೂ ಗೌತಮರ ವಿಗ್ರಹವೊಂದು ಗರ್ಭಗೃಹದಲ್ಲಿದೆ. ಟೀಪೂ ಸುಲ್ತಾನನೂ ಕೂಡ ಈ ದೇವರಲ್ಲಿ ಭಕ್ತಿ ಇಟ್ಟಿದ್ದನೆಂದು ಹೇಳುವುದಕ್ಕೆ ಆಧಾರಗಳು ಇವೆ. ದೇವಸ್ಥಾನದ ಮುಂಭಾಗದಲ್ಲಿರುವ ಗೋಪುರವು ೧೫ ನೆಯ ಶತಮಾನದಲ್ಲಿ ಕಟ್ಟಿದ್ದು.

ಮೈಸೂರು ನಗರದ ಕೋಟೆಯಲ್ಲಿರುವ ತ್ರಿಣೇಶ್ವರ ದೇವಾಲಯವು ಪ್ರಾಚೀನವಾದದ್ದು. ಹದಿನೇಳನೆಯ ಶತಮಾನದಲ್ಲಿ ಶ್ರೀ ಕಂಠೀರವ ನರಸಿಂಹರಾಜ ಒಡೆಯರವರು ಕಟ್ಟಿಸಿದ್ದೆಂದು ತೋರುತ್ತದೆ. ಅದೇ ಆವರಣದಲ್ಲಿರುವ ಲಕ್ಷ್ಮೀರಮಣ ಅಥವಾ ನಂಬಿನಾರಾಯಣ ದೇವರ ದೇವಸ್ಥಾನವೂ ಅತ್ಯಂತ ಪುರಾತನವಾದದ್ದು. ರಾಜ ಒಡೆಯರವರು ದೇವಸ್ಥಾನದ ಗೋಪುರವನ್ನು ಕಟ್ಟಿಸಿದರೆಂದು ಶಾಸನದಿಂದ ತಿಳಿಯಬರುತ್ತದೆ. ಈ ದೇವರ ವಿಷಯದಲ್ಲಿ ಇನ್ನೂ ಒಂದು ಐತಿಹ್ಯ ಉಂಟು. ಅದೇನೆಂದರೆ: ರಾಜ ಒಡೆಯರವರ ಶತ್ರುಗಳು ದೇವಸ್ಥಾನದ ಅರ್ಚಕನನ್ನು ಪುಸಲಾಯಿಸಿ ಮಹಾಸ್ವಾಮಿಯವರಿಗೆ ಪ್ರತಿ ದಿನವೂ ಕೊಡುತ್ತಿರುವ ತೀರ್ಥದಲ್ಲಿ ವಿಷವನ್ನು ಸೇರಿಸಿಕೊಡುವಂತೆ ಏರ್ಪಾಡು ಮಾಡಿದರು. ಅದು ಅವರಿಗೆ ಪತ್ತೆ ಆಗಿ, ದೇವರಲ್ಲಿ ಅನನ್ಯ ಭಕ್ತಿ ಇಟ್ಟು ವಿಷ ಮಿಶ್ರವಾದ ತೀರ್ಥವನ್ನೇ ಸೇವಿಸಿದರು. ಆದಾಗ್ಯೂ ಅವರಿಗೆ ಏನೂ ಅಪಾಯವಾಗಲಿಲ್ಲವಂತೆ. ವಿಷವು ಅಮೃತವಾಯಿತಂತೆ.

ಅದೇ ಸ್ಥಳದಲ್ಲಿ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯವಿದೆ. ಅದನ್ನು ಮುಮ್ಮಡಿ ಕೃಷ್ಣರಾಜ ಒಡೆಯರವರು ಕ್ರಿ. ಶ. ೧೮೨೯ ರಲ್ಲಿ ಕಟ್ಟಿಸಿದ್ದು. ಇವುಗಳಲ್ಲೆಲ್ಲ ಶ್ಲಾಘನೀಯವಾದ ಅಂಶಗಳು ಬಹಳ ಕಡಮೆ.

ನರಸಮಂಗಲದ ದೇವಾಲಯವು ಪುರಾತನವಾದದ್ದು. ಹಿಂದಿನ ಕಾಲದ ದೇವಾಲಯಗಳಲ್ಲಿ ಪ್ರತಿಷ್ಠಿಸಿದ ಲಿಂಗವು ಅತಿ ದೊಡ್ಡದು. ಅಂತೆಯೇ ದೊಡ್ಡದಾದ ಪರಶುರಾಮ ವಿಗ್ರಹವೂ, ಗಣಪತಿ ವಿಗ್ರಹವೂ ದೇವಾಲಯದ ಆವರಣದಲ್ಲಿವೆ. ದೇವಸ್ಥಾನದ ಮೇಲಿರುವ ಗೋಪುರವು ಗಾರೆಯಿಂದ ಈಚೆಗೆ ನಿರ್ಮಿಸಿದ್ದು.

ನಂಜನಗೂಡಿನಲ್ಲಿರುವ ಶ್ರೀಕಂಠೇಶ್ವರ ದೇವಾಲಯ ಅನಾದಿಯಿಂದ ಬಂದದ್ದೆಂದು, ಸ್ಥಳಪುರಾಣ ಹೇಳುತ್ತದೆ. ಹನ್ನೊಂದನೆಯ ಶತಮಾನದಲ್ಲಿ ದೇವಸ್ಥಾನದ ಆವರಣದಲ್ಲಿ ಶಿವನ ಅರವತ್ತಾರು ಲೀಲಾಮೂರ್ತಿಗಳನ್ನು ಸ್ಥಾಪಿಸಲಾಯಿತು. ೧೯ ನೆಯ ಶತಮಾನದಲ್ಲಿ ಕರಾಚೂರಿ ನಂಜರಾಜಯ್ಯನೂ ಮತ್ತು ಪೂರ್ಣಯ್ಯನವರೂ ದೇವಾಲಯವನ್ನು ವಿಸ್ತರಿಸಿ ಕಟ್ಟಿಸಿದರು. ದೇವಸ್ಥಾನವು ೩೮೫ ಅಡಿ ಉದ್ದವೂ ೧೬೦ ಅಡಿ ಅಗಲವೂ ಇದೆ. ಗೋಪುರವನ್ನು ಮುಮ್ಮಡಿ ಕೃಷ್ಣರಾಜ ಒಡೆಯರವರು ೧೮೪೫ ರಲ್ಲಿ ಕಟ್ಟಿಸಿದರು. ಇನ್ನೂ ಇತರ್ಯದೇವಾಲಯಗಳನ್ನು ೧೮೫೩ರಲ್ಲಿ ರಾಣಿವಾಸದವರು ಕಟ್ಟಿಸಿದರು. ಗೋಪುರವು ಭವ್ಯವಾಗಿಯೂ ಅಂದವಾಗಿಯೂ ಆಧುನಿಕ ದ್ರಾವಿಡ ಶೈಲಿಗೆ ಒಳ್ಳೆಯ ಉದಾಹರಣೆಯಾಗಿದೆ. ಈ ದೇವಸ್ಥಾನದಲ್ಲಿ ಇನ್ನೊಂದು ವಿಶೇಷವೆಂದರೆ-ಮಹಾದ್ವಾರದ ಮುಂದುಗಡೆ ಕಟ್ಟಿಸಿರುವ ದ್ವಾರಮಂಟಪ. ಇಂತಹ ದ್ವಾರ ಮಂಟಪ ಇನ್ನೆಲ್ಲಿಯೂ ಕಾಣುವುದಿಲ್ಲ. ಮಂಟಪವು ಈಚೆಗೆ ನಿರ್ಮಿಸಲ್ಪಟ್ಟಿದ್ದರೂ ಹಿಂದಿನ ಮಹಾದ್ವಾರಕ್ಕೂ ಗೋಪುರಕ್ಕೂ ಹೊಂದಿಕೊಂಡು ಸುಂದರವೆನಿಸಿಕೊಳ್ಳುತ್ತದೆ.

ಬೆಂಗಳೂರು ಡಿಸ್ಟ್ರಿಕ್ಟು ಮಾಗಡಿಗೆ ಪಶ್ಚಿಮಕ್ಕೆ ಒಂದೂವರೆ ಮೈಲು ದೂರದಲ್ಲಿ ಸೋಮೇಶ್ವರ ದೇವಾಲಯವಿದೆ. ಇದು ಕ್ರಿ. ಶ. ೧೭೧೨ ರಲ್ಲಿ ಕಟ್ಟಿದ್ದೆಂದು ತಿಳಿಯಬರುತ್ತದೆ. ಇಷ್ಟು ಈಚಿನದಾದಾಗ್ಯೂ ಶಿಥಿಲವಾಗಿ ಹೋಗಿದೆ. ಇದರ ಉದ್ದ ೯೦ ಗಜಗಳು, ಅಗಲ ೭೦ ಗಜಗಳು. ದೇವಸ್ಥಾನವು ಉತ್ತರಾಭಿಮುಖವಾಗಿದೆ. ದೇನಸ್ಥಾನದ ಸುತ್ತಲೂ ಪ್ರಾಕಾರವೂ ಉತ್ತರದಿಕ್ಕಿನಲ್ಲಿ ಒಂದು, ದಕ್ಷಿಣದಿಕ್ಕಿನಲ್ಲಿ ಒಂದು, ಈ ರೀತಿ ಎರಡು ಮಹಾದ್ವಾರಗಳೂ ಇವೆ. ದಕ್ಷಿಣ

ದಿಕ್ಕಿನ ದ್ವಾರವೇ ದೊಡ್ಡದು ಮತ್ತು ಅದರ ಮೇಲೆ ಎತ್ತರವಾದ ಗೋಪುರವಿದೆ. ಕೆಲವು ವರ್ಷಗಳ ಕೆಳಗೆ ಈ ಗೋಪುರಕ್ಕೆ ಸಿಡಿಲು ಬಡಿದು ಕೊಂಚ ಭಾಗ ಬಿದ್ದು ಹೋಯಿತು. ಈ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ ಮತ್ತು ನವರಂಗ ಇಷ್ಟು ಇವೆ. ಗರ್ಭಗೃಹದ ಎಡಭಾಗಕ್ಕೆ ಅಮ್ಮನವರ ದೇವಸ್ಥಾನ ವಿದೆ. ಅಮ್ಮನವರ ವಿಗ್ರಹವು ಮೂರು ಅಡಿ ಎತ್ತರವಿದ್ದು ಪೀಠದ ಮೇಲೆ ಕುಳಿತಿದೆ. ಪ್ರಾಕಾರದ ನಾಲ್ಕು ಮೂಲೆಗಳಲ್ಲಿಯೂ ನಾಲ್ಕು ಸಣ್ಣ ಗೋಪುರ ಗಳಿವೆ. ಪ್ರಾಕಾರದ ಮುಂಭಾಗದಲ್ಲಿ ಕಲ್ಯಾಣಿ ಇದೆ. ದೇವಸ್ಥಾನದ ಎಡಗಡೆ ಒಂದು, ಬಲಗಡೆ ಒಂದು, ಈ ರೀತಿ ಎರಡು ಹಜಾರಗಳಿವೆ. ಬಲಗಡೆ ಇರುವು ದಕ್ಕೆ ಸೂಳೆಯ ಹಜಾರವೆಂದೂ ಎಡಗಡೆ ಇರುವುದಕ್ಕೆ ಕೆಂಪೇಗೌಡನ ಹಜಾರ ವೆಂದೂ ಹೆಸರು. ಈ ಹಜಾರದ ಗೋಡೆಗಳ ಮೇಲೆಲ್ಲ ಬಣ್ಣ ಬಣ್ಣದ ಚಿತ್ರ ಗಳನ್ನು ಬರೆದಿತ್ತೆಂದು ತೋರುತ್ತದೆ. ಈಗಲೂ ಅಲ್ಲಲ್ಲಿ ಸ್ವಲ್ಪ ಅದರ ಚಿಹ್ನೆಗಳು ಕಾಣುತ್ತಿವೆ.

ಮಾಗಡಿಯ ರಾಮೇಶ್ವರ ದೇವಾಲಯ. ಇದು ಕೆಂಪೇಗೌಡನ ಮನೆ ದೇವರು. ಗರ್ಭಗುಡಿ, ಸುಕನಾಸಿ, ನವರಂಗ, ಮುಖಮಂಟಪ ಇವೆ.

ನೆಲಮಂಗಲ ತಾಲೂಕು ಮನ್ನೆ. ಹಿಂದೆ ೮ ನೆ ಶತಮಾನದಲ್ಲಿ ಗಂಗರ ಅರಮನೆಯಿತ್ತು. ಇಲ್ಲಿನ ಕಪಿಲೇಶ್ವರ ದೇವಾಲಯದ ಗರ್ಭಗುಡಿ ಹಳೇ ಇಟ್ಟಿಗೆ ಗಳಿಂದ ಕಟ್ಟಿದೆ. ನವರಂಗದಲ್ಲಿ ನಾಲ್ಕು ಒಳ್ಳೆ ಕಂಬಗಳೂ ಜಾಲಂಧ್ರವೂ ಇದೆ.

ಮುಳಬಾಗಿಲು ತಾಲೂಕು ಆವನಿ. ಹಿಂದಿನ ಅವಂತೀಕ್ಷೇತ್ರ. ಇಲ್ಲಿ ವಾಲ್ಮೀಕಿ ಮಹರ್ಷಿ ಇದ್ದರು ಎನ್ನುತ್ತಾರೆ. ವಾಲ್ಮೀಕಿ ಪರ್ವತ ಎಂಬ ಹೆಸರೂ ಇದೆ. ಇಲ್ಲಿರುವ ಗುಡಿಗಳು ಒಂದು ಪ್ರಾಕಾರದ ಒಳಗಿವೆ. ರಾಮ ಲಕ್ಷ್ಮಣ ಭರತ ಶತ್ರುಘ್ನ ಹನುಮಂತ ಸುಗ್ರೀವ ಅಂಗದರು ಪ್ರತಿಷ್ಠಿದ್ದೆಂದು ಹೇಳುವ ಲಿಂಗಗಳಿರುವ ಚಿಕ್ಕ ಗುಡಿಗಳಿವೆ. ಹೊರಗೋಡೆಯ ಮೇಲೆ ಕೆತ್ತನೆ ಕೆಲಸವಿದೆ. ಗುಡಿಗಳು ಚೆನ್ನಾಗಿವೆ.


ಚಿಂತಾಮಣಿ ತಾಲೂಕಿನ ಕೈವಾರ. ಇಲ್ಲಿ ದ್ರಾವಿಡ ರೀತಿಯ ಅಮರ ನಾರಾಯಣ ದೇವಾಲಯ ಇದೆ. ನವರಂಗದಲ್ಲಿ ನಾಲ್ಕು ಪೂರ್ಣವಾಗಿ ಕೆತ್ತಿದ ಕರಿಯ ಕಲ್ಲಿನ ಕಂಬಗಳಿವೆ. ಅದರ ಮೇಲೆ ಮಧ್ಯೆ ಬ್ರಹ್ಮನ ಸುತ್ತಲೂ ಅಷ್ಟ ದಿಕ್ಪಾಲಕರ ವಿಗ್ರಹಗಳಿವೆ.

ಬೇಲೂರು, ಹಳೆಯಬೀಡು, ಸೋಮನಾಥಪುರ

ಬೇಲೂರು ಕರ್ನಾಟಕ ಶೈಲಿಯ ರಾಜಧಾನಿ. ಇಲ್ಲಿರುವ ಚನ್ನಕೇಶವ ದೇವಾಲಯವು ಮೈಸೂರು ರಾಜ್ಯದಲ್ಲಿರುವ ಈ ರೀತಿಯ ಕಟ್ಟಡಗಳಲ್ಲೆಲ್ಲಾ ಶ್ರೇಷ್ಠವಾದದ್ದು ಮತ್ತು ಈ ಶೈಲಿಯಲ್ಲಿ ಕಟ್ಟಿದ ಒಂದು ಗರ್ಭಗೃಹವುಳ್ಳ ದೇವಾಲಯಕ್ಕೆ ಒಳ್ಳೆಯ ಉದಾಹರಣೆ. ಬೇಲೂರು ಬಹುಕಾಲದ ವರೆಗೆ ಹೊಯಿಸಳ ಅರಸರ ರಾಜಧಾನಿಯಾಗಿತ್ತು. ಇಲ್ಲಿ ವಿಷ್ಣುವರ್ಧನನು ಕ್ರಿ. ಶ. ೧೧೧೧ ರಿಂದ ೧೧೪೧ ರ ವರೆಗೆ ರಾಜ್ಯಭಾರ ಮಾಡುತ್ತಿದ್ದನು. ಆತನು ಮೊದಲು ಜೈನನಾಗಿದ್ದು ಸುಮಾರು ೧೧೧೬ ರಲ್ಲಿ ವೈಷ್ಣವನಾದನು. ತಾನು ವಿಷ್ಣುಭಕ್ತನಾದದ್ದರ ಜ್ಞಾಪಕಾರ್ಥವಾಗಿ ೧೧೧೭ ರಲ್ಲಿ ಈ ದೇವಾಲಯವನ್ನು ಕಟ್ಟಿಸಿದನು. ಇದರಲ್ಲಿರುವ ಮೂಲಮೂರ್ತಿಗೆ ವಿಜಯ ನಾರಾಯಣನೆಂದು ಹೆಸರು. ಆದರೆ ಚನ್ನಕೇಶವನೆಂಬುದು ರೂಢಿಯಾಗಿ ಬಂದಿರುವ ಹೆಸರು. ಈ ಊರು ಅಭಿನವಕ್ಷೋಣಿ ವೈಕುಂಠವೆಂದೂ, ತ್ರಿಲೋಕ ಮಹಾಸ್ಥಾನವೆಂದೂ, ದಕ್ಷಿಣ ವಾರಣಾಶಿ ಎಂದೂ ಶಾಸನಗಳಲ್ಲಿ ಪ್ರಸಿದ್ಧವಾಗಿದೆ. ಈ ದೇವಾಲಯವು ೪೪೩ ಅಡಿ ಉದ್ದವೂ ೩೯೬ ಅಡಿ ಅಗಲವೂ ಆದ ಒಂದು ದೊಡ್ಡ ಅಂಗಳದ ಮಧ್ಯದಲ್ಲಿದೆ. ಸುತ್ತಲೂ ಎತ್ತರವಾದ ಪ್ರಾಕಾರವಿದೆ. ಈ ಪ್ರಾಕಾರದೊಳಗೆ ಕೇಶವ ದೇವಾಲಯವಲ್ಲದೆ ಇನ್ನೂ ಅನೇಕ ಚಿಕ್ಕ ಚಿಕ್ಕ ಗುಡಿಗಳಿವೆ. ಇವುಗಳಲ್ಲಿ ಅಮ್ಮನವರ ಗುಡಿ, ಕಪ್ಪೆ ಚೆನ್ನಿಗರಾಯನ ಗುಡಿ, ವೀರನಾರಾಯಣನ ಗುಡಿ,ಇವು ಮುಖ್ಯವಾದುವು. ಉಳಿದವುಗಳೆಲ್ಲವನ್ನೂ ವಿಷ್ಣುವರ್ಧನನ ತರುವಾಯ ಬಂದ ರಾಜರುಗಳೂ ಇನ್ನೂ ಇತರ ಭಕ್ತರೂ ಕಟ್ಟಿಸಿರುವಂತೆ ತೋರುತ್ತದೆ. ಈ ದೇವಸ್ಥಾನವು ಪೂರ್ವಾಭಿಮುಖವಾಗಿದೆ. ಇದಕ್ಕೆ ಪೂರ್ವದ ಕಡೆ ಎರಡು ಮಹಾದ್ವಾರಗಳಿವೆ. ಇವುಗಳಲ್ಲಿ ಉತ್ತರದ ಕಡೆ ಇರುವ ಮಹಾದ್ವಾರದ



ಬೇಲೂರು ಚೆನ್ನಕೇಶ್ವರ ದೇವಸ್ಥಾನದ ಭುವನೇಶ್ವರಿ




ಸಣ್ಣ ದೇವಸ್ಥಾನದ ವಿನ್ಯಾಸ
ಚಿತ್ರಕಾರರು: ಗ್ರಂಥಕರ್ತರು



ಕೇಶವ ದೇವಾಲಯ, ಸೋಮನಾಥಪುರ. (ಗರ್ಭಗೃಹ ಗೋಪುರ)



ಭೋಗ ನಂದೀಶ್ವರ ದೇವಾಲಯ, ನಂದಿ. (ದಕ್ಷಿಣದಿಂದ ಗೋಪುರ ದೃಶ್ಯ)



ಚನ್ನಕೇಶವ ದೇವಾಲಯ, ಬೇಲೂರು. (ನೈರುತ್ಯ ದಿಕ್ಕಿನ ನೋಟ)




ಹೊಯ್ಸಳೇಶ್ವರ ದೇವಾಲಯ, ಹಳೇಬೀಡು. (ವಾಯುವ್ಯದೃಶ್ಯ)



ಅರ್ಕೇಶ್ವರ ದೇವಾಲಯದ ಸ್ತಂಭ,
ಹೊಳೆ ಆಲೂರು, ಚಾಮರಾಜನಗರ ತಾಲ್ಲೂಕು.



ತ್ಯಾಗದ ಬ್ರಹ್ಮದೇವರ ಸ್ತಂಭ
ವಿಂಧ್ಯಗಿರಿ, ಶ್ರವಣಬೆಳಗೊಳ.




ತ್ರಿಪುರಾಂತಕ ದೇವಾಲಯದ ಜಾಲಂದ್ರ, ಬೆಳಗಾಂವಿ, ಶಿವಮೊಗ್ಗ ಜಿಲ್ಲೆ.




ಎಲ್ಲೋರ ಗುಹೆ ೧೬, "ಕೈಲಾಸ"



ಬಾದಾಮಿಯ ಗುಹೆಯ ಚಿತ್ರ ೪. (ಕೈಸಾಲೆ)



ಅಮೃತೇಶ್ವರ ದೇವಾಲಯ



ಬೇಲೂರು ದೇವಸ್ಥಾನದ **ಭುವನೇಶ್ವರಿ**

ಮೇಲೆ ದ್ರಾವಿಡ ರೀತಿಯಲ್ಲಿ ಕಟ್ಟಿದ ಎತ್ತರವಾದ ಗೋಪುರವಿದೆ. ಇದರ ಬಲಕ್ಕೆ ಇರುವ ದ್ವಾರಕ್ಕೆ ಆನೆಬಾಗಿಲೆಂದು ಹೆಸರು. ದೇವಾಲಯವು ೧೭೮ ಅಡಿ ಉದ್ದವೂ, ೧೫೬ ಅಡಿ ಅಗಲವೂ ೪ ಅಡಿ ಎತ್ತರವೂ ಇರುವ ಜಗಲಿಯ ಮೇಲೆ ಕಟ್ಟಲ್ಪಟ್ಟಿರುತ್ತದೆ. ಈ ಜಗಲಿಯು ಕಟ್ಟಡದ ತಲವಿನ್ಯಾಸದ ಆಕಾರವನ್ನೇ ಹೊಂದಿರುತ್ತದೆ. ಅದರ ಒಟ್ಟಿನ ಆಯಕಟ್ಟು, ಅದರ ಮಂಟಪಗಳ ವಿಸ್ತಾರ, ಕಂಬಗಳ ಸಾಲು, ಮಾಳಿಗೆಯ ಎತ್ತರ, ಜಗಲಿಗಳ ಅಚ್ಚುಕಟ್ಟು, ಈ ಎಲ್ಲ ಹೊರಗಣ ರೂಪರಚನೆಗಳು ಉಚಿತ ಪ್ರಮಾಣಗಳಿಂದ ಕೂಡಿವೆ. ದೇವಾಲಯದಲ್ಲಿ ಗರ್ಭಗುಡಿ, ಸುಕನಾಸಿ, ನವರಂಗ ಈ ಮೂರು ಭಾಗಗಳಿವೆ. ನವರಂಗಕ್ಕೆ ಮೂರು ಬಾಗಿಲುಗಳಿವೆ. ದಕ್ಷಿಣ ದಿಕ್ಕಿನ ಬಾಗಿಲನ್ನು ಸ್ವರ್ಗದ ಬಾಗಿಲೆಂದು ಕರೆಯುತ್ತಾರೆ. ಈ ಮೂರು ಬಾಗಿಲುಗಳ ಮುಂದೆ ಎರಡು ಪಕ್ಕಗಳಲ್ಲಿಯೂ ಎರಡೆರಡು ಮಂಟಪಗಳೂ ಅವುಗಳೆದುರಿಗೆ ಇನ್ನು ಸ್ವಲ್ಪ ದೂರದಲ್ಲಿ ಜಗಲಿಯ ಕೆಳಗೆ ಮತ್ತೆರಡು ಮಂಟಪಗಳೂ ಇರುವುವು. ಗರ್ಭಗೃಹದ ಮೂರು ಗೋಡೆಗಳ ಹೊರಮುಖದಲ್ಲಿ ಎರಡು ಅಂತಸ್ತುಳ್ಳ ಮೂರು ಗೂಡುಗಳಿವೆ. ಈ ಗೂಡುಗಳೆದುರಿಗೆ ಜಗಲಿಯ ಕೆಳಭಾಗದಲ್ಲಿ ಮೂರು ಮಂಟಪಗಳಿವೆ. ಈ ಮಂಟಪಗಳೆಲ್ಲವೂ ಸಣ್ಣ ಸಣ್ಣ ವಿಮಾನದಂತೆಯೇ ಇದ್ದು ಗೋಪುರಗಳಿಂದ ಕೂಡಿವೆ. ಮತ್ತು ಅವುಗಳೊಳಗೆ ವಿಗ್ರಹವನ್ನು ಕೂಡಿಸಿದ್ದರೆಂದು ತೋರುತ್ತದೆ. ನವರಂಗದ ದ್ವಾರಗಳ ಪಕ್ಕಗಳಲ್ಲಿ ಹೊರಗಡೆ ಸಳನು ಹುಲಿಯನ್ನು ಇರಿಯುತ್ತಿರುವ ವಿಗ್ರಹಗಳು ನಿಲ್ಲಿಸಲ್ಪಟ್ಟಿವೆ. ಈ ದೇವಸ್ಥಾನದ ಪ್ರಾಕಾರದಲ್ಲಿರುವ ದೇವಾಲಯಗಳ ಪೈಕಿ ಸೋಮನಾಯಕಿ ಅಥವಾ ಅಮ್ಮನವರ ದೇವಸ್ಥಾನಕ್ಕೆ ಮಾತ್ರ ಶಿಖರವಿದೆ. ಕೇಶವ ದೇವಾಲಯದ ಮೇಲೂ ಶಿಖರವು ಪೂರ್ವದಲ್ಲಿ ಕಟ್ಟಲ್ಪಟ್ಟಿತ್ತು. ಆದರೆ ಅದು ಇತರ ಈ ಶೈಲಿಯ ದೇವಾಲಯಗಳ ಶಿಖರದಂತಿರದೆ ಔತ್ತರೇಯ ಪದ್ಧತಿಯ ಶಿಖರದಂತೆ ಇತ್ತು. ಅಷ್ಟೇನೂ ಅಂದವಾಗಿರಲಿಲ್ಲ. * ಆದರೆ ಇಂಥ ಅಂದವಿಲ್ಲದ ಗೋಪುರವು

---

* ಒಂದು ದೊಡ್ಡ ಮರವು ಶಿಖರದೊಳಗೆ ಬೆಳೆದುಕೊಂಡು ಇಡೀ ಕಟ್ಟಡಕ್ಕೆ ಹಾನಿಯನ್ನುಂಟು ಮಾಡುವಂತಿದ್ದುದರಿಂದ ಶಿಖರವನ್ನು ಕ್ರಿ. ಶ. ೧೮ ೪ ರಲ್ಲಿ ಕೆಡವಲಾಯಿತು. ಅದನ್ನು ಪುನಃ ಕಟ್ಟಲು ೧೮೭೯ ರಲ್ಲಿ ಒಂದು ಅಂದಾಜು ತಯಾರು ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಕ್ಕೆ ೧೮೮೫ ರಲ್ಲಿ ಅದಕ್ಕೆ ಮಂಜೂರಾತಿ ಬಂತು. ಆದರೆ ಅಷ್ಟು ಹೊತ್ತಿಗೆ ಶಿಖರದ ಕಲ್ಲುಗಳು ಚಲ್ಲಾಪಿಲ್ಲಿಯಾಗಿ ಚದರಿಹೋಗಿದ್ದರಿಂದ ಪುನಃ ಕಟ್ಟುವ ಕೆಲಸವನ್ನು ಬಿಟ್ಟುಬಿಡಲಾಯಿತು.

7

ಮೊದಲು ಕಟ್ಟಿದ್ದೆಂದು ನಂಬಲಾಗುವುದಿಲ್ಲ. ಪ್ರಥಮತಃ ಕಟ್ಟಿದ್ದ ಗೋಪುರವು ನವರಂಗದ ದ್ವಾರದ ಪಕ್ಕಗಳಲ್ಲಿರುವ ಮಂಟಪಗಳ ಮೇಲೆ ಕಾಣಬರುವ ಆಕಾರದೋಪಾದಿಯಲ್ಲಿರಬಹುದೆಂದು ಊಹಿಸಬಹುದಾಗಿದೆ. ನವರಂಗದ ಗೋಡೆಯ ಮೇಲೆ ಹೊರಗಡೆ ಸುಕನಾಸಿಯವರೆಗೆ ಉದ್ದಕ್ಕೂ ಸುಮಾರು ಐದು ಅಡಿ ಎತ್ತರದವರೆಗೆ ಎಂಟು ಸಾಲು ಚಿತ್ರಪಟ್ಟಿಕೆಗಳಿವೆ. ಇವು ಬುಡದಿಂದ ಕ್ರಮವಾಗಿ ಯಾವುವೆಂದರೆ: (೧) ಆನೆಗಳು (೨) ಮಧ್ಯೆ ಮಧ್ಯೆ ಸಿಂಹಲಾಲಟಗಳುಳ್ಳ ಮಣಿ ತೋರಣ (೩) ಬಳ್ಳಿಗಳು, ಅದರ ಮಧ್ಯೆ ನಾನಾ ಭಂಗಿಗಳಲ್ಲಿ ನಿಂತಿರುವ ವಿಗ್ರಹಗಳು. (೪) ಮಣಿತೋರಣ. (೫) ಮುಂದಕ್ಕೆ ಚಾಚಿಕೊಂಡಿರುವ ಸಣ್ಣ ಗೂಡುಗಳು. ಈ ಗೂಡುಗಳಲ್ಲಿ ಪ್ರಾಯಶಃ ಸ್ತ್ರೀ ವಿಗ್ರಹಗಳಿದ್ದಿರಬೇಕು. ಎರಡು ಗೂಡುಗಳ ಮಧ್ಯೆ ಹಿಂದಕ್ಕೆ ಕುಳಿತಿರುವ ಯಕ್ಷ ವಿಗ್ರಹಗಳು. (೬) ಗಿಡ್ಡಾದ ಕಂಬಗಳು. ಈ ಕಂಬಗಳ ಮಧ್ಯೆ ಸ್ತ್ರೀ ವಿಗ್ರಹಗಳು. (೭) ಸೂರುಗಲ್ಲು, ಅದಕ್ಕೆ ಮಣಿತೋರಣ, ಸೂರಿನ ಮೇಲೆ ಇಳಿಜಾರಾದ ಸ್ಥಳದಲ್ಲಿ ಉದ್ದಕ್ಕೂ ಬಳ್ಳಿ, ಅದರ ಮೇಲೆ ಸಣ್ಣ ಸಣ್ಣ ಗೋಪುರಗಳು, ಸಿಂಹಗಳು ಮತ್ತು ಸೊಗಸಾಗಿ ಕೆತ್ತನೆ ಕೆಲಸ ಮಾಡಿದ ಸಣ್ಣ ವಿಗ್ರಹಗಳು. (೮) ಕಟಾಂಜನ (Railing) ಇದರಲ್ಲಿ ಜೋಡಿ ಕಂಬಗಳೂ ಜೋಡಿ ಕಂಬಗಳೆರಡರ ಮಧ್ಯೆ ಮೂರ್ತಿ ವಿಗ್ರಹಗಳೂ ಕೆತ್ತಲ್ಪಟ್ಟಿವೆ. ಕಟಾಂಜನದ ಮೇಲೆ ಕೊರೆದು ರಂಧ್ರಮಾಡಿದ ಜಾಲಂದ್ರಗಳಿವೆ. ಇವು ಬಲ ಭಾಗಕ್ಕೆ ಹತ್ತು, ಎಡಭಾಗಕ್ಕೆ ಹತ್ತು, ಈ ರೀತಿ ಒಟ್ಟು ಇಪ್ಪತ್ತು ಇವೆ. ಇವುಗಳ ಪೈಕಿ ಕೆಲವುಗಳಲ್ಲಿ ಬರಿಯ ಹೂಗಳೂ ಬಳ್ಳಿಗಳೂ ಮತ್ತೆ ಕೆಲವುಗಳಲ್ಲಿ ಕ್ಷೀರಸಾಗರ ತೀರ್ಥ, ವಾಮನಾವತಾರ, ಕಾಳಿಂಗಮರ್ದನ, ವಿಷ್ಣುವರ್ಧನನ, ಆಸ್ಥಾನ, ಹಿರಣ್ಯಕಶಿಪು ಸಂಹಾರ ಮುಂತಾದ ಪೌರಾಣಿಕ ಕಥೆಗಳೂ ಕೆತ್ತಲ್ಪಟ್ಟಿವೆ. ಈ ದೇವಾಲಯದ ನವರಂಗವು ಮೊದಲು ಜಾಲಂದ್ರಗಳಿಲ್ಲದೆ ಬಯಲಾಗಿತ್ತೆಂದೂ ಸುಮಾರು ಕ್ರಿ. ಶ. ೧೧೮೫ ರಲ್ಲಿ ವಿಷ್ಣುವರ್ಧನನ ಮೊಮ್ಮಗನಾದ ಬಲ್ಲಾಳ ರಾಯನು ಈ ಜಾಲಂದ್ರಗಳನ್ನೂ ಬಾಗಿಲುವಾಡಗಳನ್ನೂ ಇಡಿಸಿದನೆಂದೂ ಶಾಸನದಿಂದ ತಿಳಿಯಬರುತ್ತದೆ. ಪೂರ್ವದ ಬಾಗಿಲಿನ ಬಲ ಭಾಗಕ್ಕೆ ಒಂದು ಜಾಲಂಧ್ರದಲ್ಲಿ ವಿಷ್ಣುವರ್ಧನನ ದರ್ಬಾರು, ಇನ್ನೊಂದರಲ್ಲಿ ತ್ರಿವಿಕ್ರಮನ ಅವತಾರ ಇದೆ. ಮತ್ತೊಂದರಲ್ಲಿ ಕಾಳೀಯಮರ್ದನವಿದೆ. ಮಗದೊಂದ

ರಲ್ಲಿ ಶಿವನ ದರ್ಬಾರು, ಕೊನೆಯದರಲ್ಲಿ ಹಿರಣ್ಯಕಶಿಪು ಸಂಹಾರ ಇದೆ. ಎಡ ಭಾಗದಲ್ಲಿರುವ ಜಾಲಂದ್ರಗಳಲ್ಲಿ ಒಂದರಲ್ಲಿ ವಿಷ್ಣುವರ್ಧನನ ಮಗನಾದ ಒಂದನೆಯ ನರಸಿಂಹನ ದರ್ಬಾರು, ಇನ್ನೊಂದರಲ್ಲಿ ಕ್ಷೀರಸಾಗರ ತೀರ್ಥವಿದೆ, ಮತ್ತೊಂದರಲ್ಲಿ ಕೃಷ್ಣನ ಲೀಲೆಗಳನ್ನು ಕೆತ್ತಿದೆ. ಮಗದೊಂದರಲ್ಲಿ ಆದಿಶೇಷನ ಮೇಲೆ ಮಲಗಿರುವ ರಂಗನಾಥನ ವಿಗ್ರಹವಿದೆ ಕೊನೆಯದರಲ್ಲಿ ಹನುಮಂತನೂ ಗರುಡನೂ ಯುದ್ಧಮಾಡುತ್ತಿರುವಂತೆ ಕೆತ್ತಿದೆ. ಈ ಜಾಲಂಧ್ರಗಳ ಎರಡು ಪಕ್ಕಗಳಲ್ಲಿಯೂ ಸ್ತಂಭಗಳಿವೆ. ಇವುಗಳ ಮೇಲೆ ಲೋವೆ ಕಲ್ಲು ಬರುತ್ತದೆ. ಈ ಸ್ತಂಭಗಳ ಬೋದಿಗೆಯ ಮೇಲೆ ಸೂರಿಗೆ ಊರೆಯಾಗಿ ಸುಂದರವಾದ ಮೂರ್ತಿಗಳು ಕೆತ್ತಿ ನಿಲ್ಲಿಸಲ್ಪಟ್ಟಿರುತ್ತವೆ. ಇವುಗಳಿಗೆ ಸಂಸ್ಕೃತದಲ್ಲಿ ಸಾಲಭಂಜಿಕೆಗಳೆಂದೂ, ಶಿಲಾಬಾಲಿಕೆಯರೆಂದೂ ಕನ್ನಡದಲ್ಲಿ ಮದನಕೈ ಬೊಂಬೆಗಳೆಂದೂ ಹೆಸರು. ಇಂಥವು ದೇವಸ್ಥಾನದ ಸುತ್ತಲೂ ಸುಮಾರು ನಲವತ್ತು ಇದ್ದುವೆಂದು ತೋರುತ್ತದೆ. ಆದರೆ ಈಗ ಇರುವುದು ಮೂವತ್ತೆಂಟು. ಇವುಗಳಲ್ಲಿ ಎರಡು ದುರ್ಗಾ ವಿಗ್ರಹಗಳು, ಮೂರು ಶಬರಿ ವಿಗ್ರಹಗಳು. ಮಿಕ್ಕವು ನರ್ತಿಸುತ್ತಲೋ ವಾದ್ಯವನ್ನು ಬಾರಿಸುತ್ತಲೋ ಉಡಿಗೆತೊಡಿಗೆಗಳನ್ನು ಧರಿಸುತ್ತಲೋ ಇವೆ. ಇವುಗಳಲ್ಲಿ ಒಂದು ಶಬರೀ ವಿಗ್ರಹದ ಪಕ್ಕದಲ್ಲಿ ಮತ್ತೊಂದು ವಿಗ್ರಹವು ಬೇಟೆಯಲ್ಲಿ ಕೊಂದ ಜಿಂಕೆಯನ್ನು ಕೋಲಿನ ತುದಿಗೆ ಸಿಕ್ಕಿಸಿ ಹೊತ್ತುಕೊಂಡಿರುವಂತೆ ಕೆತ್ತಿದೆ. ಅದೇ ವಿಗ್ರಹದ ಇನ್ನೊಂದು ಪಕ್ಕದಲ್ಲಿ ಮತ್ತೊಂದು ವಿಗ್ರಹವು ಕಾಲಿಗೆ ಹೊಕ್ಕಿರುವ ಮುಳ್ಳನ್ನು ತೆಗಿಸಿಕೊಳ್ಳುವ ಭಾವದಲ್ಲಿದೆ. ಆ ಮುಳ್ಳನ್ನು ಮತ್ತೊಂದು ಸಣ್ಣ ವಿಗ್ರಹವು ಕೆಳಗೆ ಕುಳಿತುಕೊಂಡು ಒಂದು ಸೂಜಿಯಿಂದ ತೆಗೆಯುವಂತೆ ಇದೆ. ಇನ್ನೊಂದು ಮದನಕೈ ವಿಗ್ರಹವು ಕೈಯಲ್ಲಿ ವೀಳೆಯವನ್ನು ಹಿಡಿದುಕೊಂಡಿರುವುದು ಅತ್ಯಂತ ನೈಸರ್ಗಿಕವಾಗಿದೆ. ಅದರ ಮಗ್ಗುಲಲ್ಲಿರುವ ಒಂದು ವ್ಯಕ್ತಿಯು ಪನ್ನೀರನ್ನು ಅದರ ಮೇಲೆ ಪಿಚಕಾರಿಯಿಂದ ಎರಚುತ್ತಿದೆ. ಮತ್ತೊಂದು ಮದನಕೈ ವಿಗ್ರಹದ ಲತಾಗೃಹದ ಒಂದು ಹಣ್ಣಿನ ಮೇಲೆ ಒಂದು ನೊಣವೂ ಅದರ ಮೇಲೆ ಹಾರುವುದಕ್ಕೆ ಸಿದ್ಧವಾಗಿ ಒಂದು ಹಲ್ಲಿಯೂ ಕೆತ್ತಲ್ಪಟ್ಟಿವೆ. ಈ ಪ್ರಾಣಿಗಳು ಕೇವಲ ಚಿಕ್ಕವಾದರೂ ಅವುಗಳ ಒಂದೊಂದು ಸಣ್ಣ ಸಣ್ಣ ಅವಯವವೂ ಸ್ಪಷ್ಟವಾಗಿ ಕೆತ್ತಲ್ಪಟ್ಟಿವೆ. ಮತ್ತೊಂದು ಮದನ ಕೈ ವಿಗ್ರಹವು ಉಟ್ಟಬಟ್ಟೆಯಲ್ಲಿ

ಚೇಳು ಕಂಡದ್ದರಿಂದ ತನ್ನ ಉಡುಪನ್ನು ಬಿಚ್ಚಿಹಾಕಿ ಬಿಟ್ಟಂತೆಯೂ, ಚೇಳು ಕೆಳಗೆ ಬಿದ್ದಿರುವಂತೆಯೂ ಕೆತ್ತಲ್ಪಟ್ಟಿದೆ. ಇಂತಹ ವಿಗ್ರಹಗಳು ಒಂದೊಂದೂ ಶಿಲ್ಪಿಗಳ ಪ್ರತಿಭೆಯನ್ನೂ ಕೌಶಲವನ್ನೂ ಉದ್ಘೋಷಿಸುತ್ತಾ ಪ್ರೇಕ್ಷಕರನ್ನು ಬೆರಗುಮಾಡುತ್ತಿವೆ. ಈ ಬೊಂಬೆಗಳ ಪೀಠದಲ್ಲಿ ಶಿಲ್ಪಿಗಳು ತಮ್ಮ ಹೆಸರನ್ನೂ ಬಿರುದಾವಳಿಗಳನ್ನೂ ಕೆತ್ತಿರುತ್ತಾರೆ. ನವರಂಗದ ಗೋಡೆಯಿಂದ ಆಚೆಗೆ ದೇವಸ್ಥಾನದ ಸುತ್ತಲೂ ವಿಷ್ಣು, ಪಾರ್ವತಿ, ರಾವಣ, ಬಲಿ ಮುಂತಾದ ಎಂಬತ್ತು ದೊಡ್ಡ ದೊಡ್ಡ ವಿಗ್ರಹಗಳಿವೆ. ಗರ್ಭಗೃಹಕ್ಕೆ ಹೊರಪಾರ್ಶ್ವದಲ್ಲಿರುವ ತೇರಿನಾಕಾರದ ಗೂಡುಗಳಿಗೂ ಕಟಾಂಜನವಿದೆ. ಗೂಡುಗಳಿಗೆ ಬುಡದಿಂದ ಆನೆ, ರಾವುತರು, ಗೋಪುರಗಳುಳ್ಳ ಕಂಬಗಳು, ಬೊಂಬೆಗಳುಳ್ಳ ಬೇಲು, ಈ ರೀತಿಯಾಗಿ ಚಿತ್ರದ ಸಾಲುಗಳಿವೆ.

ದೇವಸ್ಥಾನದ ಹೊರಭಾಗಕ್ಕಿಂತಲೂ ಒಳಭಾಗದಲ್ಲಿ ಅನೇಕ ಅಂಶಗಳು ರಮಣೀಯವಾಗಿವೆ. ಕೇಶವದೇವರ ವಿಗ್ರಹವು ಚೆನ್ನಾಗಿ ಬೆಳೆದ ಒಬ್ಬ ಆಳಿಗಿಂತಲೂ ಎತ್ತರವಾಗಿ ಬಹು ಸುಂದರವಾಗಿದೆ. ಮೂರ್ತಿಯು ಹಿಂದಿನ ಎರಡು ಕೈಗಳಲ್ಲಿ ಶಂಖಚಕ್ರಗಳನ್ನೂ, ಮುಂದಿನ ಎರಡು ಕೈಗಳಲ್ಲಿ ಗದಾ ಪದ್ಮಗಳನ್ನೂ ಧರಿಸಿಕೊಂಡು ಹಸನ್ಮುಖಿಯಾಗಿ ನಿಂತಿದೆ. ಇದರ ಹಿಂಭಾಗದಲ್ಲಿ ದಶಾವತಾರಗಳನ್ನು ಕೆತ್ತಿದ ಪ್ರಭಾವಳಿಯೂ ಕೆಳಗೆ ಸುಮಾರು ಮೂರು ಅಡಿ ಎತ್ತರವಾದ ಪೀಠವೂ ಇವೆ. ಸುಕನಾಸಿಯ ದ್ವಾರವು ಬಹು ನಾಜೂಕಾಗಿ ರಚಿಸಿರುವುದಲ್ಲದೆ ಎರಡು ಪಕ್ಕದಲ್ಲಿಯೂ ಸುಂದರವಾದ ದ್ವಾರಪಾಲಕ ವಿಗ್ರಹಗಳಿವೆ. ನವರಂಗದ ಗೋಡೆಯುದ್ದಕ್ಕೂ ಒಳಭಾಗದಲ್ಲಿ ಎತ್ತರವಾದ ಜಗಲಿ ಇದೆ. ಇಲ್ಲಿರತಕ್ಕ ಕಂಬಗಳು ಒಂದೊಂದೂ ಬೇರೆ ಬೇರೆ ವಿಧವಾಗಿ ಕೆತ್ತಲ್ಪಟ್ಟಿವೆ. ಇವುಗಳಲ್ಲಿ ಎರಡು ಕಂಬಗಳು ಪ್ರಸಿದ್ಧವಾದವುಗಳು. ಒಂದಕ್ಕೆ ನರಸಿಂಹ ಸ್ತಂಭವೆಂದು ಹೆಸರು. ಇದು ಮೊದಲು ತಿರುಗುತ್ತಿತ್ತೆಂದು ಹೇಳುತ್ತಾರೆ. ಇದರಲ್ಲಿ ಆಮೂಲಾಗ್ರವಾಗಿ ಸಣ್ಣ ಸಣ್ಣ ಬೊಂಬೆಗಳೂ ಚಿತ್ರಗಳೂ ಕೆತ್ತಲ್ಪಟ್ಟಿವೆ. ಒಂದು ಕಡಲೆಕಾಳಿನ ಗಾತ್ರ ಮಾತ್ರವಿರುವ "ಕಡಲೆ ಬಸವಣ್ಣ" ಇದರಲ್ಲಿದೆ. ಅದರ ಪ್ರತಿಯೊಂದು ಅವಯವವೂ ಸ್ಪಷ್ಟವಾಗಿ ಕೆತ್ತಲ್ಪಟ್ಟಿದೆ. ಕಂಬದಲ್ಲಿ ಒಂದು ಭಾಗವನ್ನು ಕೆತ್ತನೆಯ ಕೆಲಸ ಮಾಡದೆ ಹಾಗೆಯೇ ಬಿಟ್ಟಿದೆ. ಇನ್ನು ಯಾರಾ

ದರೂ ಇಷ್ಟು ಚೆನ್ನಾಗಿ ಕೆತ್ತುವ ನಿಪುಣರಿದ್ದರೆ ಕೆತ್ತಲಿ ಎಂದು ಶಿಲ್ಪಿಯು ಬಿಟ್ಟಿರುತ್ತಾನೆಂದು ಹೇಳುತ್ತಾರೆ. ಎರಡನೆಯ ಕಂಬವು ಸುಕನಾಸಿಯ ಬಾಗಿಲ ಬಲದಲ್ಲಿದೆ. ಇದರಲ್ಲಿ ಕೊರೆದು ಮಾಡಿರುವ ಕೆಲಸವು ಅತ್ಯಾಶ್ಚರ್ಯಕರವಾಗಿರುತ್ತದೆ. ಇದರ ಒಂದು ಪಾರ್ಶ್ವದಲ್ಲಿ ನಿಂತಿರುವ ಸ್ತ್ರೀ ವಿಗ್ರಹವೂ ಉಳಿದ ಕಡೆಗಳಲ್ಲಿ ಉದ್ದವಾದ ಚಿತ್ರಪಟ್ಟಿಕೆಗಳೂ ಇವೆ. ಈ ಪಟ್ಟಿಕೆಗಳಲ್ಲಿ ಬಳ್ಳಿಗಳ ಬೇಲುಗಳೂ ಅವುಗಳ ಮಧ್ಯೆ ತ್ರಿಮೂರ್ತಿಗಳು, ದಶಾವತಾರಗಳು, ಅಷ್ಟ ದಿಕ್ಪಾಲಕರು ಮುಂತಾದ ವಿಗ್ರಹಗಳು ಕೆತ್ತಲ್ಪಟ್ಟಿವೆ. ಈ ದೇವಾಲಯದಲ್ಲೆಲ್ಲ ಇದೇ ಅತ್ಯಂತ ಸುಂದರವಾದ ಕಂಬ. ನವರಂಗದ ಮಧ್ಯೆ ಇರುವ ನಾಲ್ಕು ಕಂಬಗಳು ಒಂದೇ ತೆರನಾಗಿವೆ. ಅವುಗಳ ಮೇಲೆ ನಾಲ್ಕು ಮದನ ಕೈ ವಿಗ್ರಹಗಳು ಇವೆ. ಒಂದು ಕಂಬದ ಮೇಲಿರುವ ವಿಗ್ರಹದ ಕೈಮೇಲೆ ಒಂದು ಗಿಣಿಯು ಕೂತಿದೆ. ಈ ವಿಗ್ರಹದ ಕೈಯಲ್ಲಿರುವ ಬಳೆಯನ್ನು ತಿರುಗಿಸಬಹುದು. ಇನ್ನೊಂದು ಕಂಬದ ಮೇಲಿರುವ ವಿಗ್ರಹವು ಸರಸ್ವತಿ ಎಂದು ಅದರ ಪೀಠದ ಮೇಲೆ ಬರೆದಿರುವ ಒಕ್ಕಣೆಯಿಂದ ತಿಳಿಯಬರುತ್ತದೆ. ಈ ವಿಗ್ರಹದ ತಲೆಯ ಮೇಲಿರುವ ಕಿರೀಟವನ್ನು ಎತ್ತಿ ಇಡಬಹುದು. ಮೂರನೆಯ ಕಂಬದ ಮೇಲಿರುವ ವಿಗ್ರಹವು ನರ್ತಿಸುತ್ತಿರುವಂತೆಯೂ ನಾಲ್ಕನೆಯ ಕಂಬದ ಮೇಲಿರುವದು ತಲೆಯನ್ನು ಬಾಚಿಕೊಳ್ಳುತ್ತಿರುವಂತೆಯೂ ಕೆತ್ತಲ್ಪಟ್ಟಿವೆ. ಈ ಕಂಬಗಳ ಮೇಲೆ ಒಂದು ದೊಡ್ಡ ಭುವನೇಶ್ವರಿ ಇದೆ. ಇದು ದುಂಡಗೂ ಹತ್ತು ಅಡಿ ವ್ಯಾಸ ಉಳ್ಳದ್ದೂ, ಆರು ಅಡಿ ಆಳವೂ ಇದೆ. ಇದರಲ್ಲಿ ಒಂದರ ಮೇಲೊಂದು ಚಿತ್ರಪಟ್ಟಿಕೆಗಳೂ ಪ್ರತಿಯೊಂದು ಪಟ್ಟಿಕೆಯಲ್ಲೂ ಅಲ್ಲಲ್ಲಿ ಮೊಗ್ಗುಗಳೂ, ಮೇಲಿನಿಂದ ಕೆಳಗಿನವರೆಗೂ ನಾಜೂಕಾಗಿ ಕೆತ್ತಿದ ದೇವತಾ ವಿಗ್ರಹಗಳ ಸಾಲುಗಳೂ ಇವೆ. ಮಧ್ಯದಲ್ಲಿ ಒಂದು ದೊಡ್ಡ ಕಲ್ಲು ಕಮಲದ ಮೊಗ್ಗಿನಾಕೃತಿಯಲ್ಲಿ ಇಳಿಬಿದ್ದಿರುತ್ತದೆ. ಅದರ ಮುಖದಲ್ಲಿ ಹಿರಣ್ಯಕಶಿಪುವಿನ ಸಂಹಾರ ಮೂರ್ತಿ ನರಸಿಂಹಾವತಾರವು ಕೆತ್ತಲ್ಪಟ್ಟಿದೆ. ಹಿರಣ್ಯಕಶಿಪುವಿನ ಹೊಟ್ಟೆಯಿಂದ ಬಗೆದ ಕರುಳುಗಳು ಕೂಡ ಕಾಣುವಂತೆ ನಾಜೂಕಾಗಿ ತೋರಿಸಲ್ಪಟ್ಟಿದೆ. ಈ ದೇವಸ್ಥಾನದಲ್ಲಿ ಗೋಳಾಕಾರವಾಗಿರುವ ಭುವನೇಶ್ವರಿ ಇದೊಂದೇ. ಮಿಕ್ಕವುಗಳೆಲ್ಲ ಚಪ್ಪಟೆಯಾಗಿವೆ. ನವರಂಗದ ದ್ವಾರಗಳ ಮುಂಭಾಗದಲ್ಲಿರುವ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರ ವಿಗ್ರಹಗಳು ಕೆತ್ತಲ್ಪಟ್ಟಿವೆ. ಪೂರ್ವ ದ್ವಾರದ ಹತ್ತಿರ

ಇರುವ ಮತ್ತೊಂದು ಭುವನೇಶ್ವರಿಯಲ್ಲಿ ನರಸಿಂಹಾವತಾರವು ಕೆತ್ತಿದೆ. ಇದೇ ರೀತಿ ದಕ್ಷಿಣದ್ವಾರದ ಹತ್ತಿರ ಇರುವುದರಲ್ಲಿ ವರಾಹ ಮೂರ್ತಿಯೂ ಉತ್ತರ ದ್ವಾರದ ಹತ್ತಿರ ಇರುವುದರಲ್ಲಿ ಕೇಶವ ವಿಗ್ರಹವೂ ಕೆತ್ತಲ್ಪಟ್ಟಿವೆ. ಮಿಕ್ಕವು ಗಳಲ್ಲಿ ಹೂಗಳಿವೆ.

ಪ್ರಾಕಾರದಲ್ಲಿರುವ ಇತರ ದೇವಸ್ಥಾನಗಳ ಪೈಕಿ ಕಪ್ಪೆ ಚೆನ್ನಿಗರಾಯನ ದೇವಸ್ಥಾನವೂ ವೀರನಾರಾಯಣನ ದೇವಸ್ಥಾನವೂ ಇದೇ ಕಾಲದಲ್ಲಿ ಕಟ್ಟಿದವು ಗಳು. ಕಪ್ಪೆ ಚೆನ್ನಿಗರಾಯನ ದೇವಸ್ಥಾನವು ಕೇಶವ ದೇವಾಲಯದ ದಕ್ಷಿಣ ದಿಕ್ಕಿನಲ್ಲಿ ೧೨೪ ಅಡಿ ಉದ್ದ ೧೦೫ ಅಡಿ ಅಗಲ ಉಳ್ಳ ಜಗಲಿಯ ಮೇಲೆ ಕಟ್ಟಲ್ಪಟ್ಟಿದೆ. ಚೆನ್ನಿಗರಾಯನೆಂಬುದು ಚೆನ್ನಕೇಶವನಿಗೆ ರೂಢಿಯಲ್ಲಿ ಬಂದ ಮತ್ತೊಂದು ಹೆಸರು. * ಈ ದೇವಾಲಯದಲ್ಲಿ ಒಂದು ನವರಂಗವೂ ಎರಡು

* ಕಪ್ಪೆಚೆನ್ನಿಗರಾಯನೆಂದು ಹೆಸರು ಬರುವುದಕ್ಕೆ ಈ ಕೆಳಗಿನ ಕಥೆಯನ್ನು ಹೇಳುತ್ತಾರೆ: ತುಮಕೂರು ತಾಲ್ಲೂಕಿನ ಕೈದಾಳವೆಂಬ ಗ್ರಾಮದಲ್ಲಿ ಜಕಣಾಚಾರಿ ಎಂಬ ಪ್ರಸಿದ್ಧ ಶಿಲ್ಪಿ ಇದ್ದನು. ಈತನು ಕಾರ್ಯಾರ್ಥಿಯಾಗಿ ದೇಶಾಂತರಕ್ಕೆ ಹೊರಟು ಹೋದನು. ಆತನು ಹೊರಟು ಹೋದ ಕೆಲವು ತಿಂಗಳುಗಳಲ್ಲಿಯೇ ಆತನ ಹೆಂಡತಿಯ ಹೊಟ್ಟೆಯಲ್ಲಿ ಒಬ್ಬ ಮಗನು ಹುಟ್ಟಿದನು. ಅವನಿಗೆ ತಾಯಿಯು "ಡಂಕಣ" ಎಂಬ ಹೆಸರಿಟ್ಟಳು. ಪ್ರಾಪ್ತವಯಸ್ಕನಾದಮೇಲೆ ಮಗನು ತಂದೆಯನ್ನು ಹುಡುಕಿಕೊಂಡು ಹೊರಟನು. ಅನೇಕ ಊರುಗಳನ್ನು ತಿರುಗಿ ಬೇಲೂರಿಗೆ ಬಂದನು. ಅಲ್ಲಿ ಆಗತಾನೆ ಜಕಣಾಚಾರಿಯಿಂದ ನಿರ್ಮಿಸಲ್ಪಟ್ಟಿದ್ದ ಚೆನ್ನಿಗರಾಯನ ವಿಗ್ರಹವು ಪ್ರತಿಷ್ಠಿಸಲ್ಪಟ್ಟಿತ್ತು. ಆ ವಿಗ್ರಹವನ್ನು ಡಂಕಣಾಚಾರಿಯು ನೋಡಿ ಅದರಲ್ಲಿ ದೋಷವಿದೆಯೆಂದೂ ಆದಕಾರಣ ಪೂಜೆಗೆ ಅರ್ಹವಾದದ್ದಲ್ಲವೆಂದೂ ಅಲ್ಲಿಯ ಜನರಿಗೆ ಹೇಳಿದನು. ಅದನ್ನು ಕೇಳಿದ ಆತನ ತಂದೆಯು ಅದರಲ್ಲಿ ದೋಷವನ್ನು ತೋರಿಸಿದರೆ ತನ್ನ ಬಲಗೈಯನ್ನು ಕತ್ತರಿಸಿ ಕೊಂಡು ಬಿಡುವುದಾಗಿ ಪಂಥವನ್ನು ಮಾಡಿದನು. ಅದನ್ನು ಪರೀಕ್ಷಿಸುವುದಕ್ಕಾಗಿ ವಿಗ್ರಹದ ಮೈಮೇಲೆಲ್ಲಾ ಚಂದನವನ್ನು ಲೇಪಿಸಲು ಹೊಕ್ಕಳಿನ ಸುತ್ತಲೂ ಇದ್ದ ಚಂದನ ಒಣಗದೆ ಹಸಿಯಾಗಿಯೇ ನಿಂತಿತು. ಆ ಭಾಗದಲ್ಲಿ ಕೊರೆದು ನೋಡಲು ಕೊಂಚ ನೀರೂ, ಕಪ್ಪೆಯೂ ಕಂಡುಬಂದುವಂತೆ. ಜಕಣಾಚಾರಿಯಾದರೋ ತನ್ನ ಪ್ರತಿಜ್ಞೆಯಂತೆ ತನ್ನ ಬಲಗೈಯನ್ನು ಕತ್ತರಿಸಿಕೊಂಡನಂತೆ. ಆದರೆ ದೃಢಭಕ್ತನಾದ ಆತನಲ್ಲಿ ಕೃಪೆಗೊಂಡು ಚನ್ನಿಗರಾಯನು ಸ್ವಪ್ನದಲ್ಲಿ ದರ್ಶನಕೊಟ್ಟು ತನ್ನ ಜನ್ಮಸ್ಥಳದಲ್ಲಿ ಒಂದು ದೇವಾಲಯವನ್ನು ನಿರ್ಮಿಸುವಂತೆ ಅಜ್ಞೆಮಾಡಿದನು. ಆದರಂತೆ ಆತನು ತನ್ನ ಜನ್ಮಸ್ಥಳವಾದ ತುಮಕೂರು ತಾಲ್ಲೂಕು ಕೈದಾಳಕ್ಕೆ ತೆರಳಿ ಅಲ್ಲಿ ಒಂದು ಚನ್ನಕೇಶವ

ಗರ್ಭಗುಡಿಗಳೂ ಇವೆ. ನವರಂಗಕ್ಕೆ ಪೂರ್ವದಿಕ್ಕಿನಲ್ಲೊಂದು ಉತ್ತರದಿಕ್ಕಿನಲ್ಲೊಂದು ಈ ರೀತಿ ಎರಡು ಬಾಗಿಲುಗಳಿವೆ. ಪೂರ್ವದಿಕ್ಕಿನ ಬಾಗಿಲೆದುರಿಗೆ ಇರುವ ಗರ್ಭಗುಡಿಯಲ್ಲಿ ಕಪ್ಪೆಚೆನ್ನಿಗರಾಯನೂ ಉತ್ತರದಿಕ್ಕಿನ ಬಾಗಿಲಿಗೆದುರಿಗೆ ಇರುವ ಗರ್ಭಗುಡಿಯಲ್ಲಿ ವೇಣುಗೋಪಾಲಸ್ವಾಮಿಯೂ ಇವೆ. ಕಪ್ಪೆಚೆನ್ನಿಗರಾಯನ ಗರ್ಭಗೃಹಕ್ಕೂ ನವರಂಗಕ್ಕೂ ಮಧ್ಯೆ ಸುಕನಾಸಿ ಇದೆ. ನವರಂಗದ ಒಳಗಡೆ ಪಶ್ಚಿಮದಿಕ್ಕಿನ ಗೋಡೆಯಲ್ಲಿ ಎರಡು ಗೂಡುಗಳೂ, ಉತ್ತರದಿಕ್ಕಿನ ಗೋಡೆಯಲ್ಲಿ ಒಂದು ಗೂಡೂ ಇವೆ. ಕೇಶವ ದೇವಾಲಯಕ್ಕಿರುವಂತೆ ಪಶ್ಚಿಮ ಕಡೆ ಇರುವ ಗರ್ಭಗೃಹದ ಹೊರಪಾರ್ಶ್ವದಲ್ಲಿ ಮೂರು ಗೂಡುಗಳಿವೆ. ನವರಂಗದಲ್ಲಿರುವ ಗೂಡುಗಳಲ್ಲಿ ಲಕ್ಷ್ಮೀನಾರಾಯಣ, ಸರಸ್ವತಿ, ಗಣಪತಿ ಮತ್ತು ಮಹಿಷಾಸುರ ಮರ್ದಿನಿ ವಿಗ್ರಹಗಳು ಇರಿಸಲ್ಪಟ್ಟಿವೆ. ನವರಂಗದ ಗೋಡೆಯ ಸುತ್ತಲೂ ಜಾಲಂಧ್ರಗಳೂ, ಎತ್ತರವಾದ ಜಗಲಿಯೂ ಮಧ್ಯದ ನಾಲ್ಕು ಕಂಬಗಳ ಮೇಲೆ ಮದನ ಕೈ ವಿಗ್ರಹಗಳೂ ಇವೆ. ಈ ದೇವಾಲಯದಲ್ಲಿಯೂ ಸೊಗಸಾಗಿ ಕೆತ್ತಿದ ಭುವನೇಶ್ವರಿಗಳು ಇವೆ. ಈ ದೇವಾಲಯದ ಗೂಡುಗಳಲ್ಲಿರುವ ವಿಗ್ರಹಗಳೆಲ್ಲವೂ ಸುಂದರವಾದವು. ಇವುಗಳಲ್ಲೆಲ್ಲ ಮಹಿಷಾಸುರ ಮರ್ದಿನಿ ವಿಗ್ರಹವಂತೂ ಅತ್ಯಂತ ಸೌಂದರ್ಯವನ್ನು ಬೀರುತ್ತಿದೆ. ಕಪ್ಪೆಚೆನ್ನಿಗರಾಯನ ವಿಗ್ರಹವೂ ಬಹು ಮುದ್ದಾಗಿದೆ. ಮುಖದಲ್ಲಿ ಮಂದಹಾಸವು ಉಕ್ಕುತ್ತಿದೆ. ಕೈಗಳಲ್ಲಿ ಶಂಖ, ಚಕ್ರಗದಾಪದ್ಮಗಳಿವೆ. ಈ ವಿಗ್ರಹವು ವಿಷ್ಣುವರ್ಧನನ ರಾಣಿಯಾದ ಶಾಂತಲಾದೇವಿಯಿಂದ ಪ್ರತಿಷ್ಠಿಸಲ್ಪಟ್ಟಿತೆಂದು ಅದರ ಪೀಠವಲ್ಲಿರುವ ಶಾಸನದಿಂದ ಗೊತ್ತಾಗುತ್ತದೆ. ವೀರನಾರಾಯಣ ದೇವಸ್ಥಾನವು ಮೇಲೆ ಹೇಳಿದ ಎರಡು ದೇವಾಲಯಗಳಿಗಿಂತಲೂ ಚಿಕ್ಕದಾದದ್ದು. ಇದರಲ್ಲಿಯೂ ಗರ್ಭಗುಡಿ, ಸುಕನಾಸಿ, ನವರಂಗಗಳಿವೆ. ದೇವಾಲಯದ ಸುತ್ತಲೂ ಹೊರ ಪಾರ್ಶ್ವದಲ್ಲಿ ದೊಡ್ಡ ದೊಡ್ಡ ವಿಗ್ರಹಗಳು ಕೆತ್ತಲ್ಪಟ್ಟಿವೆ. ವೀರನಾರಾಯಣ ವಿಗ್ರಹವೂ ಬಹು ಸುಂದರವಾಗಿದೆ. ಚೆನ್ನಕೇಶವ ದೇವಾಲಯದ ನೈರುತ್ಯಕ್ಕೆ ಸೋಮನಾಯಕಮ್ಮನವರ ದೇವಾಲಯವೂ ವಾಯುವ್ಯಕ್ಕೆ

ದೇವಾಲಯವನ್ನು ಕಟ್ಟಿದನು. ದೇವಾಲಯವು ಮುಗಿದ ಕೂಡಲೆ ಆತನಿಗೆ ಪುನಃ ಕೈ ಸರಿಹೋಯಿತು. ಈ ದಂತಕಥೆಗೆ ಆಧಾರವೇನೂ ದೊರಕುವುದಿಲ್ಲ. ಅದರೆ ಕಪ್ಪೆಚೆನ್ನಿಗರಾಯನಿಗೆ ಪೂಜೆಯೇನೋ ಅಂದಿನಿಂದ ನಿಂತುಹೋಯಿತು.

ಆಂಡಾಳಮ್ಮನವರ ದೇವಾಲಯವೂ ಇವೆ. ವಾಯುವ್ಯ ಮೂಲೆಯಲ್ಲಿ ಒಂದು ಕೊಟ್ಟಾರವಿದೆ. ಈಶಾನ್ಯ ಮೂಲೆಯಲ್ಲಿ ಒಂದು ಪುಷ್ಕರಿಣಿ ಇದೆ. ಕೊಟ್ಟಾರಕ್ಕೆ ಯಕ್ಷೇಶ ಭಂಡಾರವೆಂದೂ, ಪುಷ್ಕರಿಣಿಗೆ ವಾಸುದೇವ ಸರೋವರವೆಂದೂ ಹೆಸರು. ಈ ಸರೋವರದ ಸುತ್ತಲೂ ಗೋಡೆಯೂ ಕೊಳದೊಳಕ್ಕೆ ಪ್ರವೇಶಿಸುವದಕ್ಕೆ ಒಂದು ದ್ವಾರಮಂಟಪವೂ ಇವೆ. ಕೊಳದ ಕೆಲವು ಸೋಪಾನಗಳ ಕೆಳಗೆ ಎರಡು ಪಕ್ಕಗಳಲ್ಲಿಯೂ ದೇವಾಲಯದ ನವರಂಗ ದ್ವಾರದ ಮುಂದುಗಡೆ ಇರುವಂತೆ ಎರಡು ಮಂಟಪಗಳಿವೆ. ಪ್ರಾಕಾರದ ಮಹಾದ್ವಾರಕ್ಕೂ ಆನೆ ಬಾಗಿಲಿಗೂ ನಡುವೆ ಪಾಕಶಾಲೆ ಇದೆ. ಪ್ರಾಕಾರದ ಆವರಣದಲ್ಲಿ ಮೇಲೆ ವಿವರಿಸಿದುವುಗಳಲ್ಲದೆ ಇನ್ನೂ ಅನೇಕ ಚಿಕ್ಕ ಮಂಟಪಗಳೂ ಇದ್ದವು. ದೇವಾಲಯವೇ ಮುಚ್ಚಿ ಹೋಗಿತ್ತು. ಈಚೆಗೆ ಅವುಗಳೆಲ್ಲವನ್ನೂ ತೆಗೆದು ಹಾಕಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಯಿತು. ಇಂತಹ ದೇವಾಲಯಗಳನ್ನು ಮೊದಲು ಕಟ್ಟಿಸಿದವರು ಧರ್ಮಾಭಿಮಾನ, ದೈವಭಕ್ತಿ, ಕಲಾಕೌಶಲ್ಯ, ಅಭಿರುಚಿ, ಇವುಗಳೆಲ್ಲವೂ ಒಂದೇ ಸಮನಾಗಿ ಒಂದನ್ನೊಂದು ಪರಿಪೋಷಿಸಿಕೊಂಡು ಹೋಗುವಂತೆ ನೋಡಿಕೊಳ್ಳುತ್ತಿದ್ದರು. ಆದರೆ ಈಚಿನ ಭಕ್ತಾದಿಗಳು ಕಲಾಭಿರುಚಿಯ ದೃಷ್ಟಿಯನ್ನು ಕೊಡದೆ ಎಲ್ಲಿ ಜಾಗವಿದ್ದರೆ ಅಲ್ಲಲ್ಲಿ ಕಟ್ಟಡಗಳನ್ನು ಕಟ್ಟಿರುವುದನ್ನು ಅನೇಕ ದೇವಾಲಯಗಳಲ್ಲಿ ಕಾಣಬಹುದು. ಬೇಲೂರಿನ ದೇವಾಲಯದ ಒಂದೊಂದೇ ಭಾಗವನ್ನು ಬೇರೆ ಬೇರೆಯಾಗಿ ತೆಗೆದುಕೊಂಡು ನೋಡಲಿ ಅಥವಾ ಒಟ್ಟಿನ ಮೇಲೆ ನೋಡಲಿ; ಇದರಲ್ಲಿ ಕಂಡು ಬರುವ ಸೌಂದರ್ಯದಲ್ಲಿಯೂ, ಕೆತ್ತನೆಯ ಕೆಲಸದಲ್ಲಿ ಕಂಡು ಬರುವ ಅತಿಶಯ ನೈಪುಣ್ಯಗಳಲ್ಲಿಯೂ, ಆಯಾ ಅವಯವಗಳನ್ನೂ ವಿಭಾಗಗಳನ್ನೂ ಸಮಂಜಸವಾಗಿ ಅಂದವಾಗಿರುವಂತೆ ಕಲ್ಪಿಸಿ ಜೋಡಿಸಿರುವ ಶಿಲ್ಪವಿದ್ಯಾಸಾಮರ್ಥ್ಯ ವಿಷಯದಲ್ಲಿಯೂ, ಕರ್ನಾಟಕದ, ಏಕೆ ಇಡಿ ಹಿಂದುಸ್ಥಾನದ, ಕಟ್ಟಡಗಳೊಳಗೆ ಬಹು ಪ್ರಾಮುಖ್ಯತೆಯನ್ನು ಪಡೆದಿದೆ ಎಂದು ಧಾರಾಳವಾಗಿ ಹೇಳಬಹುದು.

ಹಳೆಯಬೀಡಿನ ಹೊಯಿಸಳೇಶ್ವರ ದೇವಾಲಯವು ಎರಡು ಗರ್ಭಗೃಹಗಳುಳ್ಳ ದೇವಾಲಯಕ್ಕೆ ಒಳ್ಳೆಯ ಉದಾಹರಣೆ. ಹಳೇಬೀಡು ಈಗ ಬೇಲೂರು ತಾಲ್ಲೂಕಿನಲ್ಲಿರುವ ಒಂದು ಹಳ್ಳಿ. ಇದು ಹನ್ನೆರಡನೆಯ ಶತಮಾನದ ಆದಿ

ಭಾಗದಲ್ಲಿ ಹೊಯಿಸಳ ರಾಜರ ರಾಜಧಾನಿಯಾಗಿತ್ತು. ಆಗ ಇದಕ್ಕೆ ದ್ವಾರ ಸಮುದ್ರ ಅಥವಾ ದ್ವಾರಾವತಿ ಎಂಬ ಹೆಸರಿತ್ತು. ಈ ಊರನ್ನು ಮುಸಲ್ಮಾನರು ಕ್ರಿ. ಶ. ೧೩೨೬ ರಲ್ಲಿ ನಾಶ ಮಾಡಿದರು. ಅದು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಬಹು ವಿಸ್ತಾರವಾಗಿದ್ದು ಈಗ ಅದರ ಸುತ್ತಮುತ್ತಲೂ ಇರುವ ಅನೇಕ ಹಳ್ಳಿಗಳನ್ನು ಒಳಗೊಂಡಿತ್ತು. ಹೊಯಿಸಳ ರಾಜಧಾನಿಯ ವೈಭವವು ಹೇಗಿದ್ದಿರಬಹುದೆಂಬುದನ್ನು ಈಗಲೂ ಈ ಗ್ರಾಮದ ಹತ್ತಿರ ಇರುವ ನಾನಾ ಪುರಾತನ ಕಟ್ಟಡಗಳನ್ನು ನೋಡಿ ಸ್ವಲ್ಪ ಮಟ್ಟಿಗಾದರೂ ಊಹಿಸಿಕೊಳ್ಳಬಹುದು. ಗ್ರಾಮದಲ್ಲಿಯೂ ಸುತ್ತಲೂ ಅನೇಕ ದೇವಾಲಯಗಳೂ, ಇತರ ದೇವಾಲಯಗಳ ಅವಶೇಷಗಳೂ ಕಣ್ಣಿಗೆ ಬೀಳುತ್ತವೆ. ಇಲ್ಲಿರುವ ಹೊಯಿಸಳೇಶ್ವರ ದೇವಾಲಯವು ಭವ್ಯವೂ, ಸುಂದರವೂ, ದೊಡ್ಡದೂ, ಸುರಕ್ಷಿತವೂ ಆದ ಕಟ್ಟಡ. ಇದನ್ನು ಕಟ್ಟುವುದಕ್ಕೂ ಇದರ ಗೋಡೆಗಳ ಮೇಲೆ ಇರುವ ಮೂರ್ತಿಗಳನ್ನೂ ಕೆತ್ತುವದಕ್ಕೂ ಒಟ್ಟಿನ ಮೇಲೆ ಕಾಣಬರುವ ಈ ವಿಧವಾದ ವಾಸ್ತು ಸೌಂದರ್ಯವನ್ನು ತರುವುದಕ್ಕೂ ಶಿಲ್ಪಿಗಳು ಪಟ್ಟಿರಬಹುದಾದ ಶ್ರಮ, ಬೇಕಾದ ನೈಪುಣ್ಯ, ಇವುಗಳನ್ನು ಭಾವಿಸಿಕೊಂಡು ಈಗಿನ ಕಾಲದಲ್ಲಿ ಪ್ರಸಿದ್ಧರಾದ ವಾಸ್ತುಶಿಲ್ಪವಿಶಾರದರೂ ಅತ್ಯಾಶ್ಚರ್ಯದಿಂದ ಬೆರಗಾಗುತ್ತಿದ್ದಾರೆ. ದೇವಾಲಯವು ವಿಷ್ಣುವರ್ಧನನು ಆಳುತ್ತಿದ್ದಾಗ ಸುಮಾರು ಕ್ರಿ. ಶ. ೧೧೪೦ ರಲ್ಲಿ ಯಾವಾಗಲೋ ಕಟ್ಟುವುದಕ್ಕೆ ಮೊದಲಾಗಿರಬೇಕು. ಅಲ್ಲಿಂದ ಸುಮಾರು ಒಂದು ನೂರು ವರ್ಷಗಳ ತರುವಾಯ ಮುಸಲ್ಮಾನರು ಆ ಊರನ್ನು ಸ್ವಾಧೀನ ಮಾಡಿಕೊಂಡಾಗಲೂ ಅದು ಇನ್ನೂ ಅಸಮಗ್ರವಾಗಿಯೇ ಇತ್ತು. ಈಗಲೂ ಅರೆವಾಸಿಯಾಗಿಯೇ ಉಳಿದಿದೆ. ಪೂರ್ತಿಯಾಗಿ ಕಟ್ಟಿ ಮುಗಿದಿದ್ದರೆ ಇದು ಮುಂದೆ ಯುಗಾಂತರಗಳವರೆಗೆ ಅಖಂಡವಾದ ಒಂದು ವಾಸ್ತು-ರತ್ನವಾಗಿ ಶೋಭಿಸುತ್ತಿತ್ತು. ಈಗಿನ ಸ್ಥಿತಿಯಲ್ಲಿಯೇ ಅದರ ವಿನ್ಯಾಸ ರಚನೆ, ಅಲಂಕಾರ ವೈಖರಿ, ವಿಗ್ರಹ ನಿರ್ಮಾಣ ಚಾತುರ್ಯ, ಇವುಗಳಲ್ಲಿ ಇದನ್ನು ಮೀರಿಸಬಲ್ಲ ಕಟ್ಟಡವು ಮತ್ತೊಂದಿಲ್ಲ. ಈ ಕಟ್ಟಡದ ವಿಸ್ತೀರ್ಣವು ಬೇರೆಯಾಗಿ ನಿಂತಿರುವ ಮಂಟಪಗಳನ್ನೆಲ್ಲ ಸೇರಿಸಿಕೊಂಡರೆ ೨೦೦ ಅಡಿ ಚದರವಿರುತ್ತದೆ. ದೇವಸ್ಥಾನ ಮಾತ್ರವೆ ಉತ್ತರ ದಕ್ಷಿಣ ೧೬೦ ಅಡಿ ಪೂರ್ವಪಶ್ಚಿಮ ೧೨೨ ಅಡಿ ಇರುತ್ತದೆ. ಕಟ್ಟಡವು ಐದು ಅಡಿ ಎತ್ತರವಾದ ಜಗಲಿಯ ಮೇಲೆ ಪೂರ್ವ

ಮುಖವಾಗಿ ನಿಂತಿದೆ. ಈ ಜಗಲಿಯ ಆಕಾರವು ಕಟ್ಟಡದ ವಿನ್ಯಾಸವನ್ನೇ ಅನುಸರಿಸಿರುತ್ತದೆ. ದೇವಾಲಯವು ಜೋಡಿಕಟ್ಟಡ. ಇದನ್ನು ಮಧ್ಯಕ್ಕೆ ಸರಿಯಾಗಿ ಭಾಗಿಸಿದರೆ ಒಂದೊಂದು ಕಡೆಗೂ ಒಂದು ಗರ್ಭಗುಡಿ, ಒಂದು ಸುಕನಾಸಿ, ಒಂದು ನವರಂಗ, ಎರಡೆರಡು ದ್ವಾರಗಳು ಬರುವಂತಿದೆ. ಇವೆರಡು ಭಾಗಗಳನ್ನು ಸೇರಿಸುವಂತೆ ಮಧ್ಯೆ ಉದ್ದಕ್ಕೂ ಒಂದು ಹಜಾರವೂ ಅದರಲ್ಲಿ ಎದುರು ಬದರಾಗಿ ಕತ್ತಲೆಯ ಸಣ್ಣ ಗೃಹಗಳೂ ಇವೆ. ಒಂದೊಂದು ಭಾಗದ ಮುಂದೂ ಒಂದೊಂದು ನಂದಿ ಮಂಟಪವಿದೆ. ಇವುಗಳಲ್ಲಿ ದಕ್ಷಿಣ ಭಾಗದ ಮುಂದಿರುವುದು ಉತ್ತರ ಭಾಗದ ಮುಂದಿರುವುದಕ್ಕಿಂತ ದೊಡ್ಡದಾಗಿದೆ. ಈ ದೊಡ್ಡ ಮಂಟಪದ ಮುಂದೆ ಒಂದು ಸೂರ್ಯನಾರಾಯಣನ ಗುಡಿ ಇದೆ. ಅದರಂತೆಯೇ ಸಣ್ಣ ನಂದಿ ಮಂಟಪದ ಮುಂದೆಯೂ ಒಂದು ಸಣ್ಣ ಗುಡಿ ಇದ್ದು, ಅದರಲ್ಲಿ ಚಂದ್ರನ ವಿಗ್ರಹ ವಿತ್ತೆಂದು ಹೇಳುತ್ತಾರೆ. ದೇವಸ್ಥಾನದ ಒಳಕ್ಕೆ ಹೋಗುವುದಕ್ಕೆ ಪೂರ್ವದ ಕಡೆ ಎರಡು, ದಕ್ಷಿಣಕ್ಕೆ ಒಂದು ಉತ್ತರಕ್ಕೆ ಒಂದು, ಈ ರೀತಿ ನಾಲ್ಕು ದ್ವಾರಗಳಿವೆ. ಇವುಗಳ ಮುಖದಲ್ಲಿ ತಾಂಡವೇಶ್ವರ ಮೂರ್ತಿಯನ್ನು ಕೆತ್ತಿದೆ. ಉತ್ತರದ ಕಡೆ ಬಾಗಿಲಲ್ಲಿಯೂ ಪೂರ್ವದ ಕಡೆ ಬಾಗಿಲಲ್ಲಿಯೂ ಒಂದೊಂದು ದ್ವಾರಪಾಲಕ ವಿಗ್ರಹವೂ ಮಿಕ್ಕ ಎರಡು ಬಾಗಿಲುಗಳಲ್ಲಿಯೂ ಎರಡೆರಡು ವಿಗ್ರಹಗಳೂ ಇವೆ. ದಕ್ಷಿಣ ದಿಕ್ಕಿನ ದ್ವಾರವು ಮಿಕ್ಕ ದ್ವಾರಗಳಿಗಿಂತ ಹೆಚ್ಚು ಸುಂದರವಾಗಿದೆ. ಈ ದ್ವಾರದಿಂದಲೇ ರಾಜನು ದೇವರ ದರ್ಶನಕ್ಕಾಗಿ ಬರುತ್ತಿದ್ದನಂತೆ. ಈ ದಿಕ್ಕಿನಲ್ಲಿಯೇ ಕೊಂಚ ದೂರದಲ್ಲಿ ದೊಡ್ಡ ಗಣಪತಿ ವಿಗ್ರಹವು ಬಯಲಿನಲ್ಲಿ ಕುಳಿತಿದೆ. ಈ ಕಡೆಯೇ ದೇವಾಲಯದ ಮಹಾದ್ವಾರವಿತ್ತೆಂದೂ ಈ ಗಣಪತಿಯು ಆ ದ್ವಾರದ ಒಂದು ಗೃಹದಲ್ಲಿತ್ತೆಂದೂ ತಿಳಿಯಬರುತ್ತದೆ. ದ್ವಾರಗಳ ಎರಡು ಪಕ್ಕಗಳಲ್ಲಿಯೂ ನಂದೀ ಮಂಟಪಗಳ ಮುಂಭಾಗದಲ್ಲಿಯೂ ಮಂಟಪಗಳಿವೆ. ಜಗಲಿಯ ಕೆಳಗೆ ಉತ್ತರ ಬಾಗಿಲ ಕಡೆಗೂ ದಕ್ಷಿಣ ಬಾಗಿಲ ಕಡೆಯೂ ದೊಡ್ಡ ನಂದಿ ಮಂಟಪದ ಎರಡು ಕಡೆಯೂ ಎರಡೆರಡು ಮಂಟಪಗಳಿವೆ. ನಂದಿ ಮಂಟಪದ ಉತ್ತರಕ್ಕಿರುವವುಗಳು ಮಾತ್ರ ಬಿದ್ದುಹೋಗಿವೆ. ಹಿಂದೆಯೇ ತಿಳಿಸಿದಂತೆ ದೇವಸ್ಥಾನದ ಒಂದೊಂದು ಅರ್ಧದಲ್ಲಿಯೂ ಒಂದೊಂದು ಗರ್ಭಗೃಹ, ಸುಕನಾಸಿ, ನವರಂಗಗಳೂ ಇವೆ. ಈ ಎರಡು ನವರಂಗಗಳನ್ನೂ ಸೇರಿಸುವಂತೆ ನೂರು ಅಂಕಣದ ಹಜಾರವಿದೆ. ಇವೆಲ್ಲ ಸೇರಿ ಒಂದು ಅಖಂಡವಾದ ದೊಡ್ಡ

ಸಭಾಮಂಟಪವಾಗುತ್ತದೆ. ಗರ್ಭಗೃಹದ ವಿನ್ಯಾಸವು ಹದಿನಾರು ಮೂಲೆಗಳುಳ್ಳ ನಕ್ಷತ್ರದ ಆಕಾರವಾಗಿದೆ. ಇದರಲ್ಲಿ ಹೊರಮುಖದಲ್ಲಿಯೂ ಒಳಗೂ ಮೂರು ಗೂಡುಗಳಿವೆ. ನವರಂಗಗಳಲ್ಲಿ ಪ್ರತಿಯೊಂದರಲ್ಲಿಯೂ ಒಂದೊಂದು ಕಡೆಗೂ ಮೂರರಂತೆ ಆರು ಗೂಡುಗಳಿವೆ. ಗೋಡೆಗಳ ಹೊರಮುಖದಲ್ಲಿ ಸುತ್ತಲೂ ಒಂದರ ಮೇಲೆ ಒಂದರಂತೆ ಎಂಟು ಸಾಲುಳ್ಳ ಚಿತ್ರಪಟ್ಟಿಕೆ ಇದೆ. ಅವು ಬುಡದಿಂದ ಕ್ರಮವಾಗಿ ಆನೆಗಳು, ಸಿಂಹಗಳು, ಬಳ್ಳಿಯ ಬೇಲು, ಇವುಗಳ ಮಧ್ಯೆ ಅಲ್ಲಲ್ಲಿ ಋಷಿಗಳು, ದೇವತೆಗಳು, ಸಿದ್ಧರು, ಕ್ರೀಡಿಸುತ್ತಿರುವ ಪಕ್ಷಿಗಳು, ರಾವುತರು, ಈ ಸಾಲಿನಲ್ಲಿ ಅಲ್ಲಲ್ಲಿ ಒಂಟೆಗಳು, ಬಳ್ಳಿಯ ಬೇಲು, ಪುರಾಣೇತಿಹಾಸದ ವಿಗ್ರಹಗಳು, ಮಕರಗಳು, ಮಧ್ಯೆ ಮಧ್ಯೆ ಚಿಕ್ಕ ವಿಗ್ರಹಗಳು, ಹಂಸಗಳು, ಇವುಗಳಲ್ಲದೆ ಪೂರ್ವದಿಕ್ಕಿನಲ್ಲಿ ದಕ್ಷಿಣದ ಬಾಗಿಲಿನಿಂದ ಉತ್ತರದ ಬಾಗಿಲಿನವರೆಗೆ, ಬೇಲೂರಿನಲ್ಲಿರುವಂತೆ ಇನ್ನೂ ಕೆಲವು ಸಾಲುಗಳಿವೆ. ಅವು ಯಾವುವೆಂದರೆ: ಒಂದು ಕುಳಿತಿರುವ ವಿಗ್ರಹ, ಅದರ ಮಗ್ಗುಲಲ್ಲಿ ಒಂದು ನಿಂತಿರುವ ವಿಗ್ರಹ ಹೀಗೆ ವಿಗ್ರಹಗಳ ಸಾಲು, ಅವುಗಳ ಮೇಲೆ ಲೋವೆ ಕಲ್ಲು, ಲೋವೆಕಲ್ಲಿನ ಮೇಲೆ ಸಣ್ಣ ಸಣ್ಣ ಗೋಪುರಗಳು, ಮಧ್ಯೆ ಮಧ್ಯೆ ಸಿಂಹಗಳು ಮತ್ತು ಸಣ್ಣ ವಿಗ್ರಹಗಳು, ಕಟಾಂಜನ, ಇದರಲ್ಲಿ ಜೋಡಿ ಕಂಬಗಳೂ, ಎರಡೆರಡು ಜೋಡಿಗಳ ಮಧ್ಯೆ ಶಿಲಾಫಲಕಗಳೂ ಅದರಲ್ಲಿ ಮೂರ್ತಿಗಳೂ ಕೆತ್ತಲ್ಪಟ್ಟಿವೆ. ಈ ಕಟಾಂಜನದ ಮೇಲೆ ಪೂರ್ವದಿಕ್ಕಿನಲ್ಲಿ ಉದ್ದಕ್ಕೂ ಕೊರೆದು ರಂಧ್ರಮಾಡಿರುವ ಜಾಲಂದ್ರಗಳಿವೆ. ಆದರೆ ಬೇಲೂರಿನಲ್ಲಿರುವಂತೆ ಚಿತ್ರಗಳನ್ನು ಕೆತ್ತಿಲ್ಲ. ಎರಡು ದೇವಸ್ಥಾನಗಳಿಗೂ ಮಧ್ಯದಲ್ಲಿ ಹೊರಕ್ಕೆ ಚಾಚಿಕೊಂಡಿರುವ ಒಂದು ಸಣ್ಣ ಗುಡಿ ಇದೆ ಎಂದು ಹೇಳಿದೆಯಷ್ಟೆ. ಈ ಗೋಡೆಯ ಮೇಲೂ ಪಶ್ಚಿಮದ ಕಡೆ ಗೋಡೆಯ ಮೇಲೂ ಹಂಸಗಳ ಸಾಲು, ಅದರ ಮೇಲೆ ಬಳ್ಳಿಯ ಬೇಲು, ಅದರ ಮೇಲೆ ಮೂರು ಅಡಿ ಎತ್ತರವುಳ್ಳ ದೊಡ್ಡ ದೊಡ್ಡ ವಿಗ್ರಹಗಳು ಕೆತ್ತಲ್ಪಟ್ಟಿವೆ. ಇವುಗಳ ಮೇಲೆ ಸಣ್ಣ ಸೂರುಕಲ್ಲು ಅದರ ಮೇಲೆ ಸಣ್ಣ ಸಣ್ಣ ಗೋಪುರಗಳೂ ಇವೆ. ಎಲ್ಲಕ್ಕೂ ಮೇಲೆ ಗೋಡೆಯ ತುದಿಯಲ್ಲಿ ದೇವಸ್ಥಾನದ ಸುತ್ತಲೂ ಲೋವೆಕಲ್ಲು ಬಂದಿದೆ.

ಪೂರ್ವದ ಕಡೆ ಜಾಲಂದ್ರಗಳ ಮಧ್ಯೆ ಇರುವ ಕಂಬಗಳ ಮೇಲೆಲ್ಲಾ ಮದನ ಕೈ ಬೊಂಬೆಗಳು ಇದ್ದುವು. ಈಗ ಅವುಗಳಲ್ಲಿ ಕೆಲವು ಮಾತ್ರ ಉಳಿದಿವೆ.* ಇದರಂತೆ ನವರಂಗದ ಮಧ್ಯದಲ್ಲಿರುವ ಕಂಬಗಳ ಮೇಲೂ ಒಂದೊಂದಕ್ಕೆ ನಾಲ್ಕರಂತೆ ಹದಿನಾರು ಬೊಂಬೆಗಳಿದ್ದುವು. ಇವುಗಳಲ್ಲಿ ಈಗ ಉತ್ತರದೇವಾಲಯದೊಳಗೆ ಆರು, ದಕ್ಷಿಣ ದೇವಾಲಯದೊಳಗೆ ಐದು ಮಾತ್ರ ಉಳಿದಿವೆ. ಗರ್ಭಗೃಹದ ಗೋಡೆಯ ಒಳಮುಖದಲ್ಲಿ ದಕ್ಷಿಣ ಪಶ್ಚಿಮೋತ್ತರಗಳ ಕಡೆಗೆ ಮೂರು ಗೂಡುಗಳಿವೆ. ಇವುಗಳಿಗೆ ಸರಿಯಾಗಿ ಹೊರಗಡೆ ಗೋಡೆಯಿಂದ ಮುಂದಕ್ಕೆ ಚಾಚಿಕೊಂಡು ಮೂರು ಗೂಡುಗಳಿವೆ ಎಂದು ಹಿಂದೆಯೇ ಹೇಳಿದೆಯಷ್ಟೆ. ಹೊರಮುಖದಲ್ಲಿರುವ ಗೂಡುಗಳು ಎರಡಂತಸ್ತಿನವು. ಕೆಳಗಣ ಅಂತಸ್ತುಗಳಲ್ಲಿ ಸಾಮಾನ್ಯವಾಗಿ ಒಂದು ಕಡೆ ಉಮಾಮಹೇಶ್ವರ ವಿಗ್ರಹವೂ ಮತ್ತೊಂದು ಕಡೆ ಲಕ್ಷ್ಮೀನಾರಾಯಣ ವಿಗ್ರಹವೂ ಇರುತ್ತವೆ. ಮೇಲಿನ ಅಂತಸ್ತಿನಲ್ಲಿ ಎರಡು ಕಡೆಯೂ ಭೈರವ ವಿಗ್ರಹವಿದೆ. ಒಂದು ಕಡೆಯಲ್ಲಿ ಮಾತ್ರ ಭೈರವನ ಬದಲು ಸೂರ್ಯನಾರಾಯಣ ವಿಗ್ರಹವಿದೆ. ಪಶ್ಚಿಮ ಗೋಡೆಯಲ್ಲಿ ಎಲ್ಲಾ ಒಟ್ಟು ಸುಮಾರು ೨೪೦ ವಿಗ್ರಹಗಳಿವೆ. ಇವುಗಳಲ್ಲಿ ೧೬೬ ಸ್ತ್ರೀ ವಿಗ್ರಹಗಳು, ೧೧೪ ಪುರುಷ ವಿಗ್ರಹಗಳು. ಸುಬ್ರಹ್ಮಣ್ಯನು ಮೂರು ಕಡೆಯೂ ಗಣೇಶ, ನರಸಿಂಹ, ಬ್ರಹ್ಮರು ನಾಲ್ಕು ಕಡೆಯೂ ಉಮಾಮಹೇಶ್ವರನು ಎಂಟು ಕಡೆಯೂ ಸರಸ್ವತಿಯು ಒಂಬತ್ತು ಕಡೆಯೂ, ವೇಣುಗೋಪಾಲನು ಹನ್ನೆರಡು ಕಡೆಯೂ, ದುರ್ಗಾವತಾರವು ಹದಿನೆಂಟು ಕಡೆಯೂ, ಶಿವನ ಅವತಾರಗಳು ಇಪ್ಪತ್ತೈದು ಕಡೆಯೂ ಬಂದಿವೆ. ಇವುಗಳಲ್ಲದೆ ಹರಿಹರ, ವಾಮನ, ತ್ರಿವಿಕ್ರಮ, ಇಂದ್ರ, ರಾವಣ, ಗರುಡ ಆಂಜನೇಯ ಮುಂತಾದ ವಿಗ್ರಹಗಳೂ ಇವೆ. ಇವುಗಳಲ್ಲಿ

---

* ಇಂತಹ ಮದನ ಕೈ ವಿಗ್ರಹಗಳು ವಿಚಿತ್ರ ವಾಸ್ತು-ಸಂಗ್ರಹಕ್ಕಾಗಿ ಬರುವ ಪರದೇಶಿಯರ ಪಾಲಾಗಿವೆ. ಹೈದರಾಲಿಯೊಡನೆ ಒಪ್ಪಂದಮಾಡಿಕೊಂಡು ಹೋದಾಗ ಕೌಂಟ್ ಡಿ ಲಾಲಿಯು (ಫ್ರೆಂಚ್ ಸೇನಾಧಿಪತಿ) ಇವುಗಳಲ್ಲಿ ಅನೇಕ ವಿಗ್ರಹಗಳನ್ನು ಸಂಗ್ರಹಿಸಿಕೊಂಡು ಹೋದನಂತೆ. ಅವುಗಳನ್ನು ಫ್ರಾನ್ಸ್ ದೇಶಕ್ಕೆ ಸಾಗಿಸಿದ ಮೇಲೆ ಅದಕ್ಕೆ ಪ್ರತಿಫಲರೂಪವಾಗಿ ದೇವಸ್ಥಾನದ ಸಂರಕ್ಷಣೆಗೆಂದು ಸ್ವಲ್ಪ ಹಣವನ್ನು ಕಳುಹಿಸಿಕೊಟ್ಟನಂತೆ. ಹೀಗೆ ವಿಗ್ರಹಗಳನ್ನು ಸಾಗಿಸಿದವನು ಲಾಲಿಯಲ್ಲವೆಂದೂ, ಬುಸ್ಸಿಯೋ ಅಥವಾ ಹೈದರನಲ್ಲಿ ಕೆಲಸಕ್ಕೆ ಸೇರಿದ್ದ ಅಲ್ಲಾರ್ಡ ಹೋಗೆಲ್‌ನೋ ಇವರಿಬ್ಬರಲ್ಲಿ ಒಬ್ಬರಿರಬೇಕೆಂದು ರೈಸ್ ಹೇಳುತ್ತಾರೆ.

ಒಂದು ವಿಗ್ರಹವು ಉದ್ದವಾದ ಕವಚವನ್ನೂ ಪಾಗನ್ನೂ ಧರಿಸಿಕೊಂಡು ಬಲಗೈಯಲ್ಲಿ ತ್ರಿಶೂಲವನ್ನೂ ಎಡಗೈಯಲ್ಲಿ ಚಿತ್ರವನ್ನೂ ಹಿಡಿದುಕೊಂಡು ನಿಂತಿದೆ. ಯಜ್ಞೋಪವಿತದ ಹಾಗೆ ಮೈಮೇಲೆ ಒಂದು ಪಟ್ಟಿ ಇದೆ. ಒಂದು ಬೆತ್ತಲೆಯಾದ ಹೆಣ್ಣು ವಿಗ್ರಹ ಪಕ್ಕದಲ್ಲಿದೆ. ಇದು ಲಕುಲೀಶ ವಿಗ್ರಹವಿರಬಹುದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಶಿವನು ಮೋಹಿನಿಯನ್ನು ಮೋಹಿಸಿದ ಪೌರಾಣಿಕ ಕಥೆಯನ್ನು ಸೂಚಿಸುತ್ತದೆ ಎಂದು ಹೇಳುತ್ತಾರೆ. ಪೂರ್ವ ದಿಕ್ಕಿನ ಗೋಡೆಯಿಂದ ಮುಂದಕ್ಕೆ ಚಾಚಿಕೊಂಡಿರುವ ಭಾಗದಲ್ಲಿ ಗೋಡೆಯ ಮೇಲೆ ಮೂವತ್ತೊಂದು ವಿಗ್ರಹಗಳಿವೆ. ಇವುಗಳಲ್ಲಿ ಹತ್ತೊಂಬತ್ತು ಸ್ತ್ರೀ ವಿಗ್ರಹಗಳು, ಮಿಕ್ಕವು ಪುರುಷ ಮೂರ್ತಿಗಳು. ವಿಷ್ಣುವಿನದು, ಬ್ರಹ್ಮ, ಸರಸ್ವತಿಯರು ಎರಡೆರಡು, ಶಿವನ ಮೂರ್ತಿ ಮೂರು, ಮಿಕ್ಕವು ಚೌರಿ ಹಿಡಿದುಕೊಂಡಿರುವುವು ಅಥವಾ ಬೇರೆ ವಿಧದಲ್ಲಿ ಸೇವಿಸುತ್ತಿರುವುವು. ಸೂರ್ಯ ದೇವಾಲಯದ ಗೋಡೆಯ ಹೊರಮುಖದಲ್ಲಿ ಇಪ್ಪತ್ತುಮೂರು ವಿಗ್ರಹಗಳಿವೆ. ಇವುಗಳಲ್ಲಿ ವರಾಹ, ನರಸಿಂಹ, ವೇಣುಗೋಪಾಲ, ತಾಂಡವೇಶ್ವರ, ಗರುಡ, ಸರಸ್ವತಿ, ಮಹಿಷಾಸುರ ಮರ್ದಿನಿ ಇವು ಮುಖ್ಯವಾದವು. ಇನ್ಯಾವ ಕರ್ನಾಟಕ ದೇವಾಯದಲ್ಲಿಯೂ ಇಂಥ ನಿರ್ದುಷ್ಟವಾದ ಅಂಗಾಂಗ ಸನ್ನಿವೇಶ ಮತ್ತು ಸಾಮಂಜಸ್ಯ ಇರುವ ಇಷ್ಟು ವಿಗ್ರಹಗಳನ್ನು ಹೀಗೆ ರಚಿಸಿ ನಿಲ್ಲಿಸಿಲ್ಲ. ಹಿಂದೂ ಪೌರಾಣಿಕ ಪ್ರಪಂಚವೇ ಇಲ್ಲಿ ಮೂರ್ತಿವೆತ್ತು ಬಂದು ನಿಂತುಕೊಂಡಿದೆ. ಈ ವಿಗ್ರಹಗಳ ಸಂಬಂಧವಾಗಿ ಗಮನಾರ್ಹವಾದ ಅಂಶಗಳು ಕೆಲವು ಇವೆ. ನರ್ತಕಿ ವಿಗ್ರಹಗಳು ಷರಾಯಿಗಳನ್ನು ಹಾಕಿಕೊಂಡಿವೆ. ಚಿತ್ರಪಟ್ಟಿಕೆಯಲ್ಲಿ ರಾವುತರ ಮತ್ತು ಪುರಾಣೇತಿಹಾಸದ ಸಾಲಿನಲ್ಲಿರುವ ಅನೇಕ ಕುದುರೆಗಳಿಗೆ ಅಲಂಕಾರಮಾಡಿದ ಜೀನುತಡಿಗಳನ್ನು ಹಾಕಿದೆ. ಸವಾರರು ಬೂಟ್ಸುಗಳನ್ನು ಹಾಕಿಕೊಂಡಿರುವಂತೆ ತೋರುತ್ತದೆ. ಕೆಲವು ನಿಲುವಂಗಿಯನ್ನೂ ಕಮ್ಮರುಬಂದನ್ನೂ ಧರಿಸಿವೆ. ರಥಗಳಿಗೆ ಸ್ಪ್ರಿಂಗ್ ಹಾಕಿರುವ ಚಕ್ರಗಳಿವೆ. ಒಂದು ವಿಗ್ರಹವು ಗುಂಡಿಗಳು ಹಾಕಿದ ನಿಲುವಂಗಿಯನ್ನು ತೊಟ್ಟುಕೊಂಡು ಕುಳಿತಿದೆ. ರಣರಂಗದಲ್ಲಿರುವ ಒಬ್ಬ ಯೋಧನು ಕೋಲಿನಂತೆ ಉದ್ದವಾಗಿರುವ ಒಂದು ವಸ್ತುವನ್ನು ಕೈಯಲ್ಲಿ ಹಿಡಿದು ಅದರೊಳಗಿಂದ ನೋಡುತ್ತಿರುವಂತಿದೆ. ಇದು ದೂರವೀಕ್ಷಣಯಂತ್ರ (Telescope) ಇರಬಹುದೇ ಎಂಬ ಸಂಶಯ ಬರು

ತ್ತದೆ. ಮತ್ತೊಂದು ವಿಗ್ರಹವು ನಿಲುವಂಗಿಯನ್ನೂ ಪಾಗನ್ನೂ ತೊಟ್ಟು ಕೊಂಕುಳಲ್ಲಿ ದೊಣ್ಣೆಯನ್ನು ಇಟ್ಟುಕೊಂಡು ನಿಂತಿದೆ. ಇದು ಕಾಪಾಲಿಕ ವಿಗ್ರಹವಿರಬೇಕೆಂದು ಊಹಿಸಲಾಗಿದೆ.

ಈ ದೇವಸ್ಥಾನದ ಭುವನೇಶ್ವರಿಗಳೆಲ್ಲವೂ ತಟ್ಟೆಯಾಗಿವೆ. ಉತ್ತರ ದೇವಸ್ಥಾನದ ನವರಂಗ ಮಧ್ಯದಲ್ಲಿ ಇರುವ ಭುವನೇಶ್ವರಿಯಲ್ಲಿ ತಾಂಡವೇಶ್ವರನೂ ಅಕ್ಕಪಕ್ಕಗಳಲ್ಲಿ ಬ್ರಹ್ಮ ವಿಷ್ಣುಗಳೂ ಇವೆ. ಅದರ ಸುತ್ತಲೂ ಇರುವ ಫಲಕಗಳಲ್ಲಿ ಪಾರ್ವತಿ, ಸುಬ್ರಹ್ಮಣ್ಯ, ಗಣಪತಿ, ನರ್ತಕಿಯರು ಗಾಯಕರು ಮುಂತಾದವುಗಳು ಇವೆ. ದಕ್ಷಿಣ ದೇವಾಲಯದ ಭುವನೇಶ್ವರಿಗಳು ಉತ್ತರ ದೇವಾಲಯದವುಗಳಂತೆಯೇ ಇವೆ. ನಂದಿಮಂಟಪಗಳಲ್ಲಿರುವ ನಂದಿಗಳು ಗಾತ್ರದಲ್ಲಿ ದೊಡ್ಡದಾಗಿವೆ. ಒಂದು ಹದಿಮೂರು ಅಡಿ ಉದ್ದವೂ ಆರುವರೆ ಅಡಿ ಅಗಲವೂ ಎಂಟೂವರೆ ಅಡಿ ಎತ್ತರವೂ ಇದೆ. ಇನ್ನೊಂದು ಹತ್ತು ಅಡಿ ಉದ್ದವೂ ಐದು ಅಡಿ ಅಗಲವೂ ಏಳೂವರೆ ಅಡಿ ಎತ್ತರವೂ ಇದೆ. ಈ ದೇವಾಲಯವನ್ನು ಒಟ್ಟಿನ ಮೇಲೆ ನೋಡಿದರೆ, ನಾನಾ ಕಾರಣಗಳಿಂದ ಇದು ಅದ್ಭುತವಾಗಿ ಕಾಣುತ್ತದೆ. ಇದು ಶುದ್ಧ ಹಿಂದೂ ವಾಸ್ತುಶಿಲ್ಪ ಸಂಪ್ರದಾಯವನ್ನನುಸರಿಸಿ ಕಟ್ಟಿದ ಅತ್ಯುತ್ತಮವಾದ ದೇವಾಲಯ. "ಭಾರತೀಯ ವಾಸ್ತುಶಿಲ್ಪದ ಪಕ್ಷಪಾತಿಗಳು ಅದರ ಮಹತ್ವವನ್ನು ನಿರ್ದೇಶಿಸಬೇಕಾದರೆ ಈ ಕಟ್ಟಡವನ್ನು ಮಾದರಿಯಾಗಿ ತೆಗೆದುಕೊಳ್ಳುವುದು ಉಚಿತವಾಗಿದೆ. ಕೇದಾರೇಶ್ವರ ದೇವಾಲಯದಲ್ಲಿ ಕಂಡು ಬರುವ ಸಣ್ಣ ನಕಾಶೆ ಕೆಲಸವನ್ನು ಇದರಲ್ಲಿ ತುಂಬಿ ಕಟ್ಟಿಬಿಟ್ಟಿದ್ದಾರೆ. ಈ ಕಟ್ಟಡಕ್ಕೆ ಸರಿಸಮನಾದ ಕಟ್ಟಡವು ಜಗತ್ತಿನಲ್ಲಿಯೇ ಮತ್ತೊಂದು ಇರುತ್ತಿರಲಿಲ್ಲ" ವೆಂದು ಫರ್ಗ್ಯುಸನ್ ಅಭಿಪ್ರಾಯ ಪಟ್ಟಿರುವುದು ನ್ಯಾಯವೆಂದೇ ತೋರುತ್ತದೆ.

ತಿರುಮಕೂಡಲು ತಾಲ್ಲೂಕು ಸೋಮನಾಥಪುರದಲ್ಲಿರುವ ಕೇಶವ ದೇವಾಲಯವು ಮೂರು ಗರ್ಭಗೃಹಗಳುಳ್ಳ ದೇವಾಲಯಕ್ಕೆ ಒಳ್ಳೆಯ ಮಾದರಿ. ಸಮಗ್ರವಾದ ಮತ್ತು ನಿರ್ದುಷ್ಟವಾದ ಕರ್ನಾಟಕ ಶೈಲಿಯ ದೇವಾಲಯವು ಹೇಗಿರುತ್ತದೆ ಎಂದು ತೋರಿಸಿಕೊಡುವುದಕ್ಕೆ ಇದು ಒಳ್ಳೆಯ ಉದಾಹರಣೆ. ಹೊಯಿಸಳ ರಾಜನಾದ ಮೂರನೆಯ ನರಸಿಂಹನ ಮಂತ್ರಿ ಸೋಮ

ದಂಡನೆಂಬುವನು ಕ್ರಿ. ಶ. ೧೨೬೮ ರಲ್ಲಿ ಈ ದೇವಸ್ಥಾನವನ್ನೂ, ಒಂದು ಅಗ್ರಹಾರವನ್ನೂ ಕಟ್ಟಿಸಿ ದತ್ತಿಯನ್ನು ಬಿಟ್ಟನು. ಈ ದೇವಾಲಯವು ಸುಲಕ್ಷಣವಾದ ಕಟ್ಟಡ. ಬೇಲೂರಿನ ದೇವಾಲಯಕ್ಕಿಂತಲೂ ಚಿಕ್ಕದಾಗಿದ್ದರೂ ಇದರಲ್ಲಿ ಸಣ್ಣ ಕೆತ್ತನೆಯ ಕೆಲಸಗಳೂ ಅಲಂಕಾರಗಳೂ ಹೆಚ್ಚು. ಒಳ್ಳೆಯ ಆಯಕಟ್ಟಾಗಿಯೂ ಹೊಂದಿಕೆಯಾಗಿಯೂ ಕಟ್ಟಲ್ಪಟ್ಟಿರುವುದರಿಂದ ಪ್ರೇಕ್ಷಕರಿಗೆ ಹೆಚ್ಚು ಹೃದಯಂಗಮವಾಗಿರುತ್ತದೆ. ಆದ್ದರಿಂದ ಒಟ್ಟು ಸೌಂದರ್ಯವನ್ನೂ ಆಯಕಟ್ಟನ್ನು ಸಾಮಂಜಸ್ಯವನ್ನೂ ತೆಗೆದುಕೊಂಡರೆ ಬೇಲೂರಿನ ದೇವಸ್ಥಾನಕ್ಕಿಂತಲೂ ಸೋಮನಾಥಪುರದ ದೇವಸ್ಥಾನವು ಉತ್ತಮವೆಂದು ಹೇಳಬಹುದು. ದೇವಾಲಯವು ೨೧೫ ಅಡಿ ಉದ್ದವೂ ೧೧೭ ಅಡಿ ಅಗಲವೂ ಆದ ಒಂದು ಅಂಗಳದ ಮಧ್ಯಭಾಗದಲ್ಲಿ ಕಟ್ಟಲ್ಪಟ್ಟಿದೆ. ಈ ಅಂಗಳದ ಒಳಭಾಗದಲ್ಲಿ ಸುತ್ತಲೂ ಪ್ರಾಕಾರದ ಗೋಡೆಗೆ ಸೇರಿದ ಹಾಗೆ ಎರಡೆರಡು ಅಂಕಣಗಳುಳ್ಳ ಒಟ್ಟು ೬೪ ಕೈಸಾಲೆ ಮಂಟಪಗಳು ಇವೆ. ಪೂರ್ವದಿಕ್ಕಿಗೆ ಮಹಾದ್ವಾರವಿದೆ. ತಲವಿನ್ಯಾಸವನ್ನೇ ಅನುಸರಿಸಿಕೊಂಡು ಕಟ್ಟಿರುವ ಸುಮಾರು ಮೂರು ಅಡಿ ಎತ್ತರದ ಜಗಲಿಯ ಮೇಲೆ ದೇವಾಲಯವು ಆರಂಭವಾಗುತ್ತದೆ. ಈ ಜಗಲಿಯ ಪ್ರತಿಯೊಂದು ಮೂಲೆಯಲ್ಲಿಯೂ, ಕಟ್ಟಡವನ್ನೇ ಹೊತ್ತುಕೊಂಡು ಇರುವಂತೆ ಆನೆಗಳು ನಿಲ್ಲಿಸಲ್ಪಟ್ಟಿವೆ. ಈ ಆನೆಗಳ ಮಧ್ಯದಲ್ಲಿ ಅಲ್ಲಲ್ಲೆ ಜಗಲಿಯನ್ನು ಒರಗಿಕೊಂಡಿರುವಂತೆ ವಿಗ್ರಹಗಳು ಕೆತ್ತಿ ನಿಲ್ಲಿಸಲ್ಪಟ್ಟಿದ್ದುವೆಂದು ತೋರುತ್ತದೆ. ಈ ಜಗಲಿಯ ಪೂರ್ವಭಾಗದಲ್ಲಿ ಮೇಲೆ ಹತ್ತುವುದಕ್ಕೆ ಮೆಟ್ಟಲುಗಳೂ ಅದರ ಅಕ್ಕಪಕ್ಕಗಳಲ್ಲಿ ಒಂದೊಂದು ಗೂಡೂ ಇವೆ. ಅಂಗಳದಲ್ಲಿರುವ ಕೈಸಾಲೆ ಮಂಟಪಗಳೆಲ್ಲವೂ ಈಗ ಬರಿಯದಾಗಿವೆ. ಆದರೆ ಮಹಾದ್ವಾರದೊಳಕ್ಕೆ ಹೋಗುತ್ತಾ ಎಡಕ್ಕೆ ಸ್ಥಾಪಿಸಿ ನಿಲ್ಲಿಸಿರುವ ಸುಂದರವಾದ ಶಾಸನವನ್ನು ನೋಡಿದರೆ ಈ ಮಂಟಪಗಳಲ್ಲಿ ದಶಾವತಾರದ ವಿಗ್ರಹಗಳೂ, ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳೂ, ಬ್ರಹ್ಮ, ಸರಸ್ವತಿ ಮುಂತಾದ ಮಿಕ್ಕ ದೇವತೆಗಳ ಮೂರ್ತಿಗಳು ಇವೆಲ್ಲಾ ಮಂಟಪಗಳಲ್ಲಿ ಇದ್ದುವೆಂದು ತಿಳಿದುಬರುತ್ತದೆ.

ದೇವಾಲಯವು ಪೂರ್ವಾಭಿಮುಖವಾಗಿದೆ. ಇದರಲ್ಲಿ ಒಂದು ಮುಖಮಂಟಪ, ನವರಂಗ, ಮೂರು ಗರ್ಭ ಗೃಹಗಳು. ಈ ಒಂದೊಂದು ಗರ್ಭಗೃಹದ

ಮುಂದೆ ಒಂದು ಸುಕನಾಸಿಯೂ ಇವೆ. ಗರ್ಭಗುಡಿಗಳ ವಿನ್ಯಾಸವು ಹೊರ ಪಾರ್ಶ್ವದಲ್ಲಿ ನಕ್ಷತ್ರಾಕಾರವಾಗಿಯೂ ಒಳಭಾಗದಲ್ಲಿ ಚತುರಸ್ರಾಕಾರವಾಗಿಯೂ ಇದೆ. ಮುಖಮಂಟಪವು ನವರಂಗಕ್ಕೆ ಸೇರಿದ ಹಾಗೆಯೇ ಇವೆ. ಇದಕ್ಕೂ ನವರಂಗಕ್ಕೂ ಮಧ್ಯೆ ಇರಬೇಕಾದ ಗೋಡೆ ಇಲ್ಲ. ಮುಖಮಂಟಪದ ಸುತ್ತಲೂ ಬೇಲೂರಿನಲ್ಲಿರುವಂತೆಯೇ ಜಾಲಂಧ್ರಗಳಿವೆ. ಆದರೆ ಇವು ಬೇಲೂರಿನಲ್ಲಿರುವವು ಗಳಷ್ಟು ಸುಂದರವಾಗಿಲ್ಲ. ದೇವಸ್ಥಾನದ ಸುತ್ತಲೂ ಸುಮಾರು ಮೂರೂವರೆ ಅಡಿಯಷ್ಟು ಎತ್ತರವಾಗಿ ಚಿತ್ರಪಟ್ಟಿಕೆ ಇದೆ. ಇದರಲ್ಲಿ ಬುಡದಿಂದ ಆನೆಗಳು, ರಾವುತರು, ಬಳ್ಳಿ, ಪುರಾಣೇತಿಹಾಸಗಳ ಕಥೆ, ಮಕರ, ಹಂಸಗಳು, ಇವು ಕೆತ್ತಲ್ಪಟ್ಟಿವೆ. ನವರಂಗದ ಗೋಡೆಗಳಲ್ಲಿ ಮಾತ್ರ ಹಂಸಗಳಿಗೆ ಬದಲಾಗಿ ಸಣ್ಣ ಕಂಬಗಳೂ ಅವುಗಳ ಮಧ್ಯೆ ದೇವತಾ ವಿಗ್ರಹಗಳೂ ಅವುಗಳ ಮೇಲೆ ಗೋಪುರಗಳೂ ಮಧ್ಯೆ ಮಧ್ಯೆ ಸಿಂಹಗಳೂ ಕೆತ್ತಿವೆ. ನವರಂಗದ ಗೋಡೆಯ ಸುತ್ತಲೂ ಈ ಚಿತ್ರಪಟ್ಟಿಕೆಗೂ ಜಾಲಂಧ್ರಕ್ಕೂ ಮಧ್ಯೆ ಕಲ್ಲಿನ ಒಂದು ಕಟಾಂಜನ ವಿದೆ. ಇದರಲ್ಲಿ ಜೋಡು ಕಂಬಗಳೂ ಅವುಗಳ ಕೆಳಗೆ ಬಳ್ಳಿಯೂ ಮೇಲೆ ಹೂದೋರಣವೂ ಮಧ್ಯೆ ಸಣ್ಣ ವಿಗ್ರಹಗಳೂ ಕೆತ್ತಲ್ಪಟ್ಟಿವೆ. ಚಿತ್ರಪಟ್ಟಿಕೆಯ ನಾಲ್ಕನೆಯ ಸಾಲಿನಲ್ಲಿ ಪುರಾಣೇತಿಹಾಸಗಳ ಕಥೆಯು ಇದೆ ಎಂದು ಹೇಳಿದೆ ಯಷ್ಟೆ. ಇದರಲ್ಲಿ ಉತ್ತರದ ಗರ್ಭಗುಡಿಯ ಸುತ್ತಲೂ ಮಹಾಭಾರತ ಕಥೆ ಗಳೂ ದಕ್ಷಿಣ ಗರ್ಭಗುಡಿ ಸುತ್ತಲೂ ರಾಮಾಯಣ ಕಥೆಯೂ, ಪಶ್ಚಿಮ ಗರ್ಭಗುಡಿಯ ಸುತ್ತಲೂ ಭಾಗವತ ಕಥೆಯೂ ಕೆತ್ತಲ್ಪಟ್ಟಿವೆ ಎಂದು ಗೊತ್ತಾಗುತ್ತದೆ. ಇದರಂತೆ ಕಟಾಂಜನದಲ್ಲಿ ಪ್ರಲ್ಹಾದನ ಚರಿತ್ರೆಯನ್ನು ಕೆತ್ತಿದೆ.

ಚಿತ್ರಪಟ್ಟಿಕೆಯ ಮೇಲೆ ಗರ್ಭಗುಡಿಯ ಸುತ್ತಲೂ ಹೊರಪಾರ್ಶ್ವದಲ್ಲಿ ಬಹು ಸೊಗಸಾದ ೧೯೪ ದೊಡ್ಡ ದೊಡ್ಡ ವಿಗ್ರಹಗಳಿವೆ. ಇವುಗಳಲ್ಲಿ ೧೧೪ ಹೆಣ್ಣು ವಿಗ್ರಹಗಳು. ೮೦ ಗಂಡು ವಿಗ್ರಹಗಳು. ಈ ಮೂರ್ತಿಗಳಲ್ಲಿ ನಾರ ಸಿಂಹ, ವರಾಹ, ಹಯಗ್ರೀವ, ವೇಣುಗೋಪಾಲ, ಪರವಾಸುದೇವ, ಬ್ರಹ್ಮ, ವಿಷ್ಣು, ಸರಸ್ವತಿ, ಶಿವ, ಗಣಪತಿ, ಇಂದ್ರ; ಮನ್ಮಥ, ಸೂರ್ಯ, ಗರುಡ, ಲಕ್ಷ್ಮಿ, ಮಹಿಷಾಸುರ ಮರ್ದಿನಿ ಇವೇ ಮುಖ್ಯವಾದುವುಗಳು. ಒಂದೆಡೆಯಲ್ಲಿ

ಗರುಡನು ಶ್ರೀಮನ್ನಾರಾಯಣನನ್ನು ಹೊತ್ತುಕೊಂಡಿರುವನು, ಇನ್ನೊಂದೆಡೆ ಯಲ್ಲಿ ಇಂದ್ರನು ತನ್ನ ರಾಣಿಯಾದ ಶಚೀದೇವಿಯೊಡನೆ ಐರಾವತದ ಮೇಲೆ ಕುಳಿತಿರುವನು. ಒಂದು ವಿಗ್ರಹವು ಹಿಂದಿನ ಎರಡು ಕೈಗಳಲ್ಲಿ ಶಂಖ ಚಕ್ರ ಗಳನ್ನು ಧರಿಸಿಕೊಂಡು ಉಳಿದ ಎರಡು ಕೈಗಳನ್ನು ಒಂದರ ಮೇಲೊಂದನ್ನು ಇಟ್ಟುಕೊಂಡು ಯೋಗಾಸನದಲ್ಲಿ ಕುಳಿತಿದೆ. ಇದು ಯೋಗನಾರಾಯಣ ವಿಗ್ರಹವೆಂದು ಹೇಳುತ್ತಾರೆ. ಮತ್ತೊಂದು ವಿಗ್ರಹಕ್ಕೆ ಆಂಜನೇಯನ ಮುಖ ದಂತಿರುವ ಮುಖವಿದೆ. ಅದರ ಎರಡು ಕೈಗಳಲ್ಲಿ ಶಂಖ ಚಕ್ರಗಳಿವೆ. ಉಳಿದ ಎರಡು ಕೈಗಳಿಂದ ಒಂದು ಲಿಂಗವನ್ನು ಹಿಡಿದುಕೊಂಡು ನಿಂತಿದೆ.

ಈ ದೊಡ್ಡ ವಿಗ್ರಹಗಳಾದ ಮೇಲೆ ಗೋಡೆಯ ಮೇಲೆ ಸಣ್ಣ ಗೋಪುರ ಗಳು ಕೆತ್ತಲ್ಪಟ್ಟಿವೆ. ಎಲ್ಲಕ್ಕೂ ಮೇಲೆ ಗೋಡೆಯ ತುದಿಯಲ್ಲಿ ದೇವಸ್ಥಾನದ ಸುತ್ತಲೂ ಲೋವೆಕಲ್ಲು ಬಂದಿದೆ. ಈ ಲೋವೆಕಲ್ಲಿಗಿಂತಲೂ ಮೇಲೆ ಮುಖ ಮಂಟಪದ ಮೇಲ್ಭಾಗದಲ್ಲಿ ಸಣ್ಣ ಸಣ್ಣ ವಿಗ್ರಹಗಳೂ ಸಿಂಹಲಾಲಟಗಳೂ ಇವೆ. ಮೂರು ಗರ್ಭಗುಡಿಗಳ ಮೇಲ್ಭಾಗದಲ್ಲಿ ಮೂರು ಗೋಪುರಗಳು ಇವೆ. ಇವು ಅಷ್ಟೇನೂ ಎತ್ತರವಾಗಿಲ್ಲ. ಆಕಾರದಲ್ಲಿ ಗರ್ಭಗುಡಿಯ ಗೋಡೆಯ ಶೈಲಿ ಯನ್ನೇ ಅನುಸರಿಸಿ ನಕ್ಷತ್ರಾಕಾರವಾಗಿ ಮೇಲಕ್ಕೆ ಸಣ್ಣದಾಗುತ್ತಾ ಹೋಗಿವೆ. ಇವು ಸುಕನಾಸಿಯ ಮೇಲ್ಭಾಗದಲ್ಲಿ ಸ್ವಲ್ಪ ಮುಂದಕ್ಕೆ ಚಾಚಿಕೊಂಡಿವೆ. ಈ ಚಾಚಿಕೊಂಡಿರುವ ಪ್ರದೇಶದಲ್ಲಿಯೇ ಸಾಧಾರಣವಾಗಿ ಸಳನ ವಿಗ್ರಹವಿರುವ ಪದ್ಧತಿ. ಈ ದೇವಸ್ಥಾನದಲ್ಲಿ ಮಾತ್ರ ಆ ವಿಗ್ರಹಗಳು ಕಂಡುಬರುವುದಿಲ್ಲ. ಈ ಚಾಚಿಕೊಂಡಿರುವ ಭಾಗದ ಮುಂದುಗಡೆ ಮುಖದಲ್ಲಿ ಒಳಗಿರತಕ್ಕ ದೇವರ ಒಂದು ಸುಂದರವಾದ ವಿಗ್ರಹವು ಕೆತ್ತಲ್ಪಟ್ಟಿರುತ್ತದೆ. ಈ ದೇವಸ್ಥಾನದ ಎತ್ತರ ಜಗಲಿಯಿಂದ ಮೇಲಕ್ಕೆ ಮೂವತ್ತೆರಡು ಅಡಿ ಮಾತ್ರ. ಆದರೂ ಮೂರು ಗೋಪುರಗಳಿಂದೊಡಗೂಡಿದ ಈ ದೇವಾಲಯುವೂ ಅದರ ಮುಖ ವಿನ್ಯಾಸವೂ ಬಹು ರಮ್ಯವಾಗಿದೆ. ಆದ್ದರಿಂದ ಚಿನ್ನ ಬೆಳ್ಳಿಯ ಕೈ ಪೆಟ್ಟಿಗೆಗಳನ್ನು (casket) ಮಾಡಿದರೆ ಅನೇಕರು ಇದರ ನಕ್ಷೆಯನ್ನು ಆ ಪೆಟ್ಟಿಗೆಗಳ ಮೇಲೆ ಕೆತ್ತುತ್ತಾರೆ.

ಈ ದೇವಸ್ಥಾನದ ತಲವಿನ್ಯಾಸವು ಏಳು ಅಂಕಣದ ಮುಖ ಮಂಟಪ. ಒಂಬತ್ತು ಅಂಕಣದ ನವರಂಗ. ಒಂದೊಂದು ಅಂಕಣದ ಮೂರು ಸುಕನಾಸಿ

ಗಳು, ಮೂರು ಗರ್ಭಗುಡಿಗಳು ಇಷ್ಟನ್ನು ಒಳಗೊಂಡಿದೆ. ಮುಖಮಂಟಪದ ಗೋಡೆಯ ಸುತ್ತಲೂ ಒಳಭಾಗವಲ್ಲಿ ಎತ್ತರವಾದ ಜಗಲಿ ಇದೆ. ನವರಂಗದ ಮಧ್ಯದ ಅಂಕಣವು ಸುತ್ತಲೂ ಇರುವ ಅಂಕಣಗಳಿಗಿಂತ ಎರಡು ಅಂಗಲ ಎತ್ತರ ವಾಗಿದೆ. ಇಲ್ಲಿರತಕ್ಕ ಕಂಬಗಳು ಬಹು ಸುಂದರ. ಇವು ಪೀಠದಿಂದ ಮೇಲಕ್ಕೆ ಸ್ವಲ್ಪದೂರ ಚತುರಸ್ರವಾಗಿದ್ದು ಅನಂತರ ವರ್ತುಲಾಕಾರವಾಗಿಯೋ, ನಕ್ಷತ್ರಾ ಕಾರವಾಗಿಯೋ ಇರುತ್ತವೆ. ಇವೆಲ್ಲವೂ ನಿನ್ನೆ ಮೊನ್ನೆ ಕೆತ್ತಿದವುಗಳಂತೆ ಅಚ್ಚಳಿಯದೆಯೂ ಕನ್ನಡಿಯಂತೆ ಹೊಳೆಯುತ್ತಲೂ ಇರುತ್ತವೆ. ನವರಂಗ ಮತ್ತು ಮುಖಮಂಟಪಗಳಲ್ಲಿ ಒಟ್ಟು ೧೬ ಭುವನೇಶ್ವರಿಗಳು ಇರುತ್ತವೆ. ಇವು ಅರ್ಧಗೋಳಾಕಾರವಾಗಿಯೂ ಎರಡು ಅಥವಾ ಮೂರು ಅಡಿ ಆಳವಾಗಿ ಕೊರೆದು ಮಾಡಿದ ಚಿತ್ರಕೆಲಸಗಳುಳ್ಳವಾಗಿಯೂ ಇವೆ. ಇವುಗಳ ಮಾದರಿ ಯನ್ನೂ ಕೆಲಸವನ್ನೂ ನೋಡಿದರೆ ಒಂದರಂತೆ ಮತ್ತೊಂದಿಲ್ಲ. ಒಂದೊಂದೂ ಒಂದೊಂದು ವಿಧ. ಅದರಲ್ಲಿಯೂ ಕೆಲವು ಮಾದರಿಗಳಂತೂ ಬಲು ತೊಡರು ತೊಡರಾಗಿವೆ. ಶಿಲ್ಪಿಯು ಎಷ್ಟು ಸಾವಧಾನದಿಂದಲೂ ಶಾಂತಿಯಿಂದಲೂ ಇವುಗಳನ್ನು ಕೊರೆದಿರಬೇಕೆನ್ನುವದನ್ನು ಊಹಿಸಲೂ ಸಾಧ್ಯವಿಲ್ಲ. ಎಂಥ ಸೂಕ್ಷ್ಮವಾದ ಆಯುಧಗಳನ್ನು ಹೊಂದಿದ್ದನೋ ಹೇಳುವುದಕ್ಕಾಗುವುದಿಲ್ಲ. ಒಂದರಲ್ಲಿಯಾದರೂ ದೋಷದ ಲವಲೇಶವೂ ಇಲ್ಲದಂತೆ ಸಮಗ್ರವಾಗಿ ಮಾಡಿ ಮುಗಿಸಿಟ್ಟಿರುವುದನ್ನು ನೋಡಿದರೆ ಅವನ ನೈಪುಣ್ಯವೂ ಅನುಭವವೂ ಸಾಮ ರ್ಥ್ಯವೂ ಎಷ್ಟಿದ್ದುವೆಂದು ಹೇಳಲು ಸಾಧ್ಯ. ಇದರಿಂದ ಕರ್ನಾಟಕದಲ್ಲಿ ಎಂಥ ವಾಸ್ತುಶಿಲ್ಪವಿಶಾರದರು ಇದ್ದರೆಂಬುದು ಸ್ಪಷ್ಟವಾಗುತ್ತದೆ. ಈ ದೇವಾಲಯದ ಮೂರು ಗರ್ಭಗೃಹಗಳ ಪೈಕಿ ಮಧ್ಯದ ಗೃಹದಲ್ಲಿ ಕೇಶವ ವಿಗ್ರಹವಿತ್ತೆಂದೂ ಅದರಿಂದಲೇ ಇದಕ್ಕೆ ಕೇಶವ ದೇವಾಲಯವೆಂದು ಹೆಸರಾಯಿತೆಂದೂ ಹೇಳು ತ್ತಾರೆ. ಈಗ ಇದರಲ್ಲಿ ಏನೂ ಇಲ್ಲ. ಉತ್ತರ ಗೃಹದಲ್ಲಿ ಜನಾರ್ದನ ವಿಗ್ರ ಹವೂ ದಕ್ಷಿಣ ಗೃಹದಲ್ಲಿ ವೇಣುಗೋಪಾಲ ವಿಗ್ರಹವೂ ಇವೆ. ಇವೆರಡೂ ದಿವ್ಯ ಸುಂದರ ಮೂರ್ತಿಗಳು. ಗರ್ಭಗೃಹ ಮತ್ತು ಸುಕನಾಸಿಯ ಬಾಗಿಲು ವಾಡಗಳೆಲ್ಲ ಚಿತ್ರ ಕೆಲಸದಿಂದ ತುಂಬಿವೆ. ಮಧ್ಯದ ಗರ್ಭಗೃಹವ ದ್ವಾರ ಮುಖದಲ್ಲಿ ಮೇಲ್ಗಡೆ ಕುಳಿತಿರುವ ಒಂದು ವಿಷ್ಣು ವಿಗ್ರಹವೂ ಅದರ ಪೀಠದ ಸುತ್ತಲೂ ದಶಾವತಾರಗಳೂ ಎಡಕ್ಕೆ ಒಂದು ಸಣ್ಣ ಆನೆಯೂ ಕೆತ್ತಲ್ಪಟ್ಟಿವೆ.

ಸುಕನಾಸಿಯ ದ್ವಾರಮುಖದಲ್ಲಿ ಮೇಲ್ಗಡೆ ಪರವಾಸುದೇವ ವಿಗ್ರಹವೂ ಕೆಳಗಡೆ ಕೇಶವ ವಿಗ್ರಹವೂ ಇವೆ. ಎರಡು ಬಾಗಿಲುವಾಡಗಳಲ್ಲಿಯೂ ದ್ವಾರಪಾಲಕ ವಿಗ್ರಹಗಳಿವೆ. ಈ ಗರ್ಭಗೃಹದ ಎರಡು ಪಕ್ಕಗಳಲ್ಲಿಯೂ ಎರಡು ಗೂಡು ಗಳಿವೆ. ಅವುಗಳ ಗೋಪುರದ ಮೇಲೆ ಗಣಪತಿ ಮಹಿಷಾಸುರಮರ್ದಿನಿ ವಿಗ್ರಹ ಗಳನ್ನು ಕೆತ್ತಿದೆ. ಅದರಿಂದ ಅವುಗಳಲ್ಲಿ ಆಯಾ ವಿಗ್ರಹಗಳು ಇದ್ದಿರಬೇಕೆಂದು ಊಹಿಸಬಹುದಾಗಿದೆ. ಈಗ ಇವೆರಡೂ ಬರಿದಾಗಿವೆ. ಉತ್ತರ ದಿಕ್ಕಿನ ಗರ್ಭಗೃಹದಲ್ಲಿರುವ ಜನಾರ್ದನ ವಿಗ್ರಹವು ಸುಮಾರು ಆರು ಅಡಿ ಎತ್ತರವಾಗಿ, ಒಂದೂವರೆ ಅಡಿಯಷ್ಟು ಎತ್ತರವಾದ ಪೀಠದ ಮೇಲೆ ನಿಂತಿದೆ. ಅದರ ಎರಡು ಕೈಗಳಲ್ಲಿ ಶಂಖ ಚಕ್ರಗಳು ಇನ್ನೆರಡು ಕೈಗಳಲ್ಲಿ ಗದಾಪದ್ಮಗಳು ಇವೆ. ಪ್ರಭಾವಳಿಯಲ್ಲಿ ದಶಾವತಾರಗಳು ಕೆತ್ತಲ್ಪಟ್ಟಿವೆ. ದಕ್ಷಿಣ ಗರ್ಭಗೃಹದಲ್ಲಿನ ವೇಣುಗೋಪಾಲ ವಿಗ್ರಹಕ್ಕೆ ಎರಡೇ ಕೈಗಳು. ಈ ಕೈಗಳಿಂದ ವೇಣುವನ್ನು ಹಿಡಿದುಕೊಂಡು ಊದುತ್ತಿರುವ ಭಾವದಲ್ಲಿದೆ. ಕೆಳಭಾಗದಲ್ಲಿ ಒಬ್ಬ ದನ ಕಾಯುವವನ ವಿಗ್ರಹವೂ ಎರಡು ಕಡೆಗಳಲ್ಲಿಯೂ ಕೊಳಲನ್ನು ನೆಟ್ಟ ಮನಸ್ಸಿನಿಂದ ಕೇಳುತ್ತಿರುವ ಗೋವುಗಳೂ, ಋಷಿಗಳ ವಿಗ್ರಹಗಳೂ ಇವೆ. ಪ್ರಭಾವಳಿಯಲ್ಲಿ ದಶಾವತಾರ ಮೂರ್ತಿಗಳಿವೆ. ಗರ್ಭಗೃಹದ ದ್ವಾರ ಮುಖದಲ್ಲಿ ಮೇಲೆ ನಾಲ್ಕು ತೋಳುಗಳುಳ್ಳ ಮತ್ತು ಕುಳಿತುಕೊಂಡಿರುವ ಒಂದು ಸ್ತ್ರೀ ಮೂರ್ತಿಯೂ ಕೆಳಗೆ ಶಂಖ, ಚಕ್ರ, ಕಮಂಡಲು ಮತ್ತು ಫಲಗಳನ್ನು ಧರಿಸಿ ಕೊಂಡಿರುವ ಮತ್ತು ಕುಳಿತಿರುವ ಒಂದು ವಿಷ್ಣು ವಿಗ್ರಹವೂ ಇವೆ.*

---

* ದೇವಸ್ಥಾನದ ಮುಂದಿರುವ ಗರುಡಗಂಭವು ಇತರ ಕಡೆಗಳಲ್ಲಿರುವಂತೆ ಮಹಾ ದ್ವಾರಕ್ಕೆ ಇದಿರಾಗಿ ಇರದೆ ಒಂದು ಪಕ್ಕಕ್ಕೆ ನಿಲ್ಲಿಸಲ್ಪಟ್ಟಿದೆ. ಇದು ಹೀಗಿರುವುದಕ್ಕೆ ಹಿಂದಿನಿಂದ ಬಂದ ಒಂದು ಕಥೆಯನ್ನು ಹೇಳುವರು. ಜಕಣಾಚಾರಿಯು ಈ ದೇವಸ್ಥಾನ ವನ್ನು ಕಟ್ಟಿ ಮುಗಿಸಿದನಂತೆ. ಆಗ ಸರ್ವಾಂಗ ಸುಂದರವೂ ಅದ್ಭುತವೂ ಆದ ಈ ಕಟ್ಟಡವನ್ನು ನೋಡಿ ದೇವತೆಗಳು ಮೋಹಪಟ್ಟರಂತೆ. ಇಂಥ ಉತ್ತಮ ವಸ್ತುವು ದೇವಲೋಕದಲ್ಲಿರುವುದಕ್ಕೆ ಅರ್ಹವಾದದ್ದೆಂದು ಅದನ್ನು ಎತ್ತಿಕೊಂಡು ಹೋಗಲು ಪ್ರಯತ್ನಿಸಿದರಂತೆ. ದೇವಾಲಯವು ನೆಲದ ಮೇಲಿಂದ ಏಳುತ್ತಿರುವುದನ್ನು ನೋಡಿ ಬೆರಗಾಗಿ ಗರುಡಗಂಭವನ್ನು ಜರುಗಿಸಿದನಂತೆ. ಕೂಡಲೆ ದೇವಾಲಯವು ಇಳಿದು ನಿಂತುಬಿಟ್ಟಿತಂತೆ.

ಕರ್ನಾಟಕಶೈಲಿಯ ಇತರ ದೇವಾಲಯಗಳು

ಹಾಸನದ ತಾಲ್ಲೂಕು ದೊಡ್ಡಗದ್ದವಳ್ಳಿ ಗ್ರಾಮದಲ್ಲಿ ಲಕ್ಷ್ಮಿದೇವಸ್ಥಾನವಿದೆ. ಈ ಗ್ರಾಮಕ್ಕೆ ಅಭಿನವ ಕೊಲ್ಲಾಪುರವೆಂದು ಶಾಸನಗಳಲ್ಲಿ ಹೆಸರಿದೆ. ಹೊಯಿಸಳ ರಾಜನಾದ ವಿಷ್ಣುವರ್ಧನನ ಕಾಲದಲ್ಲಿ "ಮಹಾವಡ್ಡವ್ಯವಹಾರಿ" (ದೊಡ್ಡ ವರ್ತಕ) ಯಾದ ಕುಲ್ಲಹಣ ರಾವುತನೂ ಅವನ ಹೆಂಡತಿ ಸಹಜಾದೇವಿಯೂ ಈ ಅಭಿನವ ಕೊಲ್ಲಾಪುರವನ್ನು ಸ್ಥಾಪಿಸಿ ಅದರಲ್ಲಿ ಮಹಾಲಕ್ಷ್ಮಿದೇವಿಯ ದೇವಸ್ಥಾನವನ್ನು ಕ್ರಿ. ಶ. ೧೧೧೩ ರಲ್ಲಿ ಕಟ್ಟಿಸಿದರೆಂದು ಈ ದೇವಸ್ಥಾನದೊಳಗಿರುವ ಒಂದು ಶಾಸನದಿಂದ ಗೊತ್ತಾಗುತ್ತದೆ. ಈ ದೇವಸ್ಥಾನವು ಬೇಲೂರು ದೇವಾಲಯಕ್ಕಿಂತಲೂ ಹಿಂದಿನದು. ಇದು ನಾಲ್ಕು ಗರ್ಭಗೃಹಗಳುಳ್ಳ ದೇವಾಲಯಕ್ಕೆ ಒಳ್ಳೆಯ ಉದಾಹರಣೆ. ಈ ದೇವಸ್ಥಾನವು ೧೧೮ ಅಡಿ ಉದ್ದವೂ ೧೧೨ ಅಡಿ ಅಗಲವೂ ಇರುವ ಒಂದು ಅಂಗಳದ ಮಧ್ಯೆ ಇದೆ. ಈ ಅಂಗಳದ ಸುತ್ತ ಏಳು ಅಡಿ ಎತ್ತರವಾದ ಪ್ರಾಕಾರದ ಗೋಡೆಯೂ ಅದರಲ್ಲಿ ಪೂರ್ವ ಮತ್ತು ಪಶ್ಚಿಮ ದಿಕ್ಕಿನ ಗೋಡೆಗಳಲ್ಲಿ ಎರಡು ದ್ವಾರಗಳೂ ಇವೆ. ಪಶ್ಚಿಮದ ಕಡೆಯ ದ್ವಾರದ ಮುಂದುಗಡೆ ಒಂದು ಸುಂದರವಾದ ದ್ವಾರ ಮಂಟಪವಿದೆ. ಪ್ರಾಕಾರದ ನಾಲ್ಕು ಮೂಲೆಗಳಲ್ಲಿ ಒಂದೊಂದು ಸಣ್ಣ ಗುಡಿಯೂ ಅದರ ಮೇಲೆ ಕಲ್ಲು ಗೋಪುರವೂ ಅದರಲ್ಲಿ ಹುಲಿಯನ್ನು ಇರಿಯುತ್ತಿರುವ ಸಳನ ವಿಗ್ರಹವೂ ಇವೆ. ಈ ದೇವಾಲಯಕ್ಕೆ ನಾಲ್ಕು ಗರ್ಭಗೃಹಗಳು ನಾಲ್ಕು ದಿಕ್ಕಿನಲ್ಲಿಯೂ, ಅವುಗಳ ಮಧ್ಯೆ ಒಂದು ನವರಂಗವೂ ಇವೆ. ಪೂರ್ವ ಪಶ್ಚಿಮ ಮತ್ತು ದಕ್ಷಿಣ ದಿಕ್ಕಿನಲ್ಲಿರುವ ಗರ್ಭಗೃಹಗಳಿಗೂ ನವರಂಗಕ್ಕೂ ಮಧ್ಯೆ ಸುಕನಾಸಿಗಳು ಇವೆ. ಉತ್ತರ ದಿಕ್ಕಿನ ಗರ್ಭಗೃಹದ ಮುಂದೆ ಒಂದು ಅರ್ಧ ಮಂಟಪವೂ, ಅದಕ್ಕೂ ನವರಂಗಕ್ಕೂ ಮಧ್ಯೆ ಮೂರು ಅಂಕಣದ ಒಂದು

ಹಜಾರವೂ ಇವೆ. ಈ ಹಜಾರದ ಮೂಲಕವೇ ದೇವಸ್ಥಾನದೊಳಕ್ಕೆ ಬರಬೇಕು. ಮೇಲಕ್ಕೆ ಹತ್ತಿ ಬರುವುದಕ್ಕೆ ಎರಡು ಕಡೆ ಮೆಟ್ಟಲುಗಳಿವೆ. ಪಶ್ಚಿಮದ ದ್ವಾರದ ಮುಂದೆ ಇರುವ ದ್ವಾರಮಂಟಪದಲ್ಲಿ ಹದಿನಾರು ಕಂಬಗಳೂ ಏಳು ಸೊಗಸಾಗಿ ಕೆತ್ತಿದ ಭುವನೇಶ್ವರಿಗಳೂ ಇವೆ. ಪೂರ್ವ ಮತ್ತು ಉತ್ತರ ದಿಕ್ಕಿನ ಗರ್ಭಗುಡಿಗಳ ಮಧ್ಯೆ ೭೦ ಅಡಿ ಉದ್ದವೂ ೧೫ ಅಡಿ ಅಗಲವೂ ಇರುವ ಭೈರವ ದೇವಾಲಯವಿದೆ. ನಾಲ್ಕು ಗರ್ಭಗೃಹಗಳ ಮೇಲೂ ಭೈರವ ದೇವಾಲಯದ ಮೇಲೂ ಗೋಪುರಗಳಿವೆ. ಇವು ನಾಲ್ಕೂ ಮತ್ತು ನಾಲ್ಕು ಮೂಲೆಗಳಲ್ಲಿಯೂ ಇರುವ ಗೋಪುರಗಳೂ ಸೇರಿ ಒಟ್ಟು ಒಂಬತ್ತು ಗೋಪುರಗಳಿವೆ. ಪ್ರತಿಯೊಂದರ ಮುಂದೆಯೂ ಸಳನ ವಿಗ್ರಹವಿದೆ. ಇಷ್ಟು ಸಳನ ವಿಗ್ರಹಗಳ ಗುಂಪು ಮತ್ತಾವ ದೇವಾಲಯದಲ್ಲಿಯೂ ಕಂಡು ಬರುವುದಿಲ್ಲ.

ಪೂರ್ವದಿಕ್ಕಿನ ಗುಡಿಯಲ್ಲಿ ಲಕ್ಷ್ಮೀದೇವಿಯ ವಿಗ್ರಹವೂ, ಪಶ್ಚಿಮದರಲ್ಲಿ ಭೂತನಾಥ ಲಿಂಗವೂ ದಕ್ಷಿಣದರಲ್ಲಿ ಭೈರವ ವಿಗ್ರಹವೂ, ಉತ್ತರ ದಿಕ್ಕಿನದರಲ್ಲಿ ಕಾಳಿ ವಿಗ್ರಹವೂ ಇವೆ. ಭೈರವ ವಿಗ್ರಹದ ಪೀಠದ ಮೇಲೆ ಗರುಡನನ್ನೂ ಕೆತ್ತಿದೆ. ಇದರಿಂದ ಅಲ್ಲಿ ಮೊದಲು ವಿಷ್ಣು ವಿಗ್ರಹವಿತ್ತೆಂದು ಊಹಿಸಬಹುದಾಗಿದೆ. ಉತ್ತರ ಗರ್ಭಗೃಹದ ಮುಂದೆ ಒಳಗೆ ಬರುವುದಕ್ಕೆ ಇರುವ ಎರಡು ಬಾಗಿಲುಗಳಪೈಕಿ ಪಶ್ಚಿಮದ ಕಡೆ ಬಾಗಿಲಿನಲ್ಲಿ ಸುಂದರವಾದ ಚಿತ್ರ ಕೆಲಸ ಮಾಡಲ್ಪಟ್ಟು ಎರಡು ಕಡೆಯೂ ವೈಷ್ಣವ ದ್ವಾರಪಾಲಕ ವಿಗ್ರಹಗಳಿವೆ. ಎರಡು ಬಾಗಿಲಿನ ಮುಂಭಾಗದಲ್ಲಿ ಎರಡೆರಡು ಆನೆಗಳು ನಿಂತಿವೆ. ಗೋಡೆಗಳ ಹೊರಮುಖದಲ್ಲಿ ಸಣ್ಣ ಸಣ್ಣ ಗೋಪುರಗಳೂ ಗೂಡುಗಳೂ ಇವೆ. ಲಕ್ಷ್ಮೀದೇವಿಯ ವಿಗ್ರಹವು ಸುಂದರವಾಗಿ ಸುಮಾರು ಮೂರೂವರೆಯಡಿ ಎತ್ತರವಾಗಿ, ನಿಂತಿರುವ ಭಾವದಲ್ಲಿದೆ. ಇದಕ್ಕೆ ನಾಲ್ಕು ಕೈಗಳು.; ಶಂಖ, ಚಕ್ರ, ಗದೆಗಳನ್ನು ಹಿಡಿದು ಕೊಂಡಿರುತ್ತದೆ. ಮತ್ತೊಂದು ಕೈ ಅಭಯ ಮುದ್ರೆಯಲ್ಲಿದೆ. ಕಾಳಿಯ ವಿಗ್ರಹವು ಒಂದು ರಾಕ್ಷಸನನ್ನು ಮೆಟ್ಟಿಕೊಂಡು ನಿಂತಿರುವ ಭಯಂಕರವಾದ ಮೂರ್ತಿ. ಎಂಟು ಕೈಗಳು. ಕೈಗಳಲ್ಲಿ ತ್ರಿಶೂಲ, ಕತ್ತಿ, ಬಾಣ, ಪರಶು, ಡಮರುಗ, ಪಾಶ, ಬಿಲ್ಲುಕಪಾಲ ಇವೆ. ಈ ಗುಡಿಯ ದ್ವಾರಸ್ತಂಭಗಳಲ್ಲಿ ನಗ್ನವಾದ ಸ್ತ್ರೀ ಮೂರ್ತಿಗಳು ಇವೆ. ಸುಕನಾಸಿಯಲ್ಲಿ ಆರು ಅಡಿ ಎತ್ತರ

ವುಳ್ಳ ಚಿತ್ತ್ರಲೆಯಾದ ಎರಡು ಬೇತಾಳಗಳು ಎದುರುಬದರಿಗೆ ನಿಂತುಕೊಂಡಿವೆ. ಈ ಬೇತಾಳಗಳು ಬರಿಯ ಅಸ್ಥಿಪಂಜರಗಳು. ಈ ದೇವಾಲಯವನ್ನು ಕಟ್ಟಿದ ಶಿಲ್ಪಿಯ ಹೆಸರು ಮಲ್ಲೋಜ ಮಾಣಿಯೋಜನೆಂದು. ಇವನು "ವಿಶ್ವಕರ್ಮ ನಿರ್ಮಿತ ಸುಭಾಷಿತ" ನಾಗಿದ್ದಂತೆ ಇಲ್ಲಿರುವ ಶಾಸನದಲ್ಲಿ ವರ್ಣಿತವಾಗಿದೆ.

ಕೃಷ್ಣರಾಜಪೇಟೆ ತಾಲ್ಲೂಕು ಗೋವಿಂದನ ಹಳ್ಳಿಯಲ್ಲಿರುವ ಪಂಚಲಿಂಗೇಶ್ವರ ದೇವಾಲಯವು ಐದು ಗರ್ಭಗೃಹಗಳಿರುವ ದೇವಾಲಯ. ಈ ರೀತಿ ಐದು ಗರ್ಭಗೃಹಗಳುಳ್ಳ ದೇವಾಲಯಗಳು ಅಪರೂಪ. ಸೋಮನಾಥ ಪುರದಲ್ಲಿ ಪಾಳುದೇವಸ್ಥಾನವನ್ನು ಬಿಟ್ಟರೆ ಇದೊಂದೇ ಉದಾಹರಣೆಯೆಂದು ಹೇಳಬಹುದು ಇದರ ಐದು ಗೃಹಗಳೂ ಸಾಲಾಗಿ ಒಂದರ ಪಕ್ಕದಲ್ಲಿ ಮತ್ತೊಂದು ಇವೆ. ಇವು ಒಂದೊಂದಕ್ಕೂ ಒಂದು ಸುಕನಾಸಿಯೂ ಒಂದೊಂದು ನವರಂಗವೂ ಇವೆ. ಎಡಗಡೆಯಿಂದ ಮೊದಲುಮಾಡಿ ನಾಲ್ಕು ನವರಂಗಗಳನ್ನು ಸೇರಿಸುವಂತೆ ಮೂರು ಸಂಧ್ಯಂಕಣಗಳಿವೆ. ನಾಲ್ಕು ಮತ್ತು ಐದನೆಯ ನವರಂಗಗಳು ಒಂದಕ್ಕೊಂದು ಹೊಂದಿಕೊಂಡಿವೆ. ಇವೆಲ್ಲವೂ ಒಟ್ಟುಗೂಡಿ ಐವತ್ತುನಾಲ್ಕು ಅಂಕಣದ ಒಂದು ದೊಡ್ಡ ಹಜಾರವಾಗಿ ಪರಿಣಮಿಸಿದೆ. ಎರಡು ಮತ್ತು ಮೂರನೆಯ ಗೃಹಗಳ ಎದುರಿಗೆ ಎರಡು ದ್ವಾರಗಳೂ ಅವುಗಳ ಮುಂದೆ ಮುಖಮಂಟಪಗಳೂ ಇದೆ. ಈ ಮುಖಮಂಟಪಗಳಲ್ಲಿ ನಂದಿಗಳು ಕುಳಿತಿವೆ. ಇದರ ತಲವಿನ್ಯಾಸವನ್ನು ಪರೀಕ್ಷಿಸಿದರೆ ಇದಕ್ಕೆ ಮೊದಲು ನಾಲ್ಕೇ ಗರ್ಭಗೃಹಗಳು ಇದ್ದಿರಬೇಕೆಂದೂ ಆಮೇಲೆ ಯಾವಾಗಲೋ ಐದನೆಯದನ್ನು ಸೇರಿಸಿರಬೇಕೆಂದೂ ತೋರುತ್ತದೆ. ಮೊದಲು ನಾಲ್ಕು ಗೃಹಗಳ ಮುಂದಿರುವ ನವರಂಗದ ಭುವನೇಶ್ವರಿಗಳಲ್ಲಿ ಕೆಲವು ತಟ್ಟೆಯಾಗಿವೆ. ಕೆಲವು ಅರ್ಧಗೋಳಾಕಾರವಾಗಿ ಮಧ್ಯೆ ಕಮಲ ಬಿಡಿಸಿದವುಗಳಾಗಿವೆ. ಐದನೆಯ ನವರಂಗದ ಭುವನೇಶ್ವರಿಗಳು ಮಾತ್ರ ಎಲ್ಲವೂ ಅರ್ಧಗೋಳಾಕಾರವಾಗಿವೆ. ದೇವಸ್ಥಾನದ ಮುಂಭಾಗದ ಗೋಡೆಗಳಲ್ಲಿ ಜಾಲಂಧ್ರಗಳಿವೆ. ಈ ಕಟ್ಟಡದ ಒಳ ಮುಖಕ್ಕೆ ನವರಂಗದಲ್ಲಿ ಒಟ್ಟು ಹದಿಮೂರು ಗೂಡುಗಳಿವೆ. ಗೋಡೆಯ ಹೊರಮುಖದಲ್ಲಿ ನಾಲ್ಕು ಗೂಡುಗಳಿವೆ. ಒಳಗಿರುವ ಗೂಡುಗಳಲ್ಲಿ ಗಣಪತಿ, ಮಹಿಷಾಸುರ ಮರ್ದಿನಿ ವಿಗ್ರಹಗಳೂ, ಷಣ್ಮುಖ, ಉಮಾಮಹೇಶ್ವರ, ವೀರಭದ್ರ ವಿಗ್ರಹಗಳೂ

ಇವೆ. ಇವೆಲ್ಲವೂ ಸುಂದರವಾಗಿ ಕೆತ್ತಲ್ಪಟ್ಟಿವೆ. ನವರಂಗದ ಪೂರ್ವದಿಕ್ಕಿನ ಗೋಡೆಯ ಉದ್ದಕ್ಕೂ ಒಳಭಾಗದಲ್ಲಿ ಎತ್ತರವಾದ ಜಗಲಿ ಇದೆ. ದ್ವಾರ ಮಂಟಪಗಳಲ್ಲಿ ಬಾಗಿಲಿನ ಎರಡು ಕಡೆಯೂ ಎರಡೆರಡು ಸುಂದರವಾದ ಎತ್ತರ ವಾದ ದ್ವಾರಪಾಲಕ ವಿಗ್ರಹಗಳು ನಿಲ್ಲಿಸಲ್ಪಟ್ಟಿವೆ. ಇವುಗಳು ಶಾಂತವಾಗಿ ನಿಂತಿರುವ ಮನೋಹರ ಭಾವವೂ, ಸ್ಪಷ್ಟವಾಗಿಯೂ ಮುದ್ದಾಗಿಯೂ ಕೆತ್ತಿರುವ ಅಂಗಪ್ರಕೃತಿಗಳೂ, ಸೊಗಸಾಗಿ ಮಾಡಿದ ಸಣ್ಣ ಕೆತ್ತನೆಯ ಕೆಲಸಗಳೂ ಮೆಚ್ಚು ವಂತಿವೆ. ಎಲ್ಲ ಗರ್ಭಗೃಹಗಳ ಮೇಲೆ ಗೋಪುರಗಳಿವೆ. ಆದರೆ ಅವು ಚಿತ್ರಿತ ವಾಗಿಲ್ಲ. ಗೋಡೆಗಳ ಹೊರಮುಖದಲ್ಲಿ ವಿಷ್ಣುವಿನ ಚತುರ್ವಿಂಶತಿ ಮೂರ್ತಿ ಗಳೂ ಮಧ್ಯೆ ಮಧ್ಯೆ ಗರುಡನೂ ಕೆತ್ತಲ್ಪಟ್ಟಿವೆ. ಗಣಪತಿ ಮಹಿಷಾಸುರ ಮರ್ದಿನಿ ವಿಗ್ರಹಗಳೂ ಇವೆ. ಎರಡು ದ್ವಾರಮಂಟಪಗಳ ಮಧ್ಯೆ ಇರುವ ಗೋಡೆಯಲ್ಲಿ ದಶಾವತಾರಗಳು ಕೆತ್ತಿವೆ. ಇವುಗಳಲ್ಲದೆ ನರಸಿಂಹ, ಮೋಹಿನಿ, ತಾಂಡವೇಶ್ವರ, ವೇಣುಗೋಪಾಲ, ಕಾಳಿಯಮರ್ದನ, ಹರಿಹರ, ಗಜಾಸುರ ಮರ್ದನ, ಸರಸ್ವತಿ, ಭೈರವ, ರಾವಣ, ರಾಮಲಕ್ಷ್ಮಣಸೀತೆಯರು, ಗೋವರ್ಧನ ಧಾರಿ, ವಾಮನ, ಬ್ರಹ್ಮ, ಸುಬ್ರಹ್ಮಣ್ಯ, ಲಕ್ಷ್ಮೀನಾರಾಯಣ ಇವೇ ಇತರ ವಿಗ್ರಹಗಳು. ಈ ದೇವಸ್ಥಾನದ ಕಾಲವನ್ನು ನಿರ್ಣಯಿಸುವುದಕ್ಕೆ ಒಂದು ಅಂತರಸಾಧನವೂ ಒಂದು ಬಾಹ್ಯ ಸಾಧನವೂ ಇವೆ. ದ್ವಾರಮಂಟಪ ದಲ್ಲಿರುವ ದ್ವಾರಪಾಲಕರಪೀಠದಲ್ಲಿ ಅವುಗಳನ್ನು ಕೆತ್ತಿದ ಶಿಲ್ಪಿಯು ಮಲ್ಲಿ ತಮ್ಮ; ಇವನ ಹೆಸರು ಸೋಮನಾಥಪುರದ ದೇವಾಲಯದಲ್ಲಿಯೂ ಇದೆ. ಸೋಮ ನಾಥಪುರದ ದೇವಾಲಯದ ಕಾಲ ಕ್ರಿ. ಶ. ೧೨೬೮ ಎಂದು ಗೊತ್ತಾಗಿದೆ. ನವರಂಗದಲ್ಲಿ ಒಂದು ದೊಡ್ಡ ಶಾಸನವಿದೆ. ಅದು ಕ್ರಿ. ಶ. ೧೨೩೩ ರಿಂದ ೧೨೫೪ ರ ವರೆಗೆ ಆಳಿದ ಸೋಮೇಶ್ವರ ರಾಜನ ಕಾಲದ್ದು. ಆದ್ದರಿಂದ ಈ ಕಟ್ಟಡವನ್ನು ಹದಿಮೂರನೆಯ ಶತಮಾನದ ಮಧ್ಯ ಭಾಗದಲ್ಲಿ ಕಟ್ಟಿದ್ದೆಂದು ಹೇಳಬಹುದಾಗಿದೆ.

ಹಿಂದಿನ ಅಧ್ಯಾಯದಲ್ಲಿ ಬೇಲೂರಿನ ಚೆನ್ನಕೇಶವ ದೇವಾಲಯವು ಒಂದು ಗರ್ಭಗೃಹವುಳ್ಳ ದೇವಾಲಯಗಳಲ್ಲೆಲ್ಲ ಅತ್ಯುತ್ತಮವಾದ ಮಾದರಿ ಎಂದು ಹೇಳಲಾಗಿದೆ. ಒಂದೇ ಗರ್ಭಗೃಹವುಳ್ಳ ಇನ್ನೂ ಕೆಲವು ದೇವಾಲಯುಗಳು ಗಮ ನಾರ್ಹವಾಗಿವೆ. ಅವು ಯಾವುವೆಂದರೆ :

ಸೊರಬದ ತಾಲ್ಲೂಕು, ಕುಪ್ಪತ್ತೂರಿನ ಕೈಟಭೇಶ್ವರ ದೇವಾಲಯ.

ಕೃಷ್ಣರಾಜಪೇಟೆ ತಾಲ್ಲೂಕು, ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯ.

ಹಾಸನದ ತಾಲ್ಲೂಕು, ಕೋರಮಂಗಲದ ಬೂಚೇಶ್ವರ ದೇವಾಲಯ.

ತರೀಕೆರೆ ತಾಲ್ಲೂಕು, ಅಮೃತಪುರದ ಅಮೃತೇಶ್ವರ ದೇವಾಲಯ.

ಹರಿಹರದಲ್ಲಿರುವ ಹರಿಹರೇಶ್ವರ ದೇವಾಲಯ.

ಅರಸಿಕೆರೆಯಲ್ಲಿರುವ ಕತ್ತುವೇಶ್ವರ ದೇವಾಲಯ

ಇವುಗಳಲ್ಲೆಲ್ಲ ಕುಪ್ಪತ್ತೂರಿನ ದೇವಾಲಯವು ಬಹಳ ಹಳೆಯದು ಮತ್ತು ದೊಡ್ಡದು. ಅರಸೀಕೆರೆಯುದು ಈಚಿನದು ಮತ್ತು ಸೊಗಸಾದದ್ದು. ಇವು ಒಂದೊಂದಕ್ಕೂ ಮುಖ್ಯವಾದ ಮೂರು ಭಾಗಗಳಿಂದ ಗರ್ಭಗೃಹ, ಸುಕನಾಸಿ, ನವರಂಗಗಳು ಇರುತ್ತವೆ. ಕೆಲವು ಕಡೆಗಳಲ್ಲಿ ನವರಂಗಕ್ಕೆ ಸೇರಿದ ಹಾಗೆ ಮುಖಮಂಟಪಗಳೂ ಇರುವುದುಂಟು. ಹೀಗೆ ಸ್ಥೂಲವಾದ ವಿನ್ಯಾಸ ಕ್ರಮದಲ್ಲಿ ಇವುಗಳಿಗೆ ಪರಸ್ಪರ ಹೆಚ್ಚು ವ್ಯತ್ಯಾಸವಿಲ್ಲದಿದ್ದರೂ ಮೇಲುಭಾಗದ ಕಟ್ಟಡದಲ್ಲಿಯೂ, ಅದರ ಸಣ್ಣ ಸಣ್ಣ ಅಂಶದಲ್ಲಿಯೂ ಬಹು ವೈವಿಧ್ಯವೂ ವ್ಯತ್ಯಾಸವೂ ಕಂಡುಬರುತ್ತವೆ. ಒಂದೊಂದು ಕಟ್ಟಡಕ್ಕೂ ಒಂದೊಂದು ವಿಶೇಷವಿರುತ್ತದೆ.

ಕುಪ್ಪತ್ತೂರು ಚಂದ್ರಹಾಸನ ರಾಜಧಾನಿಯಾಗಿದ್ದ ಕುಂತಲ ನಗರವೆಂದು ಹೇಳುತ್ತಾರೆ. ಈ ಊರಿನ ಹೊರಗೆ ಇರುವ ಕಾಳಿ ದೇವಸ್ಥಾನಕ್ಕೆ ಮಂತ್ರಿಯಾದ ದುಷ್ಟಬುದ್ಧಿಯು ಚಂದ್ರಹಾಸನನ್ನು ಕೊಲ್ಲುವುದಕ್ಕೋಸ್ಕರ ಕಳುಹಿಸಿದನೆಂದೂ ದೇವಸ್ಥಾನದ ಹೊರಗೆ ಬಿದ್ದಿರುವ ಒಂದು ಕಲ್ಲಿನ ತಲೆಯು ದುಷ್ಟಬುದ್ಧಿಯು ತಲೆಯೆಂದೂ ಆ ಸ್ಥಳದವರು ಹೇಳುತ್ತಾರೆ. ಕೈಟಭೇಶ್ವರನನ್ನು ಕೋಟೀಶ್ವರನೆಂದು ಶಾಸನದಲ್ಲಿ ಕರೆಯಲ್ಪಟ್ಟಿದೆ. ಈ ದೇವಾಲಯವು ಸುಮಾರು ಹತ್ತನೆಯ ಶತಮಾನದಲ್ಲಿ ಕಟ್ಟಿದ್ದಿರಬೇಕೆಂದು ಹೇಳಬಹುದು. ಇದರ ಒಂದೊಂದು ಭಾಗವೂ ವಿಸ್ತಾರವೂ ದೊಡ್ಡದೂ ಆಗಿದೆ. ಅಲ್ಲಿಂದ ಈಚೆಗೆ ಕಟ್ಟಿದ ದೇವಸ್ಥಾನಗಳು ಇಷ್ಟು ದೊಡ್ಡವಾಗಿಲ್ಲ. ಇದರ ಜಗತಿಯು ಎಂಟು ಅಡಿ ಎತ್ತರವಾಗಿಯೂ ವಿಮಾನವು ಒಂಬತ್ತು ಅಂತಸ್ತುಳ್ಳದ್ದಾಗಿಯೂ ಬಹು ಭವ್ಯವಾಗಿಯೂ ಇವೆ. ಮಿಕ್ಕ ಭಾಗಗಳೂ ಇದಕ್ಕೆ ತಕ್ಕಂತೆಯೇ ಇವೆ.

ನವರಂಗದಲ್ಲಿ ನಾಲ್ಕು ಗೂಡುಗಳಿವೆ. ಈ ದೇವಾಲಯವು ಕೆಲವು ವಿಷಯ ಗಳಲ್ಲಿ ಬೆಳಗಾವಿಯ ಕೇದಾರೇಶ್ವರ ದೇವಾಲಯವನ್ನು ಹೋಲುತ್ತದೆ.

ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯವು ಬಮ್ಮವ್ವೆ ನಾಯಕಿತ್ತಿ ಎಂಬವ ಳಿಂದ ಕ್ರಿ. ಶ. ೧೧೭೧ ರಲ್ಲಿ ಕಟ್ಟಿಸಲ್ಪಟ್ಟಿತು. ಪೂರ್ವದಿಕ್ಕಿನ ಗೋಡೆಯಲ್ಲಿ ಬೇಲೂರಿನಲ್ಲಿರುವಂತೆ ಜಾಲಂದ್ರಗಳಿವೆ. ನವರಂಗದ ಮಧ್ಯ ಕಂಬಗಳ ಮೇಲೆ ಮದನಿಕೆ ಬೊಂಬೆಗಳಿವೆ. ಒಂದೊಂದು ಕಂಬಕ್ಕೆ ನಾಲ್ಕರಂತೆ ಹದಿನಾರು ಬೊಂಬೆಗಳು ಇರಬೇಕಾದ್ದು. ಈಗ ಹನ್ನೊಂದು ಮಾತ್ರ ಉಳಿದಿವೆ. ಇವೆ ಲ್ಲವೂ ಬಹು ನಾಜೂಕಾಗಿ ಕೆತ್ತಲ್ಪಟ್ಟಿವೆ. ಹೊರಭಾಗದ ಕೆತ್ತನೆಯ ಕೆಲಸವು ಗೋವಿಂದನ ಹಳ್ಳಿ ದೇವಾಲಯದಲ್ಲಿರುವಂತೆಯೇ ಇದೆ-ಅದೇ ವಿಧವಾದ ಸಣ್ಣ ಗೋಪುರಗಳು, ಮಧ್ಯಸ್ಥಾನದಲ್ಲಿ ವಿಗ್ರಹಗಳು. ಇವುಗಳಲ್ಲಿ ಮೂರು ತಲೆಯ ಮೂರ್ತಿಯೊಂದು ಇದೆ. ಇದಕ್ಕೆ ಆರು ಕೈಗಳೂ ಅವುಗಳಲ್ಲಿ ವಿಷ್ಣು, ಶಿವ, ಸೂರ್ಯ ಇತರ ಆಯುಧಗಳೂ ಇವೆ. ಪೀಠದಲ್ಲಿ ಅವರ ವಾಹನಗಳನ್ನೂ ಕೆತ್ತಿದೆ. ಈ ದೇವಾಲಯದ ಕೆತ್ತನೆಯ ಕೆಲಸಗಳು, ಶಿಲ್ಪ ಸೂತ್ರಗಳಲ್ಲಿ ಒಂದಾದ "ಮಿತಿ" (Restrairt) ಯನ್ನು ಅನುಸರಿಸಿ ಎಷ್ಟು ಬೇಕೋ ಅಷ್ಟು ಮಾತ್ರ ಇವೆ. ಇದು ಇತರ ಕಟ್ಟಡಗಳಲ್ಲಿ ಅಪರೂಪ. ಕೋರಮಂಗಲದ ಬೂಚೇಶ್ವರ ದೇವಾಲಯವು ಈ ಕಟ್ಟಡಕ್ಕಿಂತಲೂ ಎರಡುವರ್ಷ ಕಿರಿಯದು. ಆದರೆ ಹೆಚ್ಚು ಸುಂದರವಾದದ್ದು. ಇದರ ಪಕ್ಕದಲ್ಲಿ ನೆಟ್ಟಿರುವ ಶಾಸನದ ಪ್ರಕಾರ ಕ್ರಿ. ಶ. ೧೧೭೩ ರಲ್ಲಿ ಎರಡನೆಯ ಬಲ್ಲಾಳ ರಾಜನ ಪಟ್ಟಾಭಿಷೇಕದ ದಿವಸ ಅವನು ಮಂತ್ರಿಯಾಗಿದ್ದ ಬೂಚಿರಾಜನು ಈ ದೇವಸ್ಥಾನವನ್ನು ಸ್ಥಾಪಿಸಿದ ನೆಂದು ಗೊತ್ತಾಗುತ್ತದೆ. ಹಳೆಯಬೀಡು, ಬೇಲೂರು ದೇವಾಲಯಗಳಿಗಿಂತ ಎಷ್ಟೋ ಚಿಕ್ಕದಾಗಿದ್ದರೂ ಅವುಗಳಲ್ಲಿರುವ ಉತ್ತಮವಾದ ಲಕ್ಷಣಗಳೆಲ್ಲವೂ ಇರುವುದರಿಂದ ಒಂದು ವಿಧದಲ್ಲಿ ಇದರಂತಹ ಮತ್ತೊಂದು ಕಟ್ಟಡವು ರಾಜ್ಯ ದಲ್ಲಿಯೇ ಇಲ್ಲವೆಂದು ಹೇಳಬಹುದು. ಇದರಲ್ಲಿ ಒಂದು ಗರ್ಭಗುಡಿ, ಸುಕ ನಾಸಿ, ನವರಂಗ, ಮುಖಮಂಟಪ ಇವು ಇವೆ. ಮುಖಮಂಟಪದ ಮುಂದೆ ಸೂರ್ಯ ವಿಗ್ರಹದ ಒಂದು ಸಣ್ಣ ಗೃಹವಿದೆ. ನವರಂಗದಲ್ಲಿ ಆರು ಗೂಡು ಗಳಿವೆ. ಇವುಗಳ ಮೂರರಲ್ಲಿ ಗಣಪತಿ, ಸರಸ್ವತಿ ಮತ್ತು ಸಪ್ತ ಮಾತೃಕೆಗಳ ವಿಗ್ರಹಗಳಿವೆ. ಗಣಪತಿ ಸರಸ್ವತಿ ವಿಗ್ರಹಗಳು ಅತ್ಯಂತ ಸುಂದರವಾಗಿವೆ.

ದೇವಸ್ಥಾನದ ಹೊರಮುಖದಲ್ಲೆಲ್ಲ ಒಟ್ಟು ನೂರರ ಮೇಲೆ ಮೂರ್ತಿಗಳು ಕೆತ್ತಲ್ಪಟ್ಟವೆ. ಇವುಗಳ ಮಧ್ಯೆ ಒಂದು ಫಲಕದಲ್ಲಿ ಒಂದು ಜಿಂಕೆಯನ್ನು ಒಂದು ಹಾವು ಹಿಡಿದುಕೊಂಡಿದೆ. ಹಾವನ್ನು ಒಂದು ಆನೆ ಹಿಡಿದುಕೊಂಡಿದೆ. ಆ ಆನೆಯ ಮೇಲೆ ಒಂದು ಸಿಂಹವು ಹಾರಿದೆ. ಈ ಸಿಂಹವನ್ನು ಒಂದು ಶರಭವೂ, ಶರಭವನ್ನು ಗಂಡಭೇರುಂಡವೂ ಹಿಡಿದುಕೊಂಡಿವೆ. ಹೀಗೆ ಒಂದ ನ್ನೊಂದು ನುಂಗುತ್ತಿರುವ ಪ್ರಾಣಿಪಂಕ್ತಿಯು ಗಮನಾರ್ಹವಾಗಿದೆ. ಈ ಕಟ್ಟಡ ದಲ್ಲಿ ಒಂದು ಅಪೂರ್ವ ರಮಣೀಯತೆ ಇದೆ. ಅದರ ಆಯಾ ಭಾಗಗಳನ್ನು ಜೋಡಿಸುವದರಲ್ಲಿ ಸ್ಥಪತಿಯು ಮಯಸಾಮ್ಯಾನುಸರಣೆಯನ್ನು ವಿಶೇಷವಾಗಿ ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ಮಾಡಿರುವುದೂ, ಅಲಂಕಾರಗಳನ್ನು ಸೂಕ್ಷ್ಮ ವಾಗಿ ಕೆತ್ತಿರುವುದೂ ಇದಕ್ಕೆ ಕಾರಣವೆಂದು ತೋರುತ್ತದೆ. (೩) ಅಮೃತ ಪುರದ ದೇವಾಲಯವು ಇದಾದ ಮೇಲೆ ಕಟ್ಟಿದ್ದು. ಕ್ರಿ. ಶ. ೧೧೯೬ ರಲ್ಲಿ. ಇದನ್ನು ಕಟ್ಟಿಸಿದವನು ಎರಡನೆಯ ಬಲ್ಲಾಳ ರಾಜನಲ್ಲಿ "ಮಂತ್ರಿಮುಖ್ಯ" ನೂ "ದಂಡ ನಾಯಕ-ಶಿಖಾಮಣಿ" ಯೂ ಆಗಿದ್ದ ಅಮಿತನೆಂಬುವನು. ಈ ದೇವಾಲಯಕ್ಕೆ ಒಂದು ದೊಡ್ಡ ಅಂಗಳವಿದೆ. ಅದರ ಮಧ್ಯದಲ್ಲಿ ಭೈರವ ಮತ್ತು ಸರಸ್ವತಿ ದೇವಾಲಯಗಳೆಂಬ ಎರಡು ಗೂಡುಗಳೂ ಸೂಳೆಯ ಮಂಟಪವೆಂಬ ಒಂದು ಮಂಟಪವೂ ಇವೆ. ಪ್ರಾಕಾರದ ಗೋಡೆಯು ಸುಮಾರು ಏಳು ಅಡಿ ಎತ್ತರ ವಿದ್ದು ಅದರ ಮೇಲೆ ಉದ್ದಕ್ಕೂ ಕೋಟೆ ತೆನೆಯಂಥ ದುಂಡಾದ ವಿಭಾಗಗಳಿದ್ದ ವೆಂದೂ ಇವುಗಳ ಹೊರಗೆ ಕಮಲಗಳು ಕೆತ್ತಿತ್ತೆಂದೂ ತೋರುತ್ತದೆ. ಈ ದೇವಾ ಲಯದಲ್ಲಿ ಗರ್ಭಗುಡಿ, ಸುಕನಾಸಿ, ನವರಂಗ, ಮುಖಮಂಟಪಗಳಿವೆ. ಮುಖ ಮಂಟಪದ ಮೇಲಿರುವ ಲೋವೆಕಲ್ಲು ದ್ರಾವಿಡಶೈಲಿಯ ಲೋವೆಕಲ್ಲಿನಂತೆ ದ್ವಿಭಂಗಿಯಾಕಾರದಲ್ಲಿದೆ. ಚಿತ್ರ ಕೆಲಸದ ಸೂಕ್ಷ್ಮತೆಯೇ ಈ ದೇವಸ್ಥಾನ ದಲ್ಲಿರುವ ವಿಶೇಷ ಸಂಗತಿ. ಕಟ್ಟಡದ ಹೊರಮುಖದಲ್ಲಿ ಎಲ್ಲಿ ನೋಡಿದರೂ ನಯವಾಗಿ ಕೆತ್ತಿದ ಬಳ್ಳಿಗಳೂ ಸಣ್ಣ ಸಣ್ಣ ಗೋಪುರಗಳೂ ತುಂಬಿಹೋಗಿವೆ. ಅವುಗಳನ್ನು ನೋಡಿದರೆ ಕರ್ನಾಟಕ ಶಿಲ್ಪಿಗಳ ಉಳಿಗೆಲಸವನ್ನು ಅವರ ನೈಪುಣ್ಯ ವನ್ನೂ ನೆನೆಸಿಕೊಂಡು ಎಂಥವರಾದರೂ ಬೆರಗಾಗುವಂತಿದೆ.

(೪) ಹರಿಹರದಲ್ಲಿರುವ ಹರಿಹರೇಶ್ವರ ದೇವಾಲಯವು ಹಿಂದಿನ ದೇವಾ ಲಯದಷ್ಟೇ ದೊಡ್ಡದಾಗಿದೆ. ಆದರೆ ಅದರಲ್ಲಿ ಅರ್ಧದಷ್ಟು ಮನೋಹರವಾಗಿಲ್ಲ.

ಇದು ಕ್ರಿ. ಶ. ೧೨೨೩ ರಲ್ಲಿ ಎರಡನೆಯ ನರಸಿಂಹನ ದಂಡನಾಯಕನಾದ ಪೋಲಾಳ್ವನಿಂದ ಕಟ್ಟಿಸಲ್ಪಟ್ಟಿತು. ಅಲ್ಲಿರುವ ಕೆಲವು ಶಾಸನಗಳನ್ನು ನೋಡಿದರೆ ದೇವಸ್ಥಾನವು ಆ ಸ್ಥಳದಲ್ಲಿ ಮೊದಲೇ ಇತ್ತೆಂದೂ ಅದನ್ನು ಪೋಲಾಳ್ವನು ವಿಸ್ತರಿಸಿಯೋ ಬಿಚ್ಚಿ ಕಟ್ಟಿಸಿಯೋ ಇರಬೇಕೆಂದು ತೋರುತ್ತದೆ. ಮುಸಲ್ಮಾನರು ಹದಿನೇಳನೆಯ ಶತಮಾನದಲ್ಲಿ ಈ ದೇವಸ್ಥಾನವನ್ನು ಮುತ್ತಿ ಹರಿಹರ ವಿಗ್ರಹವನ್ನು ಕಿತ್ತು ಹೊಳೆಯಲ್ಲಿ ಎಸೆದುಬಿಟ್ಟರಂತೆ. ಆಮೇಲೆ ಪುನಃ ಅದೇ ವಿಗ್ರಹವನ್ನು ತೆಗೆದು ಅಲ್ಲಿ ಪ್ರತಿಷ್ಠೆ ಮಾಡಿಸಿದರಂತೆ. ದೇವಸ್ಥಾನದ ಅಲಂಕಾರ ವೈಚಿತ್ರ್ಯಗಳು ಬಹಳ ಮಟ್ಟಿಗೆ ನಾಶವಾಗಿದ್ದರೂ ಕಟ್ಟಡದ ಬಹು ಭಾಗವು ಹಾಗೆಯೇ ಉಳಿದುಕೊಂಡಿದೆ. ಇದನ್ನು ಮುಸಲ್ಮಾನರು ಮಸೀದಿಯಾಗಿ ಮಾರ್ಪಡಿಸಿ ಉಪಯೋಗಿಸುತ್ತಿದ್ದರಂತೆ. ಈ ದೇವಾಲಯದಲ್ಲಿ ಗರ್ಭಗೃಹ, ಸುಕನಾಸಿ, ನವರಂಗ, ದೊಡ್ಡದಾದ ಮುಖಮಂಟಪ ಇಷ್ಟು ಇವೆ. ಹರಿಹರ ವಿಗ್ರಹವು ಆರು ಅಡಿ ಎತ್ತರವಾಗಿದೆ. ಮೂರ್ತಿಯ ಎಡಗಡೆ ಭಾಗವು ವಿಷ್ಣುವಿನ ಲಕ್ಷಣಗಳನ್ನುಳ್ಳದ್ದಾಗಿಯೂ, ಬಲಭಾಗವು ಶಿವನ ಲಕ್ಷಣಗಳನ್ನುಳ್ಳದ್ದಾಗಿಯೂ ಇದೆ. ವಿಷ್ಣುವಿನ ಭಾಗದ ತಲೆಯ ಮೇಲೆ ಕಿರೀಟವಿದೆ. ಶಿವನ ಭಾಗದ ತಲೆಯ ಮೇಲೆ ಜಟೆ-ಚಂದ್ರ ಇದೆ. ನವರಂಗದ ಮಧ್ಯೆ ಇರುವ ಭುವನೇಶ್ವರಿಯು ಈಗ ಬರಿದಾಗಿದೆ. ಇದರಲ್ಲಿ ಒಂದು ಹರಿಹರೇಶ್ವರ ವಿಗ್ರಹ ಕೆತ್ತಿತ್ತೆಂದೂ ಮುಸಲ್ಮಾನರು ಮೂಲ ಮೂರ್ತಿಯನ್ನು ಕಿತ್ತುಹಾಕಿದ ಮೇಲೆ ಈ ಮೂರ್ತಿಯನ್ನೇ ತೆಗೆದು ಗರ್ಭಗುಡಿಯಲ್ಲಿರಿಸಿ ಪೂಜೆ ಮಾಡಲಾಗುತ್ತಿತ್ತೆಂದೂ, ಈಗಿರುವ ವಿಗ್ರಹವನ್ನು ಪ್ರತಿಷ್ಠೆ ಮಾಡಿದ ಮೇಲೆ ಆ ವಿಗ್ರಹವನ್ನು ದೇವಸ್ಥಾನದ ವಾಯವ್ಯ ದಿಕ್ಕಿನಲ್ಲಿರುವ ಒಂದು ಸಣ್ಣ ದೇವಾಲಯದಲ್ಲಿರಿಸಿತೆಂದೂ ಜನರು ಹೇಳುತ್ತಾರೆ.*

---

* ದಾವಣಗೆರೆಯ ೨೫ ನೆ ನಂಬರಿನ ಶಾಸನದಲ್ಲಿ ಈ ದೇವಾಲಯವು ಹೀಗೆ ವರ್ಣಿಸಲ್ಪಟ್ಟದೆ.

ದೆಸೆವೆಣ್ಗಳ್ ನೆಲೆಗೊಂಡ ಪುತ್ಥಳಿಗಳಂ ಗೋತ್ರಾದ್ರಿಗಳ ತುಂಗಕೂ।
ಟಸಹಸ್ರಂಗಳ ನಿಂದು ಸೂರ್ಯವಲಯಂಗಳ್ ಪೊಲ್ಪಿನಂ ಕಾಂತಿ ಶೋ॥
ಭಿಸೆ ಚೆಂಬೊಂಗಳ ಸಂಗಳಂ ಹರಿಹರ ಶ್ರೀ ಗೇಹಮಂ ಕೂಡಿ ಮಾ।
ಡಿಸಿದಂ ಧಾರ್ಮಿಕ ಧರ್ಮರಾಜ ತನಯಂ ಪೋಲಾಳ್ವ ದಂಡಾಧಿಪಂ॥

ಅರಸೀಕೆರೆಯ ಈಶ್ವರ ದೇವಾಲಯವು ಈಚೆಗೆ ಕಟ್ಟಿದ್ದು. ಆದರೂ ಶಿಲ್ಪದೃಷ್ಟಿಯಿಂದ ಬಹು ಮುಖ್ಯವಾದದ್ದು. ಇಲ್ಲಿಯ ದೇವರ ಹೆಸರು ಜನರಿಗೆ ಗೊತ್ತೇ ಇಲ್ಲ. ಆದರೆ ಈ ಸ್ಥಳದಲ್ಲಿ ಸಿಕ್ಕಿದ ಒಂದು ಶಾಸನದಿಂದ (ಕ್ರಿ. ಶ. ೧೨೨೦) ಇದರ ಹೆಸರು "ಕತ್ತುವೇಶ್ವರ" ನೆಂದೂ ಹದಿಮೂರನೆಯ ಶತಮಾನ ಆದಿಯಲ್ಲಿ ಎರಡನೆಯ ನರಸಿಂಹನು ಆಳುತ್ತಿದ್ದಾಗ ಪ್ರತಿಷ್ಠಿಸಲ್ಪಟ್ಟಿತೆಂದೂ ಊಹಿಸಬಹುದಾಗಿದೆ. ಇದು ಹಿಂದೆ ವಿವರಿಸಿರುವ ದೇವಾಲಯಗಳಷ್ಟು ದೊಡ್ಡದಾಗಿಲ್ಲ. ಇದರಲ್ಲಿಯೂ ಗರ್ಭಗುಡಿ, ಸುಕನಾಸಿ, ನವರಂಗ, ಮುಖಮಂಟಪ ಇವು ಇವೆ. ನವರಂಗಕ್ಕೂ ಮುಖಮಂಟಪಕ್ಕೂ ಮಧ್ಯೆ ಒಂದು ಅಂಕಣವಿದೆ. ಅದಕ್ಕೆ ಎರಡು ಪಕ್ಕಗಳಲ್ಲಿಯೂ ಒಳಗೆ ಬರುವುದಕ್ಕೆ ದಾರಿ ಇದೆ. ಈ ಅಂಕಣಕ್ಕೂ ನವರಂಗಕ್ಕೂ ಮಧ್ಯೆ ಮತ್ತೊಂದು ಅಂಕಣವಿದೆ. ಈ ಕಟ್ಟಡದಲ್ಲಿ ಅತ್ಯಂತ ರಮಣೀಯವಾದದ್ದು ಮುಖಮಂಟಪ. ಇದರ ವಿನ್ಯಾಸವು ಹಾನಗಲ್ಲಿನ ತಾರಕೇಶ್ವರ ದೇವಾಲಯದಲ್ಲಿರುವಂತೆ ನಕ್ಷತ್ರಾಕಾರವಾಗಿಯೂ ಮೇಲಿನ ಭುವನೇಶ್ವರಿ ಅರ್ಧಗೋಳಾಕಾರವಾಗಿಯೂ ಇವೆ. ಆದರೆ ಹಾನಗಲ್ಲಿನಷ್ಟು ದೊಡ್ಡದಲ್ಲ. ನವರಂಗದಲ್ಲಿ ಸೊಗಸಾಗಿ ಕೆತ್ತಿದ ಕಂಬಗಳಿವೆ. ಎಂಟು ಗೂಡುಗಳಿವೆ. ದೇವಸ್ಥಾನದ ಗೋಡೆಯ ಹೊರಮುಖದಲ್ಲಿಯೂ ಎರಡು ಗೂಡುಗಳಿವೆ. ಈ ಗೂಡುಗಳೆಲ್ಲವೂ ಚಿತ್ರ ಕೆಲಸದಿಂದ ತುಂಬಿವೆ. ನವರಂಗದ ಮಧ್ಯ ಅಂಕಣದ ಒಂದೊಂದು ತೊಲೆಯಲ್ಲಿಯೂ ಒಳಭಾಗಕ್ಕೆ ನಿಂತಿರುವ ಹನ್ನೆರಡು ವಿಗ್ರಹಗಳು ಕೆತ್ತಲ್ಪಟ್ಟಿವೆ. ದೇವಸ್ಥಾನದ ಮೇಲಿರುವ ಗೋಪುರವು ಬಹು ಸುಂದರವಾಗಿಯೂ ಧೃಡವಾಗಿಯೂ ಇದೆ. ಇದರ

ಗಿರಿಯೋ ಕೂಟವೋ ಸೂರ್ಯನೋ ಕಳಶಮೋ ದಿಗ್ಭಿತ್ತಿಯೋ ಭಿತ್ತಿಯೋ।
ದೊರೆವೆತ್ತಾದೆಸೆವೆಣ್ಗಳೋ ಪರಿಲಸತ್ಕಾಂಚಾಳಿಕಾಜಾಳಮೊ ॥
ಪಿರಿದುಂ ನಿಟ್ಟಿಸಬಾರದೆಂದೆನೆ ಜನಂ ಪೋಲಾಳ್ವದಂಡೇಶನ।
ಚ್ಚರಿಯಪ್ಪಂತಿರೆ ಮಾಡಿದಂ ಹರಿಹರ ಶ್ರೀದೇವತಾವಾಸಮುಂ ॥

ಇದು ಪದ್ಮಾವಸಥಂ ದಿವಾಕರನವೋಲ್ ಕೀರ್ತ್ಯನ್ವಿತಂ ಪಾತ್ರದಾ
ನದವೋಲ್ ಸತ್ಕುಮುದಂ ಸರೋವರದವೋಲ್ ಘಂಟಾನ್ವಿತಂ ದಿಗ್ಗಜೇಂ ॥
ದ್ರದವೋಲು ತಾನೆನಿಪನ್ನೆಗಂ ಹರಿಹರ ಶ್ರೀ ಗೇಹಮುಂ ಮಾಡಿದಂ
ಯದು ಭೂಪಾಳನ ದಂಡನಾಥ ತಿಳಕಂ ಪೋಲಾಳ್ವದಂಡಾಧಿಪಂ ॥

ಮೇಲಿದ್ದ ಕಲಶ ಬಿದ್ದುಹೋಗಿ ಬೇರೆ ಅಂದವಿಲ್ಲದ ಕಲಶವನ್ನು ಇಡಲಾಗಿದೆ. ಅದರಂತೆಯೇ ಸುಕನಾಸಿಯ ಮೇಲ್ಭಾಗದಲ್ಲಿ ಸಳನ ವಿಗ್ರಹವು ಇರಬೇಕಾದ ಜಾಗದಲ್ಲಿ ಈಚೆಗೆ ಯಾರೋ ಬಸವನನ್ನು ಕೂರಿಸಿದ್ದಾರೆ. ಮುಂಖಮಂಟಪದ ಮೇಲಿರುವ ಭುವನೇಶ್ವರಿಯು ಅಪೂರ್ವ ರೇಖಾಸಂಯೋಜನಗಳನ್ನು ಒಳ ಗೊಂಡ ವಿನ್ಯಾಸವುಳ್ಳದ್ದಾಗಿದೆ. ಇದರಲ್ಲಿ ಆರು ಸಾಲು ಕೆತ್ತನೆಯ ಕೆಲಸವಿದೆ. ಕೆಳಗಡೆ ಸಾಲಿನಲ್ಲಿ ಮೂರ್ತಿಗಳೂ ಅದರ ಮೇಲಿನದರಲ್ಲಿ ಸಣ್ಣ ಗೂಡುಗಳೂ ಸಿಂಹಗಳೂ ಇವೆ, ಮಿಕ್ಕ ನಾಲ್ಕು ಸಾಲುಗಳಲ್ಲಿ ಕ್ರಮಕ್ರಮವಾಗಿ ಸಣ್ಣದಾಗಿ ರುವ ಮೊಗ್ಗುಗಳು ಕೆತ್ತಲ್ಪಟ್ಟಿವೆ. ಮಧ್ಯದಲ್ಲಿ ಮೇಲಿನಿಂದ ಒಂದು ತಾವರೆಯ ಮೊಗ್ಗು ಕೆಲವು ಅಡಿಗಳಷ್ಟು ಇಳಿಯಬಿದ್ದಿದೆ.

ಒಂದೇ ಗರ್ಭಗುಡಿಉಳ್ಳ ಇನ್ನೂ ಕೆಲವು ದೇವಾಲಯಗಳು ಗಮನಾರ್ಹ ವಾಗಿವೆ.

ತಿಪಟೂರು ತಾಲ್ಲೂಕು ಹುಲ್ಲೆಕೆರೆಯ ಚೆನ್ನಕೇಶವ ದೇವಾಲಯವು ಸೋಮನಾಥಪುರದಲ್ಲಿರುವಂತೆ ಕೈಸಾಲೆ ಮಂಟಪಗಳುಳ್ಳ ಪ್ರಾಕಾರದ ಮಧ್ಯೆ ಇದೆ. ಇದರ ಗೋಪುರವು ಅತ್ಯಂತ ಸುಂದರವಾಗಿದೆ. ಗೋಪುರದ ಮುಂಭಾಗ ದಲ್ಲಿ ಇರುವ ಸಳನ ವಿಗ್ರಹವು ಸ್ಫುಟವಾಗಿ ಕೆತ್ತಲ್ಪಟ್ಟಿದೆ. ಇದನ್ನು ಕಟ್ಟಿದ ಕಾಲ ಕ್ರಿ. ಶ. ೧೧೬೩.

ಕೃಷ್ಣರಾಜಪೇಟೆ ತಾಲ್ಲೂಕು ತೆಂಗಿನಘಟ್ಟದಲ್ಲಿರುವ ಹೊಯಿಸಳೇಶ್ವರ ದೇವಾಲಯವು ಕ್ರಿ. ಶ. ೧೧೫೦ ರಲ್ಲಿ ಕಟ್ಟಿದ್ದು. ಇದರ ಭುವನೇಶ್ವರಿಗಳು ಬಹು ರಮಣೀಯವಾಗಿವೆ. ನವರಂಗದ ಮಧ್ಯೆ ಇರುವ ಭುವನೇಶ್ವರಿಯು ಸುಮಾರು ಎರಡು ಅಡಿ ಆಳವಾಗಿದೆ. ಮಧ್ಯೆ ಒಂಗು ಸೊಗಸಾದ ತಾವರೆಯ ಮೊಗ್ಗು ಬಿಡಿಸಲ್ಪಟ್ಟಿದೆ. ಸುತ್ತಲೂ ಎಂಟು ಸಿಂಹಗಳು ಅದನ್ನು ಅವಲಂಬಿಸಿ ಕೊಂಡು ನಿಂತಿವೆ. ಆಗ್ನೇಯ ದಿಕ್ಕಿನ ಭುವನೇಶ್ವರಿಯಲ್ಲಿ ನಾಲ್ಕು ಹಾವುಗಳು ತಮ್ಮ ಹೆಡೆಗಳಿಂದ ಒಂದು ಕಮಲಪುಷ್ಪದ ಬೀಜಕೇಶವನ್ನು ಊರೆಕೊಟ್ಟು ಹಿಡಿದುಕೊಂಡಿವೆ. ಈ ಕಮಲಪುಷ್ಪವು ಅರಳಿ ನಾಲ್ಕು ಎಸಳುಗಳುಳ್ಳದ್ದಾಗಿದೆ.

ಅರಸೀಕೆರೆ ತಾಲ್ಲೂಕು ಹಾರನ ಹಳ್ಳಿಯಲ್ಲಿಯೂ, ತಿಪಟೂರು ತಾಲ್ಲೂಕು ತುರುವೇಕೆರೆ, ನಾಗಲಾಪುರಗಳಲ್ಲಿಯೂ ದೇವಾಲಯಗಳು ತಕ್ಕ

ಮಟ್ಟಿಗೆ ಚೆನ್ನಾಗಿವೆ. ತಿಪಟೂರು ತಾಲ್ಲೂಕು ಅರಳಗುಪ್ಪೆಯಲ್ಲಿರುವ ಚೆನ್ನ ಕೇಶವ ದೇವಾಲಯವು ಕೆತ್ತನೆಯ ಕೆಲಸ, ಗೋಪುರದ ಆಕಾರ, ಅಲಂಕಾರಾದಿ ಗಳಲ್ಲಿ ಸೋಮನಾಥಪುರದ ದೇವಾಲಯವನ್ನು ಹೋಲುತ್ತದೆ. ಇಲ್ಲಿಯ ಗೋಡೆಯ ಹೊರಮುಖದಲ್ಲಿ ಕೆತ್ತಿರುವ ವಿಗ್ರಹಗಳಿಗೆ ಇತರ ಕಡೆಗಳಲ್ಲಿ ಕಾಣ ಬರದ ಕೆಲವು ಅಪೂರ್ವ ಲಕ್ಷಣಗಳಿವೆ.

ಹಾಸನದ ಡಿಸ್ಟ್ರಿಕ್ಟ್ ಶ್ರವಣಬೆಳಗೊಳದಲ್ಲಿರುವ ಅಕ್ಕನ ಬಸ್ತಿಯು ಈ ಶೈಲಿಯಲ್ಲಿ ಕಟ್ಟಿದ ಕಟ್ಟಡ. ಈ ಬಸದಿಯು ಎರಡನೆಯ ಬಲ್ಲಾಳರಾಯನ ಮಂತ್ರಿಯಾಗಿದ್ದ ಚಂದ್ರಮೌಳಿಯ ಹೆಂಡತಿ ಅಚಿಯಕ್ಕನಿಂದ ಕ್ರಿ. ಶ. ೧೧೮೧ ರಲ್ಲಿ ಕಟ್ಟಲಪ್ಪಟ್ಟಿತೆಂದು ಶಾಸನದಿಂದ ತಿಳಿಯ ಬರುತ್ತದೆ. ಆದ್ದರಿಂದಲೇ ಇದಕ್ಕೆ ಅಕ್ಕನ ಬಸದಿ ಎಂದು ಹೆಸರಾಯಿತು. ಶ್ರವಣಬೆಳಗೊಳದಲ್ಲಿ ಇದು ಒಂದೇ ಕರ್ನಾಟಕ ಶೈಲಿಯ ಕಟ್ಟಡ. ಉಳಿದವುಗಳೆಲ್ಲ ದ್ರಾವಿಡ ರೀತಿಯವು. ಇದರಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮುಖಮಂಟಪ, ಇಷ್ಟು ಭಾಗ ಗಳಿವೆ. ಗರ್ಭಗೃಹದೊಳಗೆ ಇರುವ ವಿಗ್ರಹವು ಪಾರ್ಶ್ವನಾಥ. ಸುಮಾರು ೫ ಅಡಿ ಎತ್ತರವಿದ್ದು ಏಳು ಹೆಡೆಯ ಸರ್ಪದ ಕೆಳಗೆ ನಿಂತಿದೆ. ಸುಕನಾಸಿಯಲ್ಲಿ ಎದುರು ಬದುರಿಗೆ ಧರಣೇಂದ್ರ ಮತ್ತು ಪದ್ಮಾವತಿಯ ವಿಗ್ರಹಗಳಿವೆ. ನವ ರಂಗದಲ್ಲಿ ಮಧ್ಯದ ನಾಲ್ಕು ಕಂಬಗಳು ಕರಿಯ ಕಲ್ಲಿನಲ್ಲಿ ಚೆನ್ನಾಗಿ ಕೆತ್ತಲ್ಪಟ್ಟವೆ. ಅವುಗಳ ಮೇಲಿರುವ ಭುವನೇಶ್ವರಿಯು ಸುಮಾರು ಮೂರು ಅಡಿ ಆಳವಿದ್ದು ಸೊಗಸಾಗಿ ಕೆತ್ತಲ್ಪಟ್ಟಿದೆ. ಇತರ ಭುವನೇಶ್ವರಿಗಳು ಇದೇ ರೀತಿಯವು. ಕಂಬಗಳೆಲ್ಲವೂ ನುಣುಪಾಗಿ ಹಳೇಬೀಡಿನ ಪಾರ್ಶ್ವನಾಥ ಬಸ್ತಿಯಲ್ಲಿರುವಂತೆ ಹೊಳೆಯುತ್ತಿವೆ. ಮುಖಮಂಟಪದ ಒಳಭಾಗದಲ್ಲಿ ಜಗಲಿ, ಅದರ ಹಿಂಭಾಗಕ್ಕೆ ಕಟಾಂಜನವೂ ಇವೆ. ದೇವಾಲಯದ ಗೋಡೆಯ ಹೊರಮುಖದಲ್ಲಿ ಸಣ್ಣ ಸಣ್ಣ ಗೋಪುರಗಳು ಕೆತ್ತಲ್ಪಟ್ಟವೆ. ಗೋಪುರವು ಪೂರ್ತಿಯಾಗಿ ಚಿತ್ರಿತ ವಲ್ಲದಿದ್ದರೂ ಅಂದವಾಗಿದೆ. ಸುಕನಾಸಿಯ ಮೇಲೆ ಗೋಪುರದ ಮುಂಭಾಗ ದಲ್ಲಿ ಜಿನವಿಗ್ರಹವು ಕೆತ್ತಲ್ಪಟ್ಟಿದೆ.

ಶ್ರವಣಬೆಳಗೊಳದ ಉತ್ತರಕ್ಕೆ ಒಂದು ಮೈಲಿ ದೂರದಲ್ಲಿ ಜಿನನಾಥಪುರ ವೆಂಬ ಗ್ರಾಮವಿದೆ. ವಿಷ್ಣುವರ್ಧನನ ದಂಡನಾಯಕನಾದ ಗಂಗರಾಜನು ಈ

ಗ್ರಾಮವನ್ನು ೧೧೧೭ ರಲ್ಲಿ ಸ್ಥಾಪಿಸಿದನೆಂದು ಶಾಸನದಿಂದ ತಿಳಿಯಬರುತ್ತದೆ. ಇಲ್ಲಿ ಕರ್ನಾಟಕ ಶೈಲಿಯಲ್ಲಿ ಒಂದು ದೇವಾಲಯವನ್ನು ಕಟ್ಟಿಸಿ ಅದರಲ್ಲಿ ಶಾಂತಿನಾಥನನ್ನು ಪ್ರತಿಷ್ಠೆ ಮಾಡಿದನು. ಈ ದೇವಾಲಯವು ಸುಂದರವಾಗಿದೆ. ಗರ್ಭಗೃಹ, ಸುಕನಾಸಿ ಮತ್ತು ನವರಂಗ ಇಷ್ಟು ಇವೆ. ಶಾಂತಿನಾಥ ವಿಗ್ರಹವು ಸುಮಾರು ಐದೂವರೆ ಅಡಿ ಎತ್ತರವಿರುವ ಶಾಂತಮೂರ್ತಿ. ಅಕ್ಕಪಕ್ಕಗಳಲ್ಲಿ ಚೌರಿಗಳನ್ನು ಹಿಡಿದುಕೊಂಡು ಹೆಣ್ಣು ವಿಗ್ರಹಗಳು ನಿಂತಿವೆ. ಅಕ್ಕನಬಸ್ತಿಯಲ್ಲಿರುವಂತೆಯೆ ನವರಂಗದ ಕಂಬಗಳು ಸೊಗಸಾಗಿ ಕೆತ್ತಲ್ಪಟ್ಟಿವೆ ಮತ್ತು ಭುವನೇಶ್ವರಿಗಳೆಲ್ಲವೂ ಚಿತ್ರಿತವಾಗಿವೆ. ನವರಂಗದಲ್ಲಿ ಎದುರು ಬದರಿಗೆ ಎರಡು ಗೂಡುಗಳಿವೆ. ಈಗ ಅವು ಬರಿಯದಾಗಿವೆ. ದೇವಾಲಯದ ಹೊರ ಮುಖದ ಗೋಡೆಯ ಮೇಲೆ ಜಿನ ವಿಗ್ರಹಗಳು, ಯಕ್ಷರು, ಯಕ್ಷಿಣಿಯರು, ಬ್ರಹ್ಮ, ಸರಸ್ವತಿ, ಮನ್ಮಥ, ಮೋಹಿನಿ, ಗಾಯಕರು ಈ ವಿಗ್ರಹಗಳು ಕೆತ್ತಲ್ಪಟ್ಟಿವೆ. ಕಳಚೂರ್ಯರ ದಂಡನಾಯಕನಾಗಿದ್ದು ಆಮೇಲೆ ಎರಡನೆಯ ಬಲ್ಲಾಳನ ಆಶ್ರಯದಲ್ಲಿದ್ದ ವಸುಧೈಕ ಬಾಂಧವ ರೇಚಿಮಯ್ಯನೆಂಬುವನು ಈ ಬಸದಿಯನ್ನು ಕಟ್ಟಿಸಿದನು. ಇದು ಕ್ರಿ. ಶ. ೧೨೦೦ ರಲ್ಲಿ ನಿರ್ಮಿಸಿದ್ದೆಂದು ಹೇಳಬಹುದು.

ತಲಕಾಡಿನ ಕೀರ್ತಿನಾರಾಯಣ ದೇವಾಲಯವು ಕ್ರಿ. ಶ. ೧೧೧೭ ರಲ್ಲಿ ವಿಷ್ಣುವರ್ಧನನು ಕಟ್ಟಿಸಿದನೆಂದು ಹೇಳುವ ಐದು ನಾರಾಯಣ ದೇವಾಲಯಗಳಲ್ಲಿ ಒಂದು. ಅವು ಯಾವುವೆಂದರೆ: ಬೇಲೂರಿನ ವಿಜಯನಾರಾಯಣ, ತಲಕಾಡಿನ ಕೀರ್ತಿನಾರಾಯಣ, ಗದುಗಿನ ವೀರನಾರಾಯಣ, ಮೇಲುಕೋಟೆಯ ಚೆಲುವನಾರಾಯಣ, ಕೊಣ್ಣೂರಿನ ಲಕ್ಷ್ಮಿನಾರಾಯಣ. ಕೀರ್ತಿನಾರಾಯಣ ದೇವಾಲಯವು ಬಹುಕಾಲದಿಂದಲೂ ಮರಳಿನಲ್ಲಿ ಹೂತು ಹೋಗಿತ್ತು. ಅದನ್ನು ಈಗ ಹೊರಕ್ಕೆ ಕಾಣುವಂತೆ ಮಾಡಲಾಗಿದೆ. ಈ ದೇವಾಲಯದಲ್ಲಿ ಗರ್ಭಗುಡಿ, ಸುಕನಾಸಿ ಮತ್ತು ನವರಂಗ ಇಷ್ಟು ಭಾಗಗಳಿವೆ. ನವರಂಗದ ಕಂಬಗಳು ಚೆನ್ನಾಗಿ ಕೆತ್ತಿ ಮಾಡಿದವುಗಳಾಗಿವೆ. ಭುವನೇಶ್ವರಿಗಳಲ್ಲಿ ನಾಲ್ಕು ಮಾತ್ರ ಚಿತ್ರಕೆಲಸದಿಂದ ಕೂಡಿವೆ. ಮಿಕ್ಕವು ಅಚಿತ್ರಿತವಾಗಿವೆ. ನವರಂಗಕ್ಕೆ ಪೂರ್ವದಲ್ಲಿ ಒಂದು, ಉತ್ತರದಲ್ಲಿ ಒಂದು, ಈ ರೀತಿ ಎರಡು ದ್ವಾರಗಳಿವೆ.

ಕೀರ್ತಿನಾರಾಯಣ ಮೂರ್ತಿಯು ಸುಮಾರು ಏಳು ಅಡಿ ಎತ್ತರವಿರುವ ಸುಂದರ ವಿಗ್ರಹ. ಕೈಗಳಲ್ಲಿ ಶಂಖಚಕ್ರಗದಾಪದ್ಮ ಧರಿಸಿದೆ. ಈ ದೇವಾಲಯವು ತಲಕಾಡು ಪಟ್ಟಣವು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಊರಿನ ಮಧ್ಯದಲ್ಲಿ ತ್ತಂತೆ. ಅದರಿಂದ ಈ ದೇವರನ್ನು ನಡುಕೇರಿ ನಾರಾಯಣನೆಂದೂ ಕರೆಯು ತ್ತಿದ್ದರಂತೆ.*

---

* ಈ ದೇವಾಲಯದ ವಿಷಯದಲ್ಲಿ ಒಂದು ಸ್ವಾರಸ್ಯವಾದ ಸಂಗತಿ ಹೇಳಲ್ಪಟ್ಟಿದೆ. ೧೬೧೨ ರಲ್ಲಿ ಶ್ರೀರಂಗಪಟ್ಟಣದಲ್ಲಿ ವಿಜಯನಗರದ ಅರಸರ ಅಧಿಕಾರಿಯಾಗಿದ್ದ ಶ್ರೀರಂಗರಾಯರಿಗೆ ಬೆನ್ನುಫಣಿ ಎಂಬ ವ್ರಣ ಜಾಡ್ಯವು ಸಂಭವಿಸಿ ಬದುಕುವುದು ಅಸಾಧ್ಯವೆಂದು ತೋರಿತು. ಆಗ ಅವರು ರಾಜ ಒಡೆಯರವರನ್ನು ಕರೆಯಕಳುಹಿಸಿ....ಶ್ರೀರಂಗಪಟ್ಟಣವನ್ನೂ ಸಿಂಹಾಸನವನ್ನೂ ಸಹಾ ಅವರಿಗೆ ಕೊಟ್ಟು ತಮ್ಮ ಪತ್ನಿಯವರಾದ ಅಲಮೇಲಮ್ಮನವರೊಂದಿಗೆ ತಲಕಾಡು ಸಮೀಪದಲ್ಲಿರುವ ಮಾಲಂಗಿಗೆ ತೆರಳಿ ಅಲ್ಲಿ ಕೆಲವು ದಿನಗಳಿದ್ದು ಕೀರ್ತಿನಾರಾಯಣಸ್ವಾಮಿಯವರ ಪಾದದಲ್ಲಿ ಐಕ್ಯವಾದರು...ಕೆಲವು ಕಾಲಾನಂತರ ಶ್ರೀರಂಗಪಟ್ಟಣದ ರಂಗಸ್ವಾಮಿ ದೇವಸ್ಥಾನದ ಅಧಿಕಾರಿಯು ರಾಜ ಒಡೆಯರವರಲ್ಲಿಗೆ ಬಂದು ಪೂರ್ವದಿಂದಲೂ ಅಮ್ಮನವರಿಗೆ ಶುಕ್ರವಾರ ಮಂಗಳವಾರಗಳಲ್ಲಿ ಅಲಂಕಾರವನ್ನು ಮಾಡುತ್ತಿದ್ದ ದೊಡ್ಡ ಮುತ್ತಿನ ಮೂಗುತಿ ಮುಂತಾದ ರತ್ನಪಡಿ ನಗಗಳನ್ನು ಅಲಮೇಲಮ್ಮನವರು ಕೊಟ್ಟು ಅಲಂಕಾರವನ್ನು ಮಾಡಿಸಿ ಪುನಃ ತರಿಸಿಕೊಳ್ಳುತ್ತಿದ್ದರೆಂತಲೂ ಅವುಗಳನ್ನು ಈಗಲೂ ಅಪ್ಪಣೆಕೊಡಿಸಬೇಕೆಂತಲೂ ಬಿನ್ನವಿಸಿದನು. ರಾಜ ಒಡೆಯರವರು ಬೊಕ್ಕಸದ ಅಧಿಕಾರಿಯನ್ನು ಕರೆಯಿಸಿ ವಿಚಾರಿಸಲಾಗಿ ಅಲಮೇಲಮ್ಮನವರು ಸಂಗಡಲೇ ತೆಗೆದುಕೊಂಡು ಹೋಗಿದ್ದರೆಂದು ಅವನು ಶೃತಪಡಿಸಿದನು. ಅನಂತರವಲ್ಲಿ ರಾಜ ಒಡೆಯರವರು ರಂಗನಾಯಕಿ ಅಮ್ಮನವರಿಗೆ ಅಲಂಕಾರಾರ್ಥವಾಗಿ ಕೊಟ್ಟಿದ್ದ ಆಭರಣಗಳನ್ನು ಈಗಲೂ ಕೊಟ್ಟು ಕಳುಹಿಸಬೇಕೆಂದು ಅಲಮೇಲಮ್ಮನವರಿಗೆ ಅಪ್ಪಣೆಕೊಟ್ಟು ಕಳುಹಿಸಿದರು. ಆಕೆಯು ಕೊಡುವದಿಲ್ಲವೆಂದು ಹೇಳಿಕಳುಹಿಸಲು, "ಈಗ ನಿಮಗೆ ಆಭರಣಗಳಿಂದ ಉಪಯೋಗವಿಲ್ಲ. ಅಮ್ಮನವರ ಅಲಂಕಾರಕ್ಕೆ ಕೊಟ್ಟರೆ ನಿಮ್ಮ ಯಶಸ್ಸು ಬಹುಕಾಲ ಪರ್ಯಂತವೂ ಇರುವುದು. ಇದಕ್ಕೂ ಕೊಡವೆ ಇದ್ದ ಪಕ್ಷದಲ್ಲಿ ಬಲಾತ್ಕಾರದಿಂದ ತರಿಸಿಕೊಳ್ಳಲಾಗುತ್ತದೆ" ಎಂದು ಆಜ್ಞೆ ಮಾಡಿದರು. ಆ ಮಾತನ್ನು ಕೇಳಿ ಅಲಮೇಲಮ್ಮನವರು ದೇವರ ಅಲಂಕಾರಕ್ಕಾಗಿ ಹೇಳಿ ಕಳುಹಿಸಿರುವರೆನ್ನುವದನ್ನು ತಿಳಿದುಕೊಳ್ಳದೆ, ಸ್ತ್ರೀಚಾಪಲ್ಯ ಅಸೂಯಾ ಬುದ್ಧಿಯಿಂದ ರಾಜ ಒಡೆಯರ ವಿಷಯವಾಗಿ ಸಹಿಸಲಶಕ್ಯವಾದ ಕಠಿಣೋಕ್ತಿಯನ್ನು ಹೇಳಿ ಮೂಗುತಿ ಮಾತ್ರ ಕೊಟ್ಟು ಕಡಮೆ ಒಡವೆಗಳನ್ನೆಲ್ಲ ಮಡಲಿನಲ್ಲಿ ಕಟ್ಟಿಕೊಂಡು ಮಾಲಂಗಿ ಮಡುವಿನಲ್ಲಿ ಪ್ರವೇಶಮಾಡಿದರು.

ಬೆಳಗಾಂವಿ ಪಟ್ಟಣದಲ್ಲಿ ಮೂರು ಪುರಾತನ ದೇವಾಲಯಗಳಿವೆ. ಅವುಗಳಲ್ಲಿ ಎರಡು ಜೈನ ಬಸದಿಗಳು, ಒಂದು ವೈಷ್ಣವ ದೇವಾಲಯ. ಜೈನ ಬಸದಿಗಳಲ್ಲಿ ಒಂದು ಉತ್ತರಾಭಿಮುಖವಾಗಿದೆ. ಇನ್ನೊಂದು ದಕ್ಷಿಣಾಭಿಮುಖವಾಗಿದೆ. ಇವೆರಡರಲ್ಲಿ ಮೊದಲನೆಯದೇ ಮುಖ್ಯವಾದದ್ದು. ಗರ್ಭಗುಡಿ, ಸುಕನಾಸಿ, ನವರಂಗ, ಮುಖಮಂಟಪ ಇಷ್ಟು ಇವೆ. ಮುಂದಿರುವ ಮುಖಮಂಟಪವು ಈಚೆಗೆ ಕಟ್ಟಿರಬೇಕೆಂದು ತೋರುತ್ತದೆ. ಮುಖಮಂಟಪದ ಕಂಬಗಳು ದುಂಡಗೆ ನಯಮಾಡಿದವುಗಳಾಗಿವೆ. ಮಧ್ಯದ ಭುವನೇಶ್ವರಿಯು ಅರ್ಧಗೋಳಾಕಾರವಾಗಿದೆ. ಬಾಗಿಲವಾಡವು ಚೆನ್ನಾಗಿ ಕೆತ್ತನೆಯ ಕೆಲಸದಿಂದ ಕೂಡಿದೆ. ದೇವಾಲಯವು ಮಿಲಿಟರಿಯವರ ವಶದಲ್ಲಿದೆ. ಇದು ಈಶ್ವರ ದೇವಾಲಯವಾಗಿತ್ತೆಂದು ತೋರುತ್ತದೆ. ಗರ್ಭಗುಡಿ, ಸುಕನಾಸಿಗಳು ಸಾಪವಾಗಿವೆ. ಸುಕನಾಸಿಯ ಬಾಗಿಲವಾಡವು ಸೊಗಸಾಗಿ ಕೆತ್ತಲ್ಪಟ್ಟಿದೆ. ಒಳಗಿರ ತಕ್ಕ ಗೂಡುಗಳು ಬರಿಯದಾಗಿವೆ. ಕಂಬಗಳು ನಾಜೂಕಾಗಿ ಕೆತ್ತಲ್ಪಟ್ಟಿವೆ.

ಗದಗಿಗೆ ೧೩ ಮೈಲಿ ದೂರದಲ್ಲಿರುವ **ಡಂಬಳದಲ್ಲಿ** ದೊಡ್ಡ ಬಸಪ್ಪ ದೇವಾಲಯವು ಬಹಳ ಸುಂದರವಾದದ್ದು ಮತ್ತು ವಿಚಿತ್ರವಾದದ್ದು. ಇದರಲ್ಲಿ ಗರ್ಭಗುಡಿ ಮತ್ತು ನವರಂಗ ಎರಡೂ ನಕ್ಷತ್ರಾಕಾರದ ವಿನ್ಯಾಸವನ್ನು ಹೊಂದಿರುತ್ತವೆ. ಈ ರೀತಿಯ ವಿನ್ಯಾಸವು ಬಹಳ ಅಪರೂಪ ಇದರಲ್ಲಿ ಗರ್ಭಗುಡಿ, ಸುಕನಾಸಿ, ನವರಂಗ ಇವೆ. ದೇವಸ್ಥಾನದ ಮುಂದೆ ಈಚೆಗೆ ಕಟ್ಟಿರಬಹುದಾದ ನಂದಿಮಂಟಪವಿದೆ. ಗೋಪುರವು ಔತ್ತರೇಯ ಪದ್ಧತಿಯ ರೂಪದಲ್ಲಿದೆ. ಬೇಲೂರು ದೇವಸ್ಥಾನದ ಗರ್ಭಗುಡಿಯ ಮೇಲಿದ್ದ ಗೋಪುರವು ಇದೇ ರೀತಿ

ಆ ದಿನ ರಾತ್ರಿ ಅಲಮೇಲಮ್ಮನವರು ರಾಜ ಒಡೆಯರವರ ಸ್ವಪ್ನದಲ್ಲಿ ಪ್ರತಿಬಂಧಕ ರೂಪವಾಗಿ ಕಾಣಿಸಿಕೊಳ್ಳಲು, ಪ್ರತಿಬಂಧದ ಬಾಧೆಯನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಅಲಮೇಲಮ್ಮನವರ ಚಿನ್ನದ ಪ್ರತಿಮೆಯನ್ನು ಮಾಡಿಸಿ ಪ್ರತಿನಿತ್ಯ ಆ ಪ್ರತಿಮೆಗೆ ಪೂಜೆ ನಡೆಯುವಂತೆ ಕಟ್ಟು ಮಾಡಿದ್ದಲ್ಲದೆ ಮಹಾನವಮಿ ದಿನ ಅರಮನೆಯಲ್ಲಿ ಆ ಸ್ತ್ರೀ ಪ್ರತಿಮೆಗೆ ಆಭರಣಗಳನ್ನು ಧರಿಸಿ ಅತಿ ನೇಮದಿಂದ ಪೂಜೆಮಾಡಿ ಅನೇಕ ಭಕ್ಷ್ಯಭೋಜ್ಯಗಳ ನೈವೇದ್ಯವನ್ನು ಮಾಡಿಸಿ ಎಲ್ಲರೂ ಕಾಣಿಕೆಗಳನ್ನು ಕೊಟ್ಟು ಭಯಭಕ್ತಿಗಳಿಂದ ನಡೆಯುತ್ತೇವೆಂದು ಪ್ರಾರ್ಥನೆಯನ್ನು ಮಾಡಿ ಇದೇ ಮೇರೆಗೆ ವಂಶಪಾರಂಪರ್ಯವಾಗಿ ನಡೆಯುತ್ತಿರಲಿ ಎಂದು ನಿಬಂಧನೆಯನ್ನು ಮಾಡಿದರು." (ವಂಶರತ್ನಾಕರ)

ಇತ್ತೆಂದು ಅದು ಬೀಳುವುದಕ್ಕೆ ಮುಂಚೆ ತೆಗೆದಿದ್ದ ಒಂದು ಫೋಟೋ ಕಾಪಿಯಿಂದ ತಿಳಿಯಬರುತ್ತದೆ. ನವರಂಗದ ಒಳಗಡೆ ಒಂದು ಬ್ರಹ್ಮನ ವಿಗ್ರಹವಿದೆ.

ಗದಗಿನಲ್ಲಿ ತ್ರಿಕೂಟೇಶ್ವರ, ಸರಸ್ವತಿ ಮತ್ತು ಸೋಮೇಶ್ವರ ಎಂಬುದಾಗಿ ಮೂರು ದೇವಾಲಯಗಳಿವೆ. ಇವುಗಳಲ್ಲೆಲ್ಲ ಸರಸ್ವತಿ ದೇವಾಲಯವು ಅತ್ಯಂತ ಸುಂದರವಾದದ್ದು. ತ್ರಿಕೂಟೇಶ್ವರ ದೇವಾಲಯವು ಎರಡು ದೇವಾಲಯಗಳು ಸೇರಿಸಿ ಕಟ್ಟಿದ ದೇವಾಲಯ. ಒಂದು ಗರ್ಭಗುಡಿ, ಸುಕನಾಸಿ, ನವರಂಗ ಮತ್ತು ಸಣ್ಣ ಮುಖಮಂಟಪ. ಇಷ್ಟೆ ಮೊದಲು ಇತ್ತೆಂದು ತೋರುತ್ತದೆ. ಈಚೆಗೆ ನವರಂಗದ ಒಳಭಾಗದಲ್ಲಿ ಸಣ್ಣ ಸಣ್ಣ ಕೊಠಡಿಗಳನ್ನು ಮಾಡಿದ್ದಾರೆ. ಪ್ರದಕ್ಷಿಣೆಗೋಸ್ಕರ ಸ್ವಲ್ಪ ಜಾಗವನ್ನು ಮಾತ್ರ ಬಿಟ್ಟಿದೆ. ಈ ದೇವಸ್ಥಾನದ ಎದುರಿಗೆ ಗರ್ಭಗುಡಿ, ಸುಕನಾಸಿ ಒಂದು ಹಜಾರ ಇಷ್ಟು ಉಳ್ಳ ಮತ್ತೊಂದು ದೇವಾಲಯವಿದೆ. ಇವೆರಡು ದೇವಾಲಯಗಳನ್ನು ಸೇರಿಸಿ ಒಂದು ಮಧ್ಯಂಕಣವಿದೆ. ಹಜಾರದ ಒಳಭಾಗದಲ್ಲಿ ಎತ್ತರವಾದ ಜಗಲಿಯೂ ಅದರ ಮೇಲೆ ಕಟಾಂಜನವೂ ಇವೆ. ದೇವಾಲಯದ ಮೇಲಿನ ಗೋಪುರವು ಇಟ್ಟಿಗೆ ಗಾರೆಯಿಂದ ಕಟ್ಟಲ್ಪಟ್ಟು ದೇವಾಲಯದ ಅಂದವನ್ನು ಕೆಡಿಸಿದೆ. ಈ ದೇವಾಲಯದಲ್ಲಿ ಅನೇಕ ಶಾಸನಗಳು ಕಂಡು ಬರುತ್ತವೆ. ಅವುಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದದ್ದು ಕ್ರಿ. ಶ. ೧೦೬೨ ರದು. ಆದ್ದರಿಂದ ಈ ದೇವಾಲಯವು ಅದಕ್ಕಿಂತಲೂ ಮುಂಚೆಯೇ ಕಟ್ಟಿರಬೇಕೆಂದು ಹೇಳಬಹುದು.

ಸರಸ್ವತಿ ದೇವಾಲಯವು ಹಿಂದಿನ ದೇವಾಲಯದ ಆವರಣದಲ್ಲಿಯೇ ಅದರ ದಕ್ಷಿಣಕ್ಕೆ ಅದರ ಹತ್ತಿರದಲ್ಲಿಯೇ ಉತ್ತರಾಭಿಮುಖವಾಗಿ ಇದೆ. ಗರ್ಭಗುಡಿ, ಸುಕನಾಸಿ ಮತ್ತು ಹಜಾರ ಇಷ್ಟು ಇವೆ. ದೇವಸ್ಥಾನವು ಹೊರಗಡೆ ನೋಡುವುದಕ್ಕೆ ಅಷ್ಟೇನೂ ಚೆನ್ನಾಗಿಲ್ಲ. ಆದರೆ ಒಳಗಡೆ ಮಾತ್ರ ಬಹಳ ಅದ್ಭುತವಾದ ಚಿತ್ರಕೆಲಸದಿಂದ ಕೂಡಿದೆ. ಬೇಲೂರಿನಲ್ಲಿರುವಂತೆಯೇ ಕಂಬಗಳೆಲ್ಲವೂ ಮೇಲಿನಿಂದ ಕೆಳಗಿನವರೆಗೂ ಚಿತ್ರದಿಂದ ಕೂಡಿದವುಗಳಾಗಿ ಒಂದರಂತೆ ಮತ್ತೊಂದಿರುವುದಿಲ್ಲ. ಎಲ್ಲವೂ ನಾಜೂಕಾಗಿ ಕೆತ್ತಲ್ಪಟ್ಟಿವೆ. ಹಜಾರದ ಮಧ್ಯಂಕಣದ ನಾಲ್ಕು ಕಂಬಗಳು ಒಂದು ತರಹ, ಉಳಿದ ಕಂಬಗಳೆಲ್ಲೆಲ್ಲ ಎರಡೆರಡು ಒಂದೇ ಸಮನಾಗಿ ಕೆತ್ತಲ್ಪಟ್ಟಿವೆ. ಮಧ್ಯಂಕಣದ ಭುವನೇ

ಶ್ವರಿಯಂತೂ ಬಹು ಸುಂದರವಾಗಿದೆ. ಈ ತರಹದ ಭುವನೇಶ್ವರಿಯು ಇನ್ಯಾವ ದೇವಾಲಯದಲ್ಲಿಯೂ ಕಾಣಬರುವುದಿಲ್ಲ.

ಸೋಮೇಶ್ವರ ದೇವಾಲಯವು ಊರು ಮಧ್ಯದಲ್ಲಿದೆ. ಪಾಳುಬಿದ್ದು ಹೋಗಿದೆ. ಇದನ್ನು ಈಗ ಪಾಠಶಾಲೆಯಾಗಿ ಉಪಯೋಗಿಸುತ್ತಿದ್ದಾರೆ ಈ ದೇವಾಲಯವು ಕಟ್ಟಿದಾಗ ಬಹಳ ಸುಂದರವಾಗಿತ್ತೆಂದು ತೋರುತ್ತದೆ. ಅದರ ಬಾಗಿಲುವಾಡವೂ ಮುಖಮಂಟಪದ ಭುವನೇಶ್ವರಿಯೂ ಚಿತ್ರಗಳಿಂದ ಕೆತ್ತಲ್ಪಟ್ಟವೆ.

ಇಟ್ಟಗಿಯ ಮಹಾದೇವ ದೇವಾಲಯವನ್ನು ಕರ್ನಾಟಕ ಶೈಲಿಯ ದೇವಾಲಯಗಳಲ್ಲಿ ಅತ್ಯುತ್ತಮ ದರ್ಜೆಗೆ ಸೇರಿಸುವುದಕ್ಕೆ ಅರ್ಹವಾಗಿದೆ.* ಗರ್ಭಗುಡಿ, ಸುಕನಾಸಿ, ನವರಂಗ ಮುಖಮಂಟಪ ಇಷ್ಟು ಭಾಗಗಳಿವೆ. ದೇವಾಲಯವು ಪೂರ್ವಾಭಿಮುಖವಾಗಿದೆ. ನವರಂಗದಲ್ಲಿ ದೇವರ ಎದುರಿಗೆ ಒಂದು ವಿಗ್ರಹವಿದೆ. ನವರಂಗದ ಗೋಡೆಗಳಲ್ಲಿ ಗೂಡುಗಳಿವೆ. ಸೊಗಸಾಗಿ ಕೆತ್ತಲ್ಪಟ್ಟವೆ. ಗೋಪುರವು ಅರ್ಧ ಬಿದ್ದು ಹೋಗಿದೆ. ಗೋಪುರದಲ್ಲಿ ಶಿಲ್ಪಿಯು ನಾನಾ ಭಂಗಿಯಲ್ಲಿರುವ ಕಪಿಗಳ ಗುಂಪನ್ನು ಕೆತ್ತಿ ನಿಲ್ಲಿಸಿರುವುದು ಪ್ರೇಕ್ಷಕರಿಗೆ ಆನಂದವನ್ನುಂಟುಮಾಡುತ್ತದೆ. ಇದನ್ನು ದೇವಾಲಯ ಚಕ್ರವರ್ತಿ ಎಂದು ಕರೆಯುತ್ತಾರೆ. ಈ ದೇವಸ್ಥಾನವನ್ನು ಆರನೆಯ ವಿಕ್ರಮಾದಿತ್ಯನ ದಂಡನಾಯಕನಾಗಿದ್ದ ಮಹದೇವನು ತನ್ನ ಜನ್ಮಸ್ಥಳವಾದ ಈ ಊರಿನಲ್ಲಿ ಕಟ್ಟಿಸಿದನೆಂದು ಶಾಸನದಿಂದ ತಿಳಿಯಬರುತ್ತದೆ.

ಬಂಕಾಪುರದಲ್ಲಿ ಕೋಟೆಗೆ ದಕ್ಷಿಣದಲ್ಲಿ ಅರವತ್ತು ಕಂಬದ ದೇವಾಲಯವೆಂದು ಹೆಸರಿನ ಕಟ್ಟಡವಿದೆ. ಇದು ವಿನ್ಯಾಸದಲ್ಲಿ ಹಾನಗಲ್ಲಿನ ತಾರಕೇಶ್ವರ ದೇವಾಲಯದಂತೆಯೇ ಇದೆ.

ಹಾನಗಲ್ಲು ಊರಿನಲ್ಲಿ ತಾರಕೇಶ್ವರ ದೇವಾಲಯವು ಅನೇಕ ಅಂಶಗಳಲ್ಲಿ ಗಮನಾರ್ಹವಾದ ಕಟ್ಟಡ. ಹಾನಗಲ್ಲು ಪೂರ್ವದಲ್ಲಿ ವಿರಾಟ ನಗರ

---

* ದೇವಾಲಯವು ೧೨೦ ಅಡಿ ಉದ್ದವೂ ೬೦ ಅಡಿ ಅಗಲವೂ ಇದೆ. ಗೋಪುರದ ಎತ್ತರ ಸುಮಾರು ೪೦ ಅಡಿಯಷ್ಟು ಇತ್ತೆಂದು ತೋರುತ್ತದೆ. ಈಗ ಅದರ ಕೊಂಚ ಭಾಗ ಬಿದ್ದುಹೋಗಿದೆ.

ವಾಗಿತ್ತೆಂದು ಪ್ರತೀತಿ. ಇಲ್ಲಿರುವ ತಾರಕೇಶ್ವರ ದೇವಾಲಯವು ಧಾರವಾಡ ಡಿಸ್ಟ್ರಿಕ್ಟಿನಲ್ಲೆಲ್ಲ ದೊಡ್ಡದು ಮತ್ತು ಸುಂದರವಾದದ್ದು. ಗರ್ಭಗುಡಿ, ಸುಕನಾಸಿ, ನವರಂಗ ಮತ್ತು ಮುಖಮಂಟಪ ಇಷ್ಟು ಭಾಗಗಳಿವೆ. ನವರಂಗಕ್ಕೆ ಎರಡು ಬಾಗಿಲುಗಳಿವೆ. ನವರಂಗದ ಮುಂದುಗಡೆ ಅರಸೀಕೆರೆಯ ದೇವಸ್ಥಾನದಲ್ಲಿರು ವಂತೆ ಮುಖಮಂಟಪದ ವಿನ್ಯಾಸವು ನಕ್ಷತ್ರಾಕಾರದಲ್ಲಿದೆ ಮತ್ತು ಭುವನೇಶ್ವರಿಯು ತೊಡಕು ತೊಡಕಾದ ರೇಖಾ ವಿನ್ಯಾಸದೊಡನೆ ಆಶ್ಚರ್ಯವನ್ನುಂಟುಮಾಡುತ್ತದೆ. ಅರ್ಧಗೋಳಾಕಾರವಾಗಿದ್ದು ಅದರ ವಿನ್ಯಾಸವು ೨೧ ಅಡಿಗಳು ಮತ್ತು ೯ ಅಡಿಗಳು ಎತ್ತರವಾಗಿದೆ. ಇದರಲ್ಲಿ ೫ ಚಿತ್ರ ಸಾಲುಗಳಿವೆ. ಮಧ್ಯದಲ್ಲಿ ಮೇಲಿನಿಂದ ಕೆಳಕ್ಕೆ ೫ ಅಡಿಯಷ್ಟು ಕಮಲದ ಹೂವು ಇಳಿಯಬಿದ್ದಿದೆ. ಕಂಬಗಳ ಮೇಲುಗಡೆ ಅಷ್ಟದಿಕ್ಪಾಲಕರ ವಿಗ್ರಹಗಳು ಕೆತ್ತಲ್ಪಟ್ಟವೆ. ಒಟ್ಟಿನಲ್ಲಿ ಈ ದೇವಾಲಯವು ಅತ್ಯಂತ ಮನೋಹರವಾಗಿದೆ.

ಗದಗಿಗೆ ೭ ಮೈಲು ದೂರದಲ್ಲಿರುವ ಲಕ್ಕುಂಡಿಯು ವಾಸ್ತುಶಿಲ್ಪದ ದೃಷ್ಟಿಯಿಂದ ಬಹಳ ಪ್ರಾಮುಖ್ಯವಾದದ್ದು. ಇದರ ಮೊದಲಿನ ಹೆಸರು ಲೊಕ್ಕಿಗುಂಡಿ* ಎಂದು. ಇಲ್ಲಿ ಕಾಶಿವಿಶ್ವೇಶ್ವರ ಮತ್ತು ನನ್ನೇಶ್ವರ ಎರಡು ದೇವಾಲಯಗಳೂ ಒಂದು ಜೈನ ಬಸದಿಯೂ ಇವೆ. ಇದು ಹೊಯಿಸಳ ರಾಜನಾದ ವೀರಬಲ್ಲಾಳದೇವನ ರಾಜಧಾನಿಯಾಗಿತ್ತು. ಕಾಶಿವಿಶ್ವೇಶ್ವರ ದೇವಾಲಯದಲ್ಲಿ ಕರ್ನಾಟಕ ಶಿಲ್ಪಿಗಳು ತೋರಿಸಿರುವ ನೈಪುಣ್ಯವನ್ನು ಎಷ್ಟು ಕೊಂಡಾಡಿದರೂ ಸಾಲದು. ಕಂಬಗಳೇ ಆಗಲಿ, ಬಾಗಿಲುವಾಡಗಳೇ ಆಗಲಿ, ಒಂದೊಂದೂ ಮನಸ್ಸನ್ನು ಸೆಳೆಯುತ್ತವೆ. ದಕ್ಷಿಣ ದಿಕ್ಕಿನ ಬಾಗಿಲುವಾಡವಂತೂ ಆಶ್ಚರ್ಯವನ್ನುಂಟುಮಾಡುವಂಥದು. ಶಿಲ್ಪಿಗಳು ಈ ಬಾಗಿಲುವಾಡಗಳಲ್ಲಿ ಕೊರೆದಿರುವ ಬಳ್ಳಿಗಳು, ವಿಗ್ರಹಗಳು ಮತ್ತು ಸಣ್ಣ ಸಣ್ಣ ಕೆತ್ತನೆಯ ಕೆಲಸಗಳೂ ಅತ್ಯಂತ ಸೂಕ್ಷ್ಮವಾದ ಆಯುಧಗಳಿಂದ ಕೆತ್ತಿದವುಗಳಾಗಿವೆ. ಇಲ್ಲಿರುವ ಜೈನ ಬಸದಿಯ ಮೇಲೆ ಮಾತ್ರ ಗೋಪುರವಿದೆ, ಉಳಿದ ಎರಡರ ಮೇಲೂ ಇರುವದಿಲ್ಲ. ಇದೇ ಇಲ್ಲಿ ಅತ್ಯಂತ ಪ್ರಾಚೀನವಾದದ್ದೆಂದು ತೋರುತ್ತದೆ.

---

* ಬ್ರಹ್ಮನು ಸ್ವರ್ಗದ ಅಮರಾವತಿ ಪಟ್ಟಣವನ್ನೂ ಲಕ್ಕುಂಡಿಯನ್ನೂ ತಕ್ಕಡಿಯಲ್ಲಿಟ್ಟು ತೂಗಿದನಂತೆ. ಲಕ್ಕುಂಡಿಯೇ ಭಾರವಾಗಿ ಇಳಿದು ಭೂಮಿಗೆ ಬಂತಂತೆ.

ಹರಪನಹಳ್ಳಿ ತಾಲ್ಲೂಕು ಕುರವತ್ತಿಯಲ್ಲಿರುವ ಮಲ್ಲಿಕಾರ್ಜುನ ದೇವಾಲಯವು ತಲವಿನ್ಯಾಸದಲ್ಲಿಯೂ ಮುಖವಿನ್ಯಾಸದಲ್ಲಿಯೂ ಮತ್ತು ಇನ್ನೂ ಇತರ ವಿಧಗಳಲ್ಲಿಯೂ ಒಂದು ಮಾದರಿ ದೇವಸ್ಥಾನವಾಗಿ ಪರಿಗಣಿಸಬಹುದು. ದೇವಸ್ಥಾನವೇನೂ ಅಷ್ಟು ದೊಡ್ಡದಾಗಿಲ್ಲ. ೩೬ ಅಡಿ ಅಗಲ ಮತ್ತು ವಿಮಾನವು ೪೪ ಅಡಿ ಎತ್ತರವಿದ್ದು ದೇವಸ್ಥಾನದ ಮುಂಭಾಗದಲ್ಲಿರುವ ನಂದಿ ಮಂಟಪವನ್ನು ಸೇರಿಸಿಕೊಂಡರೆ ಒಟ್ಟು ೧೩೦ ಅಡಿ ಉದ್ದವಾಗುತ್ತದೆ. ದೇವಸ್ಥಾನದ ಹೊರಮುಖದಲ್ಲಿ ಅಷ್ಟೇನೂ ಹೆಚ್ಚು ಅಲಂಕಾರವಿಲ್ಲ. ಒಳಗಡೆ ಸುಕನಾಸಿಯ ಬಾಗಿಲವಾಡವು ಬಹು ಅಂದವಾಗಿಯೂ ನುಣುಪಾಗಿಯೂ ಕೆತ್ತಲ್ಪಟ್ಟಿದೆ. ಮತ್ತು ನವರಂಗದ ಕಂಬಗಳ ಮೇಲಿರುವ ಮದನಿಕೆ ವಿಗ್ರಹಗಳು ಬಹು ಸುಂದರವಾಗಿವೆ.

ಮೈಸೂರು ನಗರದ ಕೋಟೆಯ ಪ್ರಾಕಾರದಲ್ಲಿ ವರಾಹಸ್ವಾಮಿ ದೇವಾಲಯವಿದೆ. ಇದು ಕರ್ನಾಟಕ ಶೈಲಿಯ ಕಟ್ಟಡ.

ಪ್ರಪಂಚದ ಸುಪ್ರಸಿದ್ಧವಾದ ಕಟ್ಟಡಗಳಲ್ಲಿ ಒಂದಾದ ಹಳೇಬೀಡು ಹೊಯಿಸಳೇಶ್ವರ ದೇವಾಲಯದಲ್ಲಿ ಎರಡು ಗರ್ಭಗೃಹಗಳಿರುವುವಾದರೂ ಎರಡು ಗರ್ಭಗೃಹಗಳ ಳ್ಳ ಕಟ್ಟಡಗಳು ಹೇರಳವಾಗಿ ಕಂಡುಬರುವುದಿಲ್ಲ. ಮೊದಲು ಈ ತರದ ದೇವಸ್ಥಾನಗಳಲ್ಲಿ ಪೂರ್ವಾಭಿಮುಖವಾಗಿ ಒಂದು, ಉತ್ತರ ಅಥವಾ ದಕ್ಷಿಣಾಭಿಮುಖವಾಗಿ ಒಂದು—ಹೀಗೆ ಎರಡು ಗರ್ಭಗೃಹಗಳನ್ನು ಒಂದೇ ನವರಂಗಕ್ಕೆ ಸೇರಿರುವ ಹಾಗೆ ಕಟ್ಟುತ್ತಿದ್ದಂತೆ ತೋರುತ್ತದೆ. ಗರ್ಭಗೃಹಕ್ಕೂ ನವರಂಗಕ್ಕೂ ಮಧ್ಯೆ ಸುಕನಾಸಿಗಳು ಇರುವದೂ ಉಂಟು, ಇಲ್ಲದೇ ಇರುವುದೂ ಉಂಟು. ಆಮೇಲೆ ಕೆಲವು ಕಾಲಾನಂತರ ಎರಡು ಗರ್ಭಗುಡಿಗಳನ್ನೂ ಒಂದೇ ಸಾಲಿನಲ್ಲಿ ಪೂರ್ವಾಭಿಮುಖವಾಗಿ ಕಟ್ಟಿ ಪ್ರತಿಯೊಂದರ ಮುಂದೆಯೂ ಒಂದೊಂದು ನವರಂಗವನ್ನೂ ಕಟ್ಟಿ ಅವೆರಡನ್ನೂ ಸೇರಿಸುವಂತೆ ಒಂದು ಮೂರು ಅಂಕಣದ ಸಂಧ್ಯಂಕಣವನ್ನು ನಿರ್ಮಿಸಿ ಇವೆಲ್ಲವೂ ಸೇರಿ ಒಂದು ದೊಡ್ಡ ಹಜಾರವಾಗಿ ಪರಿಣಮಿಸುವಂತೆ ಕಟ್ಟುತ್ತಿದ್ದರು. ಬೇಲೂರಿನ ಕಪ್ಪೆಚೆನ್ನಿಗರಾಯನ ದೇವಾಲಯ ಮೊದಲಿನ ತರಹಕ್ಕೆ ಉದಾಹರಣೆ. ಹಳೆಯಬೀಡಿನ ಹೊಯಿಸಳೇಶ್ವರ ದೇವಾಲಯ ಎರಡನೆಯ ಪದ್ಧತಿಗೆ ಉದಾಹರಣೆ. ಬೆಳಗಾಂವಿಯ

ತ್ರಿಪುರಾಂತಕೇಶ್ವರ ದೇವಾಲಯ, ಚನ್ನಗಿರಿಯ ಕಲ್ಲೇಶ್ವರ ದೇವಾಲಯ, ಕೃಷ್ಣ ರಾಜಪೇಟೆ ತಾಲ್ಲೂಕು ಸಿದ್ಧಗಟ್ಟದ ಸಂಗಮೇಶ್ವರ ದೇವಾಲಯ, ಅರಸೀಕೆರೆ ಯಲ್ಲಿರುವ ಹಳುವಕಲ್ಲು ದೇವಾಲಯ, ಇವು ಎರಡು ಗರ್ಭಗುಡಿಗಳುಳ್ಳ ಇತರ ದೇವಾಲಯಗಳು. ಇವುಗಳಲ್ಲಿ ಬೆಳಗಾಂವಿಯ ದೇವಾಲಯವು ನೋಡ ಬೇಕಾದ್ದು. ಇದರಲ್ಲಿ ಪೂರ್ವಾಭಿಮುಖವಾಗಿ ಒಂದು, ದಕ್ಷಿಣಾಭಿಮುಖವಾಗಿ ಒಂದು, ಈ ರೀತಿ ಎರಡು ಗರ್ಭಗುಡಿಗಳಿವೆ. ಗರ್ಭಗುಡಿಗಳ ಮುಂದುಗಡೆ ಸುಕನಾಸಿಗಳಿವೆ. ಅವುಗಳ ಮುಂದೆ ನವರಂಗವಿದೆ. ಚನ್ನಗಿರಿಯಲ್ಲಿರುವ ಕಲ್ಲೇಶ್ವರ ದೇವಾಲಯವೂ ಇದೇ ರೀತಿ ಇದೆ. ಸಿದ್ಧಗಟ್ಟದ ದೇವಾಲಯದಲ್ಲಿ ಗರ್ಭಗುಡಿಗಳು ಒಂದೇ ಸಾಲಿನಲ್ಲಿವೆ. ಅವುಗಳ ಮುಂದೆ ಸುಕನಾಸಿಗಳಿವೆ. ಎರಡು ನವರಂಗಗಳೂ ಮಧ್ಯೆ ಸಂಧ್ಯಂಕಣವೂ ಇವೆ. ಸಂಧ್ಯಂಕಣಗಳ ಛಾವಣಿ ತಟ್ಟೆಯಾಗಿಯೂ ಉಳಿದ ಛಾವಣಿ ಅರ್ಧಗೋಳಾಕಾರವಾದ ಭುವನೇಶ್ವರಿಗಳುಳ್ಳ ದ್ದಾಗಿಯೂ ಇದೆ.

ಹಳುವಕಲ್ಲು ದೇವಾಲಯವು ಅರಸೀಕೆರೆಯ ಕತ್ತಮೇಶ್ವರದ ದೇವಾ ಲಯದ ಪಕ್ಕದಲ್ಲಿದೆ. ಇದಕ್ಕೂ ಶಿವಲಿಂಗಗಳನ್ನುಳ್ಳ ಎರಡು ಗರ್ಭಗುಡಿಗಳು, ಎರಡು ಸುಕನಾಸಿಗಳು, ಸಂಧ್ಯಂಕಣಗಳಿಂದ ಸೇರಿಸಲ್ಪಟ್ಟ ಎರಡು ನವರಂಗಗಳು ಇವೆ. ಎರಡು ಗರ್ಭಗೃಹಗಳ ಮಧ್ಯೆ ನವರಂಗದಲ್ಲಿ ಒಂದು ಗೂಡು ಇದೆ. ಈ ಹಜಾರದಲ್ಲಿ ಕೆಂಗಲ್ಲಿನ ಇಪ್ಪತ್ತುನಾಲ್ಕು ಕಂಬಗಳಿವೆ. ಭುವನೇಶ್ವರಿಗಳ ಕೆತ್ತನೆಯ ಕೆಲಸವು ಚೆನ್ನಾಗಿದೆ. ಈ ದೇವಾಲಯವು ಕ್ರಿ. ಶ. ೧೨೦೦ ರಲ್ಲಿ ಕಟ್ಟಿದ್ದಿರಬೇಕೆಂದು ಊಹಿಸಲು ಸಾಕಷ್ಟು ಆಧಾರಗಳಿವೆ.

ಬೆಳಗಾಮಿಗೆ ದಕ್ಷಿಣಕ್ಕೆ ೨೫ ಮೈಲಿ ದೂರವಿರುವ ದಿಗಾಂವೆ ಎಂಬ ಸ್ಥಳದಲ್ಲಿ ಕಮಲನಾರಾಯಣನ ದೇವಾಲಯವಿದೆ. ಅದನ್ನು ಅಲ್ಲಿಯ ಜನರು ಕಲ್ಲುಗುಡಿ ಎಂದು ಕರೆಯುತ್ತಾರೆ. ದೇವಾಲಯವು ಪೂರ್ವಾಭಿಮುಖವಾಗಿದೆ. ಎರಡು ಗರ್ಭಗೃಹಗಳು, ಎರಡು ಸುಕನಾಸಿಗಳು, ಎರಡು ನವರಂಗಗಳು ಹೀಗೆ ಎರಡು ಗುಡಿಗಳು ಒಂದರ ಪಕ್ಕದಲ್ಲಿ ಒಂದು ಕಟ್ಟಿ ಸಂಧ್ಯಂಕಣದಿಂದ ಎರಡು ನವರಂಗಗಳನ್ನೂ ಸೇರಿ ಒಂದು ದೊಡ್ಡ ಹಜಾರವನ್ನೂ ಮಾಡಲಾಗಿದೆ. ಈ ಹಜಾರದಲ್ಲಿ ಸಂಧ್ಯಂಕಣಗಳಲ್ಲಿ ಒಂದನ್ನು ಗೃಹವನ್ನಾಗಿ ಪರಿವರ್ತಿಸಲಾಗಿದೆ.

ದಕ್ಷಿಣಕ್ಕೆ ಇರುವ ಗರ್ಭಗೃಹದಲ್ಲಿ ಸರಸ್ವತಿ ವಿಗ್ರಹವೂ, ಉತ್ತರಕ್ಕೆ ಇರುವುದರಲ್ಲಿ ಮಹಾಕಾಳಿ ವಿಗ್ರಹವೂ ಇವೆ ಹಜಾರದಲ್ಲಿ ಸಂಧ್ಯಂಕಣದ ಗೃಹದಲ್ಲಿ ಕಮಲ ನಾರಾಯಣ ವಿಗ್ರಹವಿದೆ. ಹಜಾರದ ಪೂರ್ವದಿಕ್ಕಿನ ಗೋಡೆಯಲ್ಲಿ ಎರಡು ಗೃಹಗಳಿಗೆ ಎದುರಾಗಿ ಎರಡು ದ್ವಾರಗಳೂ ಉತ್ತರ ದಿಕ್ಕಿನ ಗೋಡೆಯಲ್ಲಿ ಒಂದು ದ್ವಾರವೂ ಇವೆ. ಇವೆಲ್ಲವೂ ಸುಂದರವಾಗಿ ಕೆತ್ತಲ್ಪಟ್ಟವೆ. ಹಜಾರದ ದಕ್ಷಿಣ ದಿಕ್ಕಿನ ಗೋಡೆಯಲ್ಲಿ ಒಳಭಾಗಕ್ಕೆ ಒಂದು ಗೂಡು ಇದೆ. ಹಜಾರದ ಮುಂಭಾಗದಲ್ಲಿ ಎತ್ತರವಾದ ಕಟಾಂಜನವೂ ಅದಕ್ಕೆ ಅಂಟಿಕೊಂಡು ಒಳಭಾಗ ದಲ್ಲಿ ಹಜಾರದ ಕಂಬಗಳೂ ಜಗಲಿಯೂ ಇವೆ. ಹಜಾರದ ಕಂಬಗಳು ಅಂದ ವಾಗಿ ಕೆತ್ತಲ್ಪಟ್ಟವೆ. ಕಟಾಂಜನದ ಹೊರಮುಖವು ಚಿತ್ರಗಳಿಂದ ತುಂಬಿದೆ. ಅಲ್ಲದೆ ಮುಂಭಾಗದ ಕಂಬಗಳ ಮೇಲೆ ಸುಂದರವಾದ ಮದನಿಕೆ ವಿಗ್ರಹಗಳಿವೆ. ಒಳಗಿನ ಭುವನೇಶ್ವರಿಗಳಲ್ಲಿ ಕೆಲವು ತಟ್ಟೆಯಾಗಿವೆ. ಇನ್ನೂ ಕೆಲವು ಅರ್ಧ ಗೋಳಾಕಾರವಾಗಿವೆ. ಹೀಗೆ ಗೋಳಾಕಾರವಾಗಿರುವ ಭುವನೇಶ್ವರಿಗಳು ಅತ್ಯಂತ ಮನೋಹರವಾಗಿವೆ. ಅಲ್ಲಿರುವ ಜನರು ರಾಜಾಸ್ಥಾನದಲ್ಲಿರುವ ಮೌಂಟ್‌ಆಬುವಿನಲ್ಲಿರುವ ಜೈನ ದೇವಾಲಯದ ಭುವನೇಶ್ವರಿಯ ಮಾದರಿಯಲ್ಲಿ ಕಟ್ಟಿದ್ದೆಂದು ಹೇಳುತ್ತಾರೆ.

ಅಲ್ಲಿರುವ ಒಂದು ಶಾಸನದಲ್ಲಿ ಅದನ್ನು ತಿಪ್ಪೋಜನೆಂಬುವನು ಕ್ರಿ. ಶ. ೧೧೧೭೫ ರಲ್ಲಿ ಕಟ್ಟಿಸಿ ದತ್ತಿಯನ್ನು ಬಿಟ್ಟನೆಂದು ಹೇಳಿದೆ.

ಸಾಧಾರಣವಾಗಿ ಕರ್ನಾಟಕದ ದೇವಾಲಯಗಳಲ್ಲಿ ತ್ರಿಕೂಟಾಚಲ ದೇವಾಲಯಗಳೇ ಹೆಚ್ಚು. ಅವುಗಳಲ್ಲಿ ಮುಖ್ಯವಾದವುಗಳು: (೧) ಸೊರಬ ತಾಲ್ಲೂಕು ಬೆಳಗಾವಿಯಲ್ಲಿರುವ ಕೇದಾರೇಶ್ವರ ದೇವಾಲಯ, (೨) ಬೇಲೂರು ತಾಲ್ಲೂಕು ಹಳೇಬೀಡಿನಲ್ಲಿರುವ ಕೇದಾರೇಶ್ವರ ದೇವಾಲಯ, (೩) ಚಿಕ್ಕ ಮಗಳೂರು ತಾಲ್ಲೂಕು ಬೆಳವಾಡಿಯಲ್ಲಿರುವ ವೀರನಾರಾಯಣ ದೇವಾಲಯ, (೪) ಚನ್ನರಾಯಪಟ್ಟಣದ ತಾಲ್ಲೂಕು ನುಗ್ಗಿಹಳ್ಳಿಯಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯ, (೫) ಕೃಷ್ಣರಾಜಪೇಟೆ ತಾಲ್ಲೂಕು ಹೊಸಹೊಳಲಿನ ಲಕ್ಷ್ಮೀ ನಾರಾಯಣ ದೇವಾಲಯ, (೬) ತುರುವೇಕೆರೆ ತಾಲ್ಲೂಕು ಮೂವುತ್ತನ ಹಳ್ಳಿ ಯಲ್ಲಿರುವ ಈಶ್ವರ ದೇವಾಲಯ, (೭) ಮಂಡ್ಯದ ತಾಲ್ಲೂಕು ಬಸರಾಳ

ನಲ್ಲಿರುವ ಮಲ್ಲಿಕಾರ್ಜುನ ದೇವಾಲಯ, (೮) ತಿಪಟೂರು ತಾಲ್ಲೂಕು ವಿಷ್ಣು ಸಂತೆಯಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯ, (೯) ನಾಗಮಂಗಲದ ಸೌಮ್ಯಕೇಶವ ದೇವಾಲಯ. ಮೈಸೂರು ರಾಜ್ಯದ ನಾನಾ ಕಡೆಗಳಲ್ಲಿ ಅನೇಕ ದೇವಸ್ಥಾನಗಳು ತ್ರಿಕೂಟಾಚಲಗಳಾಗಿರುವುದರಿಂದ ಈ ತರಹದ ಕಟ್ಟಾಣಿಕೆಯು ಕರ್ನಾಟಕ ಶಿಲ್ಪಿಗಳಿಗೆ ಪ್ರಿಯವಾಗಿತ್ತೆಂದು ಊಹಿಸಬಹುದಾಗಿದೆ. ಇವುಗಳಲ್ಲಿ ವೈಷ್ಣವ ದೇವಾಲಯಗಳೂ ಉಂಟು, ಶಿವ ದೇವಾಲಯಗಳೂ ಉಂಟು. ಇದು ಕರ್ನಾಟಕ ಅರಸರ ಮತಭೇದ-ರಾಹಿತ್ಯವನ್ನು ತೋರಿಸುತ್ತದೆ. ಈ ದೇವಸ್ಥಾನಗಳಲ್ಲೆಲ್ಲ ಒಟ್ಟಿನಮೇಲೆ ನರಸಿಂಹ, ವೇಣುಗೋಪಾಲ, ಕೇಶವ ಈ ದೇವರುಗಳೇ ಹೆಚ್ಚು ಆದರಕ್ಕೆ ಪಾತ್ರವಾಗಿದ್ದಂತೆ ತೋರುತ್ತದೆ. ಬೆಳಗಾಂವಿ ಮತ್ತು ನಾಗಮಂಗಲ ದೇವಾಲಯಗಳು ಕ್ರಮವಾಗಿ ಹನ್ನೊಂದು ಹನ್ನೆರಡ ನೆಯ ಶತಮಾನಗಳಲ್ಲಿ ಕಟ್ಟಲ್ಪಟ್ಟುವು. ಇವುಗಳನ್ನು ಬಿಟ್ಟು ಮಿಕ್ಕ ತ್ರಿಕೂಟಾ ಚಲಗಳೆಲ್ಲ ಹದಿಮೂರನೆಯ ಶತಮಾನದಲ್ಲಿ ಕಟ್ಟಿದವುಗಳು. ಹಿಂದೆಯೇ ವರ್ಣಿಸಿದ ಸೋಮನಾಥಪುರದ ದೇವಾಲಯವೂ ಹದಿಮೂರನೆಯ ಶತಮಾನಕ್ಕೆ ಸೇರಿದ್ದು. ಇವುಗಳಲ್ಲೆಲ್ಲ ಬೆಳವಾಡಿಯ ದೇವಸ್ಥಾನವು ದೊಡ್ಡದು. ವಿಷ್ಣು ಸಂತೆಯದು ಚಿಕ್ಕದು. ಕಟ್ಟಡವೆಲ್ಲಾ ಹೊಂದಿಕೊಂಡು ಒಂದಾಗಿರುವಂತೆ ಕಾಣುವ "ಐಕ್ಯ" ಗುಣಕ್ಕೆ ಬೆಳಗಾವಿಯದು ಒಳ್ಳೆಯ ಉದಾಹರಣೆ. ಸಣ್ಣ ಕೆತ್ತನೆಯ ಕೆಲಸವೂ ಒಳ್ಳೆಯ ವಿನ್ಯಾಸವೂ ಸರಿಯಾಗಿ ಸೇರಿರುವ ಕಟ್ಟಡಕ್ಕೆ ಮಾವುತ್ತನಹಳ್ಳಿಯದು ಉದಾಹರಣೆ: ಇವುಗಳ ಸಾಮಾನ್ಯ ವಿನ್ಯಾಸ ಕ್ರಮವು ಸೋಮನಾಥಪುರದಲ್ಲಿರುವಂತೆಯೇ ಒಂದು ನವರಂಗದ ಮೂರು ದಿಕ್ಕುಗಳ ಲ್ಲಿಯೂ ಮೂರು ಗರ್ಭಗುಡಿಗಳು ಮತ್ತು ಸುಕನಾಸಿಗಳು ದ್ವಾರದ ಎದುರುಗಡೆ ಗರ್ಭಗುಡಿಯಲ್ಲಿ ಪ್ರಧಾನ ದೇವತಾ ವಿಗ್ರಹ, ಮಿಕ್ಕೆರಡರಲ್ಲಿ ಬೇರೆ ವಿಗ್ರಹಗಳು. ನವರಂಗದ ಮುಂಭಾಗದಲ್ಲಿ ಮುಖಮಂಟಪವೂ ಇರುವುದುಂಟು. ಹಳೇ ಬೀಡಿನ ಕೇದಾರೇಶ್ವರ ದೇವಾಲಯವು ಪೂರ್ವದ ಜಗಲಿಯ ಮೇಲೆ ಈಚೆಗೆ ಕಟ್ಟಿರುವ ಕಟ್ಟಡ. ಮೂಲ ಕೇದಾರೇಶ್ವರ ದೇವಾಲಯವನ್ನು ಬೆಳಗಾವಿ ದೇವಸ್ಥಾನವಾದ ಮೇಲೆ, ಎಂದರೆ ಸುಮಾರು ೧೨೧೯ ರಲ್ಲಿ ಎರಡನೆಯ ಬಲ್ಲಾಳ ರಾಯನು ಆ ಪ್ರಾಂತದ ಹೆಣ್ಣು ಮಗಳಾದ ತನ್ನ ಹೆಂಡತಿ ಅಬ್ಬಿಯ ಕೇಶವ ದೇವಿಯ ಇಷ್ಟದಂತೆ ಕಟ್ಟಿಸಿದನು. ಇದು ಹಳೇಬೀಡಿನಲ್ಲೆಲ್ಲ ಪ್ರಾಚೀನತಮ

ವಾದದ್ದೆಂದೂ ಅಮೋಘವಾದ ಶಿಲ್ಪರತ್ನವೆಂದೂ ಹೆಸರನ್ನು ಪಡೆದಿತ್ತು. ಆದರೆ ಅದು ಶಿಥಿಲವಾಗಿ ಬಿದ್ದು ಹೋಯಿತು. ಆಮೇಲೆ ಎಷ್ಟೋ ವರ್ಷಗಳ ನಂತರ ಹೇಗೆಂದರೆ ಹಾಗೆ ಕಟ್ಟಿ ಮುಗಿಸಲಾಯಿತು. ಈಗ ಇರುವ ಕಟ್ಟಡವು ಹಿಂದೆ ಇದ್ದಿರಬಹುದಾದ ದೇವಾಲಯದ ನಿಸ್ಸತ್ವವಾದ ಅನುಕರಣ ಮಾತ್ರ. ಈ ದೇವಸ್ಥಾನವು ಸುಮಾರು ಮೂರು ಅಡಿ ಎತ್ತರವಾದ ಜಗಲಿಯ ಮೇಲೆ ನಿಂತಿದೆ. ಜಗಲಿಯ ವಿನ್ಯಾಸವು ಮೇಲಿನ ಕಟ್ಟಡದ ವಿನ್ಯಾಸವನ್ನೇ ಅವಲಂಬಿಸಿದೆ. ಇದರಲ್ಲಿ ಒಂದು ನವರಂಗ, ಮೂರು ಗರ್ಭಗುಡಿಗಳು, ಪಶ್ಚಿಮದ ಗರ್ಭಗುಡಿಗೂ ನವರಂಗಕ್ಕೂ ಮಧ್ಯೆ ಒಂದು ಸುಕನಾಸಿ ಇಷ್ಟು ಇವೆ. ಒಂದೊಂದು ಗರ್ಭಗುಡಿಯ ಎರಡು ಪಕ್ಕಕ್ಕೂ ಎರಡೆರಡರಂತೆ ನವರಂಗದೊಳಗೆ ಒಟ್ಟು ಆರು ಗೂಡುಗಳಿವೆ. ಮಧ್ಯದ ನಾಲ್ಕು ಅಂಕಣಗಳಲ್ಲಿ ಹೊರತು ಮಿಕ್ಕ ಭುವನೇಶ್ವರಿಗಳೆಲ್ಲ ತಟ್ಟೆಯಾಗಿವೆ. ಮುಖ್ಯ ಗೃಹದ ಹೊರಗೋಡೆಯು ನಕ್ಷತ್ರಾಕಾರವಾಗಿಯೂ ಮಿಕ್ಕ ಎರಡು ಗೃಹಗಳ ಗೋಡೆಯು ಚತುರಸ್ರಾಕಾರವಾಗಿಯೂ ಇವೆ. ದೊಡ್ಡ ದೊಡ್ಡವಾಗಿ ಕೆತ್ತಿರುವ ವಿಗ್ರಹಗಳನ್ನು ಲೆಕ್ಕ ಹಾಕಿದರೆ ಸುಮಾರು ೧೭೦ ಆಗುತ್ತವೆ. ಈ ದೇವಸ್ಥಾನದ ಎದುರಿಗೆ ಹೋಗಿ ನಿಂತುಕೊಂಡರೆ ಅದರ ಪೂರ್ವದಿಕ್ಕಿನ ಬಾಗಿಲುವಾಡ ಮತ್ತು ಅದರ ಮುಂದೆ ಸುಮ್ಮನೆ ನಿಲ್ಲಿಸಿರುವ ಸರಸ್ವತಿ ವಿಗ್ರಹ ಇವೆರಡನ್ನೂ ಬಿಟ್ಟು ಇಲ್ಲಿ ಪ್ರೇಕ್ಷಕರ ದೃಷ್ಟಿಯನ್ನು ಎಳೆಯುವಂಥ ಮನೋಹರವಾದ ಅಂಶವು ಪ್ರಾಯಶಃ ಯಾವುದೂ ಇಲ್ಲವೆಂದು ಹೇಳಬಹುದು. ಈ ಬಾಗಿಲುವಾಡವು ಮಯಸಾಮಂಜಸ್ಯಗಳನ್ನರಿತು ಕಟ್ಟಲ್ಪಟ್ಟದೆ. ಸರಸ್ವತಿಯ ವಿಗ್ರಹವು ಹಿಂದಿನ ಕಟ್ಟಡದ ಯಾವುದೋ ಒಂದು ಭಾಗದಲ್ಲಿ ಸೇರಿಸಿದ್ದೆಂದು ತೋರುತ್ತದೆ. ಆದರೆ ಅದನ್ನು ಈಗಿನ ಕಟ್ಟಡದಲ್ಲಿ ಎಲ್ಲಿಯೂ ಸೇರಿಸುವುದಕ್ಕೆ ಗೊತ್ತಾಗದೆ ಮುಂದೆ ತಂದು ಕೂರಿಸಿದ್ದಾರೆ. ಈ ವಿಗ್ರಹವು ತಾಂಡವವಾಡುತ್ತಿದೆ. ಮುಖಭಾವವು ಅಪೂರ್ವ ಸೌಂದರ್ಯವುಳ್ಳದ್ದಾಗಿದೆ. ಇದರ ಪಕ್ಕದಲ್ಲಿ ಮೃದಂಗವನ್ನು ಬಾರಿಸುತ್ತಿರುವ ಮತ್ತೊಂದು ವಿಗ್ರಹವಿದೆ. ಬೆಳವಾಡಿಯಲ್ಲಿರುವ ವೀರನಾರಾಯಣ ದೇವಸ್ಥಾನವು ಈ ಗುಂಪಿನಲ್ಲೆಲ್ಲ ಮುಖ್ಯವಾದದ್ದು. ಮತ್ತು ತ್ರಿಕೂಟಾಚಲ ದೇವಸ್ಥಾನಗಳಲ್ಲೆಲ್ಲ ದೊಡ್ಡದು. ಇದನ್ನು ಕಟ್ಟಿದ ಕಾಲ ಗೊತ್ತಿಲ್ಲ. ಅದನ್ನು ನಿರ್ಧರಿಸುವುದಕ್ಕೆ ತಕ್ಕ ಸಾಧನಗಳೂ ತಿಳಿದು ಬಂದಿಲ್ಲ. ಕಟ್ಟಡದ ರೀತಿ

ಯನ್ನೂ ಲಕ್ಷಣಗಳನ್ನೂ ನೋಡಿದರೆ ಸುಮಾರು ಕ್ರಿ. ಶ. ೧೩೦೦ ರಲ್ಲಿ ಕಟ್ಟಿದ್ದಿರ ಬೇಕೆಂದು ಹೇಳಬಹುದು. ಇದರಲ್ಲಿ ೪೬ ಕಂಬಗಳುಳ್ಳ ಸರ್ವತೋಭದ್ರದ ಆಕಾರದ ದೊಡ್ಡ ಸಭಾ ಮಂಟಪವಿದೆ. ಇದರ ದಕ್ಷಿಣೋತ್ತರ ಕಡೆಗಳಲ್ಲಿ ಎರಡು ಗರ್ಭಗುಡಿಗಳೂ ಸುಕನಾಸಿಗಳೂ ಇವೆ. ಮೊದಲನೆಯದರಲ್ಲಿ ವೇಣು ಗೋಪಾಲನೂ ಎರಡನೆಯದರಲ್ಲಿ ನಾರಸಿಂಹನೂ ಪ್ರತಿಷ್ಠಿತರಾಗಿದ್ದಾರೆ. ಪಶ್ಚಿಮದ ಕಡೆ ಸಭಾ ಮಂಟಪದ ಹಿಂದುಗಡೆ ಮುಖಮಂಟಪ, ನವರಂಗ, ಸುಕನಾಸಿ ಮತ್ತು ಗರ್ಭಗೃಹಗಳುಳ್ಳ ಒಂದು ಸಂಪೂರ್ಣ ಗುಡಿಯೇ ಇದೆ. ಈ ಗುಡಿಗೂ ಸಭಾಮಂಟಪಕ್ಕೂ ಸೇರಿಕೊಂಡು ಒಂದು ಸಂಧ್ಯಂಕಣವಿದೆ. ಗರ್ಭಗೃಹದಲ್ಲಿ ವೀರನಾರಾಯಣ ವಿಗ್ರಹವಿದೆ. ಈ ದೇವಸ್ಥಾನದಲ್ಲಿರುವ ಭುವನೇಶ್ವರಿಗಳು ಕೆಲವು ಅರ್ಧಗೋಳಾಕಾರವಾಗಿವೆ ಮತ್ತೆ ಕೆಲವು ತಟ್ಟೆಯಾಗಿವೆ. ಸಭಾ ಮಂಟಪದಲ್ಲಿ ತಟ್ಟೆಯಾಗಿರುವ ಭುವನೇಶ್ವರಿಗಳ ಪೈಕಿ ಮೂರು ಸುಂದರವಾಗಿ ಚಿತ್ರಿಸಲ್ಪಟ್ಟವೆ. ಒಂದು ಭುವನೇಶ್ವರಿಯಲ್ಲಿ ಮಧ್ಯೆ ವೇಣುಗೋಪಾಲ ವಿಗ್ರಹವೂ ಅದರ ಸುತ್ತಲೂ ಎರಡು ದುಂಡು ಸಾಲುಬಳ್ಳಿಗಳೂ ಇವೆ. ಮೊದಲನೆಯ ಬಳ್ಳಿಯಲ್ಲಿ ಗೋಪಾಲನ ವೇಣುಗಾನವನ್ನು ಅನುಸರಿಸಿ ನರ್ತನ ಮಾಡುತ್ತಿರುವ ವಿಗ್ರಹಗಳೂ, ಎರಡನೆಯ ಬಳ್ಳಿಯಲ್ಲಿ ಒಂದಾದ ಮೇಲೆ ಒಂದರಂತೆ ಶಂಖಚಕ್ರಗಳೂ ಕೆತ್ತಲ್ಪಟ್ಟವೆ. ಈ ಎರಡು ಸುತ್ತುಗಳ ಹೊರಗೆ ಮತ್ತೊಂದು ಸುತ್ತಿನಲ್ಲಿ ನಾನಾ ಭಂಗಿಗಳಲ್ಲಿ ನಿಂತು ವೇಣುಗಾನಾಮೃತವನ್ನು ಪಾನ ಮಾಡುತ್ತಿರುವಂತೆ ಕೆತ್ತಿರುವ ಹಸುಗಳಿವೆ. ಇನ್ನೊಂದು ಭುವನೇಶ್ವರಿಯಲ್ಲಿ ಮಧ್ಯೆ ಕಾಳಿಂಗಮರ್ದನ ವಿಗ್ರಹವೂ ಅದರ ಸುತ್ತ ಹೊಸೆದುಕೊಂಡಿರುವ ಸರ್ಪಗಳೂ ಬಳ್ಳಿಗಳೂ ಇವೆ. ಹೊರಸುತ್ತಿನಲ್ಲಿ ಗೋವುಗಳು, ಗೋಪಿಕೆಯರು ಹನುಮಂತನೂ ಕೆತ್ತಲ್ಪಟ್ಟವೆ. ಮತ್ತೊಂದು ಭುವನೇಶ್ವರಿಯಲ್ಲಿ ಮಧ್ಯೆ ಒಂದು ವರ್ತುಲಾಕಾರದ ಫಲಕವೂ ಅದರ ಸುತ್ತ ಪಟ್ಟಿಕೆಯೊಳಗೆ ನಾನಾ ಭಂಗಿಗಳಲ್ಲಿರುವ ಯೋಧರ ವಿಗ್ರಹಗಳೂ ಕೆತ್ತಲ್ಪಟ್ಟವೆ. ಬಾಕಿ ಉಳಿದ ತಟ್ಟೆಯಾದ ಭುವನೇಶ್ವರಿಗಳಲ್ಲೆಲ್ಲ ಅರಳಿದ ಕಮಲಗಳು ಕೆತ್ತಿವೆ. ಈ ದೇವಾಲಯವನ್ನು ಸಂಪೂರ್ಣವಾದ ದೊಡ್ಡ ದೇವಾಲಯಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು.

ನುಗ್ಗಿಹಳ್ಳಿಯಲ್ಲಿರುವ ಲಕ್ಷ್ಮೀನರಸಿಂಹ ದೇವಸ್ಥಾನವು ಅನೇಕ ಅಂಶಗಳಲ್ಲಿ ಸೋಮನಾಥಪುರದ ದೇವಸ್ಥಾನವನ್ನು ಹೋಲುತ್ತದೆ. ಅಲ್ಲಿರುವಂತೆ ಇಲ್ಲಿಯೂ ದೇವಸ್ಥಾನವು ಪ್ರಾಕಾರವುಳ್ಳ ಒಂದು ಅಂಗಳದ ಮಧ್ಯೆ ಇದೆ. ಪ್ರಾಕಾರದಲ್ಲಿ ಮಹಾ ದ್ವಾರವಿದೆ. ದೇವಸ್ಥಾನವನ್ನು ಕಟ್ಟಿರುವುದು ಅದರ ವಿನ್ಯಾಸವನ್ನೇ ಅನುಸರಿಸಿ ಹೋಗಿರುವ ಜಗಲಿಯ ಮೇಲೆ, ಅದೇ ವಿನ್ಯಾಸ ವೈಚಿತ್ರ್ಯ ವಿಭೂಷಣ ಮತ್ತು ಅವಯವ ಸನ್ನಿವೇಶಗಳು. ಆದರೆ ಪ್ರಾಕಾರದಲ್ಲಿ ಸೋಮನಾಥಪುರದಲ್ಲಿರುವಂತೆ ಕೈಸಾಲೆ ಮಂಟಪಗಳಿಲ್ಲ. ಅಂಗಳದಲ್ಲಿರುವುದು ದೇವಸ್ಥಾನ ಒಂದೇ. ಇದಕ್ಕೆ ಈಗ ಇರುವುವು ಮೂರು ಗೋಪುರಗಳಾದರೂ ಪಶ್ಚಿಮ ಗೃಹದ ಮೇಲಿರುವ ಕಲ್ಲು ಗೋಪುರ ಒಂದೇ ದೇವಾಲಯವನ್ನು ಕಟ್ಟಿದ ಶಿಲ್ಪಿಯು ಮಾಡಿದ್ದೆಂದು ತೋರುತ್ತದೆ ಮಿಕ್ಕ ಎರಡೂ ಇಟ್ಟಿಗೆ ಗಾರೆಯಲ್ಲಿ ಕಟ್ಟಿದ ವಿಕಾರ ಸ್ವರೂಪಗಳು. ಈ ದೇವಸ್ಥಾನವನ್ನು, ಸೋಮೇಶ್ವರನು ಆಳುತ್ತಿದ್ದಾಗ (ಕ್ರಿ. ಶ. ೧೨೩೩-೧೨೫೪) ಬೊಮ್ಮಣ್ಣ ದಂಡನಾಯಕನು ೧೧೬೮ ಎಂದರೆ ಕ್ರಿ. ಶ. ೧೨೪೬ ರಲ್ಲಿ ಕಟ್ಟಿಸಿದನೆಂದು ಒಂದು ಶಾಸನದಿಂದ ತಿಳಿಯಬರುತ್ತದೆ. ಆದ್ದರಿಂದ ಇದಕ್ಕಿಂತ ಪ್ರತಿಯೊಂದು ಅಂಶದಲ್ಲಿಯೂ ಉತ್ತಮವಾದ ಸೋಮನಾಥಪುರ ದೇವಾಲಯಕ್ಕೆ ಇದೇ ಮಾದರಿಯಾಗಿತ್ತೆಂದು ಹೇಳಬಹುದಾಗಿದೆ. ಇದರಲ್ಲಿಯೂ ಮೂರು ಗರ್ಭಗೃಹಗಳು, ಒಂದು ನವರಂಗ, ಪಶ್ಚಿಮ ಗೃಹಕ್ಕೂ ನವರಂಗಕ್ಕೂ ಮಧ್ಯೆ ಸುಕನಾಸಿ ಇಷ್ಟು ಭಾಗಗಳಿವೆ. ದ್ರಾವಿಡ ಶೈಲಿಯಲ್ಲಿಯಲ್ಲಿರುವ ಒಂದು ಮುಖಮಂಟಪವನ್ನೂ ಪಾತಾಳಾಂಕಣವನ್ನೂ ಆಮೇಲೆ ಸೇರಿಸಿದ್ದಾರೆ. ದೇವಾಲಯದ ಮುಂದೆ ಒಂದು ಧ್ವಜಸ್ತಂಭವೂ ಅದರ ಬಲಗಡೆ ಸಾಲಂಕಾರವಾದ ಶಿರಸ್ಸುಳ್ಳ ಒಂದು ಜಯಸ್ತಂಭವೂ ಇವೆ. ಈ ಜಯಸ್ತಂಭವನ್ನು ಶಿಲ್ಪಿಯು ತಾನು ಮಿಕ್ಕ ಶಿಲ್ಪಿಗಳನ್ನು ಗೆದ್ದದ್ದರ ಜ್ಞಾಪಕಾರ್ಥವಾಗಿ ಸ್ಥಾಪಿಸಿದನೆಂದು ಹೇಳುತ್ತಾರೆ. ಮುಖ್ಯ ಗೃಹದಲ್ಲಿ ಕೇಶವ ವಿಗ್ರಹವೂ ಮಿಕ್ಕ ಎರಡರಲ್ಲಿ ಲಕ್ಷ್ಮೀನರಸಿಂಹ ವೇಣುಗೋಪಾಲ ವಿಗ್ರಹಗಳೂ ಇವೆ. ಆದರೂ ಲಕ್ಷ್ಮೀನರಸಿಂಹ ದೇವರಿಗೇ ಪ್ರಾಧಾನ್ಯವೂ ಅದರ ಪ್ರಾಧಾನ್ಯದ ಮೇಲೆ ದೇವಸ್ಥಾನಕ್ಕೆ ಲಕ್ಷ್ಮೀನರಸಿಂಹಸ್ವಾಮಿಯ ದೇವಸ್ಥಾನವೆಂಬ ಹೆಸರೂ ಕೊಡಲ್ಪಟ್ಟಿದೆ. ಇದರಂತೆ ಜಾವಗಲ್ಲಿನಲ್ಲಿಯೂ ವಿಘ್ನಸಂತೆಯಲ್ಲಿಯೂ ಪಾರ್ಶ್ವಗೃಹದ ದೇವರಿಗೇ ಪ್ರಾಧಾನ್ಯವೂ ಆ ದೇವರ ಹೆಸರೇ ದೇವಾಲಯಕ್ಕೂ

ಕೊಡಲ್ಪಟ್ಟಿದೆ. ಭುವನೇಶ್ವರಿಗಳನ್ನು ಕೆತ್ತಿರುವುದು ಬಹು ಸುಂದರವಾಗಿದೆ. ಸುಕನಾಸಿಯ ಮುಂದಿರುವುದರಲ್ಲಿ ಮಧ್ಯೆ ಲಕ್ಷ್ಮಿಯೂ ಅದರ ಸುತ್ತಲೂ ಲತೆಯೂ ಇವೆ. ನವರಂಗದ ಮಧ್ಯೆ ಇರುವುದರಲ್ಲಿ ನಡುವಣ ಭಾಗವು ಜೋತುಬಿದ್ದು ಆ ಲೋಲಕ ಭಾಗದಲ್ಲಿ ಬ್ರಹ್ಮನ ವಿಗ್ರಹವು ಕೆತ್ತಿದೆ. ಇಲ್ಲಿ ರುವ ಭುವನೇಶ್ವರಿಗಳಲ್ಲೆಲ್ಲ ನವರಂಗದ ಮುಂದೆ ಇರುವುದು ಬಹು ಸೊಗ ಸಾಗಿದೆ. ಇವರ ಮಧ್ಯೆ ಇಳಿಬಿದ್ದಿರುವ ಲೋಲಕದಲ್ಲಿ ಸೂರ್ಯನಾರಾಯ ಣನೂ ಸುತ್ತಲೂ ಇರುವ ಎಸಳುಗಳಲ್ಲಿ ದ್ವಾದಶಾದಿತ್ಯರೂ ಕೆತ್ತಲ್ಪಟ್ಟಿವೆ. ಕೆಳಗಣ ಫಲಕಗಳಲ್ಲಿ ವಿಷ್ಣುವಿನ ದ್ವಾದಶ ಮೂರ್ತಿಗಳಿವೆ. ಈ ದೇವಾಲಯ ದಲ್ಲಿ ಕೆತ್ತಿರುವ ದೊಡ್ಡ ದೊಡ್ಡ ವಿಗ್ರಹಗಳು ಸುಮಾರು ೧೧೩ ಇವುಗಳಲ್ಲಿ ಒಂದು ತೂಗುದೊಟ್ಟಿಲು, ತಾಂಡವ ಗಣಪತಿ, ರತಿ ಮನ್ಮಥರು ಭೂಮಿಯನ್ನು ಎತ್ತಿರುವ ವರಾಹ, ಹಲಧರನಾದ ಬಲರಾಮ, ಸೋಮೇಶನನ್ನು ಸಂಹಾರ ಮಾಡುತ್ತಿರುವ ಹಯಗ್ರೀವ, ಇವು ಮುಖ್ಯವಾದವುಗಳು. ಈ ದೇವಸ್ಥಾನದ ಅಲಂಕಾರಗಳಿಗೆ ಸುಪ್ರಸಿದ್ಧ ಶಿಲ್ಪಿಗಳಾದ ಮಲ್ಲಿತಮ್ಮನೂ, ಬೈಚೋಜನೂ ಬಹು ಮಟ್ಟಿಗೆ ಕಾರಣರೆಂದು ತಿಳಿಯಬರುತ್ತದೆ.

ಹೊಸಹೋಳಲಿನ ದೇವಾಲಯವು ಇದುವರೆಗೂ ವರ್ಣಿಸಿದ ಕಟ್ಟಡದ ಜೊತೆಯಲ್ಲಿ ವರ್ಣಿಸಲು ಪ್ರತಿಯೊಂದು ಅಂಶದಲ್ಲಿಯೂ ಯೋಗ್ಯವಾದದ್ದು. ನುಗ್ಗಿಹಳ್ಳಿಯಲ್ಲಿರುವಂತೆಯೇ ಅವರುವ ಸನ್ನಿವೇಶಗಳು. ಅದೇ ಅಲಂಕಾರ ಗಳು, ಅದೇ ವಿಧವಾದ ಹೊರಗಡೆಯ ಕೆಲಸ. ದೇವಸ್ಥಾನದ ಸುತ್ತಲೂ ಪ್ರಾಕಾರವಿತ್ತೆಂದು ಹೇಳುವುದಕ್ಕೆ ತಕ್ಕ ಸಾಧನಗಳಿವೆ. ಆದರೆ ದೇವಸ್ಥಾನಕ್ಕೆ ಸೇರಿದ್ದ ಈ ಜಾಗಗಳನ್ನೆಲ್ಲ ಈಗ ಊರಿನವರು ಆಕ್ರಮಿಸಿಕೊಂಡು ಕಟ್ಟಡದ ಸುತ್ತ ಜಗಲಿಯ ಅಂಚಿನವರೆಗೂ ಮನೆಗಳನ್ನೂ ಕಟ್ಟಿಕೊಂಡು ಬಿಟ್ಟಿದ್ದಾರೆ. ಒಬ್ಬ ಭಕ್ತನು ಈಚೆಗೆ ಒಂದು ಸಾಧಾರಣವಾದ ಮುಖಮಂಟಪವನ್ನು ಅದರ ಪಕ್ಕದಲ್ಲಿ ಪಾಕಶಾಲೆಗಾಗಿ ಒಂದು ಕೊಠಡಿಯನ್ನು ಕಟ್ಟಿಸಿದ್ದಾನೆ. ಈ ವಿಕಾರ ವಾದ ಕಟ್ಟಡವು ಸೊಗಸಾಗಿದ್ದ ಎಷ್ಟೋ ಕೆತ್ತನೆಯ ಕೆಲಸವನ್ನು ಮುಚ್ಚಿಕೊಂಡಿರು ವುದಲ್ಲದೆ ದೇವಸ್ಥಾನದ ಮುಖ್ಯ ಸೌಂದರ್ಯವನ್ನೇ ಕೆಡಿಸಿಬಿಟ್ಟಿದೆ. ಇದರಲ್ಲಿಯೂ ಮೂರು ಗರ್ಭಗೃಹಗಳು, ಮುಖ್ಯ ಗರ್ಭಗೃಹದ ಮುಂದೆ ಸುಕನಾಸಿ, ನವರಂಗ,

ಒಂದು ಗೋಪುರ ಇಷ್ಟು ಭಾಗಗಳು ಇವೆ. ಮುಖ್ಯ ಗರ್ಭಗೃಹದ ಒಳಭಾಗ ದಲ್ಲಿ ಮೂರು ಗೂಡುಗಳೂ, ಅವಕ್ಕೆ ಅನುಸಾರವಾಗಿ ಗೋಡೆಯ ಹೊರಮುಖ ದಲ್ಲಿ ಒಂದರ ಮೇಲೆ ಒಂದರಂತೆ ಎರಡು ಅಂತಸ್ತುಳ್ಳ ಮೂರು ಗೂಡುಗಳೂ ಇವೆ. ಸೋಮನಾಥಪುರದಲ್ಲಿರುವಂತೆ ಜಗಲಿಯ ಮೂಲೆಗಳನ್ನು ಆನೆಗಳು ಧರಿಸಿಕೊಂಡು ನಿಂತಿವೆ. ದೇವಸ್ಥಾನದ ಸುತ್ತಲೂ ಮತ್ತು ನವರಂಗದ ಮುಂದಣ ಜಗತಿಗೂ ಚಿತ್ರಪಟ್ಟಿಕೆಗಳಿವೆ. ಗೋಡೆಯ ಹೊರಮುಖದಲ್ಲಿರುವ ದೊಡ್ಡ ದೊಡ್ಡ ವಿಗ್ರಹಗಳು ಹೊಯಿಸಳೇಶ್ವರ ದೇವಾಲಯದಲ್ಲಿರುವಂತೆ ತುಂಬಿ ಕೊಂಡು ಸ್ಫುಟವಾಗಿ ಕಾಣುತ್ತಿವೆ. ನವರಂಗದ ಒಳಭಾಗವು ಬಹು ಸೂಕ್ಷ್ಮ ವಾದ ಮತ್ತು ಸೊಗಸಾದ ಕೆತ್ತನೆಯ ಕೆಲಸವುಳ್ಳದ್ದು. ಭುವನೇಶ್ವರಿಗಳು ಬಹು ತೊಡಕಾದ ರೇಖಾ ವಿನ್ಯಾಸವುಳ್ಳವುಗಳು. ಇಲ್ಲಿಯ ಒಂದು ಕಂಬದ ಬಳ್ಳಿಯ ಕೆಲಸದೊಳಗೆ ಒಂದು ಸಣ್ಣ ಕಪಿಯು ಒಂದು ಮರದ ಕೊಂಬೆಯ ಮೇಲೆ ಕುಳಿತಿರುವಂತೆ ಕೆತ್ತಲ್ಪಟ್ಟಿದೆ. ಇದರಿಂದಲೇ ಇಲ್ಲಿಯ ಕೆತ್ತನೆಯ ಕೆಲಸವು ಎಷ್ಟು ಸೂಕ್ಷ್ಮವಾಗಿರುವುದೆಂಬುದು ಗೊತ್ತಾಗುತ್ತದೆ. ಮುಖ್ಯಗೃಹ ದಲ್ಲಿ ನಾರಾಯಣವಿಗ್ರಹವೂ, ಉತ್ತರ ಗೃಹದಲ್ಲಿ ಲಕ್ಷ್ಮೀನರಸಿಂಹ ವಿಗ್ರಹವೂ ಇವೆ. ದಕ್ಷಿಣ ಗೃಹವು ಬರಿಯದು. ಇದರಲ್ಲಿ ವೇಣುಗೋಪಾಲ ವಿಗ್ರಹ ವಿತ್ತೆಂದೂ ಕೆಲವು ವರ್ಷಗಳ ಹಿಂದೆ ಅದನ್ನು ಕನ್ನಂಬಾಡಿಗೆ ತೆಗೆದುಕೊಂಡು ಹೋದರೆಂದೂ ಹೇಳುತ್ತಾರೆ. ಕನ್ನಂಬಾಡಿಯ ಗೋಪಾಲಕೃಷ್ಣ ದೇವರ ದೇವಸ್ಥಾನವು ಕೃಷ್ಣರಾಜ ಸಾಗರದಲ್ಲಿ ಮುಳುಗಿ ಹೋದದ್ದರಿಂದ ಅದನ್ನು ತಿರುಗಿ ಅಲ್ಲಿಂದ ತೆಗೆದು ಉತ್ತರ ತೀರದಲ್ಲಿ ಒಂದು ದೇವಸ್ಥಾನದಲ್ಲಿಟ್ಟಿರುತ್ತಾರೆ. ಈ ದೇವಸ್ಥಾನವು ನುಗ್ಗಿಹಳ್ಳಿಯ ದೇವಸ್ಥಾನದ ಸಮಕಾಲಿಕವೆಂದು ಊಹಿಸ ಬಹುದಾಗಿದೆ.

ಮಾವತ್ತನಹಳ್ಳಿಯ ದೇವಾಲಯವು ಅನೇಕ ಅಂಶಗಳಲ್ಲಿ ಅಸದೃಶ ವಾಗಿದೆ. ಈಗ ಅದರಲ್ಲಿ ಕೆಲವು ಭಾಗಗಳು ಬಿದ್ದುಹೋಗಿವೆ. ಅಲ್ಲದೆ ಅದನ್ನು ಕಟ್ಟುವಾಗಲೇ ಪೂರ್ತಿಯಾಗಿ ಕಟ್ಟಿರಲಿಲ್ಲವೆಂದು ತೋರುತ್ತದೆ. ಇದು ಎರಡ ನೆಯ ಬಲ್ಲಾಳನ ಕಾಲದಲ್ಲಿ ಎಂದರೆ ಕ್ರಿ. ಶ. ೧೨೦೦ ರಲ್ಲಿ ಕಟ್ಟಲ್ಪಟ್ಟಿರಬೇಕು. ಇದರ ಭುವನೇಶ್ವರಿಗಳೆಲ್ಲ ಸುಂದರವಾಗಿ ಕೆತ್ತಲ್ಪಟ್ಟಿರುತ್ತವೆ. ಮಿಕ್ಕ ದೇವ

ಸ್ಥಾನದವುಗಳಂತೆ ಇವು ವಿನ್ಯಾಸ ವಿಚಿತ್ರ ವೈವಿಧ್ಯವನ್ನು ಹೊಂದಿಲ್ಲದಿದ್ದರೂ ಇವುಗಳ ಕೆಲಸ ಬಹು ನಾಜೂಕಾಗಿಯೂ ನೋಡಿದ ಕೂಡಲೆ ಮೋಹಗೊಳಿಸುವಂತೆಯೂ ಇದೆ. ಈ ಭುವನೇಶ್ವರಿಗಳಿಗೆಲ್ಲ ಮೊದಲು ಬಣ್ಣ ಹಾಕಿದ್ದಂತೆ ಕಾಣುತ್ತದೆ. ಅದು ಎಷ್ಟೋ ಶತಮಾನಗಳದ್ದಾದರೂ ಇನ್ನೂ ಪೂರ್ತಿಯಾಗಿ ಅಳಿಸಿಹೋಗಿರುವುದಿಲ್ಲ.

ಮಂಡ್ಯದ ತಾಲ್ಲೂಕು ಬಸರಾಳಿನಲ್ಲಿರುವ ಮಲ್ಲಿಕಾರ್ಜುನ ದೇವಾಲಯವು ಎರಡನೆಯ ನರಸಿಂಹನ ಸೇನಾಪತಿಗಳಲ್ಲಿ ಒಬ್ಬನಾದ ಅಡ್ಡಾಯದ ಹರಿಹರನೆಂಬವನಿಂದ ಕ್ರಿ. ಶ. ೧೨೩೪ ರಲ್ಲಿ ಕಟ್ಟಿಸಲ್ಪಟ್ಟಿತು. ಆ ಸ್ಥಳದವರು ಇದನ್ನು ನಾಗೇಶ್ವರ ದೇವಾಲಯವೆಂದು ಕರೆಯುತ್ತಾರೆ. ದೇವಸ್ಥಾನದ ಮುಂದೆ ಒಂದು ದೊಡ್ಡ ಕಂಬವೂ ಅದರ ಮೇಲೆ ಒಂದು ಪುರುಷ ವಿಗ್ರಹವೂ, ಒಂದು ಸ್ತ್ರೀ ವಿಗ್ರಹವೂ ಇವೆ. ಈ ವಿಗ್ರಹಗಳ ದೇವಾಲಯ ಸ್ಥಾಪಕನ ಮತ್ತು ಆತನ ಪತ್ನಿಯದ್ದೆಂದು ಹೇಳುತ್ತಾರೆ. ದೇವಸ್ಥಾನದ ದಕ್ಷಿಣದ ಕಡೆಗೆ ಒಳಗೆ ಹೋಗುವುದಕ್ಕೆ ಮೂವತ್ತಾರು ಕಂಬಗಳುಳ್ಳ ಒಂದು ಸುಂದರವಾದ ಮತ್ತು ಭವ್ಯವಾದ ದ್ವಾರ ಮಂಟಪವಿದೆ. ಈ ದೇವಾಲಯದಲ್ಲಿಯೂ ಮೂರು ಗರ್ಭಗುಡಿಗಳೂ ನವರಂಗವೂ ಮುಖ್ಯ ಗರ್ಭಗುಡಿಗಳೂ ನವರಂಗಕ್ಕೂ ಮಧ್ಯೆ ಒಂದು ಸುಕನಾಸಿಯೂ ಇಷ್ಟು ಇವೆ. ನವರಂಗದ ಎದುರಿಗೆ ಒಂದು ನಂದಿಯ ಗುಡಿಯೂ ಇದಕ್ಕೂ ನವರಂಗಕ್ಕೂ ಮಧ್ಯೆ ಎರಡು ದ್ವಾರಗಳುಳ್ಳ ಒಂದು ಮುಖಮಂಟಪವೂ ಇವೆ. ಮುಖ್ಯ ಗೃಹದಲ್ಲಿ ಒಂದು ಲಿಂಗವೂ ದಕ್ಷಿಣ ದಿಕ್ಕಿನ ಗೃಹದಲ್ಲಿ ಸೂರ್ಯನಾರಾಯಣ ವಿಗ್ರಹವೂ ಇವೆ. ಉತ್ತರ ದಿಕ್ಕಿನದರಲ್ಲಿ ವಿಷ್ಣು ವಿಗ್ರಹವಿತ್ತೆಂದು ತೋರುತ್ತದೆ. ಈಗ ಬರಿಯದಾಗಿವೆ. ನವರಂಗದಲ್ಲಿ ನಾಲ್ಕು ಗೂಡುಗಳಿವೆ. ಇವುಗಳ ಪೈಕಿ ಎರಡರಲ್ಲಿ ಸರಸ್ವತಿಯೂ ಒಂದರಲ್ಲಿ ಗಣಪತಿಯೂ ಮತ್ತೊಂದರಲ್ಲಿ ಮಹಿಷಾಸುರ ಮರ್ದಿನಿಯೂ ಇವೆ. ದಕ್ಷಿಣ ಗೂಡಿನಲ್ಲಿರುವ ಸರಸ್ವತಿ ಬಹು ಸುಂದರವಾಗಿದೆ. ಭುವನೇಶ್ವರಿಗಳೆಲ್ಲ ಸುಂದರವಾಗಿ ಕೆತ್ತಿ ಮಾಡಿದವುಗಳು. ಇವುಗಳಲ್ಲಿ ಮಧ್ಯೆ ಇದ್ದದ್ದು ಎಲ್ಲಕ್ಕಿಂತಲೂ ಸುಂದರವಾಗಿ ಇತ್ತೆಂದು ತೋರುತ್ತದೆ. ಆದರೆ ಈಗ ಅದರ ಸ್ಥಳದಲ್ಲಿ ಬೆಳಕು ಮಾಳಿಗೆ ಇದೆ. ಯಾವುದನ್ನೂ ಕಣ್ಣುತುಂಬ ನೋಡಿ ಮೆಚ್ಚುವುದಕ್ಕೆ

ಬೆಳಕು ಬೇಕಾಗಿತ್ತೊ ಅದನ್ನೆ ಕಿತ್ತುಹಾಕಿಸಿ ಒಳಕ್ಕೆ ಬೆಳಕು ಬರುವಂತೆ ಮಾಡಿದ್ದಾರೆ. ಇದು ಎಂತಹ ಸರ್ಕಾರದ ಅವಿಮೃಶ್ಯಕಾರಿತ್ವವೆನ್ನುವುದನ್ನು ಯೋಚಿಸಿದರೆ ದುಃಖವಾಗದೆ ಇರದು. ಈ ದೇವಸ್ಥಾನದಲ್ಲಿಯೂ ಸೋಮನಾಥ ಪುರದ ದೇವಾಲಯದಲ್ಲಿರುವಂತೆ ಗೋಡೆಯ ಹೊರಮುಖದಲ್ಲಿ ಸುತ್ತಲೂ ಸುಂದರವಾದ ವಿಗ್ರಹಗಳು ಕೆತ್ತಲ್ಪಟ್ಟಿವೆ. ದೇವಸ್ಥಾನದ ಗೋಡೆಗಳು ಓರೆಯಾಗಿ, ಬೀಳುವಂತಿರಲು ಅದಕ್ಕೆ ಊರೆಯಾಗಿ ಇಟ್ಟಿಗೆ ಗಾರೆಯ ಗೋಡೆಗಳನ್ನು ಕಟ್ಟಿ ನಿಲ್ಲಿಸಿದ್ದಾರೆ ಇಂತಹ ವಿವೇಚನಾರಹಿತ ಕಾರ್ಯಗಳಿಂದ ಅನೇಕ ಸುಂದರವಾದ ಕಟ್ಟಡಗಳು ದೇಶದಲ್ಲೆಲ್ಲ ವಿಕಾರ ಸ್ವರೂಪ ತಾಳಿನಿಂತಿವೆ.*

ವಿಘ್ನಸಂತೆಯಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯವು ಸಣ್ಣದಾದರೂ ಅತ್ಯಂತ ಸುಂದರವಾದದ್ದು. ಇದು ಮೂರನೆಯ ನರಸಿಂಹನ ಕೈಕೆಳಗೆ ದಂಡನಾಯಕರಾಗಿದ್ದ ಅಪ್ಪಯ್ಯ, ಗೋಪಾಲ, ಮಾಧವ ಎಂಬ ಅಣ್ಣತಮ್ಮಂದಿರಿಂದ ಕ್ರಿ. ಶ. ೧೨೮೬ ರಲ್ಲಿ ಕಟ್ಟಿಸಲ್ಪಟ್ಟಿತು. ದೇವಾಲಯವು ಉತ್ತರಾಭಿಮುಖವಾಗಿದೆ. ಮೂರು ಗರ್ಭಗುಡಿಗಳು, ಒಂದು ನವರಂಗ, ದ್ವಾರಮಂಟಪ ಇಷ್ಟು ಇವೆ. ನವರಂಗಕ್ಕೆ ಸೇರಿದ ಹಾಗೆ ಒಂದು ಮುಖಮಂಟಪವು ಇದ್ದಂತೆ ತೋರುತ್ತದೆ. ದಕ್ಷಿಣ ಗೃಹ ಒಂದರ ಮೇಲೆ ಮಾತ್ರ ಗೋಪುರವಿದೆ. ಇದರ ಮುಂಭಾಗದಲ್ಲಿರುವ ಸಿಂಹಲಲಾಟದೊಳಗೆ ನಿಜವಾಗಿಯೂ ಎದ್ದು ಹಾರಿ ಹೋಗುತ್ತಿರುವನೋ ಎನ್ನುವಷ್ಟು ಸ್ವಾಭಾವಿಕವಾಗಿರುವ ಒಂದು ಗರುಡ ವಿಗ್ರಹವು ಕೆತ್ತಲ್ಪಟ್ಟಿದೆ. ಈ ದೇವಾಲಯದ ಕೆತ್ತನೆಯ ಕೆಲಸವು ಬಹಳ ನಾಜೂಕಾಗಿದೆ. ನವರಂಗದಲ್ಲಿರುವ ಕಂಬಗಳ ಮೇಲೂ ಮತ್ತು ತೊಲೆಗಳ ಮೇಲೂ ಸೊಗಸಾಗಿ ಮಣಿತೋರಣಗಳೂ ಬೀಲುಗಳೂ ಕೆತ್ತಲ್ಪಟ್ಟಿವೆ.


---

* ದಕ್ಷಿಣದ್ವಾರದ ಹತ್ತಿರ ನೆಟ್ಟಿರುವ ಶಾಸನದಲ್ಲಿ ದೇವಾಲಯದ ವರ್ಣನೆ ಹೀಗಿದೆ:

"ಮೊದಲಿಂದಂ ಕಳಶಂಬರಂ ಮೆರೆವ ನಾನಾ ಚಿತ್ರ ಪತ್ರಂಗಳಿಂ।
ಮುದಮಂ ಬೀರುವ ಭಾರತಾದಿ ಕಥೆಯಂ ಮೆಯ್ವೆತ್ತ ಕೂಟಂಗಳಿಂ॥
ದಿದು ಪಾಂಚಾಳಿಕೆ ಕಳ್ತ ಮೇರುಗಿರಿಯೋ ಪೇಳೆಂಬಿನಂ ವಿಭ್ರಮಾ।
ಸ್ಪದಮಾಗಿರ್ಪುದು ಮಲ್ಲಿಕಾರ್ಜುನಮದೇ...ದೇವಾಲಯಂ॥"

ಮುಂಭಾಗದಲ್ಲಿರುವ ದ್ವಾರಮಂಟಪವಂತೂ ದೇವಸ್ಥಾನದಲ್ಲೆಲ್ಲ ಅತ್ಯಂತ ರಮಣೀಯವಾದ ಭಾಗ, ಇದರ ಕಂಬಗಳು ಮೇಲಿನಿಂದ ಕೆಳಗಿನವರೆಗೂ ಸೊಗಸಾಗಿ ಕೆತ್ತಲ್ಪಟ್ಟವೆ. ಅವುಗಳ ಮೇಲ್ಭಾಗದಲ್ಲಿ ನಾಲ್ಕು ಕಡೆಯೂ ಸಣ್ಣ ಆನೆಗಳೂ ಅವುಗಳ ಮೇಲೆ ಸಿಂಹಗಳೂ ಕೆತ್ತಲ್ಪಟ್ಟವೆ.

ಇದಾದ ಮೇಲೆ ಪ್ರಾಮುಖ್ಯತೆಯನ್ನು ಅನುಸರಿಸಿ ಬರತಕ್ಕದ್ದು ನಾಗಮಂಗಲದ ಕೇಶವ ದೇವಾಲಯ. ಇದರಲ್ಲಿಯು ಮೂರು ಗರ್ಭಗೃಹಗಳು, ಒಂದು ನವರಂಗ, ಅದರ ಮುಂದೆ ಒಂದು ಹಜಾರ. ಇಷ್ಟು ಇವೆ. ಈ ಹಜಾರಕ್ಕಿಂತಲೂ ಕೆಳ ಮಟ್ಟದಲ್ಲಿ ಒಂದು ಪಾತಾಳಾಂಕಣವಿದೆ. ದೇವಸ್ಥಾನದ ಎದುರಿಗೆ ದೊಡ್ಡದೊಂದು ಮಹಾ ದ್ವಾರವೂ ಅದರ ಮೇಲೆ ಭವ್ಯವಾದ ಗೋಪುರವೂ ಇವೆ. ದೇವಸ್ಥಾನದ ಮುಂದುಗಡೆ ನಿಲ್ಲಿಸಿರುವ ಗರುಡ ಗಂಬವು ಸುಮಾರು ೫೫ ಅಡಿ ಎತ್ತರವಾಗಿದ್ದು ಮೇಲಿನಿಂದ ಕೆಳಗಿನವರೆಗೂ ಸುತ್ತಲೂ ಸೊಗಸಾಗಿ ಬಳ್ಳಿಗೆಲಸ ಮಾಡಲ್ಪಟ್ಟದೆ ಮುಖ್ಯ ಗೃಹದಲ್ಲಿ ಕೇಶವ ವಿಗ್ರಹವಿದೆ. ಇದನ್ನು ಜನರು "ಸೌಮ್ಯ ಕೇಶವ" ನೆಂದು ಕರೆಯುತ್ತಾರೆ. ಆದರೆ ಶಾಸನಗಳಲ್ಲಿ ಚನ್ನಕೇಶವನೆಂದಿದೆ. ಮಿಕ್ಕ ಎರಡು ಗರ್ಭಗೃಹಗಳ ಪೈಕಿ ಒಂದರಲ್ಲಿ ಲಕ್ಷ್ಮೀನರಸಿಂಹ ವಿಗ್ರಹವೂ ಮತ್ತೊಂದರಲ್ಲಿ ವೇಣುಗೋಪಾಲ ವಿಗ್ರಹವೂ ಇವೆ. ಕೇಶವ ವಿಗ್ರಹವು ಸುಮಾರು ಐದು ಅಡಿ ಎತ್ತರವಾಗಿದೆ. ಅದರ ಪಾರ್ಶ್ವಗಳಲ್ಲಿಶ್ರೀದೇವಿ ಭೂದೇವಿಯರ ವಿಗ್ರಹಗಳಿವೆ. ಲಕ್ಷ್ಮೀನರಸಿಂಹ ದೇವರ ತಲೆಯ ಮೇಲೆ ಛತ್ರಿಯಂತೆ ಪ್ರಸರಿಸಿರುವ ಐದು ಹೆಡೆಯ ನಾಗಭೂಷಣವಿದೆ. ವೇಣುಗೋಪಾಲನ ಪಕ್ಕದಲ್ಲಿ ನಿಂತಿರುವ ರುಕ್ಮಿಣಿ ವಿಗ್ರಹವಿದೆ. ದೇವಸ್ಥಾನದ ಒಳಗೆ ಗೋಡೆಯಲ್ಲಿರುವ ಶಾಸನದಿಂದ ವೀರಬಲ್ಲಾಳನು (ಕ್ರಿ. ಶ. ೧೧೭೩-೧೨೨೦) ಈ ದೇವಾಲಯಕ್ಕೆ ಭೂಮಿಯನ್ನು ಬಿಟ್ಟುಕೊಟ್ಟನೆಂದು ಗೊತ್ತಾಗುತ್ತದೆ. ಆದ್ದರಿಂದ ಈ ಕಾಲಕ್ಕೆ ಮುಂಚೆಯೇ ಈ ದೇವಾಲಯವು ಕಟ್ಟದ್ದಿರಬೇಕು. ಮಹಾ ದ್ವಾರದ ಮೇಲಿರುವ ಗೋಪುರವನ್ನೂ ಗರುಡಗಂಬವನ್ನೂ ನಾಗಮಂಗಲದಲ್ಲಿ ಅಧಿಕಾರಿಯಾಗಿದ್ದ ದೇವರಾಯನೆಂಬುವನು ಕ್ರಿ. ಶ. ೧೪೬೮ ರಲ್ಲಿ ಕಟ್ಟಿಸಿದನೆಂದು ಹೇಳಲ್ಪಟ್ಟದೆ.



ಮದನಿಕೆ, ಕೇಶವ ದೇವಾಲಯ, ಬೇಲೂರು.




ಚಿತ್ರಪಟ್ಟಿಕೆ , ಬೇಲೂರು
" ಗೋವರ್ಧನೋದ್ಧಾರಿ " ದೃಶ್ಯ



ಉಗ್ರ ನರಸಿಂಹ, ಹಂಪೆ.



ಮಾರ್ನವಮಿ ದಿಬ್ಬ, ಹಂಪೆ.



ಕೇಶವ ದೇವಾಲಯ, ಸೋಮನಾಥಪುರ. (ಪೂರ್ವದ ನೋಟ)




ಬೋಲ ಗುಮ್ಮಟ — ಬಿಜಾಪುರ.



ಜುಮ್ಮಾ ಮಸೀದಿ — ಶ್ರೀರಂಗಪಟ್ಟಣ.



ದರಿಯಾ ದೌಲತ್ ದೃಶ್ಯ — ಶ್ರೀರಂಗಪಟ್ಟಣ.



ದರಿಯಾ ದೌಲತ್ — ಒಳ ನೋಟ.



ಅರಮನೆ, ಬೆಂಗಳೂರು.




ಲಲಿತ ಮಹಲ್, ಮೈಸೂರು.



ಅರಮನೆ, ಮೈಸೂರು.



ಶ್ರೀ ಲಕ್ಷ್ಮಿ – ನೃತ್ಯ ಭಂಗಿಯಲ್ಲಿ
ನುಗ್ಗೇಹಳ್ಳಿ (ಹಾಸನ ಜಿಲ್ಲೆ)



ಇಬ್ರಾಹಿಂ ರೋಜ, ಬಿಜಾಪುರ.



ವಿಧಾನ ಸೌಧ, ಬೆಂಗಳೂರು.

ಮೇಲೆ ವಿವರಿಸಿದ ವಿನ್ಯಾಸ ಕ್ರಮಗಳಲ್ಲದೆ ಕರ್ನಾಟಕದ ಅರಸರೂ ದಂಡ ನಾಯಕರೂ ಮತ್ತೂ ಒಂದು ಕ್ರಮವನ್ನು ಅನುಸರಿಸಿ ಕೆಲವು ಕಟ್ಟಡಗಳನ್ನು ಕಟ್ಟಿಸಿದ್ದಾರೆ. ಇದನ್ನು ಪರಿಶೀಲಿಸಿದರೆ ಆಗಿನ ಕಾಲದಲ್ಲಿದ್ದ ಪರಸ್ಪರ ಮತ ಮೈತ್ರಿಯು ಮತ್ತಷ್ಟು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಇದುವರೆಗೂ ನೋಡಿದ್ದ ರಲ್ಲಿ ವೈಷ್ಣವ ದೇವಾಲಯಗಳಲ್ಲಿ ಗಣಪತಿ, ಮಹಿಷಾಸುರ ಮರ್ದಿನಿ ವಿಗ್ರಹ ಗಳನ್ನು ಗೂಡುಗಳಲ್ಲಿರಿಸಿರುವುದನ್ನು ಕಂಡಿದ್ದೇವೆ. ಅಲ್ಲದೆ ಈಶ್ವರ ದೇವಾಲಯ ಗಳಲ್ಲಿ ವಿಷ್ಣು ವಿಗ್ರಹಗಳು ಪ್ರತಿಷ್ಠಿಸಲ್ಪಟ್ಟಿದ್ದನ್ನು ಕಂಡಿದ್ದೇವೆ. ಹೀಗೆ ಒಂದೇ ಗುಡಿಯಲ್ಲಿ ಶೈವ, ವೈಷ್ಣವ ವಿಗ್ರಹಗಳು ಇರುವುದಕ್ಕೆ ಬದಲಾಗಿ ಸ್ವತಂತ್ರವಾದ ಎರಡು ದೇವಾಲಯಗಳನ್ನು ಒಂದರ ಪಕ್ಕದಲ್ಲೊಂದರಂತೆ ಕಟ್ಟಿರು ವುದೂ ಉಂಟು. ಇವು ಒಂದೊಂದಕ್ಕೂ ಬೇರೆ ಬೇರೆ ಗರ್ಭಗುಡಿ, ಸುಕನಾಸಿ, ನವರಂಗ ಮಂಟಪಗಳೂ ಇರುತ್ತವೆ. ಇಂಥ ಕಟ್ಟಡಗಳು ಸೂತ್ರಪಾತ, ವಿನ್ಯಾಸ, ಆಕಾರ, ಕೆತ್ತನೆಯ ಕೆಲಸ ಮುಂತಾದ ಅಂಶಗಳಲ್ಲಿ ಒಂದನ್ನೊಂದು ಎಷ್ಟರ ಮಟ್ಟಿಗೆ ಹೋಲುತ್ತವೆ ಎಂದರೆ ಒಂದರ ಪಡಿಯಚ್ಚು ಮತ್ತೊಂದು ಎಂದು ಹೇಳಬಹುದು. ಅವುಗಳ ಬೇರೆ ಬೇರೆ ಭಾಗಗಳಲ್ಲಿ ಅಳತೆ ಪ್ರಮಾಣಗಳೂ ಅವುಗಳನ್ನು ಕಟ್ಟುವುದರಲ್ಲಿ ಉಪಯೋಗಿಸಿದ ಕೌಶಲವೂ ಒಂದೇ ಆಗಿರುತ್ತದೆ. ಇವೆರಡರ ಸುತ್ತಲೂ ಒಂದು ಪ್ರಾಕಾರವೂ ಆ ಪ್ರಾಕಾರದಲ್ಲಿ ಎರಡು ದೇವ ಸ್ಥಾನಗಳ ಮಧ್ಯೆ ಇರುವ ಸ್ಥಳದ ಮುಂದೆ ಒಂದು ಮಹಾ ದ್ವಾರವೂ ಇರುತ್ತದೆ. ಆದರೆ ಈ ಕ್ರಮದಂತೆ ಕಟ್ಟಿದ ಕಟ್ಟಡಗಳು ತೀರ ಕಡಮೆ. ಇದುವರೆಗೆ ಕಂಡು ಬಂದಿರುವ ಇಂಥ ಕಟ್ಟಡಗಳು ಚಿಕ್ಕಮಗಳೂರು ತಾಲ್ಲೂಕು ಮರಲೆಯಲ್ಲಿ ಒಂದು, ಹಾಸನದ ತಾಲ್ಲೂಕು ಮೊಸಳೆಯಲ್ಲಿ ಮತ್ತೊಂದು, ಈ ರೀತಿ ಎರಡು ಮಾತ್ರ.

ಮರಲೆಯಲ್ಲಿರುವ ದೇವಾಲಯಗಳ ಮಧ್ಯೆ ಕೆಲವು ಅಡಿ ಮಾತ್ರ ಬಿಟ್ಟು ಒಂದರ ಪಕ್ಕದಲ್ಲಿ ಒಂದು ಪೂರ್ವಾಭಿಮುಖವಾಗಿ ಇವೆ. ಅವುಗಳಲ್ಲಿ ಉತ್ತರ ದಿಕ್ಕಿನದರಲ್ಲಿ ಚೆನ್ನಕೇಶವ ದೇವರೂ, ದಕ್ಷಿಣದ್ದರಲ್ಲಿ ಸಿದ್ಧೇಶ್ವರನೂ ಇವೆ. ಎರಡರ ವಿನ್ಯಾಸ ಕ್ರಮವೂ ಒಂದೇ. ಒಂದು ಗರ್ಭಗುಡಿ, ಒಂದು ಸುಕನಾಸಿ, ಒಂದು ನವರಂಗ, ಒಂದು ಮುಖಮಂಟಪ. ಈ ರೀತಿಯ ದೇವಾಲಯಗಳಲ್ಲಿ

ಇವೆರಡೂ ತಕ್ಕ ಮಟ್ಟಿಗೆ ಹಳೆಯುವು. ಈ, ದೇವಸ್ಥಾನಗಳಲ್ಲಿ ಜಗಲಿಯುವರೆಗಿನ ಭಾಗಗಳು ನೆಲದಲ್ಲಿ ಹೂತು ಹೋಗಿವೆ. ಅವುಗಳಿಗೆ ಮೊದಲು ಇದ್ದ ಗೋಪುರಗಳು ಹೋಗಿ ಅವಕ್ಕೆ ಬದಲಾಗಿ ಇಟ್ಟಿಗೆ ಗಾರೆಯ ವಿಕಾರವಾದ ಗೋಪುರಗಳು ಒಂದಿವೆ. ಇವುಗಳನ್ನು ಕಟ್ಟಿದ್ದು ಕ್ರಿ. ಶ. ೧೧೩೦ ರಲ್ಲಿ. ಶಿಲ್ಪಕೌಶಲ ವಿಚಾರದಲ್ಲಿ ಚನ್ನಕೇಶವ ದೇವಾಲಯವೇ ಉತ್ತಮವಾದದ್ದೆಂದು ಹೇಳಬಹುದು. ಇದರಲ್ಲಿರುವ ಭುವನೇಶ್ವರಿಗಳು ತಟ್ಟೆಯಾಗಿದ್ದರೂ ಚಿತ್ರ ಕೆಲಸ ಮಾಡಿದವುಗಳಾಗಿವೆ. ಸುಕನಾಸಿಯ ಭುವನೇಶ್ವರಿಯಲ್ಲಿ ಲಕ್ಷ್ಮೀನಾರಾಯಣ ವಿಗ್ರಹವು ಕೆತ್ತಲ್ಪಟ್ಟಿದೆ. ನವರಂಗದ ಭುವನೇಶ್ವರಿಗಳಲ್ಲಿ ಮಧ್ಯದೊಳಗೆ ಲಕ್ಷ್ಮೀನಾರಾಯಣನೂ ಸುತ್ತಲೂ ದಿಕ್ಪಾಲಕರೂ ಕೆತ್ತಲ್ಪಟ್ಟಿವೆ. ನವರಂಗದ ಕಂಬಗಳು ಮಣಿಯ ಕೆಲಸವನ್ನು ಹೊಂದಿವೆ ಮತ್ತು ಪ್ರತಿಯೊಂದು ಕಂಬಕ್ಕೂ ನಾಲ್ಕರಂತೆ ಮದನಿಕೆ ಬೊಂಬೆಗಳಿದ್ದುವೆಂದು ತೋರುತ್ತದೆ. ಈಗ ಉಳಿದಿರುವುದು ಐದು ಮಾತ್ರ. ಗರ್ಭಗುಡಿಯ ಮೂರು ಗೋಡೆಗಳಲ್ಲಿಯೂ ಮೂರು ಸುಂದರವಾಗಿ ಕೆತ್ತಿದ ಗೂಡುಗಳಿವೆ. ಸಿದ್ಧೇಶ್ವರ ದೇವಾಲಯವೂ ಇದರಂತೆಯೇ ಇದೆ. ಆದರೆ ಕೇಶವ ದೇವಾಲಯದಲ್ಲಿ ಲಕ್ಷ್ಮೀನಾರಾಯಣ ವಿಗ್ರಹವಿರುವ ಕಡೆಗಳಲ್ಲೆಲ್ಲಾ ಶಿವವಿಗ್ರಹಗಳಿವೆ. ಸುಕನಾಸಿಯ ಮತ್ತು ನವರಂಗದ ಭುವನೇಶ್ವರಿಗಳಲ್ಲಿ ತಾಂಡವೇಶ್ವರನಿದೆ.

ಹಾಸನಕ್ಕೆ ಸುಮಾರು ಎಂಟು ಮೈಲಿಗಳ ದೂರದಲ್ಲಿರುವ ಮೊಸಳೆ ಎಂಬ ಗ್ರಾಮದ ಅವಳಿ ದೇವಸ್ಥಾನಗಳು ಈ ರೀತಿಯ ಕಟ್ಟಡಗಳಲ್ಲಿ ಅತ್ಯುತ್ತಮ ಉದಾಹರಣೆಗಳು. ಶಿಲ್ಪ ಕೆಲಸದಲ್ಲಿ ಇವುಗಳನ್ನು ಕೋರಮಂಗಲದ ಜಾತಿಗೆ ಸೇರಿಸಬಹುದು. ಇವು ಒಂದೊಂದರಲ್ಲಿಯೂ ಒಂದು ಗರ್ಭಗುಡಿ, ಸುಕನಾಸಿ, ನವರಂಗ, ಮುಖಮಂಟಪ, ಅದರ ಎರಡು ಪಾರ್ಶ್ವಗಳಲ್ಲಿಯೂ ಜಗಲಿ, ಇಷ್ಟು ಭಾಗಗಳಿರುತ್ತವೆ. ಒಂದೊಂದಕ್ಕೂ ಪ್ರತ್ಯೇಕವೂ ಸಂಪೂರ್ಣವೂ ಆದ ಒಂದೊಂದು ಸುಂದರವಾದ ಗೋಪುರವಿದೆ. ಇವೆಲ್ಲವೂ ಉತ್ತಮ ಸ್ಥಿತಿಯಲ್ಲಿವೆ. ಈ ಗೋಪುರಗಳೆದುರಿಗೆ ಸಳನ ವಿಗ್ರಹಗಳಿವೆ. ಹಿಂದೆ ಸ್ವಚ್ಛವೂ ನೀಲವೂ ಆದ ಆಕಾಶವಿರುವಾಗ ನೋಡಿದರೆ ಇವುಗಳ ರಮಣೀಯವಾದ ಅವಯವ ಸನ್ನಿವೇಶಗಳು ಸ್ಫುಟವಾಗಿ ಕಾಣುತ್ತವೆ. ನವರಂಗಗಳಲ್ಲಿ ಒಂಬತ್ತು ಅಂಕಣ

ಗಳಿವೆ. ಇವುಗಳಲ್ಲಿ ಮಧ್ಯದ ಅಂಕಣ ಸ್ವಲ್ಪ ಎತ್ತರವಾಗಿರುತ್ತದೆ. ಸುಕನಾಸಿಯ ದ್ವಾರದ ಎರಡು ಪಕ್ಕಗಳಲ್ಲಿಯೂ ಎರಡು, ಉತ್ತರ ದಕ್ಷಿಣ ಗೋಡೆಗಳಲ್ಲಿ ಎರಡೆರಡು, ಹೀಗೆ ಈ ನವರಂಗಗಳೊಂದೊಂದರಲ್ಲಿಯೂ ಆರು ಗೂಡುಗಳಿವೆ. ಈ ಗೂಡುಗಳು ಸೊಗಸಾಗಿ ಕೆತ್ತಿ ಚಿತ್ರಕೆಲಸ ಮಾಡಿದ ಸಣ್ಣ ಸಣ್ಣ ದೇವಸ್ಥಾನಗಳಂತೆಯೇ ಇವೆ. ಇವುಗಳೊಳಗೆ ದೇವದೇವಿಯರ ವಿಗ್ರಹಗಳಿರುತ್ತವೆ. ಭುವನೇಶ್ವರಿಗಳೆಲ್ಲ ಸುಂದರವಾಗಿ ಚಿತ್ರ ಕೆಲಸದಿಂದ ಕೂಡಿದವಾಗಿ ತೊಡಕು ತೊಡಕಾದ ರೇಖಾವಿನ್ಯಾಸಗಳುಳ್ಳವಾಗಿಯೂ ಇವೆ. ಈ ದೇವಸ್ಥಾನಗಳ ಗೋಡೆಗಳ ಹೊರಮುಖದಲ್ಲಿ ಬೇಕಾದಷ್ಟು ಫಲಕಗಳನ್ನು ಮಾಡಿ ಅವುಗಳಲ್ಲಿ ನಾನಾ ವಿಗ್ರಹಗಳನ್ನು ಕೆತ್ತಿದ್ದಾರೆ. ಇವುಗಳಲ್ಲಿ ಮುಖ್ಯ ಮುಖ್ಯವಾದವುಗಳ ಮೇಲೆ ಸಣ್ಣ ಸಣ್ಣ ಗೋಪುರಗಳಿವೆ. ಹೀಗೆ ಗೋಪುರಗಳಿಲ್ಲದ ಫಲಕಗಳಲ್ಲಿ ಬಿಟ್ಟಿರುವ ಜಾಗದೊಳಗೆ ಅಮೃತಪುರದ ಅಮೃತೇಶ್ವರ ದೇವಸ್ಥಾನದಲ್ಲಿರುವಂತೆ ನಯವಾದ ಬಳ್ಳಿಯ ಕೆಲಸವು ಮಾಡಲ್ಪಟ್ಟಿದೆ. ನವರಂಗದ ಉತ್ತರ ದಕ್ಷಿಣ ಗೋಡೆಗಳಲ್ಲಿ ಎರಡು ಗೂಡುಗಳಿವೆ. ಇವುಗಳಲ್ಲಿ ಹಿಂದೆ ವಿಗ್ರಹಗಳು ಇದ್ದುವೆಂದು ತೋರುತ್ತದೆ. ಆದರೆ ಈಗ ಅವು ಬರಿಯವಾಗಿವೆ. ಲೋವೆ ಕಲ್ಲಿನ ಮೇಲ್ಗಡೆ ಕೆಲವು ಮುರಿದು ಹೋದ ವಿಗ್ರಹಗಳು ಕಾಣಬರುತ್ತವೆ. ಇವುಗಳಲ್ಲಿ ನಾನಾ ಚೇಷ್ಟೆ ಮಾಡುತ್ತಿರುವ ಕೆಲವು ಕಪಿಗಳಿವೆ. ಗರ್ಭಗುಡಿಯ ಮೇಲಣ ಗೋಪುರವು ಕೆಳಗಣ ಗೋಡೆಯ ವಿನ್ಯಾಸವನ್ನೇ ಅನುಸರಿಸಿ ಮೇಲಕ್ಕೆ ಹೋಗುತ್ತದೆ. ಅದರ ತುದಿಯಲ್ಲಿ ಸೊಗಸಾಗಿ ಕೆತ್ತಿದ ಕಲಶವಿದೆ. ಗೋಪುರದ ಮುಂದೆ ಹಿಂದೆಯೇ ತಿಳಿಸಿದಂತೆ ಸಳನ ವಿಗ್ರಹವೂ ಅದರ ಮುಂದೆ ಶಿವದೇವಾಲಯದ ಮೇಲೆ ತಾಂಡವ ಮಾಡುತ್ತಿರುವ ಶಿವನ ವಿಗ್ರಹವೂ ವಿಷ್ಣು ದೇವಾಲಯದ ಮೇಲೆ ತಾಂಡವವಾಡುತ್ತಿರುವ ವಿಷ್ಣು ವಿಗ್ರಹವೂ ಇವೆ. ಮುಖಮಂಟಪದ ಒಳಗಡೆ ಜಗಲಿಯೂ ಅದರ ಮೇಲೆ ಕಟಾಂಜನವೂ ಇದೆ. ಕಟಾಂಜನದ ಹೊರಮುಖದಲ್ಲಿ ಜೋಡು ಕಂಬಗಳೂ ಅವುಗಳ ಮಧ್ಯದಲ್ಲಿ ಗಾಯಕ ವಿಗ್ರಹಗಳೂ ಮೇಲೂ ಕೆಳಗೂ ಬಳ್ಳಿಗಳೂ ಇವೆ. ಉತ್ತರ ದಿಕ್ಕಿನ ದೇವಾಲಯದಲ್ಲಿ ಚೆನ್ನಕೇಶವ ವಿಗ್ರಹವೂ, ದಕ್ಷಿಣ ದಿಕ್ಕಿನದರಲ್ಲಿ ನಾಗೇಶ್ವರನೂ ಪ್ರತಿಷ್ಠಿತರಾಗಿದ್ದಾರೆ. ಎರಡು ದೇವಸ್ಥಾನಗಳಲ್ಲಿಯೂ ಭುವನೇಶ್ವರಿಗಳು ಸುಂದರವಾಗಿ ಕೆತ್ತಿ ಕೆಲಸ ಮಾಡಿದವು. ಮಧ್ಯದ ಭುವನೇಶ್ವರಿಗಳು ಉಳಿದ

ವಕ್ಕಿಂತ ಹೆಚ್ಚಾಗಿ ಕೆಲಸಮಾಡಿದವುಗಳು. ಈ ಭುವನೇಶ್ವರಿಗಳಲ್ಲಿ ಮಧ್ಯದಲ್ಲಿ ಒಂದು ದೊಡ್ಡ ಮೊಗ್ಗು ಇಳಿಬಿದ್ದಿರುತ್ತದೆ. ತುದಿಯಲ್ಲಿ, ವಿಷ್ಣುದೇವಾಲಯದಲ್ಲಿ ವಿಷ್ಣು ವಿಗ್ರಹವೂ, ಶಿವದೇವಾಲಯದಲ್ಲಿ ಗಜಾಸುರ ಮರ್ದನ ವಿಗ್ರಹವೂ ಕೆತ್ತಲ್ಪಟ್ಟವೆ. ವಿಷ್ಣುದೇವಾಲಯದ ಗೂಡುಗಳಲ್ಲಿ ಲಕ್ಷ್ಮೀನಾರಾಯಣ, ಶಾರದೆ, ಗಣಪತಿ, ಮಹಿಷಾಸುರ ಮರ್ದಿನಿ, ಲಕ್ಷ್ಮಿ ಮತ್ತು ಯೋಗಾನರಸಿಂಹ ವಿಗ್ರಹಗಳೂ, ಶಿವದೇವಾಲಯದ ಗೂಡುಗಳಲ್ಲಿ ಸಪ್ತಮೂರ್ತಿಗಳೂ, ಶಾರದೆ, ಗಣೇಶ, ಮಹಿಷಾಸುರ ಮರ್ದಿನಿ, ಲಿಂಗ, ಕೇಶವ ಈ ಮೂರ್ತಿಗಳೂ ಇವೆ. ವಿಷ್ಣುವಿನ ದೇವಾಲಯದ ಗೋಡೆಗಳ ಹೊರಮುಖದಲ್ಲಿ ಸುಮಾರು ೮೦ ವಿಷ್ಣು ವಿಗ್ರಹಗಳು ಇವೆ. ಶಿವದೇವಾಲಯದ ಗೋಡೆಗಳ ಹೊರಮುಖದಲ್ಲಿ ಸುಮಾರು ೭೦ ವಿಗ್ರಹಗಳು ಇವೆ. ಎಲ್ಲವೂ ಶಿವ ವಿಗ್ರಹಗಳು. ಇವೆಲ್ಲವೂ ಭಿನ್ನವಾಗಿ ಹೋಗಿವೆ. ಇವುಗಳು ಭಿನ್ನವಾಗದೆ ಚೆನ್ನಾಗಿದ್ದಿದ್ದರೆ ಮೂರ್ತಿ ಲಕ್ಷಣಗಳನ್ನು ತಿಳಿದುಕೊಳ್ಳುವುದಕ್ಕೆ ಬೇಕಾದಷ್ಟು ಸಾಮಗ್ರಿ ದೊರೆಯುತ್ತಿತ್ತು.

ತುರುವೇಕೆರೆಯಲ್ಲಿ ಒಂದೇ ತರಹದ ಸ್ವತಂತ್ರವಾದ ಎರಡು ದೇವಾಲಯಗಳು ಕಂಡುಬರುತ್ತವೆ. ಒಂದು ಚೆನ್ನಕೇಶವ ದೇವಾಲಯ ಇನ್ನೊಂದು. ಮೂಲೆಸಂಕರೇಶ್ವರ ದೇವಾಲಯ. ಇವೆರಡನ್ನೂ ೧೩ ನೆಯ ಶತಮಾನದಲ್ಲಿ ಮೂರನೆಯ ನರಸಿಂಹನ ದಳಪತಿಯಾಗಿದ್ದ ಸೋಮಣ್ಣ ದಂಡನಾಯಕನು ಕಟ್ಟಿಸಿದನು. ಈ ಎರಡು ದೇವಾಲಯಗಳ ವಿನ್ಯಾಸವು ಒಂದೇ ರೀತಿಯಾದರೂ ಅವುಗಳ ಮೇಲಿರುವ ಗೋಪುರಗಳು ಮಾತ್ರ ಬೇರೆ ಬೇರೆಯಾಗಿವೆ.

ವಿಜಯನಗರ

ಕ್ರಿ. ಶ. ೧೩೫೦ ರಿಂದ ಕ್ರಿ. ಶ. ೧೫೬೫ ವರೆಗೆ ವಿಜಯನಗರ ಸಾಮ್ರಾಜ್ಯವು ಇಡೀ ದಕ್ಷಿಣ ಭಾರತವನ್ನೇ ಆಳುತ್ತಿತ್ತು. ಆ ಕಾಲದಲ್ಲಿ ನಿರ್ಮಿಸಲ್ಪಟ್ಟ ದೇವಾಲಯಗಳು ದ್ರಾವಿಡ ಶೈಲಿಗೆ ಸೇರಿದುವು. ಆದರೆ ಇವು ಪಾಂಡ್ಯ ಮತ್ತು ಚೋಳರ ಕಾಲದಲ್ಲಿ ಕಟ್ಟಲ್ಪಟ್ಟಿರುವ ದೇವಾಲಯಗಳಂತಿರದೆ ಬೇರೆ ರೀತಿಯಲ್ಲಿವೆ. ಆದ್ದರಿಂದ ವಿಜಯನಗರದ ಅರಸರ ಕಾಲದಲ್ಲಿ ಕಟ್ಟಿದ ದೇವಾಲಯಗಳ ರೀತಿಗೆ ವಿಜಯನಗರ ಶೈಲಿ ಎಂದು ಹೆಸರಿಡಬಹುದು. ಈ ಶೈಲಿಯಲ್ಲಿ ಕಟ್ಟಿದ ದೇವಾಲಯಗಳು ಚೋಳರು ಕಟ್ಟಿರುವಷ್ಟು ದೊಡ್ಡವಾಗಿರುವುದಿಲ್ಲ ಮತ್ತು ಎತ್ತರವಾದ ಗೋಪುರಗಳನ್ನೂ ಮಹಾ ದ್ವಾರಗಳನ್ನೂ ಹೊಂದಿರುವುದಿಲ್ಲ. ಆದರೆ ವಿಜಯನಗರದರಸರ ಕಾಲದಲ್ಲಿ ಕಟ್ಟಿದ ಕೆಲವು ದೇವಾಲಯಗಳ ಮುಂದೆ ಎತ್ತರವಾದ ಗೋಪುರಗಳು ಕಂಡುಬರುತ್ತವೆ. ಅಂಥವುಗಳೆಲ್ಲವೂ ಈಚೆಗೆ ನಿರ್ಮಿಸಲ್ಪಟ್ಟವೆಂದು ನಿರ್ಧರಿಸಬಹುದು. ಈ ಶೈಲಿಯಲ್ಲಿ ದೇವಾಲಯದ ಆವರಣಗಳು ವಿಸ್ತಾರಗೊಂಡವು. ಸುಂದರವಾದ ಮಂಟಪಗಳು, ವಿಚಿತ್ರ ವಿಚಿತ್ರವಾಗಿ ಕೆತ್ತಲ್ಪಟ್ಟ ಕಂಬಗಳು, ದೊಡ್ಡದಾದ ಅನೇಕ ಅಡಿಗಳು ಮುಂದಕ್ಕೆ ಚಾಚಿರುವ ದ್ವಿಭಂಗಿ ಲೋವೆಕಲ್ಲು, ಇವೇ ಈ ಶೈಲಿಯ ಮುಖ್ಯ ಲಕ್ಷಣಗಳು. ಈ ಶೈಲಿಯಲ್ಲಿ ಉಪಯೋಗಿಸಿರುವ ಕಲ್ಲು ಕಠಿಣವಾದ ಕಗ್ಗಲ್ಲಾದರೂ ಅದನ್ನು ನಾನಾ ರೂಪದಲ್ಲಿ ಕೊರೆದು ಚಿತ್ರಿಸಿರುವ ಸಹನೆಯೂ ಚಾತುರ್ಯವೂ ವಿಸ್ಮಯವನ್ನುಂಟು ಮಾಡುವುವು. ಕಂಬಗಳು ಚತುರಸ್ರಾಕಾರವಿದ್ದು ಅವುಗಳ ಮುಂಭಾಗದಲ್ಲಿ ಅವಕ್ಕೆ ಅಂಟಿಕೊಂಡಿರುವಂತೆ ನಿಂತಿರುವ ಸಿಂಹಗಳು, ಯಾಳಿಗಳೂ, ಆನೆಗಳೂ, ರಾವುತರೂ, ಲತೆಗಳೂ ಮತ್ತು ಅವುಗಳ ಮೇಲೆ ಕೆತ್ತಿರುವ ನಾನಾ ಮುಖಗಳ

ನ್ನುಳ್ಳ ಬೋದಿಗೆಗಳೂ ಅವುಗಳನ್ನೆಲ್ಲಾ ಹೊಂದಿಸಿರುವ ಪರಿಯೂ ಇವೆಲ್ಲವೂ ಆಶ್ಚರಿಯನ್ನುಂಟುಮಾಡುವಂಥದು. ಈ ದೇವಾಲಯುಗಳ ಮತ್ತು ಮಂಟಪ ಗಳ ಜಗಲಿಯ ತುದಿಯನ್ನು ಸರಪಳಿಯೋಪಾದಿಯಲ್ಲಿ ಕೊರೆದಿರುತ್ತದೆ. ಇನ್ನು ಕೆಲವು ಕಂಬಗಳು ಮಧ್ಯದಲ್ಲಿ ಚೌಕವಾದ ಕಂಬವಿದ್ದು ಅದರ ಸುತ್ತಲೂ ಸಣ್ಣ, ಸಣ್ಣ, ಅಷ್ಟ ಮುಖಗಳುಳ್ಳ ಕಂಬಗಳನ್ನು ಹೊಂದಿರುತ್ತವೆ. ಇವೆಲ್ಲವೂ ಒಂದೇ ಕಲ್ಲಿನಲ್ಲಿ ಕೊರೆದವುಗಳು. ಒಬ್ಬ ವಿದ್ವಾಂಸನು ಒಂದೊಂದು ಕಂಬವೂ ಒಂದೊಂದು ನಾಟಕದಂತೆ ತೋರುತ್ತದೆಎಂದು ಹೇಳಿದ್ದಾನೆ.

ಈ ರೀತಿಯ ದೇವಾಲಯುಗಳು ದಕ್ಷಿಣ ಭಾರತದಲ್ಲಿ ಅನೇಕ ಕಡೆಗಳಲ್ಲಿ ಕಂಡು ಬರುತ್ತವೆ. ವಿಜಯನಗರದ ಅರಸರು ಪ್ರತ್ಯೇಕವಾದ ಸ್ವತಂತ್ರ ದೇವಾ ಲಯುಗಳನ್ನು ಕಟ್ಟಿಸಿದ್ದಲ್ಲದೆ ಅವರು ದಂಡಯಾತ್ರೆ ಹೋದ ಕಡೆಗಳಲ್ಲೆಲ್ಲ ಅಲ್ಲಿ ಕಂಡ ದೇವಾಲಯೆಗಳನ್ನು ವಿಸ್ತರಿಸಿ ಮಂಟಪಗಳನ್ನೂ ಕಲ್ಯಾಣಿಗಳನ್ನೂ ಕಟ್ಟಿ ಸುತ್ತಾ ಬಂದರು. ಈ ಶೈಲಿಯ ಶ್ರೇಷ್ಠವಾದ ದೇವಾಲಯುಗಳು ಈಗ ಪಾಳು ಬಿದ್ದಿರುವ ಹಂಪೆಯಲ್ಲೇ ಇವೆ. ಹಂಪೆಯು ಪುರಾಣ ಪ್ರಸಿದ್ಧವಾದ ಸ್ಥಳ. ಶ್ರೀರಾಮಚಂದ್ರ ಸೀತಾದೇವಿಯರಿಂದ ಪವಿತ್ರವಾದ ಸ್ಥಳವೆಂದೂ ಇಲ್ಲಿಯೇ ಶ್ರೀರಾಮರಿಗೂ ಸುಗ್ರೀವರಿಗೂ ಭೇಟಿಯಾದ ಸ್ಥಳವೆಂದೂ ಹೇಳುತ್ತಾರೆ. ಇಲ್ಲಿರುವ ವಿಠ್ಠಲ ದೇವಾಲಯವೂ ಹಜಾರ ರಾಮನ ದೇವಸ್ಥಾನವೂ, ಪಂಪಾ ಪತಿ ದೇವಾಲಯವೂ ಮುಖ್ಯವಾದುವುಗಳು. ವಿಠ್ಠಲ ದೇವಾಲಯುವು ಅತ್ಯಂತ ಸುಂದರವಾದದ್ದು ಮತ್ತು ಹೆಚ್ಚು ಅಲಂಕೃತವಾದದ್ದು. ಇದನ್ನು ಶ್ರೀಕೃಷ್ಣದೇವರಾಯನು ಕ್ರಿ. ಶ. ೧೫೧೩ ರಲ್ಲಿ ಪ್ರಾರಂಭಿಸಿದನು. ಅದನ್ನು ಅವನ ತರುವಾಯ ಬಂದ ಅಚ್ಯುತರಾಯನು ಮುಂದುವರಿಸಿದನು. ಆದರೆ ರಾಜಕೀಯ ಕಾರಣಗಳಿಂದ ಅದನ್ನು ಪೂರ್ತಿಯಾಗಿ ಮುಗಿಸಲು ಸಾಧ್ಯವಾಗ ಲಿಲ್ಲ. ದೇವಸ್ಥಾನವು ೫೦೦ ಅಡಿ ಉದ್ದವೂ ೩೧೦ ಅಡಿ ಅಗಲವೂ ಇರುವ ಅಂಗಳದಲ್ಲಿ ನಿಂತಿದೆ. ಆವರಣದ ಸುತ್ತಲೂ ಕೈಸಾಲೆ ಇದೆ. ಇದರೊಳಕ್ಕೆ ಬರುವದಕ್ಕೆ ಮೂರು ಕಡೆ ಗೋಪುರ ದ್ವಾರಗಳಿವೆ. ಮಧ್ಯದಲ್ಲಿರುವುದು ವಿಠ್ಠಲನ ದೇವಾಲಯ. ೨೩೦ ಅಡಿ ಉದ್ದ ೨೫ ಅಡಿ ಎತ್ತರ ಇದೆ. ಇದರ ಮೇಲೆ ಗೋಪುರವಿದ್ದಿದ್ದರೆ ಇನ್ನೂ ಭವ್ಯವಾಗಿ ಕಾಣುತ್ತಿತ್ತು. ಐದು ಅಡಿ ಎತ್ತರ

ವಿರುವ ಜಗಲಿಯ ಮೇಲೆ ಒಂದು ಮುಖಮಂಟಪ, ನವರಂಗ ಮತ್ತು ಗರ್ಭ ಗೃಹಗಳನ್ನುಳ್ಳದ್ದಾಗಿದೆ. ಈ ದೇವಸ್ಥಾನವನ್ನು ಪಂಡರಪುರದಲ್ಲಿರುವ ವಿಠೋಬನಿಗೋಸ್ಕರ ಕೃಷ್ಣದೇವರಾಯನು ಕಟ್ಟಿಸಿದನೆಂದೂ ಅದನ್ನು ಕಟ್ಟುತ್ತಿರುವ ಕಾಲದಲ್ಲಿ ದೇವರು ಬಂದು ನೋಡಿ ಇಷ್ಟು ಅಲಂಕೃತವಾದ ದೇವಾಲಯವು ತನ್ನ ವಾಸಕ್ಕೆ ಯೋಗ್ಯವಲ್ಲವೆಂದು ಹಿಂದಕ್ಕೆ ಹೊರಟು ಹೋದನೆಂಬೂ ಪ್ರತೀತಿ. ನವರಂಗವು ೫೫ ಅಡಿ ಚದರವಿದ್ದು ೧೬ ಸೊಗಸಾಗಿ ಕೆತ್ತಿದ ಕಂಬಗಳನ್ನು ಹೊಂದಿದೆ. ದೇವಸ್ಥಾನದ ಜಗಲಿಯಲ್ಲಿ ಕುದುರೆಗಳನ್ನೂ ಸಿಪಾಯಿಗಳನ್ನೂ ಕೆತ್ತಿದೆ. ಒಳಗಡೆ ಎಲ್ಲೆಲ್ಲಿ ನೋಡಿದರೂ ಕೆತ್ತನೆಯ ಕೆಲಸ. ಕಂಬಗಳ ಸಾಲು ಒಂದು ಕಾಡಿನ ಮಧ್ಯೆ ನಿಂತಂತೆ ಭಾಸವಾಗುತ್ತದೆ. ಆವರಣದಲ್ಲಿರುವ ಅಮ್ಮನವರ ದೇವಾಲಯವೂ, ಮಂಟಪಗಳೂ, ಕೈಸಾಲೆಯೂ ನಾನಾ ತರಹದಲ್ಲಿ ಕೊರೆದ ಕಂಬಗಳಿಂದ ಕೂಡಿದೆ. ಮಂಟಪದ ಕಂಬಗಳ ಮೇಲುಗಡೆ ದ್ವಿಭಂಗಿಯಾಕಾರದ ಲೋವೆಕಲ್ಲು ಇದೆ. ಹೊಸದಾಗಿ ಕಟ್ಟಿದಾಗ ಕಂಬಗಳಿಗೂ ಲೋವೆ ಕಲ್ಲಿಗೂ ಚಿನ್ನದ ಮುಲಾಮಿನ ತಗಡನ್ನು ಹೊರಿಸಿದ್ದರೆಂದು ತಿಳಿಯಬರುತ್ತದೆ. ಶ್ರೀಶೈಲದಲ್ಲಿರುವ ದೇವಾಲಯಕ್ಕೂ ಹೀಗೆಯೇ ಚಿನ್ನದ ತಗಡನ್ನು ಹೊದ್ದಿಸಿದ್ದರೆಂದು ಜನಗಳು ಹೇಳಿಕೊಳ್ಳುತ್ತಾರೆ. ಈ ದೇವಸ್ಥಾನದ ಆವರಣದಲ್ಲಿ ದೇವಾಲಯದ ಮುಖಮಂಟಪದ ಎದುರಿಗೆ ಒಂದು ಕಲ್ಲಿನಿಂದ ಕೆತ್ತಿದ ರಥವಿದೆ. ಮೇಲಿನಿಂದ ಕೆಳಗಿನವರೆಗೂ ಚಿತ್ರಗಳು, ಅಚ್ಚು ಸಹಿತವಾಗಿ ಎಲ್ಲ ಕಲ್ಲಿನಲ್ಲೆ ಕೊರೆದು ಮಾಡಿರಲಾಗಿದೆ. ಇಂತಹ ರಥವು ಇನ್ನೆಲ್ಲಿಯೂ ಕಂಡು ಬರುವುದಿಲ್ಲ. ರಥೋತ್ಸವಗಳ ಕಾಲದಲ್ಲಿ ಎಳೆದುಕೊಂಡು ಹೋಗುವ ರಥದಂತೆಯೇ ಎತ್ತರವಾಗಿದೆ. ಅದಕ್ಕೆ ಹಾಕಿರುವ ಕಲ್ಲಿನ ಚಕ್ರಗಳು ಮೊದಲು ತಿರುಗಿಸಲು ಬರುತ್ತಿದ್ದವಂತೆ. ಈಗ ಅವು ಅಚಲವಾಗಿ ನಿಂತಿವೆ.

ಹಜಾರ ರಾಮನ ದೇವಾಲಯವು ಕೋಟೆಯಲ್ಲಿದೆ. ಇದು ಅರಮನೆಯ ದೇವಸ್ಥಾನವಾಗಿತ್ತೆಂದೂ ಇಲ್ಲಿಗೆ ಪ್ರತಿದಿನವೂ ರಾಣೀ ವಾಸದವರೂ ಇತರ ಅರಸು ಮನೆತನದವರೂ ದೇವರ ಸೇವೆಗಾಗಿ ಬರುತ್ತಿದ್ದರೆಂದೂ ತಿಳಿಯಬರುತ್ತದೆ. ಈ ದೇವಾಲಯವೂ ಕ್ರಿ. ಶ. ೧೫೧೩ ರಲ್ಲಿ ಸೂರ್ಯಗ್ರಹಣದ ಕಾಲದಲ್ಲಿ ಪ್ರಾರಂಭಿಸಲ್ಪಟ್ಟಿತು. ಇದು ಸಂಪೂರ್ಣವಾದ ಮತ್ತು ನಿರ್ದುಷ್ಟವಾದ ದೇವಾಲಯ. ಆಗಿನ ಕಾಲದ ದೇವಾಲಯಗಳಿಗೆ ಇದನ್ನು ಮಾದರಿಯಾಗಿ ಪರಿ

ಗಣಿಸಬಹುದು. ಇದು ೨೦೦ ಅಡಿ ಉದ್ದವೂ ೧೧೦ ಅಡಿ ಅಗಲವೂ ಆದ ಆವರಣದಲ್ಲಿ ಪೂರ್ವಾಭಿಮುಖವಾಗಿ ನಿಂತಿದೆ. ರಾಮಚಂದ್ರ ಮೂರ್ತಿಯೇ ಅಧಿದೇವತೆ. ಈ ದೇವಾಲಯದ ಗೋಡೆಯ ಮೇಲೆ ಸುತ್ತಲೂ ರಾಮಾಯಣ ಕಥೆಯನ್ನು ಕೆತ್ತಿದೆ. ಒಂದು ನವರಂಗ, ಅದರ ಮೂರು ಕಡೆಗಳಲ್ಲಿಯೂ ಮುಖಮಂಟಪಗಳೂ, ನಾಲ್ಕನೆಯ ಕಡೆ ಸುಕನಾಸಿ ಮತ್ತು ಗರ್ಭಗೃಹ. ನವರಂಗದ ಮಧ್ಯದಲ್ಲಿ ಸೊಗಸಾಗಿ ಕೆತ್ತಿದ ನಾಲ್ಕು ಕರೀಕಲ್ಲಿನ ಕಂಬಗಳಿವೆ. ಈ ಕಂಬಗಳು ತುಂಬಾ ನಯಮಾಡಲ್ಪಟ್ಟು ಹೊಳೆಯುತ್ತಿವೆ. ಗರ್ಭಗೃಹದ ಮೇಲಿರುವ ವಿಮಾನವು ಚಿಕ್ಕದಾದರೂ ಚೆನ್ನಾಗಿದೆ. ಆದರೆ ಇದು ಗಾರೆ ಯಿಂದ ಕಟ್ಟಲ್ಪಟ್ಟಿದೆ. ಈ ಗೋಪುರವು ಬಣ್ಣ ಬಣ್ಣಗಳಿಂದ ಅಲಂಕರಿಸ ಲ್ಪಟ್ಟಿತ್ತೆಂದು ತೋರುತ್ತದೆ. ದೇವಾಲಯದ ಹೊರಮುಖದಲ್ಲಿ ಸಣ್ಣ ಸಣ್ಣ ಕಂಬಗಳು, ಗೂಡುಗಳೂ ಕೆತ್ತಲ್ಪಟ್ಟಿವೆ. ಪಂಪಾವತಿ ದೇವಾಲಯವು ಹಾಳಾ ಗದೆ ನಿಂತಿದೆ. ಈಗಲೂ ದೇವಾಲಯದಲ್ಲಿ ಪೂಜೆಯೂ, ಕೈಂಕರ್ಯವೂ ನಡೆಯು ತ್ತಿದೆ. ಈ ದೇವಾಲಯವು ಅತ್ಯಂತ ಪುರಾತನವಾದದ್ದು. ವಿಜಯನಗರ ಸ್ಥಾಪನೆ ಯಾಗುವುದಕ್ಕೆ ಮುಂಚಿನಿಂದಲೂ ಇದ್ದಿರಬೇಕು. ವಿಜಯನಗರದ ರಾಜರು ಮೊದಲಿದ್ದ ದೇವಾಲಯವನ್ನು ವಿಸ್ತರಿಸಿ, ಆವರಣವನ್ನು ನಿರ್ಮಿಸಿ ಕೈಸಾಲೆ ಗಳು, ಮುಖಮಂಟಪಗಳು ಇತರ ದೇವಾಲಯಗಳು ಇವುಗಳನ್ನೆಲ್ಲಾ ನಿರ್ಮಿಸಿ ದರು. ಕೃಷ್ಣದೇವರಾಯನು ತನ್ನ ಪಟ್ಟಾಭಿಷೇಕ ಕಾಲದಲ್ಲಿ ರಂಗಮಂಟಪವನ್ನು ಕ್ರಿ. ಶ. ೧೫೧೦ ರಲ್ಲಿ ಕಟ್ಟಿಸಿದನೆಂದು ಹೇಳುತ್ತಾರೆ. ಈ ದೇವಾಲಯಕ್ಕೆ ಎತ್ತರವಾದ ಮಹಾ ದ್ವಾರವೂ ಅದರ ಮೇಲೆ ಗೋಪುರವೂ ಇದೆ. ಇದು ಕೃಷ್ಣದೇವರಾಯನ ಅನಂತರ ಕಟ್ಟಿಸಿದ್ದಿರಬೇಕು. ಈ ದೇವಾಲಯಗಳಲ್ಲದೆ, ಕೃಷ್ಣರಾಯ ದೇವಾಲಯ ಮತ್ತು ಅಚ್ಯುತರಾಯನ ದೇವಾಲಯವೆಂದು ಎರಡು ದೇವಾಲಯಗಳಿವೆ. ಮೊದಲನೆಯದು ಕ್ರಿ. ಶ. ೧೫೧೩ ರಲ್ಲಿ ಕಟ್ಟಿಸಿದ್ದು. ಗರ್ಭಗೃಹದಲ್ಲಿರುವ ಮೂಲ ಮೂರ್ತಿಯನ್ನು ನೆಲ್ಲೂರು ಡಿಸ್ಟ್ರಿಕ್ಟು ಉದಯ ಗಿರಿಯಿಂದ ತರಲಾಗಿತ್ತು. ಈ ಮೂರ್ತಿಯು ಈಗ ಮದರಾಸು ಮ್ಯೂಜಿಯಮ್ಮಿ ನಲ್ಲಿದೆ. ಈ ದೇವಸ್ಥಾನದ ಮುಂಭಾಗದಲ್ಲಿ ಒಂದು ದೊಡ್ಡ ರಾಜಬೀದಿ ಇತ್ತಂತೆ. ಈಗ ಅದೆಲ್ಲವೂ ಗದ್ದೆಗಳಿಂದ ಆವರಿಸಲ್ಪಟ್ಟಿದೆ. ಎರಡನೆಯ ದೇವಾಲಯವು ಅಚ್ಯುತರಾಯನು ಕ್ರಿ. ಶ. ೧೫೩೯ ರಲ್ಲಿ ಕಟ್ಟಿಸಿದ್ದು. ಇದು

ವಿಠ್ಠಲ ದೇವಾಲಯದಂತೆಯೇ ಇದೆ. ಇದರಲ್ಲಿ ಆವರಣದಲ್ಲಿರುವ ಕಲ್ಯಾಣ ಮಂಟಪವು ಬಹು ಸುಂದರವಾಗಿದೆ. ಈ ದೇವಾಲಯದ ಆವರಣಕ್ಕೆ ಎತ್ತರವಾದ ಮಹಾ ದ್ವಾರಗಳು ಇವೆ. ಈ ಸ್ಥಳದಲ್ಲಿ ವಾಸ್ತುಕಲೆಯ ದೃಷ್ಟಿಯಲ್ಲಿ ನೋಡಬೇಕಾದುದು ಎರಡು. ಒಂದು ಮಹಾನವಮಿ ದಿಬ್ಬ. ಮತ್ತೊಂದು ಅರಮನೆಯ ದಿಬ್ಬ. ಇವುಗಳ ಮೇಲೆ ಅನೇಕ ಅಂತಸ್ತುಗಳುಳ್ಳ ಅರಮನೆಗಳು ಇದ್ದುವಂತೆ. ಮಹಾನವಮಿ ದಿಬ್ಬವು ನವರಾತ್ರಿ ಉತ್ಸವಕಾಲದಲ್ಲಿ ಉಪಯೋಗಿಸಲ್ಪಡುತ್ತಿತ್ತೆಂದೂ, ಇದನ್ನು ಕೃಷ್ಣದೇವರಾಯನು ಒರಿಸ್ಸಾ ದೇಶದ ರಾಜನನ್ನು ಕ್ರಿ. ಶ. ೧೫೧೩ ರಲ್ಲಿ ಗೆದ್ದು ಬಂದ ಜ್ಞಾಪಕಾರ್ಥವಾಗಿ ಕಟ್ಟಿಸಿದನೆಂದೂ ಪ್ರತೀತಿ. ಇನ್ನೊಂದು ಉಳಿದ ದಿನಗಳಲ್ಲಿ ದರ್ಬಾರನ್ನು ನಡೆಸುತ್ತಿದ್ದ ಅರಮನೆಯ ಒಂದು ಭಾಗ. ಈಗ ಉಳಿದಿರುವುದು ಜಗತಿಗಳು ಮಾತ್ರ. ಈ ಜಗತಿಗಳ ಮೇಲೆ ಆನೆಗಳು, ಕುದುರೆಗಳು, ಸುಕನಾಸಿಗಳು ಮುಂತಾದುವು ಕೆತ್ತಲ್ಪಟ್ಟವೆ. ಮುಸಲ್ಮಾನರು ಇವೆಲ್ಲವನ್ನೂ ನಾಶಮಾಡಿ ಅವುಗಳಲ್ಲಿ ಸಿಕ್ಕಿದ ಧನಕನಕ ವಸ್ತ್ರಾಭರಣಗಳನ್ನೆಲ್ಲ ಹೊತ್ತುಕೊಂಡು ಹೋದರಂತೆ. ಊರು ತುಂಬ ಎಲ್ಲೆಲ್ಲಿಯೂ ಪಾಳು ದೇವಸ್ಥಾನಗಳೂ ಮಂಟಪಗಳೂ ದೊಡ್ಡ ದೊಡ್ಡ ವಿಗ್ರಹಗಳೂ ಕಾಣಬರುತ್ತವೆ. ಒಂದು ದೊಡ್ಡ ಲಿಂಗವೂ ಎರಡು * ದೊಡ್ಡ ಗಣೇಶ ವಿಗ್ರಹಗಳೂ ಒಂದು ೨೨ ಅಡಿ ಎತ್ತರವಿರುವ ನರಸಿಂಹ ವಿಗ್ರಹವೂ ಇವೆ. ನರಸಿಂಹ ವಿಗ್ರಹವು ಈಗ ಭಿನ್ನವಾಗಿದ್ದರೂ ಭವ್ಯವಾಗಿಯೂ ಸುಂದರವಾಗಿಯೂ ಕಂಗೊಳಿಸುತ್ತಿದೆ ಇದನ್ನು ಕ್ರಿ. ಶ. ೧೫೨೮ ರಲ್ಲಿ ಕೆತ್ತಿದ್ದೆಂದು ತಿಳಿಯಬರುತ್ತದೆ. ವಿಜಯನಗರ ಶೈಲಿಯ ಕಟ್ಟಡಗಳು ಮೈಸೂರು ರಾಜ್ಯದ ಹೊರಗೂ ಅನೇಕ ಇವೆ. ಅವುಗಳ ಪೈಕಿ ವೆಲ್ಲೂರು, ಕುಂಭಕೋಣ, ಕಂಚಿ, ತಾಡಪತ್ರಿ, ವಿರಂಚಿಪುರಂ ಮತ್ತು ಶ್ರೀರಂಗಗಳಲ್ಲಿರುವವು ಸುಂದರವಾಗಿವೆ.

ಇಡೀ ಭಾರತದಲ್ಲಿ ಅನೇಕ ಶತಮಾನಗಳ ರಾಜಕೀಯ ಗೊಂದಲಗಳ ಪರಿಣಾಮವಾಗಿ ದೇವಾಲಯಗಳು ಮಾತ್ರ ಉಳಿದಿವೆ. ಜನಸಾಮಾನ್ಯರೂ ರಾಜರೂ ಯಾವರೀತಿ ಮನೆಗಳನ್ನೂ ಅರಮನೆಗಳನ್ನೂ ಕಟ್ಟುತ್ತಿದ್ದರೆಂದು ಹೇಳಲು ಆಧಾರಗಳಿರುವುದಿಲ್ಲ. ಕಲ್ಲು ಮಣ್ಣುಗಳಿಂದಲೂ ಮತ್ತು ಮರಗಳಿಂದಲೂ ಅವನ್ನು ಕಟ್ಟುತ್ತಿದ್ದುದೇ ಅದಕ್ಕೆ ಕಾರಣವೆಂದು ತೋರುತ್ತದೆ.

---

* ಈ ಗಣಪತಿ ವಿಗ್ರಹಗಳನ್ನು ಸಾಸಿವೆಕಾಳು ಗಣೇಶ ಮತ್ತು ಕಡಲೆಕಾಳು ಗಣೇಶ ಎಂದು ಕರೆಯುತ್ತಾರೆ. ಇವೆರಡೂ ೧೨ ಅಡಿ ಎತ್ತರಕ್ಕಿಂತ ಹೆಚ್ಚಾಗಿವೆ.

ಇಸ್ಲಾಂಮತದ ಕಟ್ಟಡಗಳು

ಹಿಂದೂಸ್ಥಾನಕ್ಕೆ ಮಹಮ್ಮದೀಯರು ಒಳಹೊಕ್ಕ ನಂತರ ವಾಸ್ತು ಕಲೆಯಲ್ಲಿ ಒಂದು ಕ್ರಾಂತಿಯೇ ಉಂಟಾಯಿತು. ಪುರಾತನದಿಂದಲೂ ನಡೆದು ಬಂದಿದ್ದ ಕಲೆಯು ನಾಶವಾಯಿತು. ಹೊಸದೊಂದು ಹೊರಗಿನಿಂದ ಬಂದು ತಲೆ ಎತ್ತಿತು. ಹಿಂದೂ ಮತ್ತು ಮಹಮ್ಮದೀಯರ ವಾಸ್ತು ಕಲೆಯ ಸ್ವರೂಪವೇ ಬೇರೆ ಬೇರೆ. ಹಿಂದೂ ಕಲೆಯಲ್ಲಿ ಕಂಬಗಳು ತೊಲೆಗಳೇ ಪ್ರಾಧಾನ್ಯ. ಮಹಮ್ಮದೀಯ ಕಲೆಯಲ್ಲಿ ಕಂಬಗಳೇ ಇಲ್ಲ. ಎಲ್ಲ ಕಟ್ಟಡಗಳಲ್ಲಿಯೂ ಕಮಾನುಗಳೇ ಪ್ರಾಧಾನ್ಯ. ಅಲ್ಲಿದ್ದ ಜೈನ ದೇವಾಲಯಗಳನ್ನು ಕೆಡವಿ ಅವುಗಳ ಕಂಬಗಳನ್ನೇ ಉಪಯೋಗಿಸಿ ಮಹಮ್ಮದೀಯ ಕಟ್ಟಡಗಳನ್ನು ಕಟ್ಟಿದ್ದರಿಂದ ಗುಜರಾತಿನಲ್ಲಿ ಮಾತ್ರ ಕಂಬಗಳನ್ನು ಕಾಣುತ್ತೇವೆ. ಹಾಗೆಯೇ ದಿಲ್ಲಿಯಲ್ಲಿ ಕುತುಬ್ ಮೀನಾರ್ ಹತ್ತಿರ ಇರುವ ಮಸೀದಿಯನ್ನು ಮುನ್ನೂರು ಜೈನ ದೇವಾಲಯಗಳನ್ನು ಕೆಡವಿ ಅವುಗಳ ಕಂಬಗಳನ್ನು ಉಪಯೋಗಿಸಿ ಕಟ್ಟಿದ್ದೆಂದು ಹೇಳುತ್ತಾರೆ. ಅದೂ ಅಲ್ಲದೆ, ಹಿಂದೂ ದೇವಾಲಯಗಳೂ ಮತ್ತು ಇತರ ಕಟ್ಟಡಗಳೂ ಕಲ್ಲಿನಿಂದಲೇ ಕಟ್ಟಲ್ಪಟ್ಟವು. ಮೊದ ಮೊದಲು ಗಾರೆ ಕೂಡ ಹಾಕುತ್ತಿರಲಿಲ್ಲ. ಈಚೆಗೆ ಕಲ್ಲು ತುಂಡುಗಳ ಮಧ್ಯದಲ್ಲಿ ಗಾರೆಯನ್ನು ಹಾಕಿ ಕಲ್ಲುಗಳನ್ನು ಕೂಡಿಸುವ ಪದ್ಧತಿ ಬಂದಿತು. ಕೋಟೆ ಕೊತ್ತಲಗಳನ್ನೆಲ್ಲ ಹೀಗೆಯೇ ಕಟ್ಟುತ್ತಾ ಬಂದರು. ಮಹಮ್ಮದೀಯರ ಕಟ್ಟಡಗಳು ಕಲ್ಲು ತುಂಡುಗಳಿಂದ ಕಟ್ಟಿದ ಮೇಲೆ ಗಾರೆ ಮಾಡುವ ಪದ್ಧತಿ ಬಂತು. ಆದ್ದರಿಂದ ಅಮೃತಶಿಲೆ ಮತ್ತು ಕೆಂಪು ಕಲ್ಲುಗಳಿಂದ ಕಟ್ಟಿದವುಗಳನ್ನು ಬಿಟ್ಟು ಎಲ್ಲ ಮಹಮ್ಮದೀಯ ಕಟ್ಟಡಗಳೂ ಗಾರೆಯ ಕಟ್ಟಡಗಳೇ ಆಗಿರುತ್ತವೆ. ಹಿಂದೂ ದೇವಾಲಯಗಳ ಕಟ್ಟಡಗಳು ಚಪ್ಪಟೆಯಾದ ಭಾವಣಿಯನ್ನು ಹೊಂದಿರುತ್ತವೆ.

ಮಹಾದ್ವಾರದ ಮೇಲೋ ಮತ್ತು ಗರ್ಭಗೃಹದ ಮೇಲೋ ಮಾತ್ರ ಗೋಪುರವು ಸೂಚ್ಯಾಕಾರವಾಗಿ ಹೋಗುತ್ತದೆ. ಮಹಮ್ಮದೀಯರ ಕಟ್ಟಡಗಳಲ್ಲಿ ಗೋಪುರದ ಬದಲು ಗುಮ್ಮಟವು ಗೋಳಾಕಾರವಾಗಿಯೋ ಅಥವಾ ಅಂಡಾಕಾರವಾಗಿಯೋ ಮೇಲಕ್ಕೆ ಏರುತ್ತದೆ. ಮಹಮ್ಮದೀಯ ಸುಲ್ತಾನರು ತಮ್ಮ ಭವ್ಯವಾದ ಕಟ್ಟಡಗಳನ್ನು ಕಟ್ಟುವುದಕ್ಕೆ ಪ್ರಾರಂಭದಲ್ಲಿ ಹೊರಗಿನಿಂದ ಕೆಲಸಗಾರರನ್ನು ಕರೆಯಿಸುತ್ತಿದ್ದರು. ಆಮೇಲೆ ಆಮೇಲೆ ಇಲ್ಲಿಯ ಕೆಲಸಗಾರರನ್ನೇ ನೇಮಿಸುತ್ತ ಬಂದರು. ಆದ್ದರಿಂದ ಉತ್ತರ ಹಿಂದೂಸ್ತಾನದ ಕಟ್ಟಡಗಳಂತಲ್ಲದೆ ದಕ್ಷಿಣದಲ್ಲಿನ ಕಟ್ಟಡಗಳಲ್ಲಿ ಭಾರತದ ಕಲೆಯ ಪ್ರಭಾವ ಹೆಚ್ಚಾಗಿ ಕಂಡು ಬರುತ್ತದೆ. ಹಿಂದೂಗಳಲ್ಲಿ ಕಟ್ಟಡಗಳೆಲ್ಲವೂ ಮತಕ್ಕೆ ಸಂಬಂಧ ಪಟ್ಟವೇ ಆಗಿರುತ್ತವೆ. ಇತರ ಕಾಲದ ಕಟ್ಟಡಗಳಿಗೆ ಹೆಚ್ಚು ಪ್ರಾಶಸ್ತ್ಯವಿರುತ್ತಿರಲಿಲ್ಲ. ಮಹಮ್ಮದೀಯರಲ್ಲಿಯಾದರೊ, ಮತಕ್ಕೆ ಸಂಬಂಧಪಟ್ಟ ಮಸೀದಿಗಳೂ, ಕಬರಸ್ತಾನಗಳಲ್ಲದೆ, ಮಂಟಪಗಳೂ ಪುರ ದ್ವಾರಗಳೂ ಜಲಮಂದಿರಗಳೂ ಮಹಲುಗಳೂ ಬಾವಡಿಗಳೂ ಸುಂದರವಾದ ತೋಟಗಳೂ ಕಟ್ಟಿರುವುದು ಕಂಡು ಬರುತ್ತವೆ. ಅಲ್ಲದೆ ಪೂರ್ವಕಾಲದ ರಾಜರ ಅರಮನೆಗಳು ಯಾವ ರೀತಿ ಇರುತ್ತಿದ್ದವು ಎನ್ನುವುದನ್ನು ಹಿಂದಿನ ಗ್ರಂಥಗಳಿಂದ ತಿಳಿದುಕೊಳ್ಳಬೇಕೇ ಹೊರತು ಅಂತಹ ಅವಶೇಷಗಳಾವುವೂ ಇರುವುದಿಲ್ಲ. ಇರುವ ಒಂದೆರಡೂ ಕೂಡ ಅಷ್ಟೇನೂ ಮೆಚ್ಚುವಂತಹವೇನಲ್ಲ. ಮಹಮ್ಮದೀಯರಲ್ಲಿಯಾದರೋ ಅರಮನೆಗಳು, ರಾಜಾಸ್ಥಾನ ಬಹು ಸುಂದರವಾಗಿ ಹೆಚ್ಚು ಆಕರ್ಷಕವಾಗಿ ಕಟ್ಟಿದುವು. ಅವು ಯಾವ ರೀತಿ ಇರುತ್ತಿದ್ದುವು ಎನ್ನುವುದಕ್ಕೆ ಡಿಲ್ಲಿಯ ಕೋಟೆಯಲ್ಲಿರುವ ಮೊಗಲರ ಅರಮನೆಯನ್ನು ನೋಡಿದರೆ ಚೆನ್ನಾಗಿ ಮಂದಟ್ಟಾಗುತ್ತದೆ.

ಸಾಧಾರಣವಾಗಿ ಮಹಮ್ಮದೀಯರ ಮಸೀದಿಗಳಲ್ಲಿ ಈ ಕೆಳಗಿನ ಭಾಗಗಳಿರುತ್ತವೆ.

ದರವಾಜಾ: ಹೊರಗಿನಿಂದ ಒಳಕ್ಕೆ ಬರುವುದಕ್ಕೆ ಒಂದು ಮಹಾದ್ವಾರ.

ಅಂಗಳ: ಒಳಗೆ ಬಿಸಿಲು, ಬೆಳಕು ಚನ್ನಾಗಿ ಬರುವುದಕ್ಕೆ.

ಕೊಳ: ಧ್ಯಾನ ಮಾಡುವುದಕ್ಕೆ ಮುಂಚೆ ಕೈಕಾಲು ತೊಳೆದುಕೊಳ್ಳುವುದಕ್ಕೆ.

ಕೈಸಾಲೆ: ಅಂಗಳದ ಅಕ್ಕಪಕ್ಕಗಳಲ್ಲಿ.

ಹಜಾರ: ಮಧ್ಯದಲ್ಲಿರುವ ದೊಡ್ಡದಾದ ಧ್ಯಾನಮಾಡುವ ಸ್ಥಳ.

ಮಿಹರಬ್: ಹಜಾರದ ಪಶ್ಚಿಮಗೋಡೆಯಲ್ಲಿನ ಗೂಡು.

ಮಿಂಬಾರ್: ಖಾಜಿಯು ಕೂತುಕೊಳ್ಳುವುದಕ್ಕೆ ಒಂದು ಕಟ್ಟೆ.

ಮಿನಾರ್: ಕಟ್ಟಡದ ಎರಡು ಕೊನೆಗಳಲ್ಲಿಯೂ ದುಂಡಗೋ ಅಥವಾ ಅಷ್ಟಕೋಣಾಕಾರವಾಗಿಯೋ ಎತ್ತರವಾಗಿ ಹೋಗಿರುವ ಬುರುಜು.

ಪ್ರತಿಯೊಂದು ದೊಡ್ಡ ಊರಿನಲ್ಲಿಯೂ ಮುಖ್ಯವಾದ ಒಂದು ದೊಡ್ಡ ಮಸೀದಿ ಇರುತ್ತದೆ. ಅದಕ್ಕೆ ಜುಮ್ಮ ಮಸೀದಿ ಎಂದು ಹೆಸರು. ಇದಲ್ಲದೆ ವರ್ಷಕ್ಕೊಂದು ಬಾರಿ ಊರ ಹೊರಗೆ ಮಹಮ್ಮದೀಯರೆಲ್ಲರೂ ಸೇರುವುದಕ್ಕಾಗಿ ಒಂದು ಸ್ಥಳವೇರ್ಪಟ್ಟಿರುತ್ತದೆ. ಅದರ ಹೆಸರು ಈದ್ಗ.

ಮಹಮ್ಮದೀಯರಲ್ಲಿ ಸತ್ತವರನ್ನು ಹೂಳುವುದಕ್ಕಾಗಿ ಒಂದು ಕಬರ ಸ್ತಾನವಿರುತ್ತದೆ. ರಾಜ ರಾಣಿಯರ ಗೋರಿಗಳಿಗಾಗಿ ಸುಂದರವಾದ ಕಟ್ಟಡಗಳನ್ನು ಕಟ್ಟಿರುತ್ತಾರೆ. ಆಗ್ರಾದಲ್ಲಿರುವ ತಾಜಮಹಲ್ ಅಂಥ ಒಂದು ಗೋರಿ. ಅನೇಕ ಕಡೆಗಳಲ್ಲಿ ಒಂದು ಮಸೀದಿಯೂ ಒಂದು ಗೋರಿ ಕಟ್ಟಡವೂ ಕೂಡಿಯೇ ಇರುತ್ತವೆ.

ಮಹಮ್ಮದೀಯರು ತಾವು ಗೆದ್ದ ರಾಜ್ಯಗಳಲ್ಲೆಲ್ಲ ಅವರ ಕಣ್ಣಿಗೆ ಬಿದ್ದ ದೇವಾಲಯಗಳನ್ನೆಲ್ಲ ನಾಶ ಮಾಡುವುದು ಮೊದಲನೆಯ ಕೆಲಸವಾಗಿತ್ತು. ಅನಂತರ ಕೆಡವಿದ ಸಾಮಾನುಗಳನ್ನೆಲ್ಲ ಆನೆಗಳ ಸಹಾಯದಿಂದ ಎಳೆಸಿ ಒಂದು ಕಡೆ ಗುಡ್ಡೆ ಮಾಡುವುದು ಎರಡನೆಯ ಕೆಲಸ. ಅನಂತರ ದೇವಾಲಯಗಳು ಇದ್ದ ಜಾಗಗಳಲ್ಲೆಲ್ಲ ಆದಷ್ಟು ಕೆಡವಿದ ದೇವಾಲಯಗಳ ಕಲ್ಲು ತುಂಡುಗಳನ್ನೇ ಉಪಯೋಗಿಸಿ ಇಲ್ಲವೆ ಬೇರೆ ಸಾಮಾನುಗಳನ್ನೇ ತರಿಸಿ ಮಸೀದಿಗಳನ್ನು ಕಟ್ಟಿಸುವುದು ಮೂರನೆಯ ಕೆಲಸ. ಇದೇ ಅವರ ಪದ್ಧತಿಯಾಗಿತ್ತು. ಉತ್ತರ

ಹಿಂದೂಸ್ಥಾನದಲ್ಲಿ ಮೊದ ಮೊದಲು ಕಟ್ಟಿಸಿದ ಮಸೀದಿಗಳೆಲ್ಲ ದೇವಾಲಯಗಳ ಹಳೆ ಸಾಮಾನುಗಳನ್ನೆ ಉಪಯೋಗಿಸಿ ನಿರ್ಮಿಸಿದುವು. ಗುಜರಾತಿನಲ್ಲಂತು ಕಟ್ಟಿರತಕ್ಕ ಮಹಮ್ಮದೀಯ ಕಟ್ಟಡಗಳೆಲ್ಲ ಅದೇ ರೀತಿಯವು. ಬಹು ಅಂದ ವಾಗಿ ಕಾಣುತ್ತವೆ. ದಕ್ಷಿಣ ಭಾರತದಲ್ಲಿ ಹದಿಮೂರನೆಯ ಶತಮಾನದ ಕೊನೆ ಯಿಂದ ಹದಿನೇಳನೆಯ ಶತಮಾನದವರೆಗೂ ಮುನ್ನೂರೈವತ್ತು ವರ್ಷಗಳು ಮಹಮ್ಮದೀಯರ ಶೈಲಿಯು ಪ್ರಚಾರದಲ್ಲಿತ್ತು. ಗುಲ್ಬರ್ಗಾ (೧೩೪೭-೧೪೨೨), ಬೀದರ್ (೧೪೨೨-೧೫೧೨) ಮತ್ತು ಬಿಜಾಪುರ (೧೪೯೦-೧೬೮೬) ಈ ಮೂರು ರಾಜ್ಯಗಳ ಸುಲ್ತಾನರೂ ತಮ್ಮದೇ ಆದ ಬೇರೆ ಬೇರೆ ರೀತಿಯಲ್ಲಿ ಕಟ್ಟಡಗಳನ್ನು ಕಟ್ಟಿಸಿದರು. ಮಹಮದ್ ಬಿನ್ ತೊಗಲಕನ ಕಾಲದಲ್ಲಿ ಡೆಲ್ಲಿ ಯಿಂದ ಹೊರದೂಡಲ್ಪಟ್ಟ ಕೆಲಸಗಾರರು ದಕ್ಷಿಣದಲ್ಲಿಯೇ ನೆಲಸಿ ಈ ರಾಜ್ಯ ಗಳ ವಾಸ್ತು ವೈಭವಕ್ಕೆ ನೆರವಾದರು. ಮತ್ತು ಅಲ್ಲಲ್ಲಿಯೇ ಹಿಂದೂ ಕಟ್ಟಡ ಗಳನ್ನು ಕಟ್ಟುವುದರಲ್ಲಿ ನಿಪುಣರಾಗಿದ್ದ ಶಿಲ್ಪಿಗಳನ್ನು ತಮ್ಮ ಕೆಲಸಕ್ಕೆ ಕರೆದು ಕೊಂಡರು. ಹೀಗಾಗಿ ದಕ್ಷಿಣದಲ್ಲಿನ ಮಹಮ್ಮದೀಯ ಕಟ್ಟಡಗಳಲ್ಲಿ ಹೊರ ನಾಡಿನ ಎಂದರೆ ಪರ್ಷಿಯಾ ದೇಶದ ಕುರುಹುಗಳನ್ನೂ ಭಾರತೀಯ ಕುರುಹು ಗಳನ್ನೂ ನೋಡಬಹುದು. ಈ ಕಾರಣದಿಂದ ಮಹಮ್ಮದೀಯರ ಕಟ್ಟಡಗಳು ಒಟ್ಟಿನಲ್ಲಿ ಬೇರೆ ಸಂಸ್ಕೃತಿಯ ಪ್ರತೀಕಗಳೆಂದು ತೋರಿ ಬಂದರೂ ಭರತ ಖಂಡದ ಅನೇಕ ಕುಶಲ ಕಲೆಗಳ ಕುರುಹುಗಳನ್ನು ಒಳಗೊಂಡು "ಹಿಂದೂ-ಮುಸಲ್ಮಾನ ಸಮನ್ವಯ" ಶೈಲಿ ಎನ್ನಿಸಿಕೊಳ್ಳುತ್ತದೆ. ಮೊದ ಮೊದಲು ಬಾಕಿ ಕಡೆಯಲ್ಲಿ ಮಾಡಿದಂತೆ, ಇದ್ದ ದೇವಾಲಯಗಳು ಅಥವಾ ಬಸದಿಗಳನ್ನೇ ಮುಸ್ಲಿಂ ಮತಕ್ಕನುಸಾರವಾಗಿ ಮಾರ್ಪಡಿಸಿಕೊಳ್ಳಲಾಯಿತು. ದೌಲತಾಬಾದಿನ ಜಾಮೀ ಮಸೀದಿಯು, ಬೋಧನದಲ್ಲಿರುವ ದೇವಲ ಮಸೀದಿಯು, ಬಂಕಾಪುರದಲ್ಲಿರುವ ಅರವತ್ತು ಕಂಬದ ಮಂಟಪವೂ ಇದಕ್ಕೆ ಉದಾಹರಣೆಗಳು. ಬೋಧನ ಮಸೀ ದಿಯು ಮೊದಲು ನಕ್ಷತ್ರಾಕಾರದ ಚಾಳುಕ್ಯ ಶೈಲಿಯ ಜೈನ ಬಸದಿಯಾಗಿತ್ತು. ಆಮೇಲಾಮೇಲೆ ಸ್ವತಂತ್ರವಾಗಿ ಬೇರೆ ಕಟ್ಟಡಗಳನ್ನು ಕಟ್ಟಲು ಮೊದಲು ಮಾಡಿದರು.

ದಕ್ಷಿಣ ಹಿಂದೂಸ್ಥಾನದಲ್ಲಿ ಐದು ತರಹ ಕಟ್ಟಡಗಳನ್ನು ಕಾಣಬಹುದು. ಅವು ಯಾವುವೆಂದರೆ:

೧. ಬಹಮನಿ ವಂಶಕ್ಕೆ ಸೇರಿದುವು. ಮೊದಲು ಗುಲ್ಬರ್ಗದಲ್ಲಿಯೂ ಅನಂತರ ಬೀದರ್‌ನಲ್ಲಿಯೂ (೧೩೪೭-೧೪೨೨ ಮತ್ತು ೧೪೨೨-೧೫೧೨);

೨. ಅದೀಲ್‌ಷಾಹಿ ವಂಶಕ್ಕೆ ಸೇರಿದುವು. ಇವು ಬಿಜಾಪುರದಲ್ಲಿ (೧೪೯೦ ರಿಂದ ೧೬೫೬);

೩. ಕುತುಬ್‌ಷಾಹಿ ವಂಶಕ್ಕೆ ಸೇರಿದುವು. ಇವು ಗೋಲಕೊಂಡದಲ್ಲಿ (೧೫೧೨-೧೬೭೨);

೪. ಹೈದರ್ ಮತ್ತು ಟೀಪುಸುಲ್ತಾನರಿಗೆ ಸೇರಿದುವು. ಇವು ಮೈಸೂರು ರಾಜ್ಯದಲ್ಲಿ (೧೭೬೦-೧೭೯೯);

೫. ಸುಲ್ತಾನ್ ಮಹಮದ್ ಕೂಲಿಖಾನರ ವಂಶಕ್ಕೆ ಸೇರಿದುವು. ಇವು ಹೈದರಾಬಾದಿನಲ್ಲಿ (೧೫೯೧-೧೯೪೭).

ಮೇಲೆ ಕಾಣಿಸಿದುವುಗಳ ಪೈಕಿ ೩ ಮತ್ತು ೫ ನೇ ಕಲಂನ ಕಟ್ಟಡಗಳು ಈಗ ಆಂಧ್ರ ರಾಜ್ಯಕ್ಕೆ ಸೇರಿಹೋಗಿವೆ.

ಗುಲ್ಬರ್ಗದಲ್ಲಿರುವ ಜಾಮೀ ಮಸೀದಿಯು ಗಮನಾರ್ಹವಾದದ್ದು. ಇದರ ಅಳತೆ ಪೂರ್ವ ಪಶ್ಚಿಮಕ್ಕೆ ೨೧೬ ಅಡಿಗಳು. ಉತ್ತರ ದಕ್ಷಿಣಕ್ಕೆ ೧೭೬ ಅಡಿಗಳೂ ಇದೆ. ಕಟ್ಟಡವೆಲ್ಲವೂ ಛಾವಣಿಯಿಂದ ಮುಚ್ಚಲ್ಪಟ್ಟು ನಾಲ್ಕು ಮೂಲೆಗಳಲ್ಲಿಯೂ ನಾಲ್ಕು ಸಣ್ಣ ಗುಮ್ಮಟಗಳೂ, ಹಿಂದುಗಡೆ ಮಧ್ಯಭಾಗದಲ್ಲಿ ಒಂದು ದೊಡ್ಡ ಗುಮ್ಮಟವೂ ಕಟ್ಟಲ್ಪಟ್ಟಿವೆ. ನಾಲ್ಕು ದಿಕ್ಕಿನಲ್ಲಿಯೂ ಹೊರ ಮುಖದಲ್ಲಿ ಕಮಾನುಗಳುಳ್ಳ ಕೈಸಾಲೆ ಇದೆ. ಸಾಧಾರಣವಾಗಿ ಎಲ್ಲ ಮಸೀದಿಗಳಲ್ಲಿಯೂ ಇರುವ ಹಾಗೆ ಒಳಂಗಳವಿಲ್ಲದೆ ಪೂರ್ತಿಯಾಗಿ ಮುಚ್ಚಲ್ಪಟ್ಟಿರುವ ಕಟ್ಟಡ ಭಾರತದಲ್ಲೆಲ್ಲ ಇದೊಂದೇ ಎಂದು ಹೇಳಲ್ಪಟ್ಟಿದೆ. ಗುಲ್ಬರ್ಗಾದಲ್ಲಿ ಈ ಮಸೀದಿಯಲ್ಲದೆ ಇನ್ನೂ ಒಂದು ವಿಶೇಷವೇನೆಂದರೆ, ೬೦ ಅಡಿ ಅಗಲವೂ ಸುಮಾರು ೬೦೦ ಅಡಿ ಉದ್ದವೂ ಇರುವ ಅಂಗಡಿ ಬೀದಿ. ಇದರ ಇಕ್ಕಡೆಗಳಲ್ಲಿ ಸಾಲು ಕಮಾನುಗಳು ಕಟ್ಟಲ್ಪಟ್ಟಿವೆ. ಈ ತರಹದ ವಿಶಾಲವಾದ ರಸ್ತೆಯು ಬಹು ಅಂದವಾಗಿ ಕಾಣಿಸುತ್ತದೆ. ಇದೇ ರೀತಿ ಹಂಪೆಯ ವಿರೂಪಾಕ್ಷ ದೇವಾಲಯದ ಮುಂಭಾಗದಲ್ಲಿ ಸುಮಾರು ೧೦೦ ಅಡಿ ಅಗಲವೂ ೧೦೦೦ ಅಡಿ ಉದ್ದವೂ,

ಇಕ್ಕೆಲಗಳಲ್ಲಿಯೂ ಕಲ್ಲು ಮಂಟಪ ಉಳ್ಳ ಅಂಗಡಿ ಬೀದಿ ಇದೆ. ವಿಜಯನಗರದ ಅರಸರು ರಾಜಧಾನಿಯನ್ನು ಅಲಂಕರಿಸಲು ಕೈಕೊಂಡ ಕೆಲಸಗಳಲ್ಲಿ ಇದೂ ಒಂದು. ಈಗ ಮಂಟಪಗಳೆಲ್ಲವೂ ಶಿಥಿಲವಾಗಿ ಪಾಳು ಬಿದ್ದಿವೆ. ಪಠಾಣರು ಕಟ್ಟಿಸುತ್ತಿದ್ದಂತೆ ಇಳಿಜಾರಾದ ಗೋಡೆಗಳು ಕುಗ್ಗಿದ ಗುಮ್ಮಟಗಳು, ಗುಮ್ಮಟದ ಕೆಳಭಾಗದಲ್ಲಿ ನೀಲಿ ಬಣ್ಣದ ಹೊಳೆಯುವ ಹೆಂಚಿನ ಬಿಲ್ಲೆಗಳು, ಇವು ಬಹಮನಿ ಕಟ್ಟಡಗಳ ಮುಖ್ಯವಾದ ಚಿಹ್ನೆಗಳು. ಬೀದರ್‌ನಲ್ಲಿ ೨ ಮಸೀದಿಗಳೂ, ಒಂದು ಮದರಸಾವೂ, ರಂಗಿನ ಮಹಲು, ಜನಾನಾ ಮಹಲು, ಮತ್ತು ತಖ್ತ್ರ ಮಹಲುಗಳೂ ಇವೆ. ಇವುಗಳಲ್ಲದೆ ಜಲಮಂಟಪಗಳೂ, ಸ್ನಾನದ ಮನೆಗಳೂ ಇವೆ. ಮಹಮ್ಮದೀಯ ಅರಮನೆಗಳಲ್ಲಿ ಹರಿಯುವ ನೀರಿನ ಕಾಲುವೆಗಳನ್ನು ಕಟ್ಟುವುದೂ ಅವುಗಳನ್ನು ಬಣ್ಣ ಬಣ್ಣದ ಕಲ್ಲುಗಳಿಂದಲೂ, ಹೆಂಚಿನ ಬಿಲ್ಲೆಗಳಿಂದಲೂ, ದೀಪಗಳಿಂದಲೂ ಅಲಂಕರಿಸುವುದು ವಾಡಿಕೆ. ಇವುಗಳ ಸೌಂದರ್ಯವನ್ನು ಡಿಲ್ಲಿಯ ಅರಮನೆಯಲ್ಲಿ ನೋಡಬಹುದು. ಮಸೀದಿಗಳಲ್ಲಿ ಒಂದು ಜಾಮೀ ಮಸೀದಿ, ಇನ್ನೊಂದರ ಹೆಸರು ಸೋಳಾ ಕಂಬ. ಬೀದರ್‌ನಲ್ಲಿರತಕ್ಕ ಕಟ್ಟಡಗಳಲ್ಲೆಲ್ಲ ಮಹಮ್ಮದ್ ಗವಾನನು ಕಟ್ಟಿಸಿದ ಮದ್ರಸಾ ಅಥವಾ ಕಾಲೇಜು ಪ್ರಸಿದ್ಧಿಯಾದದ್ದು. ಇದರಲ್ಲಿ ಭಾಷಣ ಶಾಲೆಗಳೂ, ಪುಸ್ತಕ ಭಂಡಾರವೂ, ಮಸೀದಿಯೂ ಮತ್ತು ಗುರುಗಳಿಗೂ ವಿದ್ಯಾರ್ಥಿಗಳಿಗೂ ವಾಸಿಸುವುದಕ್ಕೆ ಸಾಕಷ್ಟು ಸ್ಥಳವೂ ಇದೆ. ಇದರ ಅಳತೆ ೨೦೫ ಅಡಿ ಉದ್ದವೂ ೧೮೦ ಅಡಿ ಅಗಲವೂ ಇದೆ. ಹೀಗೆ ಇದು ಪರಿಪೂರ್ಣವಾದ ವಿಶ್ವವಿದ್ಯಾನಿಲಯವೇ ಆಗಿತ್ತು. ಇದರಲ್ಲಿ ಹಸರು, ಹಳದಿ, ಬಿಳಿ ಬಣ್ಣದ ಹೊಳೆಯುವ ಹೆಂಚಿನ ಬಿಲ್ಲೆಗಳನ್ನೂ ಅಲಂಕಾರಕ್ಕಾಗಿ ಉಪಯೋಗಿಸಲಾಗಿದೆ. ಇದರಲ್ಲಿ ಇನ್ನೊಂದು ಗಮನಿಸಬೇಕಾದ ಸಂಗತಿ ಏನಂದರೆ, ಗೋಡೆಗಳ ಬುಡದಲ್ಲಿ, ಪಾಯದ ಮೇಲುಗಡೆ ದಪ್ಪನಾದ ಸೀಸದ ಹಲಗೆಯನ್ನು ಇಟ್ಟು ಕಟ್ಟಿದೆ. ಗೆದ್ದಲು ಹುಳುಗಳು ಮೇಲಕ್ಕೆ ಬರದಿರಲೆಂದೂ ಕೆಳಗಿನ ತೇವವು ಗೋಡೆಗಳಿಗೆ ಏರದಿರಲೆಂದು ಈ ರೀತಿ ಮಾಡಲಾಗಿರುವಂತೆ ತೋರುತ್ತದೆ.

ರಾಯಚೂರಿನ ಕೋಟೆಯು ಮೊದಲು ೧೨೯೪ರಲ್ಲಿ ವರಂಗಲ್ಲಿನ ರಾಣಿಯಾಗಿದ್ದ ರುದ್ರಮದೇವಿಯ ಆಜ್ಞೆಯ ಮೇರೆಗೆ ಆಕೆಯ ಮಂತ್ರಿ

ಯಾಗಿದ್ದ ಗೋರೆ ಗಂಗಯ್ಯನಿಂದ ಕಟ್ಟಲ್ಪಟ್ಟಿತೆಂದು ಕೋಟೆಯ ಗೋಡೆಯಲ್ಲಿ ನೆಟ್ಟಿರುವ ಒಂದು * ಶಾಸನದಿಂದ ಗೊತ್ತಾಗುತ್ತದೆ.

ರಾಯಚೂರಿನಲ್ಲಿ "ಏಕ ಮೀನಾರ್ ಮಸ್ಜೀದ್" ಎಂಬ ಒಂದು ಮಸೀದಿ ಇದೆ. ಅದರ ಹೆಸರಿಗೆ ತಕ್ಕಂತೆ ಸಹಜವಾಗಿ ಎಲ್ಲ ಮಸೀದಿಗಳಿಗೆ ಇರಬೇಕಾದ ಎರಡು ಮೀನಾರುಗಳ ಬದಲಾಗಿ ಮಹಾದ್ವಾರದ ಒಳಗೆ ಅಂಗಳದಲ್ಲಿ ಒಂದು ಆಗ್ನೇಯ ದಿಕ್ಕಿನಲ್ಲಿದೆ. ಇದು ೬೫ ಅಡಿ ಎತ್ತರವಿದ್ದು ದೌಲತಾಬಾದಿನಲ್ಲಿರುವ ಚಾಂದಮೀನಾರ್ ರೂಪದಲ್ಲಿದೆ.

ಲಕ್ಷ್ಮೇಶ್ವರದಲ್ಲಿಯೂ ಒಂದು ಸುಂದರವಾದ ಮಸೀದಿ ಇದೆ. ಅದರ ಮೀನಾರುಗಳು ಅಂದವಾಗಿ ಕೆತ್ತಲ್ಪಟ್ಟಿವೆ. ಅವುಗಳಲ್ಲಿ ಕಲ್ಲಿನಿಂದ ಬಳೆಗಳನ್ನು ಕೊರೆದು ನೇತುಹಾಕಲಾಗಿದೆ.

ಬಿಜಾಪುರದಲ್ಲಿ ಕಾಣುವ ವಾಸ್ತುಕಲೆಯೂ ಸೌಂದರ್ಯದ ವಿಷಯ ದಲ್ಲಿಯೂ ಕಟ್ಟಾಣಿಕೆಯ ಚಾತುರ್ಯದಲ್ಲಿಯೂ ದಕ್ಷಿಣ ಭಾರತದಲ್ಲೆಲ್ಲ ಅತ್ಯು ತ್ತಮವಾದದ್ದು ಎಂದು ಹೇಳಬಹುದು.

ಅದಿಲ್‌ಷಾಹಿ ವಂಶದವರು ಕಟ್ಟಡಗಳನ್ನು ಕಟ್ಟಿಸುವದರಲ್ಲಿ ಹೆಚ್ಚಾದ ಆಸಕ್ತಿಯನ್ನು ತೋರಿಸಿರುತ್ತಾರೆ. ಪ್ರತಿಯೊಬ್ಬ ಸುಲ್ತಾನನೂ ಹಿಂದಿನವನಿಗಿಂತ ಮಿಗಿಲಾಗಿ ಕಟ್ಟಿಸಿ ಕೀರ್ತಿಯನ್ನು ಪಡೆಯಬೇಕೆಂದು ಸ್ಪರ್ಧಿಸಿರುವಂತೆ ತೋರು ತ್ತದೆ. ಹೀಗಾಗಿ ಅನೇಕ ಸುಂದರವಾದ ಮತ್ತು ವಾಸ್ತು ವಿದ್ಯೆಯಲ್ಲಿ ಮೆಚ್ಚಿಕೆ ಯನ್ನು ಪಡೆಯುವಂಥ ಕಟ್ಟಡಗಳು ಬಿಜಾಪುರದ ಪಟ್ಟಣದಲ್ಲಿ ನಿರ್ಮಾಣ ವಾದವು. ಅಲ್ಲಿ ಸುಮಾರು ೫೦ ಕ್ಕೂ ಹೆಚ್ಚು ಮಸೀದಿಗಳು ಇಪ್ಪತ್ತು ಗೋರಿ ಗಳು, ಅನೇಕ ಮಹಲುಗಳೂ ಕಂಡುಬರುತ್ತವೆ. ಇಲ್ಲಿರುವ ಮಸೀದಿಗಳಲ್ಲೆಲ್ಲ

---

* ಈ ಶಾಸನವು ೪೧ ಅಡಿ ಉದ್ದವಿದೆ. ಅದರ ಪಕ್ಕದಲ್ಲಿಯೇ ನೆಟ್ಟ ಇನ್ನೊಂದು ಕಲ್ಲಿನ ಮೇಲೆ ಅಂಥ ದೊಡ್ಡ ಕಲ್ಲು ಚಪ್ಪಡಿಯನ್ನು ಹೇಗೆ ಆ ಸ್ಥಳಕ್ಕೆ ಎತ್ತುಗಳಿಂದ ಎಳೆಯಲ್ಪಟ್ಟ ಗಾಡಿಯಲ್ಲಿ ಸಾಗಿಸಲಾಯಿತೆಂಬುದನ್ನು ಚಿತ್ರದಲ್ಲಿ ತೋರಿಸಿವೆ. ಅದರ ಪಕ್ಕದಲ್ಲೇ ಇನ್ನೊಂದು ಕಲ್ಲಿನ ಮೇಲೆ ಒಂದು ಮೆರವಣಿಗೆ ಚಿತ್ರವನ್ನು ಕೊರೆದಿದೆ. ಇದು ರಾಣಿ ರುದ್ರಮದೇವಿಯ ಮೆರವಣಿಗೆಯೇ ಇರಬಹುದೆಂದು ಊಹಿಸಲಾಗಿದೆ.

ಜಾಮಿ ಮಸೀದಿಯು ಅತಿ ದೊಡ್ಡದು ಮತ್ತು ಅತ್ಯುತ್ತಮವಾದದ್ದು. ಕಟ್ಟಡವು ೪೫೦ ಅಡಿ ಉದ್ದ, ೨೨೫ ಅಡಿ ಅಗಲವಿರುತ್ತದೆ. ಒಳ್ಳೆಯ ಆಕಾರದ ಕಮಾನುಗಳೂ, ಸ್ಥಳಕ್ಕೆ ತಕ್ಕಂತೆ ನಾಜೂಕಾಗಿ ಕೊರೆದಿರುವ ಚಿತ್ರಕೆಲಸವೂ, ಅಂದವಾದ ಅರ್ಧಗೋಳಾಕಾರದ ಗುಮ್ಮಟವೂ ಇದಕ್ಕೆ ಕಾರಣ. ಇದರ ತರುವಾಯ ಇಬ್ರಾಹಿಂ ಆದಿಲ್‌ಷಾಹಿಯು ಕಟ್ಟಿಸಿರುವ ಇಬ್ರಾಹಿಂ ರೋಜಾ ಎಂಬ ಗೋರಿಯು ಅತ್ಯಂತ ಸುಂದರವಾದದ್ದು. ಅದರಲ್ಲಿ ಕೆತ್ತನೆಯ ಕೆಲಸವು ಬಹಳ ನಾಜೂಕಾಗಿದೆ. ಕಮಾನುಗಳು ಅಂದವಾಗಿವೆ. ಮೇಲಿರುವ ಗುಮ್ಮಟವು ಸುಂದರವಾಗಿದೆ. ಅದನ್ನು ನಿರ್ದುಷ್ಟವಾದ ಕಟ್ಟಡವೆಂದು ಮುಹಮ್ಮದೀಯ ವಾಸ್ತುಕಲೆಗೆ ಉದಾಹರಣೆಯಾಗಿ ಕೊಡಬಹುದು. ಇದಲ್ಲದೆ ಗೋರಿಗಳಿರುವ ಹಜಾರದಲ್ಲಿ ಕಲ್ಲು ಚಪ್ಪಡಿಯ ಛಾವಣಿ ಇದೆ. ಇದರ ತುಂಬ ಚಿತ್ರಕೆಲಸವಿದೆ. ಅಷ್ಟು ದೊಡ್ಡ ಜಾಗಕ್ಕೆ ಕಂಬಗಳಿಲ್ಲದೆ ಚಪ್ಪಡಿಯನ್ನು ನಿಲ್ಲಿಸಿರುವ ಚಾತುರ್ಯವು ಆಶ್ಚರ್ಯವನ್ನುಂಟು ಮಾಡುತ್ತದೆ. ಇಬ್ರಾಹಿಂ ಆದಿಲ್‌ಷಾನ ತರುವಾಯ ಬಂದ ಮಹಮ್ಮದ ಆದಿಲ್‌ಷಾ ಇಬ್ರಾಹಿಂ ರೋಜಾದ ಸೌಂದರ್ಯಕ್ಕಿಂತ ಮಿಗಿಲಾದ ಕಟ್ಟಡವನ್ನು ಕಟ್ಟಿಸುವದು ಅಸಾಧ್ಯವೆಂಬುದನ್ನು ಮನಸ್ಸಿಗೆ ತಂದುಕೊಂಡು ಗಾತ್ರದಲ್ಲಿಯಾದರೂ ಅದನ್ನು ಮೀರಿಸಬೇಕೆಂದು ಗೋಲಗುಂಬಜವನ್ನು ಕಟ್ಟಿಸಿದನು. ಗುಂಬಜವು ಇಂಡಿಯಾದಲ್ಲೆಲ್ಲ ಅತ್ಯಂತ ದೊಡ್ಡದಾದ ಶಾಲೆ (Hall). ಇದು ೨೦೦ ಅಡಿ ಅಗಲವೂ ಸುಮಾರು ೨೦೦ ಅಡಿ ಎತ್ತರವೂ ಇದೆ. ಶಾಲೆಯ ಒಳ ಅಳತೆ ೧೩೫ ಅಡಿ ಚದರವಿರುತ್ತದೆ. ಒಳಗಡೆಯಿಂದ ಗುಮ್ಮಟದ ಕೆಳ ತುದಿಯವರೆಗೆ ಎತ್ತರ ೧೭೮ ಅಡಿಗಳು. ನೆಲದಿಂದ ೧೧೦ ಅಡಿ ಎತ್ತರಕ್ಕೆ ೧೨ ಅಡಿ ಅಗಲದ ಮೊಗಸಾಲೆ ಇದೆ (Gallery). ಗುಮ್ಮಟದ ಹೊರ ವ್ಯಾಸ ೧೪೪ ಅಡಿ, ಒಳ ವ್ಯಾಸ ೧೨೬ ಅಡಿ. ಇದರ ಕಟ್ಟಾಣಿಕೆಯಲ್ಲಿ ಬಹಳ ಜಾಣತನವನ್ನು ಉಪಯೋಗಿಸಿರುವಂತೆ ಕಾಣುತ್ತದೆ. ಹೊರಗಿನಿಂದ ನೋಡಿದರೆ ಒಂದು ಚಚ್ಚೌಕವಾದ ಘನಾಕೃತಿಯ ಸಾಧಾರಣವಾದ ಕಟ್ಟಡದಂತೆ ಕಾಣುತ್ತದೆ. ಒಳಭಾಗದಲ್ಲಿ ಕಮಾನುಗಳು ಒಂದಕ್ಕೊಂದು ಅಡ್ಡಲಾಗಿ ಬರುವುದರ ಮೂಲಕ (ಚಿತ್ರವನ್ನು ನೋಡಿ) ೪೦ ಅಡಿಗಳುಳ್ಳ ಉದ್ದವುಳ್ಳ ಅಷ್ಟಕೋಣಾಕಾರವನ್ನುಂಟುಮಾಡಿ ಮೊಗಸಾಲೆಯನ್ನು ಕಟ್ಟಿರುತ್ತದೆ. ಅನೇಕ ಅಡಿಗಳಷ್ಟು ಮುಂದಕ್ಕೆ ಚಾಚಿಕೊಂಡು ಅಂದ

ವಾಗಿ ಕೆತ್ತಿರುವ ಮೊಗ್ಗುಗಳುಳ್ಳ ಚಾಚುಕಲ್ಲಿನ ಮೇಲೆ ನಿಂತಿರುವ ಲೋವೆ ಕಲ್ಲೂ ಅದರ ಮೇಲಿನ ಸಾಲು ಕಮಾನುಗಳೂ ಗುಮ್ಮಟದ ಬುಡದಲ್ಲಿ ಅಗಲ ವಾದ ಮತ್ತು ಎತ್ತರವಾದ ಎಲೆಗಳ ಎಸಳುಗಳೂ ಅರ್ಧಗೋಳಾಕಾರವಾದ ಗುಮ್ಮಟವೂ, ಇವೆಲ್ಲವೂ ಅಚ್ಚುಕಟ್ಟಾದ ಕಟ್ಟಡವನ್ನಾಗಿ ಮಾಡಿದೆ. ಆದರೆ ನಾಲ್ಕು ಮೂಲೆಗಳಲ್ಲಿಯೂ ಅಷ್ಟಕೋಣಾಕಾರವಾಗಿ ಕಟ್ಟಿರುವ ಬುರುಜುಗಳು ಮಾತ್ರ ಕಟ್ಟಡಕ್ಕೆ ಹೊಂದಿಕೊಂಡಂತೆ ಇರುವದಿಲ್ಲ. ಈ ಬುರುಜುಗಳ ಒಳಗಿ ನಿಂದ ಮೇಲಕ್ಕೆ ಹತ್ತಿ ಗುಮ್ಮಟದ ಬುಡದಲ್ಲಿ ನಿರ್ಮಿಸಿರುವ ಎಲೆಯ ದಳದೊಳಗೆ ಮಾಡಿರುವ ದ್ವಾರದಿಂದ ಮೊಗಸಾಲೆಗೆ ಹೋಗಬಹುದು. ಹತ್ತು ಜನರು ಕಾಲಿನಿಂದ ಸ್ವಲ್ಪ ಸದ್ದುಮಾಡುತ್ತಾ ಮೊಗಸಾಲೆಗೆ ಹೊಕ್ಕರೆ ಒಂದು ದೊಡ್ಡ ಸೈನ್ಯವೇ ನಡೆದು ಬರುತ್ತಿದೆಯೋ ಎನ್ನುವಷ್ಟು ಭಾಸವಾಗುತ್ತದೆ. ಈ ಮೊಗಸಾಲೆಗೆ ಪಿಸುಮಾತಿನ ಮೊಗಸಾಲೆ ಎಂದು ಹೆಸರಿಟ್ಟಿದ್ದಾರೆ. ಮೊಗ ಸಾಲೆಯ ಹಿಂದುಗಡೆ ಗೋಡೆಯ ಹತ್ತಿರ ನಿಂತು ಯಾರಾದರೂ ಪಿಸು ಮಾತಾಡಿ ದರೆ ಆ ಮಾತು ಎದುರಿಗಿನ ಗೋಡೆಯ ಹತ್ತಿರ ನಿಂತಿರುವವರಿಗೆ ಸ್ಪಷ್ಟವಾಗಿ ಕೇಳಿಸುತ್ತದೆ. ಒಟ್ಟಿನಲ್ಲಿ ಈ ಕಟ್ಟಡವು ಅತ್ಯಂತ ಪ್ರಸಿದ್ಧಿಯನ್ನು ಹೊಂದಿರುತ್ತದೆ.

ಇನ್ನೊಂದು ನೋಡಲು ಅರ್ಹವಾಗಿದ್ದ ಮೆಚ್ಚಬಹುದಾಗಿದ್ದ ಕಟ್ಟಡ ವೆಂದರೆ, ಮೆಹತರ್ ಮಹಲ್. ಇದನ್ನು ಕಟ್ಟಿಸಿದ್ದು ೧೬೨೦ ರಲ್ಲಿ. ಇದಕ್ಕೆ ಈ ಹೆಸರು ಬರುವುದಕ್ಕೆ ಬೇರೆ ಬೇರೆ ಕಾರಣಗಳನ್ನು ಹೇಳುತ್ತಾರೆ. ಈ ಕಟ್ಟಡವು ನಿಜವಾಗಿಯೂ ಒಂದು ಮಸೀದಿಗೆ ಮುಂಭಾಗದ ಬಾಗಿಲಾಗಿತ್ತು. ಇದು ಈಗ ಕೆಲವು ವರ್ಷಗಳ ಹಿಂದೆ ಬಿದ್ದುಹೋಯಿತು. ಇದು ನಾಜೂಕಾದ ಕೆತ್ತನೆಯ ಕೆಲಸದಿಂದ ಮಾಡಿ ಶಿಲ್ಪಿಗಳ ಚಾತುರ್ಯವನ್ನು ವ್ಯಕ್ತಪಡಿಸು ವಂಥದ್ದಾಗಿತ್ತು.

ಇವುಗಳಲ್ಲದೆ ಇನ್ನೂ ಅನೇಕ ಸುಂದರವಾದ ಮಸೀದಿಗಳು ಊರು ತುಂಬ ಕಾಣಬರುತ್ತವೆ. ಎಲ್ಲೆಲ್ಲಿ ನೋಡಿದರೂ ಗೋರಿಗಳೂ ಕಬರ ಸ್ಥಾನಗಳೂ ಇವೆ.

ಮತಕ್ಕೆ ಸಂಬಂಧಪಟ್ಟ ಕಟ್ಟಡಗಳು ಅಲ್ಲದೆ ಮಹಲುಗಳೂ ಬಾವಡಿಗಳೂ ಬಜಾರುಗಳೂ ಇವೆ. (ಮಹಲುಗಳು ಅಂದರೆ ವಾಸಮಾಡುವುದಕ್ಕೆ ಕಟ್ಟಿಸಿದ್ದ

ಮನೆಗಳು) ಗಗನಮಹಲ್, ಸಾತಮಂಜಲ್, ಆಸರಮಹಲ್, ಆನಂದಮಹಲ್, ಬೇನಿಮಹಲ್ ಇವುಗಳಲ್ಲಿ ಮುಖ್ಯವಾದವುಗಳು. ಗಗನಮಹಲ್ ಅನ್ನುವದು ಸುಲ್ತಾನನು ದರ್ಬಾರು ಮಾಡುವ ಸ್ಥಳವೆಂದು ಹೇಳಿದೆ. ಇದನ್ನು ಮೊದಲನೆಯ ಇಬ್ರಾಹಿಂ ಆದಿಲ್‌ಷಾನು ೧೫೬೧ ರಲ್ಲಿ ಕಟ್ಟಿಸಿದನು. ತಾನು ಸಿಂಹಾಸನದ ಮೇಲೆ ಕುಳಿತು ದರ್ಬಾರು ಖಾನೆಯ ಮುಂದುಗಡೆ ನಡೆಯುತ್ತಿದ್ದ ಆಟಪಾಟಗಳು ಕವಾಯಿತಗಳು ಕುಸ್ತಿಗಳು ಇವುಗಳನ್ನು ಚನ್ನಾಗಿ ಕಾಣಲು ಅವಕಾಶವಾಗುವಂತೆ ಮುಂದಿರುವ ಗೋಡೆಯಲ್ಲಿ ೬೦ ಅಡಿ ಅಗಲವಾದ ಮತ್ತು ಎತ್ತರವಾದ ಕಮಾನನ್ನು ಕಟ್ಟಲಾಗಿದೆ.

ಸಾತ್‌ಮಂಜೀಲ್ ಎನ್ನುವುದು ಏಳು ಉಪ್ಪರಿಗೆಯ ಅರಮನೆ. ಇದನ್ನು ಎರಡನೆ ಇಬ್ರಾಹಿಂ ಆದಿಲ್‌ಷಾ ೧೫೮೩ ರಲ್ಲಿ ಕಟ್ಟಿಸಿದ್ದು. ಈಗ ಐದು ಉಪ್ಪರಿಗೆಗಳು ಮಾತ್ರ ನಿಂತಿವೆ. ಅಸರ್‌ಮಹಲಿನಲ್ಲಿ ಗೋಡೆಗಳ ಮೇಲೆ ಬಣ್ಣ ಬಣ್ಣದ ಚಿತ್ರಗಳನ್ನು ಬರೆದಿತ್ತೆಂದು ತೋರುತ್ತದೆ. ಈಗಲೂ ಅಲ್ಲಲ್ಲಿ ಅಳಿಸಿಹೋಗಿರುವ ಕೆಲವನ್ನು ನೋಡಬಹುದು. ಆನಂದಮಹಲನ್ನು ನಾಟ್ಯಕ್ಕೂ ಸಂಗೀತಕ್ಕೂ ಉಪಯೋಗಿಸಲಾಗುತ್ತಿತ್ತೆಂದು ತಿಳಿಯುತ್ತದೆ.

ಇಸ್ಲಾಂ ಮತದ ಕಟ್ಟಡಗಳಲ್ಲಿ ನೀರಿನ ಕೊಳವಾಗಲಿ ಅಥವಾ ಹರಿಯುವ ನೀರಿನ ಕಾಲುವೆಗಳಾಗಲಿ ಇರುತ್ತವೆ. ಮಸೀದಿಗಳಲ್ಲಿ ಕೈಕಾಲುಗಳನ್ನು ತೊಳೆದು ಕೊಳ್ಳುವುದಕ್ಕೆ ಒಳಾಂಗಣದಲ್ಲಿ ಅಂದವಾಗಿ ಕಲ್ಲಿನಿಂದ ಕಟ್ಟಿದ ತೊಟ್ಟಿ ಇರುತ್ತದೆ. ಅರಮನೆಗಳಲ್ಲಿಯೂ ಹೂದೋಟಗಳಲ್ಲಿಯೂ ಸ್ವಚ್ಛವಾದ ನೀರು ಹರಿದುಹೋಗುವಂತೆ ಕಾಲುವೆಗಳನ್ನು ಕಟ್ಟಿಸಿ ಅದರ ಮಧ್ಯದಲ್ಲಿ ನೀರಿನ ಚಿಲುಮೆ ಉಕ್ಕುವಂತೆ ಕಾರಂಜಿಗಳನ್ನು ನಿರ್ಮಿಸಿರುತ್ತಾರೆ. ಇದೂ ಅಲ್ಲದೆ ಜನಗಳ ಸ್ನಾನಪಾನಾದಿಗಳಿಗೆಂದು ಕಡೆದ ಕಲ್ಲಿನ ಮೆಟ್ಟಲುಗಳನ್ನುಳ್ಳ ದೊಡ್ಡ ದೊಡ್ಡ ಕೊಳಗಳು ಕಟ್ಟಿಸಲ್ಪಟ್ಟಿರುತ್ತವೆ. ಆ ಕೊಳಗಳ ಸುತ್ತಲೂ ಮಂಟಪಗಳೂ ಮಹಾ ದ್ವಾರವೂ ಕಟ್ಟಲ್ಪಟ್ಟಿರುತ್ತವೆ. ಇಂಥ ಕೊಳಗಳು ಬಿಜಾಪುರ ಪಟ್ಟಣದಲ್ಲಿ ಅನೇಕ ಇವೆ. ಅವುಗಳಲ್ಲೆಲ್ಲ ತಾಜ್‌ಬಾವಡಿ ಮತ್ತು ಚಾಂದ್ ಬಾವಡಿ ಮುಖ್ಯವಾದುವು. ತಾಜಬಾವಡಿಯು ೨೨೦ ಅಡಿ ಚದರ ಉಳ್ಳ ಚಾಂದ ಬಾವುಡಿಯು ೧೫೦ ಅಡಿ ಚದರ ಉಳ್ಳ ದೊಡ್ಡ ಕೊಳಗಳು.

ಅದರೊಳಕ್ಕೆ ಹೋಗುವುದಕ್ಕೆ ದೊಡ್ಡ ಕಮಾನೂ ಅದರ ಅಕ್ಕಪಕ್ಕಗಳಲ್ಲಿ ಬುರುಜುಗಳೂ ಕಟ್ಟಲ್ಪಟ್ಟವೆ. ಅದೂ ಅಲ್ಲದೆ ಊರಿನ ಮಧ್ಯದಲ್ಲಿ ಜಲ ಮಂದಿರಗಳನ್ನು ಕಟ್ಟಿರುವುದನ್ನು ನೋಡುತ್ತೇವೆ. ಈ ಜಲಮಂದಿರಗಳನ್ನು ಜಲಕ್ರೀಡೆಗಾಗಿ ಕಟ್ಟಿರಬೇಕೆಂದು ಕಾಣುತ್ತದೆ. ದೊಡ್ಡದಾದ ನೀರಿನ ಕೊಳ, ಅದರ ಮಧ್ಯದಲ್ಲಿ ಅಂದವಾದ ಚಿಕ್ಕ ಮಂಟಪ. ಈ ಮಂಟಪಗಳು ಚಿತ್ರಗಳಿಂದ ಕೂಡಿ ಶಿಲ್ಪಿಗಳ ಚಾತುರ್ಯವನ್ನು ವ್ಯಕ್ತಗೊಳಿಸುತ್ತವೆ.

ಇದಲ್ಲದೆ ಮಹಮ್ಮದ್ ಆದಿಲ್‌ಷಾ, ಗುಲ್ಬರ್ಗಾದಲ್ಲಿರುವಂತೆಯೇ ಬಿಜಾಪುರದ ಜೋರಾಪುರದಿಂದ ಹಿಡಿದು ನರಸಾಪುರದವರೆಗೂ ಒಂದು ದೊಡ್ಡ ರಸ್ತೆಯನ್ನು ನಿರ್ಮಿಸಿ ಎರಡು ಕಡೆಯೂ ಅಂಗಡಿ ಸಾಲುಗಳನ್ನು ಕಟ್ಟಿಸಿದ್ದ ನಂತೆ. ಆದರೆ ಈಗ ಅದರ ಸ್ವಲ್ಪ ಭಾಗವೂ ಉಳಿದಿರುವುದಿಲ್ಲ. ಹೀಗೆ ಬಿಜಾ ಪುರದ ಪಟ್ಟಣವು ಈಗ ಹಾಳಾಗಿ ಒಂದು ಸಣ್ಣ ಊರಾಗಿದ್ದರೂ ಸುಲ್ತಾನರ ಕಾಲದಲ್ಲಿ ಒಂದು ಕಡೆ ಐನಾಪುರ, ಇನ್ನೊಂದು ಕಡೆ ನರಸಾಪುರಗಳನ್ನೊಳ ಗೊಂಡ ಒಂದು ದೊಡ್ಡ ಜನನಿಬಿಡವಾದ ಪಟ್ಟಣವಾಗಿತ್ತೆಂದು ಕಾಣುತ್ತದೆ. ಈಗಲೂ ಬಿಜಾಪುರವು ವಾಸ್ತು ರೀತಿಯ ದೃಷ್ಟಿಯಿಂದ ಕರ್ನಾಟಕಕ್ಕೆ ಕೀರ್ತಿ ಯನ್ನು ತರುವಂತಹದೆಂದು ಕಂಠೋಕ್ತವಾಗಿ ಹೇಳಬಹುದಾಗಿದೆ.

ಹೈದರ ಆಲಿ ಮತ್ತು ಟಿಪ್ಪೂಸುಲ್ತಾನರ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಅನೇಕ ಕಟ್ಟಡಗಳು ಕಟ್ಟಲ್ಪಟ್ಟವು. ಅವುಗಳಲ್ಲಿ ಶ್ರೀರಂಗಪಟ್ಟಣದಲ್ಲಿಯೂ ಮೈಸೂರಿನಲ್ಲಿಯೂ ಇದ್ದ ಅರಮನೆಗಳು ಬೆಂಗಳೂರು ಕೋಟೆಯಲ್ಲಿರುವ ಅರಮನೆಯೂ ಶ್ರೀರಂಗಪಟ್ಟಣದಲ್ಲಿರುವ ದರಿಯಾದೌಲತ್ ಮತ್ತು ಗುಂಬಜಗಳೂ, ಸೀರಾದಲ್ಲಿರುವ ಮಸೀದಿ, ದರ್ಗಾವೂ ಮುಖ್ಯವಾದವು. ಇಲ್ಲಿರುವ ಮಲ್ಲಿಕ ರಹಮಾನ್ ದರ್ಗವು ಬಹು ಸುಂದರವಾದ ಕಟ್ಟಡ. ಪೂರ್ತಿಯಾಗಿ ಕಲ್ಲಿನಿಂದ ಕಟ್ಟಲ್ಪಟ್ಟು ಅಂದವಾದ ಗುಮ್ಮಟದೊಡನೆ ಮೆರೆಯುತ್ತಿದೆ. ಇದರಲ್ಲಿರುವ ಕಮಾನುಗಳ ಆಕಾರ ಚೆನ್ನಾಗಿದೆ. ಇದು ಕ್ರಿ. ಶ. ೧೬೩೧ ರಲ್ಲಿ ಕಟ್ಟಲ್ಪಟ್ಟಿತೆಂದು ತಿಳಿಯಬರುತ್ತದೆ. ಇವುಗಳಲ್ಲಿ ಶ್ರೀರಂಗಪಟ್ಟಣದ ಅರಮನೆಯು ಬ್ರಿಟಿಷರಿಂದ ೧೭೯೯ ರಲ್ಲಿ ನಾಶಮಾಡಲ್ಪಟ್ಟಿತು. ಮತ್ತು ಬೆಂಗಳೂರು ಅರಮನೆಯ ಸ್ವಲ್ಪ ಭಾಗ ಮಾತ್ರ ಈಗ ಉಳಿದಿದೆ. ಇವೆರಡೂ ದಿಲಾವರ

ಖಾನನು ಸಿರಾದಲ್ಲಿ ಕಟ್ಟಿಸಿದ್ದ ಅರಮನೆಯ ಮಾದರಿಯಲ್ಲಿಯೇ ಕಟ್ಟಿದವು ಗಳೆಂದು ಹೇಳುತ್ತಾರೆ. ಇವುಗಳಲ್ಲಿ ಮರಗೆಲಸವೇ ಹೆಚ್ಚಾಗಿತ್ತು. ದೊಡ್ಡ ಸಣ್ಣ ಅಂದವಾಗಿ ಕಡೆದ ಕಂಬಗಳು, ಬೋದಿಗೆಗಳು, ತೊಲೆಗಳು, ಬಳ್ಳಿ ಕಮಾನುಗಳು, ಗೂಡುಗಳು ಎಲ್ಲವೂ ಮರದಿಂದ ಮಾಡಿ, ಚಿತ್ರಗಳಿಂದ ಕೂಡಿ ದವುಗಳಾಗಿರುತ್ತವೆ. ಮತ್ತು ತರಹ ತರಹ ಬಣ್ಣದ ಬಳ್ಳಿಗಳು ಚಿನ್ನದ ಮುಲಾಮು ಇವುಗಳಿಂದ ಅಲಂಕರಿಸಲ್ಪಟ್ಟವು. ಬೆಂಗಳೂರು ಕೋಟೆಯಲ್ಲಿ ಈಗಲೂ ನಿಂತಿರುವ ಟಿಪ್ಪೂವಿನ ಅರಮನೆಯ ಕೊಂಚ ಭಾಗವೆಂದು ಕರೆಯಿಸಿ ಕೊಳ್ಳುವ ಕಟ್ಟಡವನ್ನು ನೋಡಿದರೆ ಆ ಎರಡು ಅರಮನೆಗಳೂ ಹೇಗಿದ್ದಿರಬಹು ದೆಂಬುದು ಮಂದಟ್ಟಾಗುತ್ತದೆ. ಶ್ರೀರಂಗಪಟ್ಟಣದಲ್ಲಿರುವ ದರಿಯಾದೌಲತ್ ಎಂಬುದು ಟೀಪೂಸುಲ್ತಾನನ ವಿಶ್ರಾಂತಿಯ ಅರಮನೆಯಾಗಿತ್ತು. ಎತ್ತರವಾದ ಜಗಲಿಯ ಮೇಲೆ ಕಟ್ಟಲ್ಪಟ್ಟು ಮುಂಭಾಗದಲ್ಲಿ ಸುತ್ತಲೂ ಎತ್ತರವಾದ ಕಂಬ ಗಳಿಂದ ಕೂಡಿದ ಕೈಸಾಲೆ ಇದೆ. ನಾಲ್ಕು ದಿಕ್ಕುಗಳಲ್ಲಿಯೂ ಮೇಲಕ್ಕೆ ಹತ್ತಿ ಹೋಗುವುದಕ್ಕೆ ಗೋಡೆಗಳ ಮಧ್ಯದಲ್ಲಿ ಮೆಟ್ಟಲುಗಳು ಕಟ್ಟಲ್ಪಟ್ಟಿವೆ. ಮೇಲಿನ ಅಂತಸ್ತಿನಲ್ಲಿ ಸುಲ್ತಾನನ ಮತ್ತು ಜನಾನಾ ಹೆಂಗಸರ ಕೋಣೆಗಳು ಇರುತ್ತವೆ. ಕೆಳಗೆ ದೊಡ್ಡ ದರ್ಬಾರು ಸಭಾಂಗಣಗಳು, ಮೇಲಿನ ಅಂತಸ್ತಿನಲ್ಲಿ ಚಾಚಿದ ಮೊಗಸಾಲೆ ಇದೆ. ಅಲ್ಲಿಂದಲೇ ಸುಲ್ತಾನನು ದರ್ಬಾರು ಮಾಡುತ್ತಿದ್ದುದು. ಕೈಸಾಲೆಯ ಗೋಡೆಗಳ ಮೇಲೆಲ್ಲ ಸುಲ್ತಾನನ ರಾಜ್ಯಭಾರದಲ್ಲಿ ನಡೆದ ಮುಖ್ಯ ಸಂಗತಿಗಳನ್ನೂ ಯುದ್ಧಗಳನ್ನೂ ತೋರಿಸುವ ಚಿತ್ರಗಳು ಬಣ್ಣ ಬಣ್ಣಗಳಿಂದ ಚಿತ್ರಿಸಲ್ಪಟ್ಟಿವೆ. ಒಳಗಡೆ ಗೋಡೆಗಳು, ಕಂಬಗಳು ಮತ್ತು ಛಾವಣಿಯ ಕೆಳಭಾಗವೆಲ್ಲ ತರತರಹದ ಬಣ್ಣಗಳಿಂದಲೂ, ಚಿನ್ನದ ಮುಲಾಮಿನಿಂದಲೂ ಅಲಂಕರಿಸಲ್ಪಟ್ಟಿವೆ. ಕಟ್ಟಡದ ಸುತ್ತಲೂ ಸೊಗಸಾದ ತೋಟ. ಕಟ್ಟಡದ ಮುಂಭಾಗದಲ್ಲಿಯೂ ಹಿಂಭಾಗದಲ್ಲಿಯೂ ನೀರು ಹರಿಯುವ ಕಾಲುವೆಯೂ ಅದರಲ್ಲಿ ಕಾರಂಜಿಗಳೂ ನಿರ್ಮಿಸಲ್ಪಟ್ಟಿವೆ.* ಶ್ರೀರಂಗಪಟ್ಟಣದಲ್ಲಿ ಒಂದು

---

* ಟೀಪೂವಿನ ಮರಣಾನಂತರ ಕಟ್ಟಡವು ಶಿಥಿಲವಾಗುತ್ತಾ ಬಂದಿತು. ಇದನ್ನು ಕೆಡವಿಬಿಡಬೇಕೆಂದೂ ಅದೇ ಸ್ಥಳದಲ್ಲಿ ಕರ್ನಲ್‌ವೆಲ್ಲಸ್ಲಿ (ಆಮೇಲೆ ಡ್ಯೂಕ್ ಆಫ್ ವೆಲಿಂಗ್‌ಟನ್) ಯು ಕುದುರೆಯ ಮೇಲೆ ಕುಳಿತಿರುವ ಒಂದು ಪ್ರತಿಮೆಯನ್ನು ಸ್ಥಾಪಿಸ ಬೇಕೆಂದೂ ಲಾರ್ಡ್ ಡಾಲಹೌಸಿಯು ೧೮೫೩ ರಲ್ಲಿ ಆಜ್ಞೆ ಮಾಡಿದನು. ಮುಂದಿನ

ಜುಮ್ಮ ಮಸೀದಿ ಇದೆ. ಇದು ೧೭೮೭ ರಲ್ಲಿ ಕಟ್ಟಿದ್ದು. ಇದು ಹಿಂದೆ ಇದ್ದ ದೇವಸ್ಥಾನವನ್ನು ಕೆಡವಿ ಅದರ ಸಾಮಾನುಗಳಿಂದಲೇ ಅಲ್ಲಿಯೇ ಕಟ್ಟಲಾಗಿದೆ. ಈ ಮಸೀದಿಗೆ ಎರಡು ಕೊನೆಗಳಲ್ಲಿಯೂ ಎತ್ತರವಾದ ಮಿನಾರುಗಳಿವೆ. ಈ ಮಿನಾರುಗಳು ಇಟ್ಟಿಗೆ ಗಾರೆಯಿಂದ ಕಟ್ಟಲ್ಪಟ್ಟು ಬಹು ಅಂದವಾಗಿ ಕಾಣುತ್ತಿವೆ. ಶ್ರೀರಂಗಪಟ್ಟಣದ ಹತ್ತಿರ ಇರುವ ಗಂಜಾಮಿನಲ್ಲಿ ಕಟ್ಟಲಾಗಿರುವ ಗುಂಬಜ್ ಕಟ್ಟಡವು ವಾಸ್ತು ಕಲೆಯ ವಿಚಾರದಲ್ಲಿ ಅಷ್ಟೇನೂ ಶ್ಲಾಘ್ಯವಲ್ಲದಿದ್ದರೂ ಅಂದ ವಾಗಿ ಕಟ್ಟಲ್ಪಟ್ಟಿದೆ. ಇದರಲ್ಲಿ ಹೈದರನ, ಟೀಪೂವಿನ ಗೋರಿಗಳು ಇವೆ. ಈ ಕಟ್ಟಡದ ಸುತ್ತಲೂ ಕರೀಕಲ್ಲಿನ ಹೊಳೆಯುತ್ತಿರುವ ಕಂಬಗಳು ಇವೆ. ಗೋರಿಗಳಿರುವ ಮಧ್ಯಭಾಗದ ಪಡಸಾಲೆಯ ಮೇಲ್ಭಾಗದಲ್ಲಿ ದೊಡ್ಡ ಗುಮ್ಮಟ ವಿದೆ. ಸೀರಾದಲ್ಲಿರುವ ಮಸೀದಿಯು ಒಳ್ಳೆಯ ಅಂದವಾದ ಕಟ್ಟಡ. ಅದನ್ನು ಸುಟ್ಟಿದ ಕಲ್ಲಿನಿಂದ ಕಟ್ಟಿರುವುದರಿಂದ ಇದುವರೆಗೂ ನಿಂತಿದೆ. ಅದರಲ್ಲಿ ಕಮಾನು ಗಳೂ, ಮಿನಾರುಗಳೂ ಬಹು ಅಂದವಾಗಿ ಬಿಜಾಪುರದ ಕಟ್ಟಡಗಳ ಮಾದರಿ ಯಲ್ಲಿ ಕಟ್ಟಲ್ಪಟ್ಟಿವೆ. ಒಟ್ಟಿನಲ್ಲಿ ಇಸ್ಲಾಂ ವಾಸ್ತು ಕಲೆಯ ದೃಷ್ಟಿಯಲ್ಲಿ ಹಿಂದಿನ ಮೈಸೂರು ದೇಶದಲ್ಲಿ ವರ್ಣಿಸುವದಕ್ಕೆ ಅರ್ಹವಾದ ಕಟ್ಟಡಗಳ್ಯಾವುವೂ ಇರುವುದಿಲ್ಲ.

ಲಕ್ಷ್ಮೇಶ್ವರದಲ್ಲಿರುವ ಮಸೀದಿಯು ಬಹು ಸುಂದರವಾಗಿದೆ. ಅದರಲ್ಲಿ ಕಲ್ಲಿನಿಂದ ಕೊರೆದ ಬಳೆಗಳನ್ನು ಮಿನಾರಿನಲ್ಲಿ ತಗಲು ಹಾಕಿರುವ ಕೌಶಲ್ಯವು ಮೆಚ್ಚುವಂತಹದು. ಸಂಪಗಾಂವಿಯಲ್ಲಿರುವ ಮಸೀದಿಯು ಚಿಕ್ಕದಾದರೂ ಅಂದವಾಗಿವೆ.

ಎರಡು ವರ್ಷಗಳಲ್ಲಿ ಉಂಟಾದ ಘೋರ ಕ್ಷಾಮದಿಂದಲೋ ಏನೋ ಈ ಕಾರ್ಯ ಕೈಕೊಳ್ಳಲಾಗಲಿಲ್ಲ. ೧೮೮೩ ರಲ್ಲಿ ಆಳಿದ ಶ್ರೀಮನ್ ಮಹಾರಾಜ ಶ್ರೀ ಚಾಮರಾಜ ಒಡೆಯರವರು ಶ್ರೀರಂಗಪಟ್ಟಣಕ್ಕೆ ದಯಮಾಡಿಸಿದಾಗ ಈ ಕಟ್ಟಡವು ಶಿಥಿಲ ವಾಗಿರುವುದನ್ನು ನೋಡಿ ಅದನ್ನು ಜೀರ್ಣೋದ್ಧಾರ ಮಾಡಬೇಕೆಂದೂ ಚೆನ್ನಾಗಿ ಕಾಪಾಡಿಕೊಂಡು ಬರಬೇಕೆಂದೂ ಅಪ್ಪಣೆಮಾಡಿದರು. ಅಂದಿನಿಂದಲೂ ಅದೇ ರೀತಿ ನಡೆದುಕೊಂಡು ಬರಲಾಗುತ್ತಿದೆ.

ಆಧುನಿಕ ಕಟ್ಟಡಗಳು

ಭಾರತದ ಎಲ್ಲ ಭಾಗಗಳಲ್ಲಿಯೂ ಮತಕ್ಕೆ ಸಂಬಧಪಟ್ಟ ಕಟ್ಟಡಗಳಲ್ಲದೆ ಬೇರೆ ತರಹದ ಕಟ್ಟಡಗಳ ಅವಶೇಷಗಳು ಯಾವುವೂ ಇಲ್ಲವೆಂದೇ ಹೇಳ ಬಹುದು. ಅಲ್ಲೊಂದು ಇಲ್ಲೊಂದು ಪಾಳು ಬಿದ್ದಿರುವ ಕೋಟೆ ಕೊತ್ತಲಗಳು ಮಾತ್ರ ಬೆಟ್ಟದ ತುದಿಗಳಲ್ಲಿ ನಮ್ಮ ದೃಷ್ಟಿಗೆ ಬೀಳುತ್ತಿವೆ. ಅವು ಈಗಿನ ರಾಜ್ಯಭಾರ ಪದ್ಧತಿಗೆ ಉಪಯೋಗವಿಲ್ಲದವುಗಳಾಗಿ ಪಾಳು ಬಿದ್ದಿವೆ. ಇತರ ಕಟ್ಟಡಗಳು ಎಂದರೆ ರಾಜಮನೆತನದವರು ವಾಸಮಾಡುತ್ತಿದ್ದ ಅರಮನೆಗಳು ಮತ್ತು ಜನಸಾಮಾನ್ಯರು ಕಟ್ಟಿಕೊಂಡಿದ್ದ ಮನೆಗಳು ಎಲ್ಲವೂ ಅನೇಕ ಕಾರಣ ಗಳಿಂದ ನಾಶವಾಗಿ ಹೋಗಿರುವದರಿಂದ ಈ ದೇಶದಲ್ಲಿ ದೊಡ್ಡ ದೊಡ್ಡ ಖಾಸಗಿ ಇಮಾರತಗಳು ಯಾವ ರೀತಿ ಕಟ್ಟಲ್ಪಡುತ್ತಿದ್ದುವು, ಯಾವ ಆಕಾರವನ್ನು ಹೊಂದಿರುತ್ತಿದ್ದುವು, ಹೇಗೆ ಅಲಂಕೃತವಾಗಿರುತ್ತಿದ್ದುವು ಎಂಬ ವಿಷಯಗಳು ನಮಗೆ ಖಚಿತವಾಗಿ ಗೊತ್ತಾಗುವಂತಿಲ್ಲ. ಬಿಜಾಪುರ ಪಟ್ಟಣದಲ್ಲಿ ಅರಮನೆ ಗಳ ಮುರುಕುಗಳು, ಜಲಮಂದಿರಗಳ ಒಣಗಿದ ಗುಂಡಿಗಳು ಇವೆ. ವಿಜಯ ನಗರದಲ್ಲಿ ಚಂದ್ರಗಿರಿಯಲ್ಲಿ ಅರಮನೆ, ಹಂಪೆಯಲ್ಲಿ ಕಾಣಬರುವ ಗಜಶಾಲೆ, ಅಶ್ವಶಾಲೆಗಳು, ಜಲಕ್ರೀಡೆ ಕೊಳ, ಕಮಲಮಹಲ್, ಅಷ್ಟ ಮೂಲೆಯ ಎತ್ತರವಾದ ಕಾಯುವವನ ಕಟ್ಟಡ ಇವೆಲ್ಲವೂ ಮುಸಲ್ಮಾನ ಶೈಲಿಯ ಮತ್ತು ವಿಜಯನಗರದ ಮಿಶ್ರಣ ಶೈಲಿಯ ಕಟ್ಟಡಗಳು. ಇವು ಯಾವುವೂ ಅಂದ ವಾಗಿಲ್ಲ.

ಬೆಂಗಳೂರು ಪಟ್ಟಣದಲ್ಲಿಯೂ ಮೈಸೂರು ಪಟ್ಟಣದಲ್ಲಿಯೂ, ಮತ್ತು ಶ್ರೀರಂಗಪಟ್ಟಣದಲ್ಲಿಯೂ ಹೈದರ್ ಮತ್ತು ಟೀಪೂವಿನ ಕಾಲದ ಕಟ್ಟಡಗಳು

ಕೆಲವು ನಿಂತಿವೆ. ಬೆಂಗಳೂರು ಕೋಟೆಯಲ್ಲಿರುವ ಟೀಪೂವಿನ ಅರಮನೆಯು ಸ್ವಲ್ಪ ಭಾಗಮಾತ್ರ ಉಳಿದಿದೆ. ಇದೂ ಮತ್ತು ಶ್ರೀರಂಗಪಟ್ಟಣದಲ್ಲಿರುವ ದರಿಯಾ ದೌಲತ್ತೂ ಒಂದೇ ತರದಲ್ಲಿ ಕಟ್ಟಲ್ಪಟ್ಟವು. ಇವುಗಳಿಗೆ ಸೀರಾದಲ್ಲಿ ದಿಲಾವರ ಖಾನನು ಕಟ್ಟಿಸಿದ್ದ ಅರಮನೆಯನ್ನೇ ಮಾದರಿಯಾಗಿ ತೆಗೆದುಕೊಂಡುದಾಗಿ ಹೇಳಲಾಗಿದೆ.

ಅರಸು ಮನೆತನದವರ ಅರಮನೆಗಳೂ ನಾಯಕರ ಮಹಲುಗಳೂ ಎತ್ತರ ವಾಗಿ ಒಂದಕ್ಕಿಂತ ಹೆಚ್ಚು ಅಂತಸ್ತುಗಳುಳ್ಳವುಗಳಾಗಿರುವುವು. ಹೊರಗಿನ ಗೋಡೆಯು ದಪ್ಪನಾಗಿದ್ದು ಮಧ್ಯದಲ್ಲಿ ಮುಂಭಾಗಕ್ಕೆ ದೊಡ್ಡದೊಂದು ದ್ವಾರ ವಿರುತ್ತಿತ್ತು ಮತ್ತು ಅದಕ್ಕೆ ಭದ್ರವಾದ ಬಾಗಿಲು ಇರುತ್ತಿತ್ತು. ಒಳಭಾಗದಲ್ಲಿ ತೊಟ್ಟಿಗಳು, ಸುತ್ತಲೂ ಕೈಸಾಲೆ, ಹಜಾರ, ಕೋಣೆಗಳು ಇರುತ್ತಿದ್ದುವು. ಮತ್ತು ಒಳಭಾಗವೆಲ್ಲ ಮುಕ್ಕಾಲುಪಾಲು ಕಂಬಗಳು, ತೊಲೆಗಳು, ಬೋದಿಗೆಗಳು ಕಟಾಂಜನಗಳು ಎಲ್ಲವೂ ಮರದಿಂದ ರಚಿಸಲ್ಪಟ್ಟು ಬಣ್ಣಗಳಿಂದ ಅಲಂಕೃತ ವಾಗಿರುತ್ತಿದ್ದವು.

ಮೈಸೂರು ಅರಸರು ಮೊದಲಿನಿಂದಲೂ ವಾಸಮಾಡುತ್ತಿದ್ದ ಅರಮನೆಯು ಒಂದು ಭಾರಿ ತೊಟ್ಟಿಯ ಮನೆಯಾಗಿತ್ತು. ಅದು ಹದಿನೇಳನೆಯ ಶತಮಾನದ ಆದಿಭಾಗದಲ್ಲಿ ಸಿಡಿಲಿನಿಂದ ನಾಶವಾಯಿತು. ಅನಂತರ ಶ್ರೀ ಕಂಠೀರವ ನರಸಿಂಹರಾಜ ಒಡೆಯರವರು ಅದನ್ನೆ ಮತ್ತೆ ಕಟ್ಟಿಸಿದರು. ಟೀಪುವು ಸುಲ್ತಾನ ನಾದ ಮೇಲೆ ಈ ಅರಮನೆಯನ್ನು ಕೆಡವಿಸಿಬಿಟ್ಟನು. ೧೭೯೯ ರಲ್ಲಿ ಟೀಪೂ ವಿನ ಮರಣಾನಂತರ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಪಟ್ಟಾಭಿ ಷೇಕಕ್ಕೆ ಮೈಸೂರಿನಲ್ಲಿ ಅರಮನೆಯೇ ಇಲ್ಲದೆ ಚಪ್ಪರವನ್ನು ನಿರ್ಮಿಸಿ ಅದರಲ್ಲಿ ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸಲಾಯಿತು. ಅನಂತರ ೧೮೦೧ ರಲ್ಲಿ ಮೊದಲು ಅರಮನೆ ಇದ್ದ ಜಾಗದಲ್ಲಿಯೇ ಐದು ಅಂತಸ್ತಿನ ಅರಮನೆಯನ್ನು ದಿವಾನ್ ಪೂರ್ಣಯ್ಯನವರು ಕಟ್ಟಿಸಿದರು. ಮುಂಭಾಗದಲ್ಲಿ ಎರಡಂತಸ್ತಿನ ವರೆಗೂ ಹೋಗುವ ಎತ್ತರವಾದ ಕಂಬಗಳುಳ್ಳ ಪಾತಾಳಾಂಕಣ. ಕಂಬಗಳು ಅಷ್ಟದಳಾಕಾರವಾರವಾಗಿ ಕೆತ್ತಲ್ಪಟ್ಟು ಚಿತ್ರ ಕೆಲಸಮಾಡಿದ ಬೋದಿಗೆ ಗಳಿಂದಲೂ, ಊರು ಪಟ್ಟಿಕೆಗಳಿಂದಲೂ ಅಂದವಾಗಿ ಕಾಣುತ್ತಿತ್ತು. ಅರ

ಮನೆಯ ಮುಂದುಗಡೆ ಮಧ್ಯ ಭಾಗದಲ್ಲಿ ದೊಡ್ಡ ದ್ವಾರವಿತ್ತು. ಅದರ ಅಕ್ಕ ಪಕ್ಕಗಳಲ್ಲಿ ಎತ್ತರವಾದ ಜಗಲಿ. ಒಳಕ್ಕೆ ಹೊಕ್ಕಕೂಡಲೆ ಒಂದು ವಿಶಾಲವಾದ ಅಂಗಳ. ಸುತ್ತಲೂ ಕೈಸಾಲೆ. ಅದರ ಹಿಂಭಾಗದಲ್ಲಿ ಅನೇಕ ಸಮ್ಮುಖಗಳು, ಮೇಲಂತಸ್ತಿನಲ್ಲಿ ಒಂದು ದೊಡ್ಡ ಹಜಾರ. ಅಲ್ಲಿಯೇ ರಾಜರ ದರ್ಬಾರು ಕೂಡುತ್ತಿದ್ದರು. ರಾಜರು ಸಿಂಹಾಸನಾರೂಢರಾಗಿ ಅರಮನೆಯ ಹೊರ ಅಂಗಣದಲ್ಲಿ ನಡೆಯುತ್ತಿದ್ದ ಕಾರ್ಯಕಲಾಪಗಳೆಲ್ಲವನ್ನೂ ಅಲ್ಲಿಂದಲೇ ವೀಕ್ಷಿಸುತ್ತಿದ್ದರು. ದರ್ಬಾರಿನ ಹಜಾರವು ಬಣ್ಣ ಬಣ್ಣದ ಚಿತ್ರಗಳಿಂದಲೂ ಚಿನ್ನದ ಮುಲಾಮಿನಿಂದಲೂ ಅಲಂಕೃತವಾಗಿತ್ತು. ಈ ಹಜಾರದ ಮುಂದುಗಡೆ ಮೇಲಕ್ಕೆ ಬಳ್ಳಿ ಕಮಾನುಗಳಿಂದ ಕೂಡಿದ ಮೊಗಸಾಲೆ. ಜನಾನಾ ಪರಿವಾರದವರೂ ಮಕ್ಕಳೂ ಇಲ್ಲಿಂದಲೆ ದರ್ಬಾರನ್ನೂ ಹೊರಗಿನ ಕಲಾಪಗಳನ್ನೂ ನೋಡುತ್ತಿದ್ದುದು. ಅರಮನೆಗೆ ಸೇರಿದಹಾಗೆಯೇ ಅರಮನೆಯ ಇಲಾಖೆಗಳ ಕಚೇರಿ, ಸರಸ್ವತೀ ಭಂಡಾರ ಮುಂತಾದ ಭಾಗಗಳೂ ಇದ್ದುವು. ಕಟ್ಟಡವು ಭವ್ಯವೂ ಸುಂದರವೂ ಆಗಿತ್ತು. ಇದು ೧೮೯೭ ರಲ್ಲಿ ಅಕಸ್ಮಾತ್ತಾಗಿ ಬೆಂಕಿಯಿಂದ ಸುಟ್ಟುಹೋಯಿತು. ಅನಂತರ ಅದೇ ಜಾಗದಲ್ಲಿಯೇ ಇನ್ನು ಮುಂದಾದರೂ ಬೆಂಕಿಯ ಅನಾಹುತಕ್ಕೆ ತುತ್ತಾಗಬಾರದೆಂದು ಹೊಸದಾಗಿ ಕಲ್ಲಿನ ಕಟ್ಟಡವನ್ನು ಕಟ್ಟಿಸಲಾಯಿತು. ಈ ಅರಮನೆಯನ್ನು ಬಣ್ಣ ಬಣ್ಣದ ಕಲ್ಲುಗಳನ್ನು ಉಪಯೋಗಿಸಿ ಬಳಪದ ಕಲ್ಲಿನಿಂದ ಬಳ್ಳಿಗಳನ್ನೂ ಚಿತ್ರಗಳನ್ನೂ ಕೊರೆಯಿಸಿ, ಮದರಾಸಿನಲ್ಲಿ ವಾಸ್ತು ವಿದ್ಯಾಧಿಕಾರಿಗಳಾಗಿದ್ದ ಹೆನ್ರಿ ಇರ್‌ವಿನ್ ಎಂಬುವರ ಸಲಹೆಯ ಮೂಲಕ ಕಟ್ಟಲಾಗಿದೆ. ಮತ್ತು ಚಿಕ್ಕ ದರ್ಬಾರಿನ ಹಜಾರವಾದ ಅಂಬಾವಿಳಾಸವೆಂಬ ಭಾಗ ಪೂರ್ತಿಯಾಗಿ ಕಬ್ಬಿಣದ ಕಂಬಗಳಿಂದಲೂ ಗಾಜಿನ ಮೇಲ್ಛಾವಣಿಯಿಂದಲೂ ಕಟ್ಟಲ್ಪಟ್ಟಿದೆ. ಈ ಹೊಸ ಅರಮನೆಯನ್ನು ಹಳೆಯದು ಸುಟ್ಟುಹೋದ ವರ್ಷವೇ ಎಂದರೆ ೧೮೯೭ ರಲ್ಲಿ ಪ್ರಾರಂಭಮಾಡಲಾಯಿತು. ಮುಗಿಯುವದಕ್ಕೆ ಐದು ವರ್ಷಗಳು ಬೇಕಾಯಿತು. ಈ ಕಟ್ಟಡವು ೨೪೫ ಅಡಿಗಳು ಉದ್ದವೂ, ೧೫೬ ಅಡಿಗಳು ಅಗಲವೂ, ೧೪೫ ಅಡಿಗಳು ಎತ್ತರವೂ ಇದೆ. ಇದರ ಖರ್ಚು ಸುಮಾರು ೪೧೫ ಲಕ್ಷ ರೂಪಾಯಿಗಳು. ಮೊದಲನೆಯ ಅಂತಸ್ತಿನಲ್ಲಿರುವ ದರ್ಬಾರು ಹಾಲಿನಲ್ಲಿ ಗೋಡೆಯುದ್ದಕ್ಕೂ ರವಿವರ್ಮರಿಂದ ಚಿತ್ರಿಸಲ್ಪಟ್ಟ ದೊಡ್ಡ ಚಿತ್ರಗಳನ್ನು ಇರಿಸಿದೆ.

ಬ್ರಿಟಿಷರ ಆಳ್ವಿಕೆಯಿಂದೀಚೆಗೆ ಕಟ್ಟಿದ ಕಟ್ಟಡಗಳೆಲ್ಲ ಪಾಶ್ಚಾತ್ಯ ದೇಶದಲ್ಲಿನ ಕಟ್ಟಡಗಳ ಪ್ರತೀಕಗಳಾಗತೊಡಗಿದವು. ಎಲ್ಲೆಲ್ಲಿ ನೋಡಿದರೂ ಅವರ ಗಾಥಿಕ್ ಶೈಲಿಯಲ್ಲಿಯೋ ಅಥವಾ ಗ್ರೀಸ್ ಮತ್ತು ರೋಮನರ ಶೈಲಿಯ ಅನುಕರಣವಾದ ರಿನಾಯಸನ್ಸ್ ಶೈಲಿಯಲ್ಲಿಯೋ ಕಟ್ಟಡಗಳು ಎದ್ದವು. ಆದರೆ ಕೆಲವು ಕಾಲಾನಂತರ ಪಾಶ್ಚಿಮಾತ್ಯರ ಅಂಧಾನುಕರಣದ ಮನೋಭಾವ ಕಡಮೆಯಾಗುತ್ತಾ ಬಂದು ನಮ್ಮ ದೇಶದ ಶೈಲಿಯಲ್ಲಿಯೇ ಸಾಧ್ಯವಾದಷ್ಟು ಮಟ್ಟಿಗೆ ಕಟ್ಟಬೇಕೆಂಬ ಆಶೆ ಎಲ್ಲರಲ್ಲಿಯೂ ಮೂಡಿತು. ಆದರೆ ತೀರ ಚಾಚೂ ಬಿಡದೆ ಹಿಂದೂ ಶೈಲಿಯಲ್ಲೇ ಆಗಲಿ ಮುಸಲ್ಮಾನ ಶೈಲಿಯಲ್ಲೇ ಆಗಲಿ ಕಟ್ಟಡ ಕಟ್ಟಡಗಳನ್ನು ಕಟ್ಟುವುದು ಅನಾನುಕೂಲವೂ ಅಸಂಬದ್ಧವೂ ಆಗುವುದೆಂದು ವಿದ್ವಾಂಸರು ಅರಿತುಕೊಂಡು ಇವೆರಡನ್ನೂ ಸಮನ್ವಯಮಾಡಿ ಆಧುನಿಕ ಭಾರತೀಯ ಶೈಲಿ ಎಂಬ ಹೆಸರಿನಿಂದ ಮೊದಲು ಆಶ್ರಿತ ಸಂಸ್ಥಾನಗಳಲ್ಲಿಯೂ ಆಮೇಲೆ ಎಲ್ಲ ಕಡೆಗಳಲ್ಲಿಯೂ ಕಟ್ಟಡಗಳು ನಿರ್ಮಿತವಾದವು. ಆಳಿದ ಮಹಾಸ್ವಾಮಿಯವರಾದ ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ಸಂಸ್ಥಾನದಲ್ಲೆಲ್ಲ ನೂರಾರು ಕಟ್ಟಡಗಳು ಕಟ್ಟಲ್ಪಟ್ಟವು. ಮೈಸೂರು ನಗರವು ಒಂದು ರಮಣೀಯವಾದ ಹೊಸ ರೂಪವನ್ನೇ ತಾಳಿತು. ವಿಶಾಲವಾದ ರಸ್ತೆಗಳು, ಪುಷ್ಪಭರಿತವಾದ ಪಾರ್ಕುಗಳು ಸುಂದರವಾದ ಕಟ್ಟಡಗಳು ನಿರ್ಮಿಸಲ್ಪಟ್ಟವು. ಮೈಸೂರು ನಗರದಲ್ಲಿ ಅತ್ಯಂತ ಪುರಾತನ ಕಟ್ಟಡಗಳೆಂದರೆ, ವೆಲಿಂಗಟನ್‌ಲಾಡ್ಜ (೧೮೦೧ ರಲ್ಲಿ ಕಟ್ಟಿದ್ದು), ಗೌರ್ನಮೆಂಟು ಹೌಸು (೧೮೦೫ ರಲ್ಲಿ ಕಟ್ಟಿದ್ದು), ಜಗನ್ಮೋಹನಬಂಗಲೆ, ರಂಗಾಚಾರ್ಲು ಮೆಮೋರಿಯಲ್ ಹಾಲ್. ಈಚೆಗೆ ಕಟ್ಟಿದ ಕಟ್ಟಡಗಳಲ್ಲಿ ಅಠಾರಾ ಕಚೇರಿ, ಜೂಬಿಲಿ ಹಾಲ್, ಕಾಲೇಜು, ಲಲಿತಾದ್ರಿ ಅರಮನೆ ಇವು ಮುಖ್ಯವಾದುವು. ಮೊದಲನೆಯದು ೧೮೭೫ ರಲ್ಲಿ ಕಟ್ಟಸಲ್ಪಟ್ಟಿತು. ರಿನಾಯಿಸನ್ಸ್ ಶೈಲಿಯಲ್ಲಿ ಎತ್ತರವಾದ ಗೋಪುರದೊಡನೆ ಶೋಭಿಸುತ್ತಿದೆ. ಎರಡನೆಯದು ವಿಕ್ಟೋರಿಯಾ ರಾಣಿಯ ಜೂಬಿಲಿಯ ಜ್ಞಾಪಕಾರ್ಥವಾಗಿ ಕಟ್ಟಿಸಿದ್ದು. ಇದರಲ್ಲಿ ಕೆಲವು ಹಳೆಯ ಶಾಸನಗಳನ್ನೂ ಸುಂದರವಾದ ಕೆಲವು ಹೊಯಿಸಳ ಶೈಲಿಯ ವಿಗ್ರಹಗಳನ್ನೂ ಕಟ್ಟಡದಲ್ಲಿ ಸೇರಿಸಿದೆ. ಕಾಲೇಜು ಕಟ್ಟಡವು ಎತ್ತರವಾದ ಸ್ಥಳದಲ್ಲಿ ಕಟ್ಟಲ್ಪಟ್ಟು ಸುಂದರವಾಗಿ ಕಾಣಿಸುತ್ತಿದೆ. ಲಲಿತಾದ್ರಿ ಅರಮನೆಯು ಊರ

ಹೊರಗೆ ಚಾಮುಂಡಿ ಬೆಟ್ಟದ ಕಿಬ್ಬಿಯಲ್ಲಿ ರಿನಾಯಿಸನ್ಸ್ ಶೈಲಿಯಲ್ಲಿ ಕಟ್ಟಸಿದ್ದು. ಆ ಶೈಲಿಗೆ ಅತ್ಯಂತ ಸುಂದರವಾದಮಾದರಿಯಾಗಿದೆ. ಇವುಗಳಲ್ಲದೆ ಇನ್ನೂ ಅನೇಕ ಕಟ್ಟಡಗಳು ಈಚೆಗೆ ಕಟ್ಟಲ್ಪಟ್ಟಿವೆ. ಪಟ್ಟಣವನ್ನೂ ಸಿಂಗರಿಸಿವೆ.

ಬೆಂಗಳೂರು ನಗರದಲ್ಲಿರುವ ಕಟ್ಟಡಗಳಲ್ಲೆಲ್ಲ ಈ ಕೆಳಗೆ ವಿವರಿಸಿರುವುವು ಗಮನಾರ್ಹವಾದುವು :

ರೆಸಿಡೆಂಟರ ಬಂಗ್ಲೆ, ಅರಮನೆ, ಸೇಂಟ್‌ಮಾರ್ಕ್ಸ್ ಚರ್ಚು, ಅಠಾರಾ ಕಚೇರಿ, ಮ್ಯೂಸಿಯಂ, ಮೇಯೋ ಹಾಲ್, ಟಾಟಾ ಇನ್ಸಿಟ್ಯೂಟ್, ಸೆಂಟ್ರಲ್ ಕಾಲೇಜ್, ಟೆಕ್ನಲಾಜಿಕಲ್ ಇನ್ಸ್ಟಿಟ್ಯೂಟ್, ಟೌನಹಾಲ್, ಹೊಸಪಬ್ಲಿಕ್ ಆಫೀಸು ಮತ್ತು ವಿಧಾನ ಸೌಧ. ಇವುಗಳಲ್ಲಿ ಅತ್ಯಂತ ಪುರಾತನವಾದುವು ಸೇಂಟ್‌ಮಾರ್ಕ್ಸ ಚರ್ಚು. ಅತ್ಯಂತ ಸುಂದರವಾದದ್ದು ಅರಮನೆ. ಚರ್ಚು ೧೮೦೮ ರಲ್ಲಿ ಮೊದಲು ಕಟ್ಟಲ್ಪಟ್ಟಿತು. ೧೯೦೧ ರಲ್ಲಿ ವಿಸ್ತರಿಸಲ್ಪಟ್ಟಿತು. ೧೯೨೩ ರಲ್ಲಿ ಬೆಂಕಿಯಿಂದ ಸ್ವಲ್ಪಭಾಗ ಸುಟ್ಟುಹೋಯಿತು. ಮರು ವರುಷ ಅದನ್ನು ಜೀರ್ಣೋದ್ಧಾರಮಾಡಲಾಯಿತು. ಕೆಲಸ ಇನ್ನೂ ಮುಗಿಯುತ್ತಿರು ವಾಗಲೇ ಛಾವಣಿಯು ಬಿದ್ದು ಹೋಯಿತು. ೧೯೨೬ ರಲ್ಲಿ ಪುನಃ ಅದನ್ನು ರಿಪೇರಿ ಮಾಡಲಾಯಿತು. ಈಗ ಅದು ಒಂದು ಪಾಶ್ಚಾತ್ಯ ರೀತಿಯ ಶೈಲಿಯಲ್ಲಿ ಸುಂದರವಾದ ಕಟ್ಟಡವಾಗಿ ನಿಂತಿದೆ. ಬೆಂಗಳೂರಿನ ಅರಮನೆಯು ಇಂಗ್ಲೆಂಡಿನಲ್ಲಿ ಹದಿನೈದು, ಹದಿನೇಳನೆಯ ಶತಮಾನಗಳಲ್ಲಿ ದೊಡ್ಡ ದೊಡ್ಡ ಪಾಳೆಯಗಾರರು ಕಟ್ಟಿಕೊಂಡಿದ್ದ ಕ್ಯಾಸಲ್‌ಗಳ ಮಾದರಿಯಲ್ಲಿ ೧೮೮೭ ರಲ್ಲಿ ಕಟ್ಟಲ್ಪಟ್ಟಿತು. ಇದರ ಖರ್ಚು ಸುಮಾರು ಆರುವರೆ ಲಕ್ಷ ರೂಪಾಯಿಗಳು. ಬ್ರಿಟಿಷ್ ರೆಸಿಡೆಂಟರಿಗಾಗಿ ಕಟ್ಟಿದ ಬಂಗ್ಲೆಯೂ ಅದೇ ಕಾಲದಲ್ಲಿ ಕಟ್ಟಿದ್ದು. ಅಠಾರಾ ಕಚೇರಿಯು ೧೯೬೪ ರಲ್ಲಿ ಕಟ್ಟಿದ್ದು. ಇದು ಭವ್ಯವಾದ ಕಟ್ಟಡ. ಗ್ರೀಸ್ ದೇಶದ ಶೈಲಿಯಲ್ಲಿ ಕಟ್ಟಿದೆ. ಟಾಟಾಇನ್ಸಿಟ್ಯೂಟ್ ಕಟ್ಟಡ ಸರ್ ಮೊರಾರ್ಜಿ ಟಾಟಾಯವರು ಬಿಟ್ಟು ದತ್ತಿಯಿಂದ ೧೯೨೭ ರಲ್ಲಿ ಕಟ್ಟಸಲ್ಪಟ್ಟಿತು. ಸೆಂಟ್ರಲ್ ಕಾಲೇಜು ೧೮೮೭ ರಲ್ಲಿ ಕಟ್ಟಿದ್ದು. ಗಾಥಿಕ್ ಶೈಲಿಯುಲ್ಲಿದೆ. ಈ ಶೈಲಿಯ ಕಟ್ಟಡಕ್ಕೆ ಇದು ಒಳ್ಳೆಯ ಉದಾಹರಣೆ. ಹೊಸ ಪಬ್ಲಿಕ್ ಕಚೇರಿಯು ೧೯೨೦ ರಲ್ಲಿ ಕಟ್ಟಿದ್ದು. ಇದು ಹಿಂದೂ ಮುಸಲ್ಮಾನ

ಮಿಶ್ರಣ ರೀತಿಯದು. ಶ್ರೀ ಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ಕಟ್ಟಡ, ಭವ್ಯವಾದ ಕಟ್ಟಡ ಸುಂದರವಾಗಿದೆ. ಅದೇ ಕಟ್ಟಡವನ್ನು ಪಶ್ಚಿಮ ದಿಕ್ಕಿನಲ್ಲಿ ಇನ್ನೂ ಕೊಂಚ ಮೇಲಕ್ಕೆ ಕಟ್ಟಿದ್ದರೆ, ಈ ಊರಿಗೆಲ್ಲಾ ಇದೇ ಅತ್ಯಂತ ಎತ್ತರವಾದ ಕಟ್ಟಡವಾಗಿರುತ್ತಿತ್ತು. ಈಗ ಟಾಟಾ ಇನ್ಸ್ಟಿಟ್ಯೂಟಿನ ಗೋಪುರವೇ ಅತ್ಯಂತ ಎತ್ತರವಾದದ್ದಾಗಿದೆ. ಸುತ್ತಲೂ ಅನೇಕ ಮೈಲಿಗಳವರೆಗೂ ಕಾಣುತ್ತದೆ. ಟೌನ್‌ಹಾಲ್–ಪುರಭವನ ಇದು ೧೯೩೫ ರಲ್ಲಿ ಶ್ರೀಮಾನ್ ಕೆ. ಎ. ಪುಟ್ಟಣ್ಣಶೆಟ್ಟಿಯವರು ಕೊಟ್ಟ ಹಣದಿಂದ ಕಟ್ಟಿಸಲ್ಪಟ್ಟಿತು. ಇದು ರಿನಾಯಸಾನ್ಸ್ ರೀತಿಯಲ್ಲಿ ಕಟ್ಟಿರುವ ಸುಂದರವಾದ ಕಟ್ಟಡ. ಇವುಗಳಲ್ಲದೆ ಇನ್ನೂ ಅನೇಕ ಕಟ್ಟಡಗಳು ದೇಶದಲ್ಲೆಲ್ಲ ಎದ್ದಿರುತ್ತವೆ, ಏರುತ್ತಿವೆ.

ಇಪ್ಪತ್ತನೆಯ ಶತಮಾನದಿಂದೀಚೆಗೆ, ಕಬ್ಬಿಣ, ಸಿಮೆಂಟುಗಳನ್ನು ಉಪಯೋಗಿಸಿ ಕಟ್ಟಡಗಳನ್ನು ಕಟ್ಟಲು ಪ್ರಾರಂಭವಾದಮೇಲಂತೂ ಇದುವರೆಗೂ ತಲೆತಲಾಂತರದಿಂದ ನಡೆದು ಬಂದಿದ್ದ ವಾಸ್ತುಶಾಸ್ತ್ರ ಪದ್ಧತಿಗಳೆಲ್ಲ ಸಡಿಲವಾಗಿ ಅವರವರ ಅಭಿರುಚಿಗೆ ತಕ್ಕಂತೆ ಜನರು ಕಟ್ಟಡಗಳನ್ನು ಕಟ್ಟಲು ಯತ್ನಿಸಿದರು. ಹಿಂದೆ ಎಂದೂ ಸಾಧ್ಯವಾಗದಿದ್ದ ಮತ್ತು ಊಹಿಸಲಸಾಧ್ಯವಾದ ರೀತಿಯಲ್ಲಿ ಕಟ್ಟಡಗಳು ಅನೇಕ ಅಂತಸ್ತುಗಳೊಡನೆ ನಾನಾ ತರಹದ ಮುಖಗಳೊಡನೆ ಏಳ ತೊಡಗಿದವು. ಕಟ್ಟಡದ ಹೊರಮುಖವೂ ಹೆಚ್ಚಾಗಿ ಒಡೆದಿರಬೇಕು. ಕಟ್ಟಡದ ಮೇಲ್ಭಾಗವು ಆಕಾಶಕ್ಕೆ ಇದಿರಾಗಿ ಉಬ್ಬರವಿಳಿತಗಳಿಂದ ಕೂಡಿರಬೇಕು. ಬೆಳಕು ನೆರಳುಗಳು ಕಟ್ಟಡದ ಮೇಲೆ ತಾಂಡವವಾಡುತ್ತಿರಬೇಕು. ಕಟ್ಟಡದ ಹೊರಮುಖದಲ್ಲೇ ಆಗಲಿ, ಒಳಗೇ ಆಗಲಿ, ಹೆಚ್ಚು ಹೆಚ್ಚು ಚಿತ್ರಕೆಲಸಗಳಿಂದ ಕೂಡಿರಬೇಕು. ಹೀಗಿದ್ದರೇನೆ ಕಟ್ಟಡವು ಸುಂದರವೆನಿಸಿಕೊಳ್ಳುತ್ತದೆ ಎನ್ನುವ ಭಾವನೆ ಜನಗಳಲ್ಲಿ ಮೊದಲಿನಿಂದಲೂ ಮೂಡಿತ್ತು. ಈಗಲಾದರೋ ಕಟ್ಟಡಗಳು ಅವುಗಳ ಉದ್ದೇಶವನ್ನು ಎಷ್ಟು ಚೆನ್ನಾಗಿ ಸಾಧಿಸಿದರೆ ಅಷ್ಟು ಸುಂದರವೆಂದು ಪರಿಗಣಿಸಲಾಗುತ್ತಿದೆ. ಅದರಂತೆ ಕಟ್ಟಡದ ವಿನ್ಯಾಸಕ್ಕೆ ಮೊದಲು ಹೆಚ್ಚು ಗಮನಕೊಟ್ಟು ಅದು ಸಮಾಧಾನಪೂರ್ವಕವಾಗಿ ಸಿದ್ಧಾರವಾದ ಮೇಲೆ ಅವುಗಳ ಹೊರಮುಖಕ್ಕೆ ಗಮನಕೊಡಲಾಗುವುದು. ಪತ್ರಿಕೆಗಳ ಮೂಲಕವೂ, ಸಿನಿಮಾಗಳ ಮೂಲಕವೂ, ಪುಸ್ತಕಗಳ ಮೂಲಕವೂ ಇತರ ದೇಶಗಳಲ್ಲಿ

ನಡೆಯುತ್ತಿದ್ದ ಪ್ರಗತಿ ಮಾರ್ಗಗಳು ದೇಶದಲ್ಲೆಲ್ಲ ಹರಡಿ ಜನಗಳಲ್ಲಿ ಹೆಚ್ಚು ತಿಳುವಳಿಕೆಯೂ ಜ್ಞಾನವೂ ಉಂಟಾಯಿತು. ಸಂಶೋಧನೆಗಳು ನಡೆದವು, ಕೈಗಾರಿಕೆಗಳು ಅಭಿವೃದ್ಧಿಯಾದವು. ವಿದ್ಯಾಭಿವೃದ್ಧಿ, ವೇಗ ಪ್ರಯಾಣದ ಅನುಕೂಲ, ದೇಶಗಳ ಪರ್ಯಟನಗಳ ಅವಕಾಶ, ಇವೆಲ್ಲವೂ ಜನಗಳ ಮನಸ್ಸಿನ ಮೇಲೆ ತಮ್ಮ ಪ್ರಭಾವವನ್ನು ಬೀರಿದವು. ಇವೆಲ್ಲವುಗಳ ಫಲವಾಗಿ ಹೊಸ ಹೊಸ ಪದಾರ್ಥಗಳು ಕಟ್ಟಡಗಳಿಗೆ ಅನುವಾದವು, ಉಪಯೋಗಿಸಲ್ಪಟ್ಟವು. ಕಬ್ಬಿಣ ಮತ್ತು ಸಿಮೆಂಟುಗಳ ಸಹಾಯದಿಂದ ಅನೇಕ ಅಂತಸ್ತುಗಳುಳ್ಳ ಮನೆಗಳು ಉದ್ಭವಿಸಿದವು.* ಜನಗಳು ತಮಗೆ ಚೆನ್ನು ಎಂದು ತೋರಿದ ಮಾದರಿಯಲ್ಲಿ ಕಟ್ಟಲು ವಾಡಿಕೆಯಾಗುತ್ತಾ ಬಂದಿದೆ. ಹೀಗಾಗಿ ವಾಸ್ತು ನಿರ್ಮಾಣ ಪದ್ಧತಿಯಲ್ಲಿ ಒಂದು ಬಲವಾದ ಕ್ರಾಂತಿಯೇ ಉಂಟಾಯಿತು. ಇದು ಸ್ವಾತಂತ್ರ್ಯಯುಗ. ಕಟ್ಟಡಗಳ ಕಟ್ಟಾಣಿಕೆಯಲ್ಲಿಯೂ ಸ್ವಾತಂತ್ರ್ಯವು ತಲೆದೋರುತ್ತ ಬಂದಿದೆ.

ಆಧುನಿಕ ಮತಾನುಸಾರವಾಗಿ ಒಂದು ಕಟ್ಟಡವು ಸುಂದರವಾದದ್ದೆಂದು ಹೊಗಳಿಸಿಕೊಳ್ಳಬೇಕಾದರೆ, ಅದರ ಸೂತ್ರಪಾತ್ರವು (Layout) ಸರಳವಾಗಿರಬೇಕು. ಅದರ ಉದ್ದೇಶ ಸಾಧನೆಗೆ ತಕ್ಕಂತೆ ವಿನ್ಯಾಸವಿರಬೇಕು, ಅವಯವ ಸಂಯೋಜನೆಯು ಅಚ್ಚುಕಟ್ಟಾಗಿರಬೇಕು, ಮನೋಹರವಾಗಿರಬೇಕು, ಆಕಾರಗಳ ಸಾಮಂಜಸ್ಯವು (Composition) ಹೃದಯಂಗಮವಾಗಿರಬೇಕು. ವರ್ಣಗಳ ಸಾಮರಸ್ಯವು ಮೆಚ್ಚುವಂತಿರಬೇಕು ಮತ್ತು ಅನವಶ್ಯಕವಾದ ಅಲಂಕಾರ ಚಿತ್ರಕೆಲಸಗಳಿರಕೂಡದು. ಇವುಗಳಲ್ಲದೆ ಕಟ್ಟಡವೇನಾದರೂ ವಾಸ್ತುಶಿಲ್ಪಾಲಂಕಾರವೆಂದೆನ್ನಿಸಿಕೊಂಡು ಶಾಶ್ವತವಾಗಿ ನಿಲ್ಲಬೇಕಾದರೆ ಅದನ್ನು ದೃಢವಾದ ತಳಹದಿಯ ಮೇಲೆ ಗಟ್ಟಿಯಾದ ಪದಾರ್ಥಗಳಿಂದ ಕಟ್ಟಿರಬೇಕು. ಅನೇಕ ವರ್ಷಗಳ ಕಾಲ ಬಿಸಿಲು, ಮಳೆ ಗಾಳಿಗಳ ಹೊಡೆತವನ್ನು ತಡೆದು

---

* ಇದುವರೆಗೂ ಕಟ್ಟಡಕ್ಕೆ ಗೋಡೆಗಳೇ ಅತಿಮುಖ್ಯವಾಗಿದ್ದವು. ಮೇಲಿನ ಭಾವಣಿಗಳನ್ನು ಹೊತ್ತಿರುತ್ತಿದ್ದುವು. ಮೇಲಂತಸ್ತಿನ ಕಟ್ಟಡಕ್ಕೆಲ್ಲಾ ಅವೇ ಆಧಾರವಾಗಿರುತ್ತಿದ್ದುವು. ಈಗ ಕಬ್ಬಿಣದ ಚೌಕಟ್ಟನ್ನು ಕಟ್ಟಿ ಅಂತಸ್ತುಗಳನ್ನು ನಿರ್ಮಿಸಲು ತೊಡಗಿದಾದ ಗೋಡೆಗಳ ಪ್ರಾಮುಖ್ಯತೆಯೇ ಕಡಮೆಯಾಗಿ ಆವರಣವನ್ನು ಸುತ್ತಲೂ ಮರೆಮಾಡುವುದಕ್ಕೆ ಉಪಯೋಗವೆಂದು ಎಣಿಸಲ್ಪಟ್ಟವು.

ಕೊಂಡು ನಿಲ್ಲುವಂತಿರಬೇಕು. ಈಗಿನ ಕಟ್ಟಡಗಳೆಲ್ಲವನ್ನೂ ಈ ನಿಯಮಗಳಿಂದಲೇ ಅಳೆಯಲಾಗುತ್ತಿದೆ.

ಅರ್ಧ ಶತಮಾನದಿಂದೀಚೆಗೆ ಮೈಸೂರು ದೇಶದಲ್ಲಿ ನಿರ್ಮಿಸಿದ ಕಟ್ಟಡಗಳಲ್ಲೆಲ್ಲ ಬೆಂಗಳೂರಿನಲ್ಲಿ ಈಗತಾನೆ ಹೊಸದಾಗಿ ಕಟ್ಟಿರುವ ವಿಧಾನ ಸೌಧವೇ ಅತ್ಯಂತ ದೊಡ್ಡದಾದದ್ದು. ಕರ್ನಾಟಕ ಏಕೀಕರಣಕ್ಕೆ ಮುಂಗಡವಾಗಿಯೇ ಅಸ್ಥಿಭಾರವನ್ನೂ ಹಾಕಿದರೋ ಎಂಬಂತೆ ಮಹಾ ಪ್ರಧಾನಿಗಳಾದ ಶ್ರೀ ಜವಹರಲಾಲ ನೆಹರೂರವರು ಈ ಕಟ್ಟಡಕ್ಕೆ ೧೯೫೧ ನೆಯ ಇಸವಿ ಆಗಸ್ಟು ತಿಂಗಳಿನಲ್ಲಿ ಶಂಕುಸ್ಥಾಪನೆಯನ್ನು ಮಾಡಿದರು. ಇದನ್ನು ಕಟ್ಟಲು ೧೯೫೪ ರಲ್ಲಿ ಪ್ರಾರಂಭಮಾಡಿದ್ದು ೧೯೫೮ ರ ಹೊತ್ತಿಗೆ ಮುಗಿಯುವ ಸಂಭವವಿದೆ. ಇದು ಮೂರಂತಸ್ತಿನ ಭವ್ಯವಾದ ಕಟ್ಟಡ. ಇಡೀ ಕನ್ನಡ ಜನಗಳ ಕನಸಿನ ನನಸಾದ ಒಕ್ಕೂಟದ ಕುರುಹಾಗಿ ನಿಂತಿದೆ. ಇದರ ಖರ್ಚು ಸುಮಾರು ಎರಡು ಕೋಟಿ ರೂಪಾಯಿಗಳು. ಈ ಕಟ್ಟಡದ ವಿನ್ಯಾಸವು ಚತುರಸ್ರಾಕಾರವಾಗಿದೆ. ಇದರ ಅಳತೆ-ಉತ್ತರ ದಕ್ಷಿಣ ೭೦೦ ಅಡಿಗಳು. ಪೂರ್ವಪಶ್ಚಿಮ ೩೫೦ ಅಡಿಗಳು, ೨೩೦ ಅಡಿ ಚದರದ ಎರಡು ಒಳಾಂಗಣಗಳಿವೆ. ಭೂಮಿಯಿಂದ ಮೇಲಕ್ಕೆ ಉತ್ತರ ದಿಕ್ಕಿನ ಭಾಗ ೬೩ ಅಡಿ ೬ ಅಂಗುಲ, ದಕ್ಷಿಣ ದಿಕ್ಕಿನ ಭಾಗ ತಳಮನೆಯೂ ಸೇರಿ ೭೩ ಅಡಿ ೬ ಅಂಗುಲ ಎತ್ತರವಿದೆ. ನಾಲ್ಕು ಮೂಲೆಗಳಲ್ಲಿಯೂ ನಾಲ್ಕು, ದ್ವಾರ ಮಂಟಪದ ಇಕ್ಕೆಲಗಳಲ್ಲಿಯೂ ಎರಡು, ಹೀಗೆ ಆರು ಸಣ್ಣ ಗುಮ್ಮಟಗಳೂ ಮಧ್ಯದಲ್ಲಿ ಒಂದು ದೊಡ್ಡ ಗುಮ್ಮಟವೂ ಇವೆ. ಮಧ್ಯದ ಗುಮ್ಮಟದ ಎತ್ತರ ೧೬೦ ಅಡಿಗಳು. ಸಣ್ಣ ಗುಮ್ಮಟಗಳ ಮೇಲೆ ಚಿನ್ನದ ಮುಲಾಮು ಮಾಡಿದ ಕಲಶಗಳೂ ದೊಡ್ಡ ಗುಮ್ಮಟದ ಮೇಲೆ ಚಿನ್ನದ ಮುಲಾಮಿನ ಭಾರತದ ಲಾಂಛನವಾದ ಸಿಂಹಸಮೂಹವೂ ಇರಿಸಲ್ಪಟ್ಟಿವೆ. ಮಧ್ಯದ ಗುಮ್ಮಟದ ವ್ಯಾಸ ೪೫ ಅಡಿಗಳು. ಅದು ೬೦ ಅಡಿ ವ್ಯಾಸವುಳ್ಳ ದುಂಡು ತೊಲೆಯ ಮೇಲೆ ನಿಂತಿದೆ. ಇದೆಲ್ಲವನ್ನೂ ದಪ್ಪನಾದ ಎಂಟು ದುಂಡು ಕಂಬಗಳು ಹೊತ್ತುಕೊಂಡಿವೆ. ಕಟ್ಟಡದ ಕೆಳಗಿನ ನೆಲದಲ್ಲಿ ೧೨೯ ಅಡಿ ಉದ್ದ ೧೦೫ ಅಡಿ ಅಗಲ ಉಳ್ಳ ಭೋಜನ ಶಾಲೆಯೂ ಮೇಗಳ ಉಪ್ಪರಿಗೆಯಲ್ಲಿ ಎರಡು ಸಭಾಂಗಣಗಳೂ ಇವೆ. ಇವುಗಳಲ್ಲಿ ಒಂದು ೧೩೨

ಅಡಿ ಉದ್ದವೂ, ೧೨೫ ಅಡಿ ಅಗಲವೂ ೪೦ ಅಡಿ ಎತ್ತರವೂ, ಮತ್ತೊಂದು ೧೦೦ ಅಡಿ ಉದ್ದವೂ ೭೮ ಅಡಿ ಅಗಲವೂ ೪೦ ಅಡಿ ಎತ್ತರವೂ ಇವೆ. ಕಟ್ಟಡ ವೆಲ್ಲವೂ ಬೂದುಬಣ್ಣದ ಕಲ್ಲಿನಿಂದ ಕಟ್ಟಲ್ಪಟ್ಟಿದೆ. ಅಲ್ಲಲ್ಲಿ ಅಲಂಕಾರಕ್ಕೋಸ್ಕರ ಕೆಂಪು ಮತ್ತು ಕಪ್ಪು ಬಣ್ಣದ ಕಲ್ಲುಗಳನ್ನು ಉಪಯೋಗಿಸಲಾಗಿದೆ. ೨೦ ಅಡಿ ಅಗಲದ ಒಂದು, ೫ ಅಡಿ ಅಗಲದ ಆರು ಮೆಟ್ಟಲು ಸಾಲುಗಳಿವೆ. ನಾಲ್ಕು ದಿಕ್ಕಿನಲ್ಲಿಯೂ ಜನಗಳು ಮೇಲೇರಿ ಹೋಗಲು ಎಲೆಕ್ಟ್ರಿಕ್ ಲಿಫ್ಟ್‌ಗಳೂ, ಸಾಮಾನು ಸಾಗಿಸುವುದಕ್ಕಾಗಿ ಒಂದು ತೊಟ್ಟಿಲೂ ಇವೆ. ಈ ಕಟ್ಟಡವು ಪೂರ್ವಾಭಿಮುಖವಾಗಿ ಮೊದಲಿನಿಂದಲೂ ಇದ್ದ ಅಠಾರಾ ಕಚೇರಿಯ ಎದು ರಿಗೆ ಎತ್ತರಕ್ಕೆ ನಿಂತಿದೆ. ಈ ಕಟ್ಟಡಕ್ಕೆ ಹತ್ತಿ ಹೋಗುವುದಕ್ಕೆ ಪೂರ್ವದಿಕ್ಕಿನಲ್ಲಿ ಎತ್ತರವಾದ ಮತ್ತು ಅಗಲವಾದ ಸೋಪಾನವಿದೆ. ಅದನ್ನು ಹತ್ತಿ ಹೋದರೆ ಒಂದು ಭವ್ಯವಾದ ದ್ವಾರ ಮಂಟಪ. ಇದು ಎತ್ತರವಾದ ಹನ್ನೆರಡು ದುಂಡು ಕಂಬಗಳೂ ಎರಡು ಅರೆ ಕಂಬಗಳಿಂದಲೂ ಕಟ್ಟಲ್ಪಟ್ಟಿದೆ. ಕಂಬಗಳ ಮೇಲೆ ಅಂದವಾಗಿ ಕೆತ್ತಿದ ಬೋದಿಗೆಗಳಿವೆ. ಕಟ್ಟಡದಲ್ಲಿ ಬೇರೆ ಬೇರೆ ತರಹದ ಕೈಪಿಡಿಗಳನ್ನು ಕೊರೆದು ಇರಿಸಲಾಗಿದೆ. ಇದು ದ್ರಾವಿಡ ಶೈಲಿಯ ಛಾಯೆ ಯನ್ನು ಅನುಸರಿಸಿ ಕಟ್ಟಿದ ಕಟ್ಟಡ. ಈ ಕಟ್ಟಡವನ್ನು ಮೇಲೆ ವಿವರಿಸಿರುವ ನಿಯಮಗಳಿಂದ ಪರೀಕ್ಷಿಸಿದ್ದಾದರೆ ಭವ್ಯತೆ ಒಂದು ಬಿಟ್ಟು ಮತ್ಯಾವ ವಿಷಯ ದಲ್ಲಿಯೂ ಸಮರ್ಪಕವಾಗಿರುವಂತೆ ತೋರುವುದಿಲ್ಲ.

ಕೊಡಗು ಮತ್ತು ಕರಾವಳಿಯ ಕಟ್ಟಡಗಳು

ಕೊಡಗು, ಮಲೆನಾಡು ಪ್ರಾಂತ ಭರತಖಂಡದ ಪಶ್ಚಿಮ ಘಟ್ಟಗಳ ಮಧ್ಯದಲ್ಲಿದೆ. ಇದರ ವಿಸ್ತೀರ್ಣ ೧೬೦೦ ಚದರ ಮೈಲಿಗಳು. ಸುಮಾರು ೬೦ ಮೈಲಿಗಳು ಉದ್ದವೂ ೪೦ ಮೈಲಿಗಳು ಅಗಲವೂ ಹರಡಿದೆ. ಕದಂಬರ ಕಾಲದಿಂದಲೂ ಇದೇ ಹೆಸರೇ ನಡೆದು ಬಂದಿದೆ. ಶಾಸನಗಳಲ್ಲಿ ಇದನ್ನು ಕುಡುಮಲೆನಾಡು ಎಂದು ಕರೆದಿದ್ದಾರೆ. ಇಲ್ಲಿ ವಾಸಮಾಡುವ ಜನರನ್ನು ಕುಡವರು, ಕೊಡಗರು ಎಂದು ಕರೆಯುವ ವಾಡಿಕೆ. ಇವರು ಕದಂಬ ಅರಸರ ರಾಜ್ಯಾಡಳಿತಕ್ಕೆ ಯುದ್ಧದಲ್ಲಿ ಕಾದಿ ಕೀರ್ತಿಯನ್ನು ತಂದು ಕೊಟ್ಟ ವೀರರ ತಂಡಕ್ಕೆ ಸೇರಿದವರೆಂದು ವಿದ್ವಾಂಸರು ಹೇಳುತ್ತಾರೆ. ಕೊಡಗು ಪ್ರದೇಶವು ಕ್ರಿ. ಶ. ಐದನೆಯ ಶತಮಾನದಲ್ಲಿ ಗಂಗರ ವಶದಲ್ಲಿತ್ತು. ಹತ್ತನೆಯ ಶತಮಾನ ದಿಂದೀಚೆಗೆ ಕೆಲವು ಭಾಗವನ್ನು ಚೋಳರು, ಮತ್ತೆ ಕೆಲವು ಭಾಗವನ್ನು ಹೊಯಿಸಳರು ಆಳುತ್ತಿದ್ದರು. ಹದಿಮೂರನೆಯ ಶತಮಾನದಲ್ಲಿ ಚಂಗಾಳ್ವರು ಬಂದರು. ಹದಿನಾರನೆಯ ಶತಮಾನದ ಹೊತ್ತಿಗೆ ಕೊಡಗು ಪ್ರಾಂತ್ಯವು ಇಕ್ಕೇರಿ ಅರಸರ ಕೈವಶವಾಯಿತು. ಕ್ರಿ. ಶ. ೧೬೩೩ ರಲ್ಲಿ ವೀರರಾಜರು ರಾಜ್ಯವನ್ನು ಅವರಿಂದ ಕಿತ್ತುಕೊಂಡು ಸ್ವತಂತ್ರವಾಗಿ ಆಳ ತೊಡಗಿದರು. ೧೬೪೦ ರಲ್ಲಿ ರಾಜ್ಯವು ಬಹು ವಿಸ್ತಾರವಾಗಿತ್ತೆಂದೂ, ಪಶ್ಚಿಮದಲ್ಲಿ ಬಂಟವಾಳ ವನ್ನೂ, ಉತ್ತರದಲ್ಲಿ ಮಂಜರಾಬಾದು ಹಾಸನ ತಾಲ್ಲೂಕುಗಳನ್ನೂ, ಪೂರ್ವ ದಲ್ಲಿ ಪಿರಿಯಾಪಟ್ಟಣವನ್ನೂ, ದಕ್ಷಿಣದಲ್ಲಿ ಹೆಗ್ಗಡದೇವನ ಕೋಟೆಯನ್ನೂ ಒಳ ಗೊಂಡಿತ್ತೆಂದೂ ತಿಳಿಯ ಬರುತ್ತದೆ. ಕೊಡಗಿನ ಅರಸು ಮನೆತನದವರು ಎರಡು ಶತಮಾನಗಳ ಕಾಲ ಸ್ವತಂತ್ರವಾಗಿ ರಾಜ್ಯಭಾರ ಮಾಡಿದರು. ಕ್ರಿ. ಶ. ೧೮೩೪ ರಲ್ಲಿ ವೀರರಾಜರ ಮರಿಮಗನಾದ ಇಮ್ಮಡಿ ವೀರ ರಾಜನ ಕಾಲದಲ್ಲಿ

ಬ್ರಿಟಿಷರ ಕೈವಶವಾಯಿತು. ಅಲ್ಲಿಂದೀಚೆಗೆ ಕೊಡಗು ಒಂದು ಬೇರೆ ಪ್ರಾಂತವಾಗಿ ಬ್ರಿಟಿಷ್ ಪಾರ್ಲಿಮೆಂಟಿನಿಂದ ನೇಮಿಸಲ್ಪಟ್ಟ ಕಮೀಷನರವರ ಆಧಿಪತ್ಯದಲ್ಲಿತ್ತು. ಹೊಸ ಮೈಸೂರು ರಾಜ್ಯವು ಸ್ಥಾಪನೆಯಾದ ಮೇಲೆ ಕ್ರಿ. ಶ. ೧೯೫೬ ನೆಯ ನವೆಂಬರ್ ೧ ನೆಯ ತಾರೀಖಿನಿಂದ ಮೈಸೂರು ರಾಜ್ಯದಲ್ಲಿ ಒಂದು ಪ್ರತ್ಯೇಕ ಜಿಲ್ಲೆ ಆಗಿ ಪರಿಗಣಿಸಲ್ಪಟ್ಟಿತು.

ಕೊಡಗು ಗುಡ್ಡಗಾಡು ಪ್ರದೇಶ. ಇಲ್ಲಿ ಮಳೆ ವಿಪರೀತ. ವರುಷಕ್ಕೆ ಸರಾಸರಿ ೧೫೦ ಅಂಗುಲಗಳಷ್ಟು ಮಳೆ ಬೀಳುತ್ತದೆ. ಈ ಸೀಮೆಯಲ್ಲಿರುವ ಮುಖ್ಯ ಕಟ್ಟಡಗಳೆಂದರೆ :

ಮಡಕೇರಿಯಲ್ಲಿ ಟೀಪುವು ಕಟ್ಟಿಸಿದ ಕೋಟೆ, ಲಿಂಗರಾಜರು ಕಟ್ಟಿಸಿದ ಅರಮನೆ, ಓಂಕಾರೇಶ್ವರ ದೇವಾಲಯ. ಕೊಡ್ಲಿಪೇಟೆಯಲ್ಲಿ ಪರಶುರಾಮ ದೇವಾಲಯ, ವಿಶಾಲ ನಗರದಲ್ಲಿ ರಂಗಸ್ವಾಮಿ ದೇವಾಲಯ; ಬಾಲೂರು ಮತ್ತು ಭಾಗಮಂಡಲದಲ್ಲಿರುವ ದೇವಾಲಯಗಳು. ಈ ಎಲ್ಲ ಕಟ್ಟಡಗಳೂ ೧೮, ೧೯ ನೆಯ ಶತಮಾನಗಳಲ್ಲಿ ನಿರ್ಮಿಸಲ್ಪಟ್ಟವು ಮತ್ತು ವಾಸ್ತುಶಿಲ್ಪ ದೃಷ್ಟಿಯಿಂದ ಅಷ್ಟೇನೂ ಗಮನಾರ್ಹವಾದವುಗಳಲ್ಲ.

ಒಂದು ಅಂಗುಲದಷ್ಟು ಸಮುದ್ರದ ದಡವನ್ನು ಕಾಣದೆ ಇದ್ದ ಮೈಸೂರು ರಾಜ್ಯಕ್ಕೆ ಈಗ ೨೦೦ ಮೈಲಿ ದೂರದಷ್ಟು ಕರಾವಳಿ ದೊರಕಿದೆ. ಇದರಲ್ಲಿ ಅರ್ಧಭಾಗ ಉತ್ತರ ಕನ್ನಡ ಜಿಲ್ಲೆಗೆ ಸೇರಿದ್ದು, ಇನ್ನು ಅರ್ಧ ದಕ್ಷಿಣ ಕನ್ನಡ ಜಿಲ್ಲೆಯದು. ಇವೆರಡೂ ಬೊಂಬಾಯಿ ಮತ್ತು ಮದರಾಸು ಆಧಿಪತ್ಯಗಳಿಂದ ಮೈಸೂರಿಗೆ ಸೇರಿಸಲ್ಪಟ್ಟವು. ಈ ಪ್ರದೇಶವೆಲ್ಲವೂ ಬೆಟ್ಟಗುಡ್ಡಗಳಿಂದಲೂ ದಟ್ಟವಾದ ಕಾಡಿನಿಂದಲೂ ಕೂಡಿದೆ ಮತ್ತು ಈ ಪ್ರದೇಶದಲ್ಲಿ ಮಳೆ ವಿಪರೀತ. ವರ್ಷಕ್ಕೆ ೧೦೦ ರಿಂದ ೨೦೦ ಇಂಚಿನವರೆಗೂ ಮಳೆ ಬೀಳುತ್ತದೆ. ಆ ಮಳೆಯಾದರೋ ಧಾರಾಕಾರವಾಗಿ ಅನೇಕ ತಿಂಗಳುಗಳವರೆಗೂ ಬೀಳುತ್ತಿರುತ್ತದೆ. ಈ ಕಾರಣಗಳಿಂದ ಇಲ್ಲಿಯ ದೇವಾಲಯಗಳ ಮಾದರಿಯೇ ಬೇರೆಯಾಗಿ ಪರಿಣಮಿಸಿತು. ಗರ್ಭಗೃಹ, ನವರಂಗ ಇವುಗಳನ್ನು ಕಲ್ಲಿನಿಂದ ಕಟ್ಟಿದ್ದರೂ ಮೇಲ್ಛಾವಣಿ ಮಾತ್ರ ಚಪ್ಪಟೆಯಾಗಿರದೆ ಇಳಿಜಾರಾಗಿ

ಮರ ಮತ್ತು ಹೆಂಚಿನಿಂದಲೋ ಅಥವಾ ತೆಳ್ಳನೆ ಕಲ್ಲುಚಪ್ಪಡಿಯಿಂದಲೋ ಮಾಡಿದ್ದಾಗಿರುತ್ತದೆ. ಈ ಮಾದರಿಯ ಕಟ್ಟಡಗಳನ್ನು ಮಲಬಾರಿನಲ್ಲಿಯೂ, ಹಿಮಾಚಲಪ್ರದೇಶದಲ್ಲಿಯೂ ಕಾಣಬಹುದು. ಈ ರೀತಿಯ ಕಟ್ಟಡಗಳು ತಲೆದೋರಿರುವದಕ್ಕೆ ಎರಡು ಕಾರಣಗಳನ್ನು ಹೇಳುತ್ತಾರೆ. ಕರಾವಳಿಯಲ್ಲಿರುವ ಜನರಿಗೂ ನೇಪಾಳದಲ್ಲಿರುವ ನೇವಾರರಿಗೂ anthropologically ಸಂಬಂಧವಿದ್ದಿರಬೇಕೆಂದೂ, ಆದ್ದರಿಂದಲೇ ಕಟ್ಟಡಗಳು ಒಂದೇ ತೆರನಾಗಿ ಕಟ್ಟಲ್ಪಟ್ಟವೆಂದೂ ಒಂದು ಕಾರಣ. ಇನ್ನೊಂದು ಕಾರಣ, ಭಾರತದ ಪಶ್ಚಿಮ ಕರಾವಳಿಯಲ್ಲಿರುವ ಜನರಿಗೂ ಮತ್ತು ಚೀನಾದೇಶದವರಿಗೂ ವ್ಯಾಪಾರ ಸಂಬಂಧವಿದ್ದು ಇಲ್ಲಿಂದ ಅಲ್ಲಿಗೂ ಅಲ್ಲಿಂದ ಇಲ್ಲಿಗೂ ವರ್ತಕರೂ ಮತ್ತು ಇತರರೂ ಹೋಗಿಬರುತ್ತಿದ್ದುದರಿಂದ ಇಲ್ಲಿಯ ದೇವಾಲಯಗಳನ್ನು ಅಲ್ಲಿಯವುಗಳಂತೆಯೇ ಕಟ್ಟಲು ತೊಡಗಿದರೆಂದು. ಇವೆರಡಕ್ಕಿಂತಲೂ ಮೇಲೆ ಹೇಳಿರುವ ಕಾರಣವೇ ನಿಜವಾದದ್ದೆಂದು ಕಂಠೋಕ್ತವಾಗಿ ಹೇಳಬಹುದು. ಇಲ್ಲಿಯ ಕಾಡುಗಳಲ್ಲಿ ಮರವು ಬೇಕಾದಷ್ಟು ಸುಲಭವಾಗಿ ಸಿಕ್ಕುವುದರಿಂದ ಮೊದ ಮೊದಲು ಕಟ್ಟಿದ ದೇವಾಲಯಗಳು ಪೂರ್ತಿಯಾಗಿ ಮರದಿಂದಲೇ ನಿರ್ಮಿಸಿದವಾಗಿರಬೇಕೆಂದು ತೋರುತ್ತದೆ. ಈ ಕರಾವಳಿ ಪ್ರದೇಶವೆಲ್ಲವೂ ಮೊದಲು ಕದಂಬರ ಆಳ್ವಿಕೆಗೆ ಸೇರಿತ್ತು ಮತ್ತು ಬನವಾಸಿಯು ಅವರ ರಾಜಧಾನಿಯಾಗಿತ್ತು. ಕದಂಬ ದೊರೆಯಾದ ಕಾಮದೇವನು ಮಲೆನಾಡನ್ನೂ ತುಳುನಾಡನ್ನೂ ಪಶ್ಚಿಮ ಘಟ್ಟಗಳನ್ನೂ ಆಳುತ್ತಿದ್ದನೆಂದು ಹೇಳಿದೆ. ಹೊಯಿಸಳ ರಾಜನಾದ ವಿಷ್ಣುವರ್ಧನನು ಜೈನಮತವನ್ನು ತ್ಯಜಿಸಿ ವೈಷ್ಣವನಾದಮೇಲೆ ಅವನ ರಾಜ್ಯದಲ್ಲಿದ್ದ ಅನೇಕ ಜೈನ ಶಿಲ್ಪಿಗಳು ಘಟ್ಟದ ಕೆಳಕ್ಕೆ ವಲಸೆ ಬಂದು ನೆಲಸಿದರಂತೆ. ಆ ತರುವಾಯವೇ ಅಂದರೆ ೧೨ನೆಯ ಶತಮಾನದಿಂದಲೇ ಈ ಪ್ರದೇಶದಲ್ಲಿ ಕಲ್ಲಿನಿಂದ ಕಟ್ಟುವ ಪದ್ಧತಿಯು ಪ್ರಾರಂಭವಾಗಿರಬೇಕು. ಇಲ್ಲಿಯ ದೇವಾಲಯಗಳೂ ಬಸದಿಗಳೂ ಹೊರಗೆ ಅಲಂಕಾರರಹಿತವಾಗಿ ಕಂಡರೂ ಒಳಗಡೆ ಕಾಣುವ ಚಿತ್ರ ಕೌಶಲವೂ ವೈವಿಧ್ಯವೂ ಘಟ್ಟದ ಮೇಲಿನ ಕಟ್ಟಡಗಳಿಗೇನೂ ಕಡಮೆಯಿರುವುದಿಲ್ಲ. ಕರಾವಳಿಯ ಪ್ರದೇಶದಲ್ಲೆಲ್ಲ ಜೈನ ಮತವು ಬಹಳ ಕಾಲದವರೆಗೂ ಊರ್ಜಿತಸ್ಥಿತಿಯಲ್ಲಿತ್ತೆಂದು ಕಾಣುತ್ತದೆ. ಉಡುಪಿ, ಮಂಗಳೂರು ಮತ್ತು ಉಪ್ಪಿನಂಗಡಿ ತಾಲ್ಲೂಕುಗಳಲ್ಲಿ ಜೈನ ಬಸದಿಗಳಿವೆ. ಈ ಪ್ರದೇಶಕ್ಕೆಲ್ಲ ಮೂಡಬಿದರೆ ಪ್ರಸಿದ್ಧ

ವಾದ ಸ್ಥಳ. ಈ ಊರಿನಲ್ಲಿ ಹದಿನಾರು ಜೈನ ಬಸದಿಗಳಿವೆ. ಇವುಗಳಲ್ಲಿ ಅನೇಕ ಶಿಥಿಲವಾಗಿವೆ. ಇವುಗಳಲ್ಲೆಲ್ಲ ಚಂದ್ರನಾಥ ಬಸ್ತಿಯು ಪ್ರಸಿದ್ಧ ವಾದದ್ದು.

ಬಸದಿಯ ಒಳಗಡೆ ವಿಸ್ತಾರವಾಗಿದೆ. ಕಂಬಗಳು, ಬೋದಿಗೆಗಳು ತೊಲೆಗಳು, ಎಲ್ಲವೂ ಬಹಳ ಸೊಗಸಾಗಿ ವೈವಿಧ್ಯದೊಡನೆ ಕೆತ್ತಲ್ಪಟ್ಟವೆ.* ಇದೇ ತರಹದ ಕಟ್ಟಡಗಳು ಭಟಕಲ್ಲಿನಲ್ಲಿಯೂ ಕಾಣಬರುತ್ತವೆ. ಭಟಕಲ್ಲು ಒಂದಾನೊಂದು ಕಾಲದಲ್ಲಿ ದೊಡ್ಡ ಪಟ್ಟಣವಾಗಿತ್ತೆಂದು ತೋರುತ್ತದೆ ಮತ್ತು ಪುಣ್ಯಕ್ಷೇತ್ರವಾಗಿಯೂ ಇರಲಿಕ್ಕೆ ಸಾಕು. ಈ ಊರಿನಲ್ಲಿ ಅನೇಕ ದೇವಾಲಯ ಗಳಿವೆ. ಅವುಗಳಲ್ಲಿ ಎಲ್ಲವೂ ಇಳಿಜಾರಾದ ಕಲ್ಲು ಚಪ್ಪಡಿಗಳ ಛಾವಣಿಯನ್ನು ಹೊಂದಿವೆ. ದೇವಸ್ಥಾನದ ಒಳಗೂ ಹೊರಗೂ ಕೆತ್ತನೆಯ ಕೆಲಸವೂ ಮೆಚ್ಚುವ ಹಾಗಿದೆ. ರಂಗನಾಥ ದೇವಾಲಯವು ಮಾತ್ರ ದ್ರಾವಿಡ ಶೈಲಿಯ ಶಿಖರವನ್ನು ಹೊಂದಿ ಉತ್ತಮ ದೇವಾಲಯವೆನಿಸಿಕೊಂಡಿದೆ. ಈ ಕಟ್ಟಡಗಳ ಮುಂಭಾಗ ದಲ್ಲಿ ಸಾಧಾರಣವಾಗಿ ಒಂದು ದೊಡ್ಡ ಮೆಚ್ಚಿಕೆಯನ್ನು ಪಡೆಯುವಂಥ ಕಂಬವು ನಿಲ್ಲಿಸಲ್ಪಟ್ಟಿರುತ್ತದೆ. ಇಂತಹ ಸ್ತಂಭಗಳಲ್ಲಿ ಕೇಶವನಾರಾಯಣ ದೇವಾಲಯದ ಮುಂದಿರುವುದು ಬಹಳ ಸೊಗಸಾಗಿದೆ. ಹಾನಗಲ್ಲಿಗೆ ೧೫ ಮೈಲಿ ದೂರದಲ್ಲಿ ಪಶ್ಚಿಮಕ್ಕೆ ವರದಾನದಿಯ ದಡದ ಮೇಲೆ ಕದಂಬರ ರಾಜಧಾನಿಯಾಗಿದ್ದ ಬನವಾಸಿಯಲ್ಲಿ ಮಧುಕೇಶ್ವರ ದೇವಾಲಯವಿದೆ. ಪಶ್ಚಿಮ ಘಟ್ಟದಲ್ಲಿ ಪೂರ್ವ

---

* ಒಂದರ ಹಿಂದೆ ಒಂದರಂತೆ ಮೂರು ನವರಂಗಗಳೂ ಅವರ ಹಿಂದೆ ಗರ್ಭ ಗೃಹವೂ ಇದೆ. ಗರ್ಭಗೃಹದಲ್ಲಿ ತೀರ್ಥಂಕರನ ವಿಗ್ರಹವಿದೆ. ಅನೇಕ ವೇಳೆ ಹೀಗೆ ಒಂದಕ್ಕಿಂತ ಹೆಚ್ಚಾಗಿ ನವರಂಗಗಳನ್ನು ಕಟ್ಟಿ ಅವಕ್ಕೆ ಬೇರೆ ಬೇರೆ ಹೆಸರುಗಳನ್ನಿಡು ವುದು ವಾಡಿಕೆಯಾಗಿತ್ತೆಂದು ತೋರುತ್ತದೆ. ಇಲ್ಲಿರತಕ್ಕ ನವರಂಗಗಳಿಗೆ, ತೀರ್ಥಂಕರ ಮಂಟಪ, ಗದ್ದಿಗೆ ಮಂಟಪ ಮತ್ತು ಚಿತ್ರಮಂಟಪವೆಂದೂ ಹೆಸರುಗಳು. ತ್ರಿಭುವನ ತಿಲಕ ಚೂಡಾಮಣಿ ಬಸದಿ ಎಂದು ಕರೆಯಲ್ಪಡುವ ಇನ್ನೊಂದು ಬಸದಿಯು ಅಲ್ಲಿನ ಅರಸನಾಗಿದ್ದ ದೇವರಾಜ ಒಡೆಯರ ಆಜ್ಞಾನುಸಾರ ೧೪೩೦ ರಲ್ಲಿ ಕಟ್ಟಲ್ಪಟ್ಟಿತು. ಇದಕ್ಕೆ ಸಾವಿರ ಕಂಬದ ಬಸದಿ ಎಂದೂ ಹೆಸರು. ಈ ಬಸದಿಯ ಮುಂಭಾಗದಲ್ಲಿ ೫೦ ಅಡಿ ಎತ್ತರದ ಒಂದು ಸುಂದರವಾದ ಮಾನಸ್ತಂಭವಿದೆ. ಇದನ್ನು ಭೈರವರಾಜನ ರಾಣಿಯಾದ ನಾಗಲಾದೇವಿಯಿಂದ ಕಟ್ಟಿಸಲ್ಪಟ್ಟಿತೆಂದು ತಿಳಿಯಬರುತ್ತದೆ. ಇವುಗಳ ಲ್ಲೆಲ್ಲ ಚಂದ್ರನಾಥೇಶ್ವರ ದೇವಾಲಯವು ಅತ್ಯಂತ ದೊಡ್ಡದು.

ದಿಂದಲೂ ಇದು ಮುಖ್ಯ ಪಟ್ಟಣವಾಗಿತ್ತು. ಅಶೋಕನು ಕ್ರಿ. ಪೂ. ಮೂರ ನೆಯ ಶತಮಾನದಲ್ಲಿ ತನ್ನ ರಾಜ್ಯಭಾರದ ಹದಿನೆಂಟನೆಯ ವರ್ಷದಲ್ಲಿ ಈ ಊರಿಗೆ ಬೌದ್ಧ ಸನ್ಯಾಸಿಗಳನ್ನು ಕಳುಹಿಸಿದ್ದನಂತೆ. ಹಾನಗಲ್ಲಿಗೆ ವಿರಾಟನಗರವೆಂದು ಹೆಸರು. ಅಲ್ಲಿಯೇ ವಿರಾಟರಾಯನು ರಾಜ್ಯವಾಳುತ್ತಿದ್ದನಂತೆ. ಈ ಊರಿನ ಹತ್ತಿರವೇ ಪಾಂಡವರು ಅಜ್ಞಾತವಾಸವನ್ನು ಮುಗಿಸಿದರಂತೆ. ಬನವಾಸಿ ಯಲ್ಲಿ ಒಂದೇ ಆವರಣದಲ್ಲಿ ಎರಡು ದೇವಾಲಯಗಳಿವೆ ಮತ್ತು ಕ್ರಿ. ಶ. ಎರಡನೆಯ ಶತಮಾನಕ್ಕೆ ಸೇರಿದ್ದೆಂದು ಹೇಳಬಹುದಾದ ಒಂದು ನಾಗರ ಕಲ್ಲು ನಿಲ್ಲಿಸಲ್ಪಟ್ಟಿದೆ. ಈ ದೇವಾಲಯದಲ್ಲಿ ಮುಖಮಂಟಪದಲ್ಲಿ ಒಂದು ಕಲ್ಲಿನ ಸಿಂಹಾಸನವೂ ಒಳಗಡೆ ಒಂದು ಕಲ್ಲಿನ ಮಂಚವೂ ಇವೆ. ಇವೆರಡೂ ನಾಜೂ ಕಾಗಿ ಚಿತ್ರಿಸಲ್ಪಟ್ಟಿವೆ. ಈ ದೇವಾಲಯವೂ ಇದೇ ರೀತಿಗೆ ಸೇರಿದ್ದಾಗಿದೆ. ಬನವಾಸಿಯರಸರು ಈ ದೇವಸ್ಥಾನಕ್ಕೆ ಹೆಚ್ಚು ಹೆಚ್ಚಾಗಿ ದತ್ತಿಗಳನ್ನು ಬಿಟ್ಟು ಆಗಾಗ್ಗೆ ಜೀರ್ಣೋದ್ಧಾರವನ್ನು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟ ರೆಂದು ತಿಳಿಯಬರುತ್ತದೆ.

— —

ಪರಿಶಿಷ್ಟ ೧

ಗುಹಾಲಯಗಳು

ಗುಹಾಂತರ್ದೇವಾಲಯಗಳು ಭಾರತದ ವಾಸ್ತುಕಲೆಯಲ್ಲಿ ಪ್ರಥಮ ಪ್ರಯತ್ನಗಳೆಂದು ಹೇಳಿದೆಯಷ್ಟೆ. ಆದರೂ ಶಿಲ್ಪಕಲೆಯಲ್ಲಿ ಪಳಗಿದ ಪ್ರಾವೀಣ್ಯವನ್ನು ತೋರಿಸುತ್ತಿವೆ. ಮೈಸೂರು ರಾಜ್ಯದಲ್ಲಿ ಐಹೊಳೆ ಮತ್ತು ಬಾದಾಮಿಯಲ್ಲಿ ಇಂತಹ ಗುಹಾಲಯಗಳು ಕಂಡುಬರುತ್ತವೆ. ಜಗತ್ ಪ್ರಸಿದ್ಧವಾದ ಅಜಂತಾ ಮತ್ತು ಎಲ್ಲೋರಾ ಗುಹಾಲಯಗಳು ಈಗ ಮೈಸೂರು ರಾಜ್ಯದ ಗಡಿಯಿಂದ ಹೊರಗಿದ್ದರೂ ಅನೇಕ ಕಾರಣಗಳಿಂದ ಕರ್ನಾಟಕಕ್ಕೆ ಸೇರಿದವುಗಳೆಂದು ಪರಿಗಣಿಸುವುದು ಉಚಿತವಾಗಿದೆ. ಕರ್ನಾಟಕ ರಾಜರು ಇವುಗಳಲ್ಲಿ ಅನೇಕವನ್ನು ಕಟ್ಟಿಸಿದರು ಮತ್ತು ಕರ್ನಾಟಕದ ಶಿಲ್ಪಿಗಳೇ ಇವುಗಳ ನಿರ್ಮಾಣಕ್ಕೆ ಕಾರಣರಾದರು.

ಐಹೊಳೆಯಲ್ಲಿ ಒಂದು ವೈದಿಕ ಗುಹಾಲಯವೂ ಒಂದು ಜೈನ ಗುಹಾಲಯವೂ ಇವೆ. ಇವೆರಡೂ ಕ್ರಿ. ಶ. ೫೦೦ ರಲ್ಲಿ ನಿರ್ಮಿಸಲ್ಪಟ್ಟುವು. ವೈದಿಕ ಗುಹಾಲಯವು ಸುಮಾರು ಇಪ್ಪತ್ತು ಅಡಿ ಉದ್ದವೂ, ೨೫ ಅಡಿ ಅಗಲವೂ ಇದೆ. ಆರು ಅಡಿ ಎತ್ತರದ ಮೇಲೆ ಕೊರೆಯಲ್ಪಟ್ಟಿದೆ. ಮುಂಭಾಗದಲ್ಲಿ ಒಂದು ಜಗಲಿಯೂ, ಎರಡು ಹಜಾರಗಳೂ, ಒಂದು ಗರ್ಭಗೃಹವೂ ಇವೆ. ಜಗಲಿಯ ಮುಂದುಗಡೆ ನಾಲ್ಕು ಕಂಬಗಳೂ, ಎರಡು ಹಜಾರಗಳಿಗೂ ಮಧ್ಯೆ ಎರಡು ಕಂಬಗಳೂ ಇವೆ. ಗುಹೆಯಲ್ಲಿ ನರ್ತನಮಾಡುವ ಶಿವನ ವಿಗ್ರಹವಿದೆ. ಪಕ್ಕದಲ್ಲಿ ಪಾರ್ವತಿ, ಗಣೇಶ, ಕಾಳಿ, ತುಂಬುರರು, ಭೃಂಗಿ ಮತ್ತು ಗಣಪರಿವಾರ ಇವೆ. ಇದಲ್ಲದೆ ಗುಹೆಯ ಬೇರೆ ಬೇರೆ ಕಡೆ ಅರ್ಧನಾರೀಶ್ವರ, ಉಮಾಮಹೇಶ್ವರ, ಹರಿಹರ, ವರಾಹ, ಮಹಿಷಾಸುರಮರ್ದಿನಿ ವಿಗ್ರಹಗಳೂ ಇವೆ. ಮೇಲ್ಛಾವಣಿಯಲ್ಲಿ ಕೆತ್ತನೆಯ ಕೆಲಸವಿದೆ. ಜೈನ ಗುಹಾಲಯವು ೩೨ ಅಡಿ ಉದ್ದ, ಸುಮಾರು ೮ ಅಡಿ ಅಗಲವೂ ಇದ್ದು ಮುಂದೆ ಒಂದು ಕೈಸಾಲೆಯೂ ಒಳಗಡೆ ಒಂದು ಹಜಾರವೂ ಗರ್ಭಗೃಹವೂ ಇದೆ.

ಗುಹೆಯ ಮುಂಭಾಗದಲ್ಲಿ ನಾಲ್ಕು ದಪ್ಪನಾದ ಕಂಬಗಳಿವೆ. ಛಾವಣಿಯಲ್ಲಿ ಮಕರಗಳೂ, ಹೂಗಳೂ ಕೆತ್ತಲ್ಪಟ್ಟಿವೆ. ಒಳಗೆ ಪಾರ್ಶ್ವನಾಥ ಮತ್ತು ನಿಂತಿರುವ ಜೈನವಿಗ್ರಹವೂ, ಗರ್ಭಗೃಹದ ಬಾಗಿಲ ಅಕ್ಕಪಕ್ಕಗಳಲ್ಲಿ ದ್ವಾರ ಪಾಲಕರೂ ಇವೆ. ಗರ್ಭಗೃಹವು ೮ ಅಡಿಯ ಚೌಕವಾದ ಗೃಹ. ಅದರಲ್ಲಿ ಕುಳಿತಿರುವ ತೀರ್ಥಂಕರ ವಿಗ್ರಹವಿದೆ. ಹಜಾರದಲ್ಲಿ ಸಿಂಹಾಸನದ ಮೇಲೆ ಕುಳಿತು ದರ್ಬಾರು ಮಾಡುತ್ತಿರುವ ಮಹಾವೀರನ ವಿಗ್ರಹವಿದೆ.

ಬಾದಾಮಿಯಲ್ಲಿ ನಾಲ್ಕು ಗುಹಾಲಯಗಳಿವೆ. ಇವೆಲ್ಲವೂ ಕ್ರಿ. ಶ. ಆರನೆಯ ಶತಮಾನದ ಉತ್ತರಾರ್ಧದಲ್ಲಿ ನಿರ್ಮಿತವಾದುವು. ಮೊದಲ ಮೂರು ಗುಹಾಲಯಗಳು ವೈದಿಕ ಮತಕ್ಕೆ ಸಂಬಂಧಪಟ್ಟುವು. ನಾಲ್ಕನೆಯದು ಜೈನಮತಕ್ಕೆ ಸಂಬಂಧಪಟ್ಟುದು.

ಇವುಗಳಿಗೆಲ್ಲ ಮುಂಭಾಗದಲ್ಲಿ ಒಂದು ಜಗಲಿ ಇರುತ್ತದೆ ಮತ್ತು ನೆಲದಿಂದ ಐದು, ಆರು ಅಡಿಗಳ ಎತ್ತರದ ಮೇಲೆ ಕೊರೆಯಲ್ಪಟ್ಟು ಹತ್ತಿ ಹೋಗಲು ಮೆಟ್ಟಲುಗಳಿವೆ. ಜಗಲಿಯಿಂದ ಒಳಕ್ಕೆ ಹೋದರೆ ಒಂದು ಕೈಸಾಲೆಯೂ ಒಂದು ಹಜಾರವೂ, ಅನಂತರ ಗುಹೆಯ ಹಿಂದುಗಡೆ ಗೋಡೆಯಲ್ಲಿ ಒಂದು ಗರ್ಭಗೃಹವೂ ಇವೆ. ಕೈಸಾಲೆಯ ಮುಂಭಾಗದಲ್ಲಿ ಹಜಾರಕ್ಕೂ ಕೈಸಾಲೆಗೂ ಮಧ್ಯೆ ಹಜಾರದ ಒಳಭಾಗದಲ್ಲಿ ಕಂಬಗಳು ಇವೆ. ಈ ಕಂಬಗಳೆಲ್ಲ ಗಡುಸಾಗಿ ಚಿತ್ರಗಳಿಂದ ಕೂಡಿವೆ. ಗುಹೆಗಳು ಹೊರಗಿನಿಂದ ನೋಡುವುದಕ್ಕೆ ಸಾಧಾರಣವಾದ ಗುಹೆಗಳಂತೆ ಕಾಣುತ್ತವೆ. ಒಳಗಡೆ ಮಾತ್ರ ಚಿತ್ರಕೆಲಸದಿಂದಲೂ, ಗೋಡೆಗೆ ತಗಲಿಕೊಂಡಂತೆ ದೇವತಾ ವಿಗ್ರಹಗಳಿಂದಲೂ ಸುಂದರವಾಗಿವೆ. ಕಂಬಗಳಾದರೂ ತರಹ ತರಹವಾಗಿ ಕೆತ್ತಲ್ಪಟ್ಟಿವೆ. ವಿಗ್ರಹಗಳು ಭವ್ಯವಾಗಿಯೂ ಅಲಂಕೃತವಾಗಿಯೂ ಜೀವಕಳೆಯಿಂದ ತುಂಬಿಕೊಂಡು ಎದ್ದು ಬರುತ್ತಿವೆಯೋ ಎಂಬ ಭ್ರಮೆಯನ್ನುಂಟುಮಾಡುವಂತೆಯೂ ಇವೆ. ಇವಗಳಲ್ಲೆಲ್ಲ ಮೂರನೆಯ ಗುಹೆಯೇ ಅತ್ಯಂತ ಸುಂದರವಾದದ್ದು. ಈ ಗುಹೆಗಳ ಪೈಕಿ ಮೊದಲನೆಯದರಲ್ಲಿ ತಾಂಡವೇಶ್ವರ, ಮಹಿಷಾಸುರ ಮರ್ದಿನಿ, ಗಣಪತಿ, ಸ್ಕಾಂದ, ಹರಿಹರ, ಅರ್ಧನಾರೀಶ್ವರ, ದ್ವಾರಪಾಲಕ ವಿಗ್ರಹಗಳೂ, ಎರಡನೆಯದರಲ್ಲಿ ವರಾಹ ಮತ್ತು ಎರಡು ದ್ವಾರಪಾಲಕ ವಿಗ್ರಹಗಳು. ಮೂರನೆಯದರಲ್ಲಿ ಶೇಷಶಾಯಿ,

ವರಾಹ, ನಾರಸಿಂಹ, ತ್ರಿವಿಕ್ರಮ, ವಿಷ್ಣು, ಹರಿಹರ ವಿಗ್ರಹಗಳೂ, ಜಗಲಿಯ ಹೊರಮುಖದಲ್ಲಿ ಗಣಗಳ ಸಾಲುಗಳೂ ಇವೆ. ಈ ಗುಹೆಯ ಕಂಬಗಳಿಗೆ ಅಂಟಿಕೊಂಡು ಮೇಲಿನ ತೊಲೆಗೆ ಊರೆಕೊಟ್ಟುಕೊಂಡು ಯಮಳ ವಿಗ್ರಹ ಗಳು ಕೆತ್ತಲ್ಪಟ್ಟಿವೆ. ಈ ವಿಗ್ರಹಗಳ ಅಂಗಸೌಷ್ಠವವೂ,ಮನೋಹರಭಂಗಿಯೂ ಮನಸ್ಸನ್ನು ಆಕರ್ಷಿಸುತ್ತವೆ. ಮೇಲ್ಚಾವಣಿಗಳಲ್ಲಿ ಕೆಲವು ಕಡೆ ದಿಕ್ಪಾಲ ಕರೂ ಇನ್ನು ಕೆಲವು ಕಡೆ ಬ್ರಹ್ಮ, ವಿಷ್ಣು, ಶಿವ, ನಾಗಕನ್ನಿಕೆಯರೂ ಕೆತ್ತ ಲ್ಪಟ್ಟಿವೆ. ನಾಲ್ಕನೆಯದಾದ ಜೈನ ಗುಹಾಲಯವು ಇಲ್ಲಿರುವ ಉಳಿದ ಗುಹಾಲಯಗಳಂತೆಯೇ ಇದೆ. ಇದು ಸುಮಾರು ಕ್ರಿ. ಶ. ೬೫೦ ರಲ್ಲಿ ನಿರ್ಮಿಸಿದ್ದಿರಬಹುದೆಂದು ಊಹಿಸಲಾಗಿದೆ. ೩೧ ಅಡಿ ಉದ್ದ ೬ ವರೆ ಅಡಿ ಅಗಲವುಳ್ಳ ಕೈ ಸಾಲೆ. ಅದರ ಹಿಂದೆ ೨೫ ಅಡಿ ಉದ್ದ ೬ ಅಡಿ ಅಗಲ ಉಳ್ಳ ಹಜಾರ. ಅದರ ಹಿಂದೆ ನಾಲ್ಕು ಮೆಟ್ಟಲುಗಳ ಮೇಲೆ ಒಂದು ಗರ್ಭಗೃಹ. ಗರ್ಭಗೃಹದಲ್ಲಿ ಮಹಾವೀರನ ವಿಗ್ರಹವಿದೆ. ಕೈಸಾಲೆಯಲ್ಲಿ ಗೋತಮ ಮತ್ತು ಪಾರ್ಶ್ವನಾಥ ವಿಗ್ರಹಗಳೂ, ಒಳಗಡೆ ಕಂಬಗಳ ಮೇಲೂ ಗೋಡೆಗಳ ಮೇಲೂ ತೀರ್ಥಂಕರರ ವಿಗ್ರಹಗಳೂ ಕೆತ್ತಲ್ಪಟ್ಟಿವೆ.

ಹಿಂದಿನ ಹೈದರಾಬಾದು ಸಂಸ್ಥಾನದ ವಾಯವ್ಯದ ಗಡಿಯ ಹತ್ತಿರದ ಬೆಟ್ಟಗಳಲ್ಲಿ ಅಜಂತಾ ಗುಹಾಲಯಗಳು ನಿರ್ಮಿಸಲ್ಪಟ್ಟಿವೆ. ನಿರ್ಜನವಾದ ಮತ್ತು ಪ್ರಶಾಂತವಾದ ವಾತಾವರಣದಲ್ಲಿ ವಾಘೋರಾ ನದಿಯ ದಡದಲ್ಲಿ ಇವುಗಳು ಕೊರೆಯಲ್ಪಟ್ಟಿವೆ. ಇಲ್ಲಿ ಒಟ್ಟು ೨೯ ಗುಹೆಗಳಿವೆ. ಅವುಗಳನ್ನು ಗುರ್ತಿಸುವ ಸಲುವಾಗಿ ಈ ಗವಿಗಳಲ್ಲಿ ನಂಬರುಗಳನ್ನು ಕೊಟ್ಟಿರಲಾಗಿದೆ. ಇವುಗಳೆಲ್ಲ ಬೌದ್ಧಮತಕ್ಕೆ ಸಂಬಂಧಪಟ್ಟುವು-ಕೆಲವು ಹೀನಯಾನ ಪದ್ಧ ತಿಗೆ ಸೇರಿದುವು. ಮಿಕ್ಕವು ಮಹಾಯಾನ ಪದ್ಧತಿಗೆ ಸೇರಿದುವು. ಇವುಗಳು ಬೇರೆ ಬೇರೆ ಕಾಲಗಳಲ್ಲಿ ಕಟ್ಟಲ್ಪಟ್ಟುವೆಂದು ಊಹಿಸಲಾಗಿದೆ. ಇವುಗಳಲ್ಲಿ ನಾಲ್ಕು ಚೈತ್ಯಾಲಯಗಳು, ಮಿಕ್ಕವು ವಿಹಾರಗಳು. ೮.೯.೧೦.೧೨ ಮತ್ತು ೧೩ ನೆಯ ಗುಹಾಲಯಗಳು ಹೀನಯಾನ ಪದ್ಧತಿಗೆ ಸೇರಿದುವು. ಮಿಕ್ಕವು ಗಳು ಮಹಾಯಾನ ಪದ್ಧತಿಯವು. ಇವುಗಳಲ್ಲಿ ೯. ೧೦ ನೆಯವು ಚೈತ್ಯಾ ಲಯಗಳು. ೮. ೧೨. ೧೩. ವಿಹಾರಗಳು. ಇವುಗಳೆಲ್ಲ ಕ್ರಿ. ಪೂ. ಎರಡನೆಯ ಶತಮಾನದಿಂದ ಕ್ರಿ. ಶ. ಎರಡನೆಯ ಶತಮಾನಗಳ ಒಳಗೆ ನಿರ್ಮಿಸಲ್ಪಟ್ಟುವು.

ಮಹಾಯಾನ ಪದ್ಧತಿಗೆ ಸೇರಿದವುಗಳಲ್ಲಿ ೧೯ ಮತ್ತು ೨೬ ನೆಯ ಗುಹಾಲಯಗಳು ಚೈತ್ಯಾಲಯಗಳು. ಮಿಕ್ಕವೆಲ್ಲ ವಿಹಾರಗಳು. ಇವುಗಳೆಲ್ಲ ಕ್ರಿ. ಶ. ೪೫೦ ರಿಂದ ಕ್ರಿ. ಶ. ೬೪೨ರ ಒಳಗೆ ನಿರ್ಮಿಸಲ್ಪಟ್ಟವು. ಈ ಎಲ್ಲ ಗುಹೆಗಳ ಪೈಕಿ ೮. ೯. ೧೦. ೧೨ ಅತ್ಯಂತ ಪ್ರಾಚೀನವಾದುವು. ೨೬. ೨೮. ಅತ್ಯಂತ ಈಚಿನವು, ೧೯ ನೆಯ ಗುಹೆಯು ದೊಡ್ಡದಲ್ಲದಿದ್ದರೂ ಅತ್ಯಂತ ಸುಂದರವಾದದ್ದು. ಇದು ಅದೃಷ್ಟವಶಾತ್ ಈಗಲೂ ಒಳ್ಳೆಯ ಸ್ಥಿತಿಯಲ್ಲಿದ್ದು ಮಹಾಯಾನ ಪದ್ಧತಿಯ ಶಿಲಾಶೈಲಿಗೆ ಒಳ್ಳೆಯ ಉದಾಹರಣೆಯಾಗಿದೆ. ಈ ಚೈತ್ಯಾಲಯದ ಹೊರಮುಖದ ಅಳತೆ ೩೨ ಅಡಿ ಅಗಲ, ೩೮ ಅಡಿ ಎತ್ತರ ಇದ್ದು ಒಳ ಅಳತೆ ೪೬ ಅಡಿಯಿದ್ದು, ೨೪ ಅಡಿ ಅಗಲ ಮತ್ತು ೨೪ ಅಡಿ ಎತ್ತರ ಇರುತ್ತದೆ. ಹೊರಗಡೆ ಅನೇಕ ಮುಖಗಳಾಗಿ ಕಡೆಯಲ್ಪಟ್ಟ ಎರಡು ಕಂಬಗಳಿವೆ. ಒಳಗೆ ೧೧ ಅಡಿ ಎತ್ತರದ ೧೫ ಕಂಬಗಳಿವೆ. ಒಳಗಿನ ಹಜಾರವು ಮೂರು ಭಾಗವಾಗಿ ವಿಂಗಡಿಸಲ್ಪಟ್ಟಿದೆ. ಕಂಬಗಳು ೨'-೭" ವರೆಗೂ ಚೌಕವಾಗಿವೆ. ಅನಂತರ ೧ ಅಡಿ ಎತ್ತರ ಅಷ್ಟಮುಖವಾಗಿವೆ. ಅದರಿಂದ ಮೇಲಕ್ಕೆ ದುಂಡಾಗಿದೆ. ಕಂಬಗಳು ಚಿತ್ರಪಟ್ಟಿಕೆಗಳಿಂದ ಅಲಂಕರಿಸಲ್ಪಟ್ಟಿವೆ. ಬೋದಿಗೆಗಳ ಮೇಲೆ ಮಧ್ಯೆ:ಬುದ್ಧನ ವಿಗ್ರಹವೂ ಅಕ್ಕಪಕ್ಕಗಳಲ್ಲಿ ನರ್ತನ ಮಾಡುವ ವಿಗ್ರಹಗಳೂ ಕೆತ್ತಿವೆ. ಹೊರಮುಖದಲ್ಲಿ ಮೇಲುಗಡೆಗೆ ದೊಡ್ಡ ಕುದುರೆಯ ಲಾಳದ ಆಕಾರದ ಕಿಟಕಿ ಇದೆ. ಇದರಿಂದಲೇ ಒಳಕ್ಕೆ ಬೆಳಕು ಬರುವುದು. ಒಳಗಡೆ ಇರತಕ್ಕ ಸ್ತೂಪವು ೨೨ ಅಡಿ ಎತ್ತರವಿದೆ. ಅದರ ತುದಿಯಲ್ಲಿ ಒಂದು ಹರ್ಮಿಕೆಯೂ ಮೂರು ಛತ್ರಿಗಳೂ ಇವೆ. ಈ ಚೈತ್ಯಾಲಯದ ಹೊರಕ್ಕೆ ಎಡಗಡೆ ಗೂಡಿನಲ್ಲಿ ಏಳು ಹೆಡೆಯ ಹಾವಿನ ಕೆಳಗೆ ಕುಳಿತಿರುವ ನಾಗರಾಜನೂ ಆತನ ಹೆಂಡತಿಯೂ ಕೆತ್ತಲ್ಪಟ್ಟಿವೆ. ೧೬ ನೆಯ ಗುಹಾಲಯವೂ ಚೈತ್ಯಾಲಯವೇ. ೧೯ ನೆಯ ದಕ್ಕಿಂತ ದೊಡ್ಡದು ಮತ್ತು ಹೆಚ್ಚು ಶಿಲ್ಪಕಲೆಯಿಂದ ಕೂಡಿದ್ದಾಗಿದೆ. ಆದರೆ ಇದರೊಳಗಿನ ಕೆಲಸ ಉಳಿದವುಗಳಲ್ಲಿನಷ್ಟು ತೃಪ್ತಿಕರವಾಗಿಲ್ಲವೆಂದು ಹೇಳಬಹುದು. ಇದರಲ್ಲಿ ೨೩ ಅಡಿ ಉದ್ದದ ಮಲಗಿಕೊಂಡಿರುವ ಬುದ್ಧನ ವಿಗ್ರಹವೂ, ಬುದ್ಧನು ಉಪದೇಶ ಮಾಡುತ್ತಿರುವ ವಿಗ್ರಹವೂ ಮತ್ತು ಪರಿವಾರದೊಡನೆ ಕುಳಿತಿರುವ ಬುದ್ಧನ ವಿಗ್ರಹವೂ ಇವೆ.

ವಿಹಾರಗಳಲ್ಲಿ ೬ ನೆಯದು ಅತ್ಯಂತ ದೊಡ್ಡದು. ೧೨ ನೆಯದು ಅತ್ಯಂತ ಚಿಕ್ಕದು. ೬ ನೆಯದು ಎರಡು ಅಂತಸ್ತು ಉಳ್ಳದ್ದು. ೧, ೪ ಮತ್ತು ೧೬ ನೆಯ ವಿಹಾರಗಳು ಗಮನಾರ್ಹವಾದುವು. ಸಾಧಾರಣ ವಾಗಿ ಇವುಗಳ ತಳವಿನ್ಯಾಸವೆಲ್ಲ ಒಂದೇ ತರಹವಾಗಿರುತ್ತದೆ. ಮುಂದುಗಡೆ ಒಂದು ಕೈಸಾಲೆ, ಒಂದು ಅಷ್ಟೇ ಅಗಲದ ಚತುರಸ್ರವಾದ ಹಜಾರ. ಹಜಾರದ ಸುತ್ತಲೂ ಸಣ್ಣ ಸಣ್ಣ ಗೃಹಗಳು, ಹಿಂದುಗಡೆ ಒಂದು ಗರ್ಭಗೃಹ. ವಿಹಾರಗಳ ಗೋಡೆಗಳಲ್ಲಿ ಬುದ್ಧನ ವಿಗ್ರಹಗಳು ಕೆತ್ತಲ್ಪಟ್ಟಿರುತ್ತವೆ, ೨ ನೆಯ ದರಲ್ಲಿ ನಾಗರಾಜ ಮತ್ತು ಪತ್ನಿಯರು, ಬುದ್ಧನ ವಿಗ್ರಹವೂ, ದ್ವಾರಪಾಲ ಕರೂ, ೧ ನೆಯದರಲ್ಲಿ ಬೇಟೆಯಾಡುವ ಪರಿವಾರವೂ ಇನ್ನೂ ಇತರ ವಿಗ್ರಹ ಗಳೂ ಇವೆ. ಮತ್ತು ೬ ನೆಯ ಗುಹಾಲಯದಲ್ಲಿ ಇತರ ಎಲ್ಲ ಗುಹಾಲ ಯಗಳಲ್ಲಿರುವುದಕ್ಕಿಂತ ಹೆಚ್ಚು ಬುದ್ಧನ ಮತ್ತು ಇತರ ವಿಗ್ರಹಗಳಿವೆ. ಒಟ್ಟಿನಲ್ಲಿ ಅಜಂತಾದಲ್ಲಿರುವ ಚೈತ್ಯಾಲಯಗಳೂ ವಿಹಾರಗಳೂ ಒಂದಲ್ಲ ಒಂದು ರೀತಿಯಲ್ಲಿ ಗಮನಾರ್ಹವಾದುವುಗಳಾಗಿವೆ.

ಅಜಂತಾ ಗುಹಾಲಯಗಳು ಶಿಲಾಶೈಲಿಯ ಒಂದು ಮುಖ್ಯವಾದ ಹಂತವನ್ನು ಪ್ರದರ್ಶಿಸುವುವಾದರೂ ಅವಕ್ಕೆ ಪ್ರಾಶಸ್ತ್ಯ ಬಂದಿರುವುದು ಅವುಗಳ ಗೋಡೆಗಳ ಮೇಲೆ ಕಾಣಬರುವ ಬಣ್ಣ ಬಣ್ಣದ ಚಿತ್ರಗಳಿಂದ. ಈ ಚಿತ್ರಗಳು ಬುದ್ಧನ ವಿಷಯವಾಗಿ ಹರಡಿರುವ ಜಾತಕ-ಕಥೆಗಳನ್ನು ಪ್ರದರ್ಶಿ ಸಿರುವವಲ್ಲದೆ ಆ ಕಾಲದ ನಡೆನುಡಿಗಳು, ಉಡಿಗೆತೊಡಿಗೆಗಳು, ಆಭರಣಗಳು, ಅಲಂಕಾರ ಪದ್ಧತಿಗಳು ಇವುಗಳನ್ನು ತೋರಿಸಿಕೊಡುತ್ತವೆ. ಒಟ್ಟಿನಲ್ಲಿ ಕ್ರಿ. ಶ. ಮೂರು, ನಾಲ್ಕು, ಐದು, ಆರನೆಯ ಮತ್ತು ಏಳನೆಯ ಶತಮಾನ ಗಳ ಜನಜೀವನವನ್ನೆ ಪ್ರತಿಬಿಂಬಿಸುತ್ತವೆ. ಇವುಗಳು ಚಿತ್ರಿಸಿರುವ ರೀತಿ, ಅಂಗಾಂಗಳ ಭಂಗಿ, ಹಾವಭಾವಗಳು, ರೂಪುಲಾವಣ್ಯಗಳು ಮತ್ತು ಈ ಚಿತ್ರಗಳನ್ನು ಬರೆಯಲು ತೊಡಗಿರುವ ಮಾರ್ಗ, ಬಣ್ಣಗಳ ಹೊಂದಿಕೆ, ಇವೆಲ್ಲವೂ ಪ್ರಪಂಚದ ಚಿತ್ರಕಾರರನ್ನು ಮುಗ್ಧಗೊಳಿಸಿವೆ. ಇಲ್ಲಿ ಕಂಡು ಬರುವ ಚಿತ್ರಕಲೆಯು ಏಷ್ಯಾಖಂಡದ ಇತರ ದೇಶಗಳ ಚಿತ್ರಕಲೆಗೆ ಆಧಾರ ವಾಗಿರಬಹುದೆಂದು ಹೇಳಿದರೆ ತಪ್ಪಾಗಲಾರದು. ಮೊದಲು ಎಲ್ಲ ಗುಹಾಲಯ ಗಳಲ್ಲಿಯೂ ಈ ತೆರನಾದ ಚಿತ್ರಗಳು ಇದ್ದಿರಬಹುದು. ಈಗ ಕೇವಲ ಆರು

ಗುಹಾಲಯುಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿವೆ. ಈ ಚಿತ್ರಗಳು ಬೇರೆ ಬೇರೆ ಕಾಲಗಳಲ್ಲಿ ಬರೆದಿರಬಹುದೆಂದು ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ.

ಒಂದನೇ ಗವಿಯಲ್ಲಿರುವ ಪದ್ಮಪಾಣಿಯ ಚಿತ್ರವೂ ಹದಿನೇಳನೆಯ ಗವಿಯಲ್ಲಿರುವ ಅಲಂಕಾರ ಮಾಡಿಕೊಳ್ಳುತ್ತಿರುವ ರಾಣಿಯ ಚಿತ್ರವೂ ಹೃದಯಂಗಮವಾಗಿವೆ. ಮತ್ತು ಅದೇ ಗವಿಯಲ್ಲಿರುವ ಬುದ್ಧನ ಮತ್ತು ಮಗುವನ್ನು ಮುದಿಟ್ಟು ಕೊಂಡು ನಿಂತಿರುವ ಯಶೋಧರೆಯ ಚಿತ್ರವಂತೂ ಭಾವಪೂರ್ಣವಾಗಿದೆ. ಈ ಗುಹಾಲಯವು ಚಿತ್ರಗಳಿಂದ ತುಂಬಿದೆ. ಅವೆಲ್ಲವೂ ಬಹು ಅಂದವಾಗಿ ಚಿತ್ರಿಸಲ್ಪಟ್ಟಿವೆ. ಅಜಂತಾದ ಕಲೆಯಲ್ಲಿ ಜೀವಕಳೆ ತುಂಬಿ ತುಳುಕಾಡುತ್ತಿದೆ. ಇಲ್ಲಿ ಚಿತ್ರಿಸಿರುವ ಗಂಡು ಹೆಣ್ಣುಗಳ ಮುಖಗಳು ಭಾವಪೂರ್ಣವಾಗಿವೆ. ಅಂಗಾಂಗಳು ಲಾವಣ್ಯದಿಂದ ಕೂಡಿ ಚೈತನ್ಯ ಸ್ವರೂಪಿಗಳಾಗಿವೆ. ಇಲ್ಲಿ ಚಿತ್ರಿಸಿರುವ ಪ್ರತಿಯೊಂದು ಎಲೆ, ಬಳ್ಳಿ, ಹೂವು, ಮೃಗ ಪಕ್ಷಿಗಳು ಎಲ್ಲವೂ ಪ್ರಕೃತಿಯನ್ನೇ ನಾಚಿಸುವ ಪ್ರತೀಕಗಳಾಗಿವೆ. ಈ ಚಿತ್ರಗಳಲ್ಲಿ ಒಂದೊಂದೂ ಕಣ್ಣಾರೆ ನೋಡಿ ತಣಿಯಬೇಕೆ ಹೊರ್ತು ವಿವರಿಸಲು ಸಾಧ್ಯವಿಲ್ಲ.

ಚಿತ್ರ ಕೆಲಸದಲ್ಲಿ ಅಜಂತಾ ಹೇಗೆ ಪ್ರಸಿದ್ಧಿಯೊ ಹಾಗೆ ಎಲ್ಲೋರಾ ಶಿಲ್ಪಕಲೆಗೆ ಪ್ರಸಿದ್ಧಿ. ಎಲ್ಲೋರಾದಲ್ಲಿ ಒಟ್ಟು ೩೩ ಗುಹಾಲಯುಗಳಿವೆ. ಅವುಗಳಲ್ಲಿ ೧೧ ಗುಹಾಲಯುಗಳು ಬೌದ್ಧರದು. ೧೬ ಗುಹಾಲಯುಗಳು ಬ್ರಾಹ್ಮಣರದು, ೬ ಗುಹಾಲಯುಗಳು ಜೈನರದು. ಬೌದ್ಧರು ಮೊದಲು ಈ ಸ್ಥಳವನ್ನು ಕಂಡುಕೊಂಡಿದ್ದರಿಂದ ಬೆಟ್ಟದ ದಕ್ಷಿಣ ದಿಕ್ಕಿನ ಕೊನೆಯಲ್ಲಿ ಎಲ್ಲ ವಿಷಯದಲ್ಲಿ ಅನುಕೂಲವಾದ ಜಾಗದಲ್ಲಿ ಗುಹೆಗಳನ್ನು ಕೊರೆದರು. ಬುದ್ಧ ಗುಹಾಲಯುಗಳಲ್ಲಿ ಒಂದು ಚೈತ್ಯಾಲಯ, ಮಿಕ್ಕವೆಲ್ಲ ವಿಹಾರಗಳು.

ಇವುಗಳಲ್ಲೆಲ್ಲ ಐದನೆಯ ಗುಹಾಲಯುವೇ ಅತ್ಯಂತ ದೊಡ್ಡದಾದದ್ದು. ಎಂಟನೆಯ ಗುಹೆಯೇ ಅತ್ಯಂತ ಚಿಕ್ಕದಾದದ್ದು. ಒಂಭತ್ತನೆಯ ಗುಹೆಯು ಎರಡು ಅಂತಸ್ತಿನದು. ೧೦, ೧೧ ಮೂರು ಅಂತಸ್ತಿನವು. ಇವೆಲ್ಲ ನಾಲ್ಕು, ಐದು, ಆರನೆಯ ಶತಮಾನಗಳಲ್ಲಿ ನಿರ್ಮಿತವಾದುವು. ಈ ಗುಹೆಗಳಲ್ಲಿ ಸಾಧಾರಣವಾಗಿ ಒಂದು ಕೈಸಾಲೆ, ಹಜಾರ, ಗರ್ಭಗೃಹ ಇಷ್ಟು ಇರುತ್ತವೆ. ಈ ಎಲ್ಲ ಗುಹೆಗಳಲ್ಲಿಯೂ ಬುದ್ಧನ ವಿಗ್ರಹಗಳಿವೆ. ಕೆಲವು ಗುಹೆಗಳಲ್ಲಿ ಸರಸ್ವತಿ,

ಮಂಜುಶ್ರೀ ಮತ್ತು ದ್ವಾರಪಾಲಕರೂ ಇವೆ. ವಿಶ್ವಕರ್ಮ ಗವಿ ಎಂದು ಕರೆಯಿಸಿಕೊಳ್ಳುವ ಒಂಬತ್ತನೆ ಚೈತ್ಯಾಲಯವು ಬಹಳ ಉತ್ತಮವಾದದ್ದು ಮತ್ತು ಸುಂದರವಾದದ್ದು. ಇದರಲ್ಲಿರುವ ಕಂಬಗಳು ಆಕಾರದಲ್ಲಿಯೂ ಗಾತ್ರದಲ್ಲಿಯೂ ಬಹಳ ಹೊಂದಿಕೆಯಾಗಿವೆ. ಈ ಗುಹೆಯಲ್ಲಿ ಒಂದು ಉಪ್ಪರಿಗೆ ಇದೆ. ಅದರ ಹೊರಮುಖದಲ್ಲಿ ವರ್ತುಲಾಕಾರವಾದ ಕಿಟಕಿ ಇದೆ. ಈ ತರಹದ ಕಿಟಕಿ ಅಪರೂಪ. ಇತರ ಚೈತ್ಯಾಲಯಗಳಂತೆ ಇದರ ಹಿಂಭಾಗ ಅರ್ಧವರ್ತುಲಾಕಾರದ ಆಕಾರವನ್ನು ಹೊಂದಿದೆ. ಒಳಗಡೆ ಕಂಬ ಗಳಿವೆ. ಮುಂದಿನ ಕೈಸಾಲೆಯಲ್ಲಿ ನಾಲ್ಕು ಕಂಬಗಳಿವೆ. ಒಳಗಿನ ಸ್ತೂಪ ದೊಡ್ಡದಾಗಿ ಅಲಂಕೃತವಾಗಿದೆ. ಈ ಗುಹೆಯ ಹೊರಮುಖವು ಚಿತ್ರ ಗಳಿಂದ ಕೂಡಿದೆ.

ದೋತಲ್ ಮತ್ತು ತೀನತಲ್ ಇವೆರಡು ಬಹಳ ವಿಸ್ತಾರವಾದವುಗಳು. ಮೂರನೆಯ ಗುಹೆಯಲ್ಲಿ ಗಂಧರ್ವರಿಂದಲೂ ಚಾಮರಧಾರಿಗಳಿಂದಲೂ ಕೂಡಿರುವ ಬುದ್ಧನು ಪದ್ಮಾಸನದಲ್ಲಿ ಕಳಿತಿರುವನು. ನಾಲ್ಕನೆಯದರಲ್ಲಿ ಬುದ್ಧನು ಉಪದೇಶ ಮಾಡುತ್ತಿರುವನು. ಐದನೆಯ ಗವಿ ಸುಮಾರು ನೂರಿ ಪ್ಪತ್ತು ಅಡಿ ಉದ್ದವೂ ಅರವತ್ತು ಅಡಿ ಅಗಲವೂ ಇದೆ. ಇದರಲ್ಲಿ ಸಭೆ ಗಳನ್ನು ನಡೆಸುತ್ತಿದ್ದರೆಂದು ತೋರುತ್ತದೆ. ಇದರ ಹಿಂಭಾಗದ ಗೃಹದಲ್ಲಿ ಬುದ್ಧನ ದೊಡ್ಡ ಪ್ರತಿಮೆ ಇದೆ. ಪ್ರತಿಮೆಯ ಪಕ್ಕಗಳಲ್ಲಿ ಪದ್ಮಪಾಣಿ, ಸರಸ್ವತಿ ಮಂಜುಶ್ರೀ ವಿಗ್ರಹಗಳಿವೆ. ದೋತಲ್ ಮತ್ತು ತೀನತಲ್ ಗವಿಗಳಲ್ಲಿಯೂ ಇದೇ ರೀತಿ ವಿಗ್ರಹಗಳು ಇವೆ.

ಇಲ್ಲಿಂದ ಮುಂದಕ್ಕೆ ಬ್ರಾಹ್ಮಣ ಮತಕ್ಕೆ ಸೇರಿದ ಹದಿನಾರು ಗುಹಾಲಯ ಗಳು ಸಿಕ್ಕುತ್ತವೆ. ಇವೆಲ್ಲವೂ ಕ್ರಿ. ಶ. ೬೫೦ ರಿಂದ ಈಚೆಗೆ ನಿರ್ಮಿಸಲ್ಪಟ್ಟವು. ಇವುಗಳಲ್ಲಿ ದಶಾವತಾರ, ರಾವಣಕಾಖಾಯ್, ರಾಮೇಶ್ವರ, ದುಮಾರ್‌ಲೇಣಾ ಮತ್ತು ಕೈಲಾಸ ಈ ಹೆಸರುಗಳನ್ನುಳ್ಳ ಗವಿಗಳು ಮುಖ್ಯವಾದುವು. ಬ್ರಾಹ್ಮಣ ಗವಿಗಳನ್ನು ಮೂರು ಪಂಗಡವಾಗಿ ವಿಂಗಡಿಸಬಹುದು. ಒಂದನೆಯದು ದಶಾ ವತಾರ ಗವಿ. ಇದು ಎರಡು ಅಂತಸ್ತಿನದು. ಇದು ಬೌದ್ಧ ವಿಹಾರದಂತೆಯೇ ಇದೆ. ಈ ಗವಿಯ ಮುಖಮಂಟಪದಲ್ಲಿ ಜಾಲಂದ್ರದ ಕಿಟಕಿ ಇದೆ. ರಂಗ ಮಂಟಪವು ದೊಡ್ಡದಾಗಿದೆ. ಇದರಲ್ಲಿ ದ್ವಾರಪಾಲಕರು, ಸೂರ್ಯ, ಗಣಪತಿ,

ಪಾರ್ವತಿ ಮುಂತದ ವಿಗ್ರಹಗಳು ಕೆತ್ತಲ್ಪಟ್ಟವೆ. ಗಜಾಸುರನನ್ನು ಸಂಹರಿಸುವ ದೊಡ್ಡ ಮಹಾದೇವಮೂರ್ತಿಯೂ, ಯಮನಿಂದ ಮಾರ್ಕಂಡೇಯನನ್ನು ಸಂರಕ್ಷಿಸುವ ಶಿವಮೂರ್ತಿಯೂ, ದೊಡ್ಡ ಗಣಪತಿಯೂ ಇವೆ. ತಾರಕಾಸುರನ ವಧೆ, ಗೋವರ್ಧನಧಾರಿ, ಶೇಷಶಾಯಿ, ಗರುಡವಾಹನ, ವರಾಹ, ವಾಮನ, ನರಸಿಂಹ, ಈ ವಿಗ್ರಹಗಳೂ ಕೆತ್ತಲ್ಪಟ್ಟವೆ. ಎರಡನೆಯದು, ರಾವಣಕಾಖಾಯ್ ಮತ್ತು ರಾಮೇಶ್ವರ ಗವಿಗಳು. ಇವುಗಳಲ್ಲಿ ಗರ್ಭಗುಡಿಯನ್ನೇ ಬೇರ್ಪಡಿಸಿ ಸುತ್ತಲೂ ಪ್ರದಕ್ಷಿಣೆಗೆ ದಾರಿಮಾಡಿರಲಾಗಿದೆ. ರಾವಣಕಾ ಖಾಯ್ ಗುಹಾಲಯದಲ್ಲಿ ಮಹಿಷಾಸುರಮರ್ದಿನಿ, ಶಿವಪಾರ್ವತಿ, ತಾಂಡವೇಶ್ವರ, ಕೈಲಾಸವನ್ನು ಅಲುಗಿಸುವ ಪ್ರಯತ್ನದಲ್ಲಿ ರಾವಣ, ಭೈರವ, ಸಪ್ತಮಾತೃಗಳು, ಭವಾನಿ, ಲಕ್ಷ್ಮಿ, ವರಾಹ, ವಿಷ್ಣು, ದ್ವಾರಪಾಲಕರು ಈ ವಿಗ್ರಹಗಳು ಕೆತ್ತಲ್ಪಟ್ಟವೆ. ರಾಮೇಶ್ವರ ಗವಿಯು ಹಿಂದಿನದಕ್ಕಿಂತ ಹೆಚ್ಚು ಚಿತ್ರಿತವಾಗಿದೆ. ಇದರಲ್ಲಿರತಕ್ಕ ಕಂಬಗಳು ಸುಂದರವಾಗಿವೆ. ಬೋದಿಗೆಗಳು ಚಿತ್ರಗಳಿಂದ ಕೂಡಿವೆ. ಗವಿಯ ಮುಂಭಾಗದಲ್ಲಿ ಎತ್ತರವಾದ ಕಟ್ಟೆಯಮೇಲೆ ನಂದಿವಿಗ್ರಹವಿದೆ. ಈ ಗವಿಯಲ್ಲಿ, ಕಾಳಿ, ಗಣೇಶ, ಶಿವ, ಬ್ರಹ್ಮ, ಗಿರಿಜಾಕಲ್ಯಾಣ, ಉಮಾಮಹೇಶ್ವರಿ, ಗಣಗಳು, ಮಹಿಷಾಸುರಮರ್ದಿನಿ, ಕೈಲಾಸ ಪರ್ವತವನ್ನು ಎತ್ತಿರುವ ರಾವಣ, ದ್ವಾರಪಾಲಕರು, ಈ ವಿಗ್ರಹಗಳು ಕೆತ್ತಲ್ಪಟ್ಟವೆ. ಡುಮಾರ್‌ಲೀನಾ ಎಂಬ ಗವಿಯು ಅತ್ಯಂತ ದೊಡ್ಡದಾದದ್ದು. ೧೪೮ ಅಡಿ ಉದ್ದವೂ ೧೪೮ ಅಡಿ ಅಗಲವೂ ಇದೆ. ಮತ್ತು ಮುಖದಿಂದ ತುದಿಯವರೆಗೂ ೨೦೦ ಅಡಿಯಷ್ಟು ಕೊರೆಯಲ್ಪಟ್ಟದೆ. ಇದರಲ್ಲಿ ಕೈಲಾಸವನ್ನು ಎತ್ತಿರುವ ರಾವಣ, ಭೈರವ, ಶಿವಪಾರ್ವತಿ, ಗಿರಿಜಾಕಲ್ಯಾಣ, ಸರಸ್ವತಿ, ಶಿವಯೋಗಿ, ತಾಂಡವೇಶ್ವರ ಈ ವಿಗ್ರಹಗಳು ಕೆತ್ತಲ್ಪಟ್ಟವೆ.

ಎಲ್ಲೋರಾದಲ್ಲಿರುವ ಗುಹಾಲಯಗಳಲ್ಲೆಲ್ಲ ಕೈಲಾಸವೇ ಅತ್ಯಂತ ಸುಂದರವಾದದ್ದು. ಇದು ಇತರ ಗುಹಾಲಯಗಳ ಹಾಗೆ ಇರದೆ, ಒಂದು ಸ್ವತಂತ್ರ ದೇವಾಲಯವಾಗಿ ನಿಂತಿದೆ.

ಇಂತಹ ಶಿಲ್ಪ ಕೆಲಸ ಜಗತ್ತಿನಲ್ಲಿ ಇನ್ನೆಲ್ಲಿಯೂ ಕಂಡು ಬರುವುದಿಲ್ಲ. ಇದನ್ನು ರಾಷ್ಟ್ರ ಕೂಟದ ಅರಸನಾದ ಒಂದನೆಯ ಕೃಷ್ಣನು ಸುಮಾರು

೭೫೦ ರಲ್ಲಿ ಕೊರೆಯಿಸಿದನು. ಇದು ಪಟ್ಟದಕಲ್ಲಿನಲ್ಲಿರುವ ವಿರೂಪಾಕ್ಷ ದೇವಾಲಯದ ರೂಪವನ್ನೇ ಹೊಂದಿದೆ. ತಲವಿನ್ಯಾಸದಲ್ಲಿಯೂ, ಆಕಾರ ದಲ್ಲಿಯೂ, ಚಿತ್ರಕೆಲಸದಲ್ಲಿಯೂ ಆ ದೇವಾಲಯವನ್ನೇ ಹೋಲುತ್ತದೆ. ಇದನ್ನು ಕಂಡು ಇವೆರಡನ್ನೂ ಒಬ್ಬನೇ ಸ್ಥಪತಿಯು ಕಟ್ಟಿರಬೇಕೆಂದು ವಿದ್ವಾಂಸರು ಊಹಿಸುತ್ತಾರೆ. ಒಂದು ಗುಡ್ಡದ ಬಂಡೆಯಲ್ಲಿ ಸುತ್ತಲೂ ೩೦೦ ಅಡಿ ಉದ್ದವೂ, ೧೭೫ ಅಡಿ ಅಗಲವೂ ೯೬ ಅಡಿ ಆಳವೂ ಇರುವ ದೊಡ್ಡ ಹಳ್ಳವನ್ನು ತೋಡಿ ಹಾಗೆ ಬೇರ್ಪಡಿಸಿದ ಬಂಡೆಯಲ್ಲಿ ಎರಡು ಅಂತಸ್ತಿನ ದೇವಾಲಯವನ್ನು ನಿರ್ಮಿಸಿರುವ ಸಾಹಸವೂ ಚಮತ್ಕಾರವೂ ಆಶ್ಚರ್ಯವನ್ನುಂಟುಮಾಡುವುದು. ದೇವಸ್ಥಾನದ ತಲವಿನ್ಯಾಸದ ಆಕಾರಕ್ಕೆ ಎತ್ತರವಾದ ಜಗಲಿಯನ್ನು ಮೊದಲು ನಿರ್ಮಿಸಿಕೊಂಡು ಅದರ ಮೇಲೆ ಆನೆಗಳ ಸಾಲನ್ನು ಕೊರೆದು ಅದರ ಮೇಲೆ ದೇವಾಲಯದ ಗೋಡೆ, ಬಾಗಿಲುಗಳು, ಗೂಡುಗಳು, ಲೋವೆಕಲ್ಲು, ಕಿರುಗೋಪುರಗಳು ದೊಡ್ಡ ಗೋಪುರ, ವಿಗ್ರಹಗಳು, ಚಿತ್ರಪಟ್ಟಿಕೆಗಳು, ಎಲ್ಲವನ್ನೂ ಚಾಚೂ ತಪ್ಪದಂತೆ ಕೊರೆದಿರುವ ಚಾತುರ್ಯವನ್ನು ಊಹೆಮಾಡಲು ಕೂಡ ಶಕ್ಯವಿಲ್ಲ. ಇದನ್ನು ಈ ರೂಪಕ್ಕೆ ತಂದುಕೊಟ್ಟಿರುವ ಶಿಲ್ಪಿಶ್ರೇಷ್ಠರು ಜಗದ್ವಿಖ್ಯಾತರಾಗಿರಲು ಆಶ್ಚರ್ಯವೇನೂ ಇಲ್ಲ. ಈ ದೇವಾಲಯದ ತಲವಿನ್ಯಾಸವು ಅತಿ ವಿಸ್ತಾರ ವಾದದ್ದು. ಒಂದು ಗರ್ಭಗೃಹ, ಸುಕನಾಸಿ, ಅದರ ಸುತ್ತಲೂ ಪ್ರದಕ್ಷಿಣೆ ಮಾಡಲು ಮಾರ್ಗ, ಪ್ರದಕ್ಷಿಣ ಪಥದಲ್ಲಿಯೇ ಸಣ್ಣ ಸಣ್ಣ ಗೃಹಗಳು, ಗರ್ಭ ಗೃಹದ ಮುಂಭಾಗದಲ್ಲಿ ಹದಿನಾರು ಕಂಬಗಳುಳ್ಳ ಒಂದು ದೊಡ್ಡ ನವರಂಗ, ನವರಂಗದ ಮುಂದೆ ಒಂದು ಮುಖಮಂಟಪ, ಅದರ ಮುಂಭಾಗದಲ್ಲಿ ಸ್ವಲ್ಪ ಸ್ಥಳವನ್ನು ಬಿಟ್ಟು ಒಂದು ನಂದಿಮಂಟಪ, ಅದರ ಮುಂದೆ ಇನ್ನು ಕೊಂಚ ಅಡಿಗಳನ್ನು ಬಿಟ್ಟು ಎರಡು ಗೃಹಗಳುಳ್ಳ ಒಂದು ಮಂಟಪ, ನೆಲದ ಮಟ್ಟದಲ್ಲಿ ದೇವಸ್ಥಾನದ ಸುತ್ತಲೂ ಕಂಬಗಳಿಂದ ಕೂಡಿದ ಕೈಸಾಲೆ ಇವೆ. ಈ ಕೈಸಾಲೆಯ ಮೇಲ್ಭಾಗದಲ್ಲಿ ದೇವಾಲಯದ ಬಲಭಾಗಕ್ಕೆ ಮತ್ತೊಂದು ದೇವಾಲಯವಿದೆ. ಇದನ್ನು ಲಲಿತೇಶ್ವರ ದೇವಾಲಯವೆಂದು ಕರೆಯುತ್ತಾರೆ. ಈ ದೇವಾಲಯವೂ ಕೂಡ ದೊಡ್ಡದಾಗಿದ್ದು ಗರ್ಭಗೃಹ, ಪ್ರದಕ್ಷಿಣಪಥ, ಮತ್ತು ಇಪ್ಪತ್ತು ಕಂಬಗಳಿಂದ ಕೂಡಿದ ನವರಂಗಗಳನ್ನು ಹೊಂದಿದೆ. ಕೆಳಗಿನ

ಕೈಸಾಲೆಯಿಂದ ಈ ದೇವಾಲಯಕ್ಕೆ ಹತ್ತಿಹೋಗುವುದಕ್ಕೆ ಮೆಟ್ಟಿಲುಗಳಿವೆ. ದೇವಾಲಯದ ಎಡಭಾಗದಲ್ಲಿ ಇದೇ ಅಂತಸ್ತಿನಲ್ಲಿ ಒಂದು ದೊಡ್ಡ ಮತ್ತು ಒಂದು ಸಣ್ಣ ಮಂಟಪವೂ ಇದೆ. ದೇವಸ್ಥಾನದ ಆವರಣದಲ್ಲಿ ನಂದಿಮಂಟಪದ ಎರಡು ಪಕ್ಕದಲ್ಲಿಯೂ ನೆಲದ ಮೇಲೆ ೫೦ ಅಡಿ ಎತ್ತರದ ಕಂಬಗಳು ನಿಂತಿವೆ. ಈ ಕಂಬಗಳು ಚತುರಸ್ರಾಕಾರದಲ್ಲಿದ್ದು ಚಿತ್ರಗಳಿಂದ ಅಲಂಕರಿಸಲ್ಪಟ್ಟಿವೆ. ಇವುಗಳ ತುದಿಯಲ್ಲಿ ತ್ರಿಶೂಲವು ಕೆತ್ತಲ್ಪಟ್ಟಿದೆ. ಅಲ್ಲಿಂದ ಕೆಲವು ಅಡಿಗಳ ಕೆಳಗೆ ಎರಡು ಆನೆಗಳು ನಿಂತಿವೆ. ಈ ದೇವಾಲಯದ ಮೇಲ್ಛಾವಣಿಯಲ್ಲಿ ಅಲ್ಲಲ್ಲೆ ಬಣ್ಣದ ಚಿತ್ರಗಳು ಕಂಡುಬರುತ್ತವೆ. ದೇವಾಲಯದ ಗೋಡೆಗಳ ಮೇಲೆ ಒಳಗೂ ಹೊರಗೂ ನೂರಾರು ದೇವತಾ ವಿಗ್ರಹಗಳು ಕೆತ್ತಲ್ಪಟ್ಟಿವೆ. ಅವೆಲ್ಲವೂ ಭಿನ್ನವಾಗಿವೆ. ಉಳಿದಿರುವ ಹರುಕು ಮುರುಕುಗಳೇ ಸಾಕು ನೋಡುವವರನ್ನು ಮುಗ್ಧಗೊಳಿಸುವುದಕ್ಕೆ, ಶಿಲ್ಪಿಗಳ ಚಾತುರ್ಯವನ್ನೂ ಪ್ರಾವೀಣ್ಯವನ್ನೂ ಸಾರುವುದಕ್ಕೆ. ಕೈಲಾಸ ದೇವಾಲಯವು ಭಾರತದಲ್ಲಿ ನಿರ್ಮಿತವಾದ ಅತ್ಯಂತ ಘನವಾದ ಕಲಾಕೃತಿ ಮಾತ್ರವಲ್ಲ. ವಾಸ್ತುಶಿಲ್ಪದ ಶಿಲಾ ಶೈಲಿಯ ಮಾದರಿಯಾಗಿಯೂ ಅದು ಎಣೆಯಿಲ್ಲದ್ದು. ಮಾನವರ ಬೇರೆ ಬೇರೆ ಮನಸ್ಸುಗಳು, ಹೃದಯುಗಳು, ಕೈಗಳು ಎಲ್ಲವೂ ಏಕೀಭವಿಸಿ ಪರಮಾದರ್ಶವೊಂದರ ಸಿದ್ಧಿಗಾಗಿ ದುಡಿದಿರುವಂತಹ ಅಪೂರ್ವ ಸನ್ನಿವೇಶವೊಂದರ ನಿದರ್ಶನ ಈ ಕೈಲಾಸ. ಸಹಿಷ್ಣು ಉದ್ಯೋಗದ ಹಾಗೂ ಕೌಶಲಪೂರ್ಣ ನಿರ್ಮಾಣಕಾರ್ಯದ ಪವಾಡ-ಕೃತಿಯಾಗಿ ಈ ದೇವಾಲಯವು ಎಂದೆಂದಿಗೂ ನಿಲ್ಲುವುದು.

ಈ ಬ್ರಾಹ್ಮಣ ಗುಹಾಲಯಗಳಿಂದ ಮುಂದಕ್ಕೆ ಹೋದರೆ, ಆರು ಜೈನ ಗುಹಾಲಯಗಳು ಸಿಕ್ಕುತ್ತವೆ. ಇವುಗಳಲ್ಲಿ ಇಂದ್ರಸಭಾ, ಜಗನ್ನಾಥ ಸಭಾ, ಮತ್ತು ಚಿಕ್ಕ ಕೈಲಾಸ ಎಂಬುವು ಮುಖ್ಯವಾದುವುಗಳು. ಇಂದ್ರಸಭೆಯು ಎರಡಂತಸ್ತಿನ ಗುಹಾಲಯ. ಒಂದು ಒಳ ಅಂಗಣ. ಅದರ ಹಿಂಭಾಗದಲ್ಲಿ ಒಂದು ಕೈಸಾಲೆ. ಒಂದು ದೊಡ್ಡದಾದ ಹಜಾರ ಮತ್ತು ಗರ್ಭಗೃಹ. ಹೊರಗಡೆ ಬಲಕ್ಕೆ ಒಂದು ಗವಿ. ಅಂಗಳದ ಎಡಗಡೆ ಎರಡು, ಬಲಗಡೆ ಒಂದು, ಕೈಸಾಲೆಯ ಎರಡು ಕಡೆಯೂ ಎರಡು ಗುಹಾಲಯಗಳಿವೆ. ಒಳಾಂಗಣದ ಮಧ್ಯದಲ್ಲಿ ಒಂದು ಮಂಟಪವಿದೆ. ಅದರಲ್ಲಿ ಋಷಭನಾಥನ ವಿಗ್ರಹವು ಸಿಂಹಾ

ಸನದ ಮೇಲೆ ಕುಳಿತಿದೆ. ಒಳ ಅಂಗಣದಲ್ಲಿರುವ ಮಂಟಪದ ಒಂದು ಕಡೆ ಪಕ್ಕದಲ್ಲಿ ಒಂದು ಆನೆಯು ನಿಂತಿದೆ. ಇನ್ನೊಂದು ಪಕ್ಕದಲ್ಲಿ ಒಂದು ಸ್ತಂಭವು ಕೆತ್ತಲ್ಪಟ್ಟಿತ್ತು. ಅದು ಈಗ ಬಿದ್ದು ಹೋಗಿದೆ. ಮೇಲಂತಸ್ತಿನಲ್ಲಿ ಹೊರ ಗಡೆ ಎದುರುಬದುರು ಎರಡು ಸಣ್ಣ ಗವಿಗಳೂ, ಕೈಸಾಲೆ, ದೊಡ್ಡ ಹಜಾರ, ಗರ್ಭಗೃಹ ಇಷ್ಟು ಇವೆ. ಈ ಎಲ್ಲ ಗವಿಗಳಲ್ಲಿಯೂ ಜೈನ ವಿಗ್ರಹಗಳು ಕೆತ್ತಲ್ಪಟ್ಟಿವೆ. ಗರ್ಭಗೃಹದ ಬಾಗಿಲುವಾಡವು ಚಿತ್ರಗಳಿಂದ ತುಂಬಿದೆ. ಅದರ ಮುಂಭಾಗದಲ್ಲಿ ಎರಡು ಸಣ್ಣ ಕಂಬಗಳಿವೆ. ಅವುಗಳನ್ನು ಹೊಡೆದರೆ ಒಂದೊಂದು ಬೇರೆ ಬೇರೆ ಶಬ್ದವನ್ನು ಕೊಡುತ್ತವೆ. ನೋಡುವುದಕ್ಕೆ ಹೋದ ಜನರು ಅದನ್ನು ಹೊಡೆದು ಹೊಡೆದು ಸವೆಸಿಬಿಟ್ಟಿರುತ್ತಾರೆ. ಇದರ ಮುಂದಿನ ಪಡಸಾಲೆ ಒಂದಾನೊಂದು ಕಾಲದಲ್ಲಿ ವರ್ಣಚಿತ್ರಗಳಿಂದ ಅಲಂಕರಿಸಲ್ಪಟ್ಟಿ ತ್ತೆಂದು ತೋರುತ್ತದೆ. ಈಗಲೂ ಅಲ್ಲಲ್ಲಿ ಹೊಗೆಯಿಂದ ಮುಚ್ಚಿಹೋಗಿರುವ ಚಿತ್ರಗಳನ್ನು ನೋಡಬಹುದು. ಜಗನ್ನಾಥ ಸಭೆಯೂ ಎರಡ ಅಂತಸ್ತಿನ ಗುಹಾಲಯ. ಕೆಳಗಡೆ ಮೂರು ಗವಿಗಳೂ ಮೇಲೆ ಒಂದು ದೊಡ್ಡ ಒಂದು ಸಣ್ಣ ಗವಿಯೂ ಇವೆ. ಇವುಗಳಲ್ಲಿಯೂ ಜೈನ ವಿಗ್ರಹಗಳು ಕೆತ್ತಲ್ಪಟ್ಟಿವೆ. ಇದರಲ್ಲಿ ಮೇಲ್ಛಾವಣಿಯು ಬಣ್ಣದ ಚಿತ್ರಗಳಿಂದ ಅಲಂಕರಿಸಲ್ಪಟ್ಟಿತ್ತೆಂದು ತೋರುತ್ತದೆ. ಚಿಕ್ಕ ಕೈಲಾಸವೆನ್ನುವುದು ಕೈಲಾಸ ದೇವಾಲಯದ ಅನು ಕರಣ. ೧೩೦ ಅಡಿ ಉದ್ದ, ೮೦ ಅಡಿ ಅಗಲದಷ್ಟು ಬೆಟ್ಟದಿಂದ ಕೊರೆದು ಈ ದೇವಾಲಯವನ್ನು ನಿರ್ಮಿಸಲಾಗಿದೆ. ೧೦ ಅಡಿ ಚದರವುಳ್ಳ ಮುಖ ಮಂಟಪ, ೩೬ ಅಡಿ ಜದರವುಳ್ಳ ನವರಂಗ ಮತ್ತು ೧೨ ಅಡಿ ಚದರವುಳ್ಳ ಗರ್ಭಗೃಹ, ಇಷ್ಟು ಇದರಲ್ಲಿ ಕೊರೆಯಲ್ಪಟ್ಟಿದೆ. ಆದರೆ ಇದು ಪೂರ್ಣ ಮುಗಿಸಿದಂತೆ ತೋರುವುದಿಲ್ಲ. ಇದರಲ್ಲಿ ಹೆಚ್ಚಿಗೆ ಗಮನಾರ್ಹವಾದ ವಿಷಯ ಗಳೇನೂ ಕಾಣಬರುವುದಿಲ್ಲ.

ಪರಿಶಿಷ್ಟ ೨

ಅಸಡ್ಡೆಯ ಅನಾಹುತ

ತಾವು ಕಟ್ಟಿದ ಕಟ್ಟಡಗಳು ಆಚಂದ್ರಾರ್ಕವಾಗಿ ನಿಂತಿರಬೇಕೆಂಬ ಇಚ್ಛೆಯಿಂದ ಪೂರ್ವಿಕರು ಮಜಬೂತಾದ ಸಾಮಾನುಗಳನ್ನು ಉಪಯೋಗಿಸಿ ಧೃಡವಾದ ಪಾಯದ ಮೇಲೆ ಕಟ್ಟುತ್ತಿದ್ದರು. ಅತ್ಯಂತ ಪ್ರಾಚೀನ ಕಟ್ಟಡಗಳಿಗೆ ಗಾರೆಯೇ ಇರುತ್ತಿರಲಿಲ್ಲ. ಹಾಗೆಯೇ ಅನೇಕ ಶತಮಾನಗಳು ಅಚಲವಾಗಿ ನಿಂತಿರುತ್ತಿದ್ದುವು. ಈಗಲೂ ಅನೇಕ ನಿಂತಿವೆ. ಕೆಲವು ಕಾಲಾನಂತರ ಅವರು ಉಪಯೋಗಿಸುತ್ತಿದ್ದ ಗಾರೆಯಂತೂ ಈಗಿನ ಹಾಗೆ ಬರೀ ಮರಳು ಸುಣ್ಣದಿಂದ ಕೂಡಿರದೆ, ಇನ್ನೂ ಅನೇಕ ಸಾರವತ್ತಾದ ಸಾಮಾನುಗಳಿಂದ ಕೂಡಿರುತ್ತಿತ್ತು. ಅದು ಒಣಗಿದ ಮೇಲೆ ಕಲ್ಲಿಗಿಂತಲೂ ಗಟ್ಟಿಯಾಗಿರುತ್ತಿತ್ತು. ಬೆಂಗಳೂರು ನಿವಾಸಿಗಳಿಗೆ ಈ ವಿಷಯ ಅನುಭವಕ್ಕೆ ಬಂದಿರುತ್ತದೆ. ಈಗಿನ ವಿಕ್ಟೋರಿಯಾ ಆಸ್ಪತ್ರೆಯನ್ನು ಕಟ್ಟುವುದಕ್ಕೂ ಮಾರ್ಕೆಟ್ಟಿನ ಮುಂಭಾಗವನ್ನು ವಿಸ್ತರಿಸುವುದಕ್ಕೂ ಉತ್ತರ ಭಾಗದ ಕೋಟೆಯ ಭಾಗವನ್ನು ಒಡೆಯಬೇಕಾಗಿ ಬಂದಾಗ, ಅದು ಇಟ್ಟಿಗೆ ಗಾರೆ ಕಟ್ಟಡವಾಗಿದ್ದರೂ ಉಳಿಯಿಂದ ಕೂಡ ಕೀಳಲು ಬಾರದೆ ಸಿಡಿಮದ್ದಿನಿಂದ ಒಡೆಯಬೇಕಾಗಿ ಬಂದಿತು.

ಪ್ರಾಚೀನ ಕಟ್ಟಡಗಳು ಇಷ್ಟು ಮಜಬೂತಾಗಿ ಕಟ್ಟಿರುವುದರಿಂದಲೇ ನಮ್ಮ ಜೀವಮಾನದಲ್ಲಿ ಇದುವರೆಗೂ ಅನೇಕವನ್ನು ನೋಡುತ್ತಿದ್ದೇವೆ. ನಮ್ಮ ಪ್ರಾಚೀನ ಕಟ್ಟಡಗಳು ಶತೃಗಳಿಂದ ನಾಶಮಾಡಲ್ಪಟ್ಟವೇ ಹೊರತು ತಾವಾಗಿಯೇ ಶಿಥಿಲವಾದವುಗಳು ಬಹಳ ಅಪರೂಪ. ಪ್ರಾಚೀನ ಕಟ್ಟಡಗಳು ಅನೇಕ ಶತಮಾನಗಳಿಂದಲೂ ಬಿಸಿಲು, ಮಳೆ, ಗಾಳಿಗಳ ಹೊಡೆತಕ್ಕೆ ಸಿಕ್ಕಿ ಮುಪ್ಪಾಗಿರುತ್ತವೆ. ಅವುಗಳನ್ನು ಆಗಾಗ್ಗೆ ಪರೀಕ್ಷಿಸಿ, ಜೀರ್ಣೋದ್ಧಾರ ಮಾಡಿ ಇಟ್ಟುಕೊಳ್ಳದಿದ್ದರೆ ಬಹು ಬೇಗ ನಾಶವಾಗುವುದರಲ್ಲಿ ಸಂದೇಹವಿಲ್ಲ.

ಉದಾಸೀನ ಮಾಡುತ್ತ ಹೋದರೆ ಒಂದು ರೂಪಾಯಿನಲ್ಲಿ ಆಗಬಹುದಾದ ಕೆಲಸಕ್ಕೆ ನೂರಾರು, ಏಕೆ ಸಾವಿರಾರು, ರೂಪಾಯಿಗಳು ಖರ್ಚುಮಾಡ ಬೇಕಾದ ಸಂಭವ ಬರುವುದಲ್ಲದೆ ಅನೇಕ ಸಾರಿ ಜೀರ್ಣೋದ್ಧಾರ ಮಾಡಲು ಕೂಡ ಅಸಾಧ್ಯವಾಗಿ ಅವುಗಳು ನಾಶವಾಗಿಹೋಗುತ್ತವೆ.

ಈ ಉದಾಸೀನದ ಫಲವಾಗಿಯೇ ಕಳೆದ ಹತ್ತು ವರುಷಗಳಲ್ಲಿ ಮೂರು ಪ್ರಸಿದ್ಧವಾದ, ಅಪರೂಪವಾದ ವಸ್ತುಗಳು ನಾಶವಾಗಿ ಹೋದುವು. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ (De Havilland) ಡಿ ಹ್ಯಾವಿಲ್ಯಾಂಡ್ ಎಂಬ ಒಬ್ಬ ಸೈನ್ಯಾಧಿಕಾರಿ ಇದ್ದನು. ಆತನು ಇಟ್ಟಿಗೆ ಗಾರೆಯಿಂದ ಸೇತುವೆಯನ್ನು ಕಟ್ಟಲು ಸಾಧ್ಯವೆಂದು ಜನಗಳಿಗೆ ತೋರಿಸಿ ಕೊಡುವುದಕ್ಕಾಗಿ ತಾನು ವಾಸಮಾಡುತ್ತಿದ್ದ ಮನೆಯ ಮುಂದುಗಡೆ ೧೧೨ ಅಡಿ ಅಗಲವುಳ್ಳ ಒಂದು ಕಮಾನನ್ನು ಮಾದರಿಗಾಗಿ ಕಟ್ಟಿ ನಿಲ್ಲಿ ಸಿದನು. ಜನರು ಅದರ ಮೇಲಕ್ಕೆ ಹತ್ತಿ ಮಧ್ಯದಲ್ಲಿ ನಿಂತು ಕುಣಿದರೆ ಈ ಕಮಾನು ಮೇಲಿಂದ ಕೆಳಕ್ಕೆ ತೂಗಾಡುತ್ತಿತ್ತು. ಶಾಸನದ ಇಲಾಖೆಯವರು ಇದನ್ನು ಆಗಾಗ್ಯೆ ಪರೀಕ್ಷಿಸಿ ಬೇಕಾದ ರಿಪೇರಿಗಳನ್ನು ಮಾಡಿಸದೆ ನಿರ್ಲಕ್ಷಿಸಿದ್ದ ರಿಂದ ಅದು ಕೆಲವು ವರ್ಷಗಳ ಹಿಂದೆ ಬಿದ್ದುಹೋಯಿತು. ಶ್ರೀರಂಗ ಪಟ್ಟಣಕ್ಕೆ ಹೋದವರಿಗೆಲ್ಲ ಇದು ಒಂದು ನೋಡತಕ್ಕ ವಸ್ತುವಾಗಿತ್ತು.

ಶಿಕಾರಿಪುರ ತಾಲ್ಲೂಕು ಬೆಳ್ಳಿಗಾವೆಯಲ್ಲಿ ಒಂದು ಗಂಡಭೇರುಂಡ ಸ್ತಂಭವು ಇತ್ತು. ಇದು ಬಹಳ ಅಪರೂಪವಾದದ್ದು. ಆ ತರಹದ ಕಂಬ ಇನ್ನೆಲ್ಲಿಯೂ ಇಲ್ಲ. ಕಂಬದ ಎತ್ತರ ೩೦ ಅಡಿ. ಕಂಬದ ಮೇಲಿನ ಭೇರುಂಡೇ ಶ್ವರ ವಿಗ್ರಹ ೪॥ ಅಡಿ ಎತ್ತರವಾಗಿತ್ತು. ವಿಗ್ರಹವು ಮನುಷ್ಯ ದೇಹವನ್ನು ಹೊಂದಿ ಎರಡು ತಲೆಯುಳ್ಳ ಗಿಡಗದ ಮುಖವನ್ನು ಹೊಂದಿತ್ತು. ಕೈಗಳನ್ನು ಎತ್ತಿಹಿಡಿದು ಏನನ್ನೋ ಭಕ್ಷಿಸುತ್ತಿತ್ತು ಮತ್ತು ಮೊಣಕಾಲುಗಳನ್ನು ಸ್ವಲ್ಪ ಬಗ್ಗಿಸಿ, ಒಂದು ಕಾಲನ್ನು ಮುಂದಿಟ್ಟು ಶತೃವಿನ ಮೇಲೆ ಹಾರಿಬರುವಂತಿತ್ತು. ಕಂಬವು ಕೆಳಗಿನಿಂದ ಎಂಟು ಅಡಿಯವರೆಗೆ ಚೌಕವಾಗಿದ್ದು ಅನಂತರ ದುಂಡಾ ಗಿತ್ತು. ಮಧ್ಯೆ ಮಧ್ಯೆ ಚಿತ್ರಿಸಿದ ಪಟ್ಟಿಕೆಗಳಿದ್ದವು. ನೋಡಲು ಅಂದ ವಾಗಿತ್ತು. ಇದನ್ನು ಕದಂಬ ದೊರೆಯಾದ ಚಾಮುಂಡರಾಯನೆಂಬುವನು ಕ್ರಿ. ಶ. ೧೦೪೭ ರಲ್ಲಿ ನಿಲ್ಲಿಸಿದನೆಂದು ಶಾಸನದಿಂದ ತಿಳಿಯಬರುತ್ತದೆ. ಕೆಲವು

ವರ್ಷಗಳ ಕೆಳಗೆ ಈ ಕಂಬದ ತಳಹದಿಯು ಕುಸಿದುಬಿದ್ದು ವಿಗ್ರಹವು ಮುರಿದುಹೋಯಿತು.

ಬಿಜಾಪುರ ಪಟ್ಟಣದಲ್ಲಿ ಮೆಹತರ್ ಮಹಲ್ ಎಂಬ ಒಂದು ಸುಂದರವಾದ ಕಟ್ಟಡವಿತ್ತು. ಬಹು ನಾಜೂಕಾದ ಚಿತ್ರ ಕೆಲಸದಿಂದ ಕೂಡಿತ್ತು. ಶಾಸನದ ಇಲಾಖೆಯ ಅಜಾಗರೂಕತೆಯಿಂದ ೧೯೫೬ ರಲ್ಲಿ ಬಿದ್ದುಹೋಯಿತು. ಹೀಗೆ ಅಲಕ್ಷ್ಯದಿಂದಲೂ ಸರಕಾರದವರ ಅಜಾಗರೂಕತೆಯಿಂದಲೂ ಈಗಿನ ಪೀಳಿಗೆಯವರು ಹೆಮ್ಮೆಪಟ್ಟುಕೊಳ್ಳಬಹುದಾಗಿದ್ದಂಥ, ಪೂರ್ವಿಕರು ನಮಗಾಗಿ ಬಿಟ್ಟುಹೋಗಿದ್ದ, ಆಭರಣಗಳನ್ನು ಕಳೆದುಕೊಳ್ಳಬೇಕಾಗಿ ಬಂದುದು ನಮ್ಮ ದುರದೃಷ್ಟವೆಂದೇ ಹೇಳಬೇಕು.

ಹಳೆಬೀಡಿನಲ್ಲಿರುವ ಈಗ ಕೇದಾರೇಶ್ವರ ದೇವಾಲಯವೆಂದು ಕರೆಯಲ್ಪಡುವ ಕಟ್ಟಡವು ಶಿಲ್ಪಿಗಳು ಮೊದಲು ಕಟ್ಟಿದ ಕಟ್ಟಡವಲ್ಲ. ಇದರ ಜಗಲಿ ಮಾತ್ರ ಹಿಂದಿನದು. ಮೂಲ ಕೇದಾರೇಶ್ವರ ದೇವಾಲಯವನ್ನು ಬೆಳಗಾವಿ ದೇವಸ್ಥಾನವಾದ ಮೇಲೆ ಎಂದರೆ ಸುಮಾರು ಕ್ರಿ. ಶ. ೧೨೧೯ ರಲ್ಲಿ, ಎರಡನೆ ಬಲ್ಲಾಳ ರಾಜನು ಆ ಪ್ರಾಂತದ ಹೆಣ್ಣುಮಗಳಾದ ತನ್ನ ರಾಣಿಯಾದ ಅಭಿನವ ಕೇತಲದೇವಿಯ ಇಷ್ಟದಂತೆ ಕಟ್ಟಿಸಿದನು. ಇದು ಹಳೇಬೀಡಿನಲ್ಲೆಲ್ಲ ಪ್ರಾಚೀನತಮವಾದದ್ದೆಂದೂ ಅಮೋಘವಾದ ಶಿಲ್ಪರತ್ನವೆಂದೂ ಹೆಸರನ್ನು ಪಡೆದಿತ್ತು. ಹತ್ತೊಂಭತ್ತನೆಯ ಶತಮಾನದ ಆದಿಭಾಗದವರೆಗೂ ಈ ದೇವಾಲಯವು ಒಳ್ಳೆಯ ಸ್ಥಿತಿಯಲ್ಲಿತ್ತೆಂದು ತಿಳಿಯಬಂದಿದೆ. ಆದರೆ ಸುಮಾರು ೧೮೬೦ ರ ಹೊತ್ತಿಗೆ ವಿಮಾನದ ಮೇಲೆ ಒಂದು ದೊಡ್ಡ ಆಲದಮರವು ಬೆಳೆದು ಬೇರು ಬಿಟ್ಟುಕೊಂಡುಬಿಟ್ಟಿತ್ತು. ೧೮೬೬ ರಲ್ಲಿ ತೆಗೆದ ಇದರ ಫೋಟೋವನ್ನು ನೋಡಿದರೆ ಆಗಲೂ ಆ ಮರವು ದೇವಸ್ಥಾನವನ್ನು ಕ್ರಮವಾಗಿ ನಾಶಪಡಿಸುತ್ತಿದ್ದಿದ್ದು ಕಾಣುತ್ತದೆ. ೧೮೭೬ ರಲ್ಲಿ ಫರ್ಗ್ಯುಸನ್‌ರವರು ಹಳೇಬೀಡಿಗೆ ಭೇಟಿಕೊಟ್ಟಾಗ ದೇವಸ್ಥಾನದ ತುಂಬ ಬೇರುಗಳು ಹರಡಿದ್ದು ದೇವಸ್ಥಾನವೇ ಕಾಣದಂತಾಗಿತ್ತು. ಆ ಗಿಡವನ್ನು ಕೂಡಲೇ ನಾಶಪಡಿಸದಿದ್ದರೆ ಕಟ್ಟಡವು ನಿರ್ನಾಮವಾಗಿಬಿಡುವುದೆಂದು ಅವರು ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟರು. ಆದರೆ ಅವರ ಮಾತಿಗೆ ಯಾರೂ ಗಮನ ಕೊಟ್ಟಂತೆ ಕಾಣಲಿಲ್ಲ. ಕೊನೆಗೆ ಶಾಸನದ ಇಲಾಖೆಯ ಡೈರೆಕ್ಟರ್ ಆಗಿದ್ದ ರೈಸರವರು ಮೈಸೂರು ಗೆಜೆಟಿಯರಿ

142(3) 20.10.98 6/10/98 527(7) 10.08.99 23/2 527(7) 25.08.99 06.12.99 16/8/99 527(10) 23/11 267.2 08.05.00 24/4 267(2) 23.05.00 31/5 267(2) 06.06.00 267(2) 22.06.00 8/6	267(2) 07.07.00 23/6 1371 16/8 22.11.01 1270 8/11 1202 6 June 02 810 28.08.02 14-8-02		